ಇಂದಿನ ಹವಾಮಾನ
ದಕ್ಷಿಣ ಕನ್ನಡ 29° 26° | ಉಡುಪಿ 31° 26°

ಹೊಸ ದಿಗಂತ ಸಂಗಮ

ರಾಷ್ಟ್ರ ಜಾಗೃತಿಯ ದೈನಿಕ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 12, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಜಲಮಾಲಿನ್ಯ ತಡೆಯಲು ಫ್ಲೋಟಿಂಗ್ ಟ್ರ್ಯಾಷ್ ಬ್ಯಾರಿಯರ್

ಪುಟ 2



ಧಾರಾಕಾರ ಮಳೆ ಸುರಿದಾಗ ರಜೆ ಕೊಡಿ ಸಾರ್ ಪ್ಲೀಸ್...!

ಪುಟ 5

ಮುಂಗಾರು ಚುರುಕಾಗದಿದ್ದರೂ ಕೊಡಗಿನಲ್ಲಿ ಕಂಡಿದೆ ಗಾಳಿ ಮಳೆಗೆ ಹಾನಿ, ಕಷ್ಟನಷ್ಟಗಳ ಸುರಿಮಳೆ







ಮಡಿಕೇರಿ ಸುತ್ತಮುತ್ತ ಗಾಳಿ ಮಳೆಯ ಆರ್ಭಟಕ್ಕೆ ಅಪಾರ ಹಾನಿ ಉಂಟಾಗಿದೆ. ಚೆಯ್ಯಂಡಾಣೆ ಪೇಟೆಯಲ್ಲಿರುವ ಮನೆ ಒಂದರ ತಡೆಗೋಡೆ ಕುಸಿದು ಬಿದ್ದಿದ್ದರೆ, ಚೆಟ್ಟಳ್ಳಿ-ಮಡಿಕೇರಿ ಮುಖ್ಯರಸ್ತೆಯ ಕಡಗದಾಳು ಸಮೀಪ ಬೃಹತ್ ಗಾತ್ರದ ಮರಬಿದ್ದು ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ವಿದ್ಯುತ್ ಕಂಬಗಳೂ ನೆಲಕ್ಕುರುಳಿದ್ದು ಈ ಭಾಗದಲ್ಲಿ ವಿದ್ಯುತ್ ಪೂರೈಕೆಯಲ್ಲೂ ವ್ಯತ್ಯಯವಾಗಿದೆ.

ಸುತ್ತಮುತ್ತ

ಪ್ರಾಕೃತಿಕ ವಿಕೋಪ: ಬೈಂದೂರು ತಾಲೂಕಲ್ಲಿ ಕಂಟ್ರೋಲ್ ರೂಂ ಶುರು

ಉಡುಪಿ: ಮಳೆ ಚುರುಕಾಗುತ್ತಿರುವ ಹಿನ್ನೆಲೆಯಲ್ಲಿ ಬೈಂದೂರು ತಾಲೂಕು ವಿಪತ್ತು ನಿರ್ವಹಣಾ ಪ್ರಾಧಿಕಾರವು ಕಂಟ್ರೋಲ್ ರೂಂ ಆರಂಭಿಸಿದೆ.
ತಾಲೂಕಿನಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸಿದ್ದಲ್ಲಿ, ತಾಲೂಕು ವಿಪತ್ತು ನಿರ್ವಹಣಾ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆ: 08254-251657 ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಬೈಂದೂರು ತಹಶೀಲ್ದಾರರ ಕಚೇರಿ ತಿಳಿಸಿದೆ.

2 ಲೀಟರ್‌ಗಿಂತ ಕಡಿಮೆ ಪ್ರಮಾಣದ ಕುಡಿಯುವ ನೀರಿನ ಬಾಟಲಿ ನಿಷೇಧ

ಮಡಿಕೇರಿ: ಸಾರ್ವಜನಿಕರ ಹಾಗೂ ಪರಿಸರದ ಹಿತದೃಷ್ಟಿಯಿಂದ ಸೋಮವಾರಪೇಟೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2 ಲೀ.ಗಿಂತ ಕಡಿಮೆ ಪ್ರಮಾಣದ ಎಲ್ಲಾ ತರಹದ ಕುಡಿಯುವ ನೀರಿನ ಬಾಟಲಿಗಳ ಮಾರಾಟ, ಖರೀದಿ ಹಾಗೂ ಶೇಖರಣೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಇವುಗಳಿಗೂ ಇದೆ ನಿಷೇಧ

ಈಗಾಗಲೇ ಸರ್ಕಾರದಿಂದ ನಿಷೇಧಿಸಿರುವ ಏಕ ಬಳಕೆ ಪ್ಲಾಸ್ಟಿಕ್ ಕವರ್, ಇಯರ್ ಬಡ್ಸ್, ಸ್ಟ್ರಾ ಪೈಪ್, ಕ್ಯಾಂಡಿ ಮತ್ತು ಐಸ್ ಕ್ರೀಮ್ ಕಡ್ಡಿಗಳು, ಅಲಂಕಾರ ವಸ್ತುಗಳು, ಪ್ಯಾಕಿಂಗ್ ಸಾಮಾಗ್ರಿಗಳು, ಆಮಂತ್ರಣ ಪತ್ರಿಕೆಗಳು ಹಾಗೂ ಇತ್ಯಾದಿ ಕೂಡಾ ನಿಷೇಧಿಸಿರುವುದರಿಂದ ಸಾರ್ವಜನಿಕರು, ಉದ್ದಿಮೆದಾರರು ಹಾಗೂ ಪ್ರವಾಸಿಗರು ಬಳಸದಂತೆ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಯವರು ಕೋರಿದ್ದಾರೆ.
ಉದ್ದಿಮೆದಾರರು ತಕ್ಷಣದಿಂದ ಜಾರಿಗೆ ಬರುವಂತೆ 2 ಲೀಟರ್‌ಗಿಂತ ಕಡಿಮೆ ಪ್ರಮಾಣದ ಎಲ್ಲಾ ತರಹದ ಕುಡಿಯುವ ನೀರಿನ ಬಾಟಲಿಗಳನ್ನು ಹಾಗೂ ಏಕ ಬಳಕೆ ಪ್ಲಾಸ್ಟಿಕ್ ಮಾರಾಟ ಮಾಡುವುದು, ಸಂಗ್ರಹಿಸುವುದು ಕಂಡು ಬಂದಲ್ಲಿ ದಂಡ ವಿಧಿಸಲಾಗುವುದು ಹಾಗೂ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ತಿಳಿಸಿದ್ದಾರೆ.

ಮಡಿಕೇರಿ ನಗರದಲ್ಲಿ ಧಾರಾಕಾರ ಮಳೆ: ಮನೆಗೆ ನುಗ್ಗಿದ ಮಳೆ ನೀರು!!

ಮಡಿಕೇರಿ: ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಾತ್ರ ಧಾರಾಕಾರ ಮಳೆ ಸುರಿದ ಪರಿಣಾಮ ನಗರದ ಗೌಳಿಬೀದಿ, ಮೈತ್ರಿ ಪೊಲೀಸ್ ಸಮುದಾಯ ಭವನದ ಬಳಿ ರಾಜ ಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯದೆ ಕೆಲವು ಮನೆಗಳಿಗೆ ನುಗ್ಗಿದ ದೃಶ್ಯ ಕಂಡು ಬಂದಿತು.

ಎಲ್ಪಿಜಿ, ಹೋಟೇಲ್ ತಿಂಡಿ, ಇಂಧನ ಆಯ್ತು

ಈಗ ಬಸ್ ಸರದಿ!

ನಾಳೆಯಿಂದ ಬಸ್ ಟಿಕೇಟ್ ದರ ಏರಿಕೆ

ಮಂಗಳೂರು: ಜಾಗತಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಾರ್ವಜನಿಕರು ಇತ್ತೀಚಿನ ದಿನಗಳಲ್ಲಿ ಒಂದಲ್ಲಾ ಒಂದು ರೀತಿ ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಗ್ಯಾಸ್ ಸಿಲಿಂಡರ್, ಹೋಟೆಲ್ ಊಟ ಉಪಾಹಾರ, ಪೆಟ್ರೋಲ್ ಸೇರಿದಂತೆ ಇತರೆ ತೈಲ ಬೆಲೆ ಏರಿಕೆ... ಹೀಗೆ ಹಲವು ರೀತಿಯ ಸಂಕಷ್ಟ ಎದುರಿಸಿರುವ ಜನತೆ ಈಗ ಬಸ್ ಪ್ರಯಾಣ ದರ ಏರಿಕೆಯ ಬಿಸಿಯನ್ನು ಎದುರಿಸಬೇಕಿದೆ.

ಯಾಕಾಗಿ ಈ ಬೆಲೆ ಏರಿಕೆ?

ಬಸ್‌ನ ಟಯರ್‌ಗಳು, ಬಿಡಿಭಾಗಗಳು, ಆಯಿಲ್ ಮತ್ತು ಗ್ರೀಸ್, ಚಾಸಿಸ್ ದರ ಇತ್ಯಾದಿಗಳ ಬೆಲೆ ಏರಿಕೆ ಆಗಿರುವುದರಿಂದ ಅನಿವಾರ್ಯವಾಗಿ ಸಿಟಿ ಬಸ್ ಪ್ರಯಾಣ ದರ ಏರಿಸುವ ಪ್ರಮೇಯ ಎದುರಾಗಿದೆ ಎನ್ನುತ್ತಾರೆ ಸಿಟಿಬಸ್ ಮಾಲಕರ ಸಂಘದ ಅಧ್ಯಕ್ಷ ಅಝೀಝ್ ಪರ್ತಿಪ್ಪಾಡಿ.

2021ರಲ್ಲಿ ಪರಿಷ್ಕರಣೆ ನಡೆದಿತ್ತು

ಈ ಮೊದಲು ತಾ.26.07.2021 ರಂದು ಜಾರಿಗೆ ಬರುವಂತೆ ಸಿಟಿ ಬಸ್ಸು ದರ ಪರಿಷ್ಕರಣೆ ಮಾಡಲಾಗಿತ್ತು. ಆನಂತರ ಬಸ್ಸು ನಿರ್ವಹಣೆಯಲ್ಲಿ ಅಪಾರ ಪ್ರಮಾಣದ ದರ ಏರಿಕೆಯಾಗಿದೆ. »ಪುಟ 6



ಯಾವ ಯಾವ ರೂಟ್? ಎಷ್ಟೆಷ್ಟು ದರ ಹೆಚ್ಚಳ?

ಮಂಗಳೂರು ನಗರ ಹಾಗೂ ಗ್ರಾಮಾಂತರ ರೂಟುಗಳಲ್ಲಿ ಸಂಚರಿಸುವ ಸಿಟಿ ಬಸ್ಸುಗಳಲ್ಲಿ ಡೀಸೇಲ್ ಮೇಲಿನ ಸೆಸ್ ಆಧಾರದಲ್ಲಿ ಜೂನ್ 13 ರಿಂದ ಪ್ರಯಾಣ ದರದಲ್ಲಿ ಈಗಿರುವ ಟಿಕೇಟ್ ದರ ರೂ.12ರಿಂದ 20 ರೂಪಾಯಿವರೆಗೆ ಇರುವಲ್ಲಿ 1 ರೂಪಾಯಿಯಂತೆ, 20ರೂಪಾಯಿ ನಿಂದ ಅಧಿಕವಿದ್ದರೆ 2 ರೂಪಾಯಿಯಂತೆ ಟಿಕೇಟ್ ದರ ಏರಿಕೆಯಾಗಲಿದೆ. ಹಾಗೂ ಎಂದಿನಂತೆ 60 ಶೇಕಡಾ ರಿಯಾಯತಿ ದರದಲ್ಲಿ ಚಲೋ ಸ್ಟೂಡೆಂಟ್ ಕಾರ್ಡನ್ನು ವಿದ್ಯಾರ್ಥಿಗಳಿಗೆ ದಕ್ಷಿಣ ಕನ್ನಡ ಬಸ್ಸು ಮಾಲಕರ ಸಂಘದಿಂದ ವಿತರಿಸಲಾಗುವುದು ಎಂದು ಅಧ್ಯಕ್ಷ ಅಝೀಝ್ ಪರ್ತಿಪಾಡಿ ಹಾಗೂ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಪಿಲಾರ್ ತಿಳಿಸಿದ್ದಾರೆ.

ಹೊರೆ ಆಗದಂತೆ ಕ್ರಮ

ಪ್ರಯಾಣಿಕರಿಗೆ ಹೆಚ್ಚಿನ ಹೊರೆ ಬೀಳದಂತೆ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಕೊಂಡು, ಸರಕಾರದ ನಿಯಾಮಾವಳಿಗಳ ಅನ್ವಯ ಅನುಮತಿಸಲ್ಪಟ್ಟಿರುವ ಮಿತಿಯೊಳಗೆ ಬಸ್ ಪ್ರಯಾಣ ದರದ ಮೇಲಿನ ಸೆಸ್ ಮೊತ್ತವನ್ನು ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಿಸಲು ನಾವು ನಿರ್ಧರಿಸಿದ್ದೇವೆ.

● ಅಝೀಝ್ ಪರ್ತಿಪ್ಪಾಡಿ
ದ.ಕ. ಜಿಲ್ಲಾ ಬಸ್ ಮಾಲಕರ ಸಂಘದ ಅಧ್ಯಕ್ಷರು

ಪ್ರವಾಸಿಗರ ಪ್ರವೇಶ ತಾತ್ಕಾಲಿಕ ಬಂದ್

ಮುಂಡಾ ಬೀಚ್ ಬಾಗಿಲಿಗೆ 'ಬೀಗ'

ಸುರಕ್ಷತೆ ದೃಷ್ಟಿಯಿಂದ ನಿರ್ಧಾರ

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಭಾರೀ ಮಳೆಯ ವರ್ತಮಾನದ ಹಿನ್ನೆಲೆಯಲ್ಲಿ ಮುಂಜಾಗರೂಕತೆಯ ಭಾಗವಾಗಿ ಸಸಿಹಿತ್ಲು ಮುಂಡಾ ಬೀಚ್‌ಗೆ ಪ್ರವಾಸಿಗರ ಪ್ರವೇಶ ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.

ಮುಲ್ಕಿ: ಮಳೆ, ಬಿರುಗಾಳಿಯ ಪರಿಣಾಮ ಸಸಿಹಿತ್ಲು ಮುಂಡಾ ಬೀಚ್ ಸುತ್ತಮುತ್ತಲಿನ ಅಪಾಯದ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಸುರಕ್ಷತಾ ದೃಷ್ಟಿಯಿಂದ ಇಲ್ಲಿಗೆ ಆಗಮಿಸುವ ಪ್ರವಾಸಿಗರಿಗೆ ಪ್ರವೇಶವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.
ಬೀಚ್ ವ್ಯಾಪ್ತಿಯಲ್ಲಿ ಇರುವ ಎತ್ತರದ ಗಾಳಿ ಮರಗಳು ಹಾಗೂ ಇತರೆ ಮರಗಳು ಭಾರೀ ಗಾಳಿ ಮಳೆಯಿಂದ, ಉರುಳಿ ಬೀಳುವ ಸಾಧ್ಯತೆ ಇರುವುದರಿಂದ ಪ್ರವಾಸಿಗರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಬೀಚ್ ನಿರ್ವಹಣೆಯ ಪ್ರಮುಖರು ತಿಳಿಸಿದ್ದಾರೆ.
ಅಲೆಗಳ ಅಬ್ಬರ ಕೂಡ ಹೆಚ್ಚಾಗಿದ್ದು, ಸಮುದ್ರದ ಸಮೀಪ ತೆರಳುವುದು ಅಪಾಯಕಾರಿಯಾಗಿದೆ. ಜೊತೆಗೆ ಹವಾಮಾನ ಇಲಾಖೆಯು ಕರಾವಳಿ ಜಿಲ್ಲೆಗಳಿಗೆ ಭಾರೀ ಮಳೆಯ ಮುನ್ಸೂಚನೆಯನ್ನು ನೀಡಿರುವ ಹಿನ್ನೆಲೆಯಲ್ಲಿ ಯಾವುದೇ ಅನಾಹುತ ಸಂಭವಿಸದಂತೆ ಇಲ್ಲಿ ವ್ಯಾಪಕ ಮುನ್ನೆಚ್ಚರಿಕೆ ಕ್ರಮ ವಹಿಸಲಾಗಿದೆ.



ರಾಜ್ಯದ ಅತ್ಯಂತ ಪ್ರಸಿದ್ಧ, ಪ್ರಮುಖ ಪ್ರವಾಸಿ ತಾಣ

ಸಸಿಹಿತ್ಲು ಮುಂಡಾ ಬೀಚ್ ಕರಾವಳಿಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದ್ದು, ವಾರಾಂತ್ಯಗಳಲ್ಲಿ ಹಾಗೂ ರಜಾದಿನಗಳಲ್ಲಿ ನೂರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಇವರೆಲ್ಲರ ಸುರಕ್ಷತೆ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಕಲ್ಲಿಕೋಟೆ ಫಾರೂಕ್ ಕಾಲೇಜು ಪರಿಸರದ ನಿವಾಸಿಯಲ್ಲಿ ನಿಫಾ ವೈರಸ್ ದೃಢ

ಕಾಸರಗೋಡು ಸಹಿತ ಕೇರಳದ ಎಲ್ಲೆಡೆ ಕಟ್ಟೆಚ್ಚರ

ಕಾಸರಗೋಡು: ಕಲ್ಲಿಕೋಟೆ ಫಾರೂಕ್ ಕಾಲೇಜು ಪರಿಸರದ ನಿವಾಸಿಯಾದ 43ರ ಹರೆಯದ ವ್ಯಕ್ತಿಯೋರ್ವನಲ್ಲಿ ನಿಫಾ ವೈರಸ್ ದೃಢಪಟ್ಟ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯೂ ಸೇರಿದಂತೆ ರಾಜ್ಯದಾದ್ಯಂತ ಮುನ್ನೆಚ್ಚರಿಕೆ ವಹಿಸಲು ಆರೋಗ್ಯ ಇಲಾಖೆಯು ತಿಳಿಸಿದೆ.

ಆಸ್ಪತ್ರೆಗೆ ದಾಖಲಿಸಲಾಗಿತ್ತು

ಸೋಂಕಿತ ವ್ಯಕ್ತಿಯನ್ನು ಮೊದಲು ಕಲ್ಲಿಕೋಟೆ ಖಾಸಗಿ ಆಸ್ಪತ್ರೆಯೊಂದರಲ್ಲಿ ದಾಖಲಿಸಲಾಗಿತ್ತು. ಬಳಿಕ ನಿಫಾ ವೈರಸ್ ಸೋಂಕು ಇರುವ ಶಂಕೆಯ ಹಿನ್ನೆಲೆಯಲ್ಲಿ ಅವರನ್ನು ಕಲ್ಲಿಕೋಟೆ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ವರ್ಗಾಹಿಸಿ ಗಂಟಲಿನ ದ್ರವ, ರಕ್ತ ಇತ್ಯಾದಿ ಸ್ಯಾಂಪಲ್ ಸಂಗ್ರಹಿಸಿ ಲ್ಯಾಬ್ ಪರೀಕ್ಷೆಗೊಳಪಡಿಸಲಾಯಿತು. ಈ ವೇಳೆ ಅವರಿಗೆ ನಿಫಾ ಸೋಂಕು ತಗುಲಿರುವುದು ದೃಢಪಟ್ಟಿದೆ.

ಗೋದಾಮು ಶುಚಿಗೊಳಿಸಿದ್ದರು

ಸೋಮಕಿತ ವ್ಯಕ್ತಿ ವ್ಯಾಪಾರಿಯಾಗಿದ್ದು ಆರಣ್ಯ, ಗಡಿ ಪ್ರದೇಶದಲ್ಲಿ ಗೋದಾಮು ನಡೆಸುತ್ತಿದ್ದಾರೆ. ಅದನ್ನು ಅವರು ಕೆಲವು ದಿನದ ಹಿಂದೆ ನೀರು ಬಳಸಿ ಶುಚಿಗೊಳಿಸಿದ್ದರು. ಈ ಸಂದರ್ಭ ಅಲ್ಲಿ ಗೋದಾಮಿನಲ್ಲಿ ಬಾವಲಿಗಳ ವಿಸರ್ಜಿತ ಮಾಲಿನ್ಯವೂ ಇತ್ತೆನ್ನಲಾಗಿದೆ. »ಪುಟ 6

ಪ್ರಾತಿನಿಧಿಕ ಚಿತ್ರ.



■ ಎಲ್ಲೆಡೆ ಆತಂಕ ಹುಟ್ಟಿಸುತ್ತಿದೆ ನಿಫಾ ಸಾಂಕ್ರಾಮಿಕ ರೋಗ
■ ಎಲ್ಲೆಡೆ ಕಣ್ಗಾವಲು ಹೆಚ್ಚಿಸಿದ ಕೇರಳ ಆರೋಗ್ಯ ಇಲಾಖೆ
■ ಎಲ್ಲಾ ಆಸ್ಪತ್ರೆಗಳಿಗೂ ಈಗ ಕಟ್ಟುನಿಟ್ಟಿನ ಸೂಚನೆ ರವಾನೆ

ಸೋಂಕಿತ ವ್ಯಕ್ತಿಯ ಆರೋಗ್ಯ ಸ್ಥಿತಿ ಗಂಭೀರ

ಸೋಂಕಿತ ವ್ಯಕ್ತಿಯನ್ನು ಐಸೋಲೇಶನ್ ವಾರ್ಡ್‌ನಲ್ಲಿ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ಅವರ ಮನೆಯವರನ್ನು ಮತ್ತು ಅವರೊಂದಿಗೆ ಸಂಪರ್ಕ ಹೊಂದಿದವರನ್ನು ಐಸೋಲೇಶನ್‌ನಲ್ಲಿರುವಂತೆ ಆಸ್ಪತ್ರೆಯ ವೈದ್ಯರು ಸೂಚಿಸಿದ್ದಾರೆ.

ಸುಬ್ರಹ್ಮಣ್ಯನ ಸನ್ನಿಧಿಯಲ್ಲಿ ಮಯೂರ ನರ್ತನ!



ಶ್ರೀ ಸುಬ್ರಹ್ಮಣ್ಯ ದೇವರ ವಾಹನವಾದ ಮಯೂರವು ಗುರುವಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಳದ ಆಡಳಿತ ಕಚೇರಿಯ ತಾರಸಿಯಲ್ಲಿ ಗರಿಬಿಚ್ಚಿ ಭಕ್ತರಿಗೆ ದರುಶನ ನೀಡಿ ಮುದಗೊಳಿಸಿದ ಕ್ಷಣ...

ಜೂನ್ ಮಧ್ಯ ಭಾಗಕ್ಕೆ ಬಂದರೂ ಚುರುಕಾಗದ ಮುಂಗಾರು | ಎಲ್ಲೆಲ್ಲೂ ಮೋಡ, ಬಿಸಿಲಿನದ್ದೇ ದರ್ಬಾರು

ಕೊಡಗು ಜಿಲ್ಲೆಯ ಕಾಫಿ ತೋಟಗಳಲ್ಲಿ ಕಾಣಿಸುತ್ತಿಲ್ಲ ಕೃಷಿ ಕಳೆ

ಸಂಗಮ ವಿಶೇಷ

ಮಡಿಕೇರಿ: ಕೊಡಗು ಜಿಲ್ಲೆಗೆ ಮುಂಗಾರು ಅಧಿಕೃತವಾಗಿ ಕಾಲಿಟ್ಟಿದೆ. ಆದರೆ ಮುಂಗಾರು ಮಳೆ ಮಾತ್ರ ಇನ್ನೂ ಚುರುಕಾಗದೆ ಈ ಭಾಗದ ಕಾಫಿ ಬೆಳೆಗಾರರನ್ನು ಕಂಗಾಲಾಗಿಸಿದೆ.
ಮಡಿಕೇರಿ, ಪೊನ್ನಂಪೇಟೆ ತಾಲೂಕು ಹೊರತುಪಡಿಸಿದರೆ ಉಳಿದಂತೆ ಇತರ ಭಾಗಗಳಲ್ಲಿ ಇನ್ನೂ ನಿತ್ಯ ಮೋಡ ಹಾಗೂ ಬಿಸಿಲಿನ ಕಣ್ಣಾಮುಚ್ಚಾಲೆ ಮುಂದುವರಿದಿದೆ.

ಕಾಫಿಗೆ ಇದು ಮಹತ್ವದ ಅವಧಿ

ಕಾಫಿ ಬೆಳೆಗೆ ಮುಂಗಾರು ಆರಂಭದ ಮಳೆ ಅತ್ಯಂತ ಮಹತ್ವದ್ದಾಗಿದೆ. ಇದು ಗಿಡ, ಕಾಯಿಗಳ ಬೆಳವಣಿಗೆ ಮತ್ತು ಮುಂದಿನ ಇಳುವರಿಯ ಮೇಲೆ ನೇರ ಪರಿಣಾಮ ಬೀರುತ್ತದೆ. ವಿಶೇಷವಾಗಿ ಅರೇಬಿಕಾ ಮತ್ತು ರೋಬಸ್ಟಾ ಕಾಫಿ ತೋಟಗಳಲ್ಲಿ ನಿರಂತರ ಮಳೆ ಅಗತ್ಯವಾಗಿದ್ದು, ಮಳೆ ವಿಳಂಬವಾದರೆ ಕಾಯಿ ಉದುರುವಿಕೆ, ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುವ ಸಾಧ್ಯತೆ ಇದೆ ಎನ್ನುತ್ತಾರೆ ಇಲ್ಲಿನ ಬೆಳೆಗಾರರು. ಈಗಾಗಲೇ ಬೇಸಿಗೆಯಲ್ಲಿ ಕಾಣಿಸಿಕೊಂಡಿದ್ದ ಉಷ್ಣಾಂಶದಿಂದ ಸಾಕಷ್ಟು ಕಾಫಿ ತೋಟಗಳು ಒಣ ವಾತಾವರಣವನ್ನು ಎದುರಿಸಿವೆ. ಮಳೆ ಮತ್ತಷ್ಟು ವಿಳಂಬವಾದರೆ ಇಲ್ಲಿನ ಕಾಫಿ ತೋಟಗಳಲ್ಲಿ ಹೆಚ್ಚುವರಿ ನೀರಾವರಿ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಎದುರಾಗ ಬಹುದು ಎಂದು ಕಾಫಿ ಬೆಳೆಗಾರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮುಂಗಾರು ಚುರುಕುಗೊಂಡರೆ ಬೆಳೆಗಳಿಗೆ ಅಗತ್ಯ ತೇವಾಂಶ ದೊರೆಯಲಿದ್ದು, ಮುಂದಿನ ಕೃಷಿ ಚಟುವಟಿಕೆಗಳಿಗೂ ಅನುಕೂಲವಾಗಲಿದೆ ಎಂಬ ನಿರೀಕ್ಷೆಯಲ್ಲಿ ಜಿಲ್ಲೆಯ ಕಾಫಿ ಬೆಳೆಗಾರರು ಈಗ ಆಕಾಶದತ್ತ ದೃಷ್ಟಿ ನೆಟ್ಟಿದ್ದಾರೆ.

ಪ್ರಾತಿನಿಧಿಕ ಚಿತ್ರ.



ಭತ್ತ ಬೇಸಾಯಕ್ಕೆ ಸಿಕ್ಕಿದೆ ಚಾಲನೆ

ಈ ನಡುವೆ ಜಿಲ್ಲೆಯಲ್ಲಿ ಭತ್ತ ಬೇಸಾಯಕ್ಕೆ ವೇಗ ಸಿಕ್ಕಿದೆ. ಮಳೆ ಆರಂಭವಾಗುತ್ತಲೇ ಅಲ್ಲಲ್ಲಿ ಭತ್ತದ ಕೃಷಿಕರು ಉಳುಮೆ ಕಾರ್ಯಕ್ಕೆ ಮುಂದಾಗಿದ್ದಾರೆ. ಅನ್ನದಾತರ ಉತ್ಸಾಹ ಗದ್ದೆಗಳಲ್ಲಿ ಕಂಡುಬರುತ್ತಿದೆ.

ಕಾಫಿಗೆ ಸವಾಲಾಗುತ್ತಿದೆ ವಿಲಕ್ಷಣ ಹವಾಮಾನ

ಕಳೆದ ಕೆಲವು ವರ್ಷಗಳಿಂದ ಹವಾಮಾನ ವೈಪರೀತ್ಯಗಳು ಕಾಫಿ ಕೃಷಿಯ ಮೇಲೆ ಪರಿಣಾಮ ಬೀರುತ್ತಿದ್ದು, ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡೂ ಬೆಳೆಗಾರರಿಗೆ ಸವಾಲಾಗಿ ಪರಿಣಮಿಸಿವೆ. ಈ ಮಳೆ ಸಾಮಾನ್ಯ ಪ್ರಮಾಣ ದಲ್ಲಿ ಸುರಿಯಲಿ ಎಂಬ ಆಶಯ ಅವರದ್ದಾಗಿದೆ.

ಎಲ್ಲಾ ಕೃಷಿ ಕ್ಷೇತ್ರಗಳು ಮುಂಗಾರು ಅವಲಂಬಿತ

ಕಾಫಿ ಬೆಳೆ ಮಾತ್ರವಲ್ಲದೆ, ಕರಿಮೆಣಸು, ಅಡಿಕೆ, ಇತರ ಮಿಶ್ರ ಬೆಳೆಗಳು ಕೂಡಾ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಮುಂಗಾರು ಅವಲಂಬಿತವಾಗಿದೆ. ಕಳೆ ನಿಯಂತ್ರಣ, ಗೊಬ್ಬರ ಬಳಕೆ ಮತ್ತು ಇತರ ಕೃಷಿ ಚಟುವಟಿಕೆಗಳು ಸಹ ಸಮರ್ಪಕ ಮಳೆಯನ್ನೇ ಅವಲಂಬಿಸಿವೆ.

ಹಲವು ವರ್ಷಗಳಿಂದ ಡಾಮರು ಕಾಣದ ರಸ್ತೆಯಲ್ಲಿ ಸಂಚಾರವೇ ನರಕ ಯಾತನೆ 2
ಸಮಸ್ಯೆ ಕೇಳುವವರೇ ಗೈರಾದರೆ ಪರಿಹರಿಸುವವರು ಯಾರು? 3
ಉಡುಪಿ ನಗರಸಭೆಯ ಅಪೂರ್ಣ ಕಾಮಗಾರಿಗಳಿಂದ ಕೃತಕ ನೆರೆ ಭೀತಿ! 6

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶುಕ್ರವಾರ 12, ಜೂನ್ 2026

ಸುತ್ತಮುತ್ತ

ಶ್ರೀರಾಮ ಶಿಶುವಾಟಿಕ ತರಗತಿಗಳ ಉದ್ಘಾಟನೆ, ಪ್ರವೇಶೋತ್ಸವ ಇಂದು

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ ಶ್ರೀರಾಮ ಶಿಶುವಾಟಿಕ ವಿಭಾಗದ ಉದ್ಘಾಟನಾ ಕಾರ್ಯಕ್ರಮವು ಜೂ.12ರಂದು ನಡೆಯಲಿದೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ. ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಐಎಸ್‌ಎಸ್‌ಎಆರ್ ಫೈನಾನ್ಸಿಯಲ್ ಸರ್ವಿಸ್ ಮುಂಬೈ ಇದರ ಚೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಆರ್. ಕೆ. ಶೆಟ್ಟಿ ಮುಂಬೈ ಶ್ರೀರಾಮ ಶಿಶುವಾಟಿಕವನ್ನು ಉದ್ಘಾಟಿಸಲಿದ್ದಾರೆ. ಡಿಡಿಪಿಐ ಶಶಿಧರ ಜಿ.ಎಸ್, ಹಾಗೂ ಮಂಗಳೂರಿನ ಉದ್ಯಮಿ ದಿವ್ಯ ಸೋಹನ್ ರೈ, ಪುತ್ತೂರು ಜಿ.ಎಲ್.ಆಚಾರ್ಯ ಜ್ಯುವೆಲ್ಲರ್ಸ್' ಆಡಳಿತ ಪಾಲುದಾರರಾದ ಲಕ್ಷ್ಮೀಕಾಂತ ಆಚಾರ್ಯ, ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್ ಸಾಮಾಜಿಕ ಜಾಲತಾಣದ ಮುಖ್ಯಸ್ಥ ವೇದ ಲಕ್ಷ್ಮೀಕಾಂತ ಆಚಾರ್ಯ, ಪುತ್ತೂರು ಪ್ರಗತಿ ಆಸ್ಪತ್ರೆಯ ಆಯುರ್ವೇದ ತಜ್ಞೆ ಡಾ. ಸುಧಾ ರಾವ್ ಬಂಗಾರಡ್ಕ, ಉಪ್ಪಿನಂಗಡಿ ರಾಜ್ ಗ್ರೂಪ್‌ನ ಸ್ಥಾಪಕ ಕೃಷ್ಣರಾಜ್ ಹಾಗೂ ಸಂಸ್ಥೆಯ ಪ್ರಾಂಶುಪಾಲ ತಿರುಮಲೇಶ್ವರ ಪ್ರಶಾಂತ್ ಮತ್ತಿತರರು ಉಪಸ್ಥಿತರಿರುತ್ತಾರೆ ಎಂದು ಸಂಸ್ಥೆಯ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ. 14: ಮರಾಠಿ ಸಂಘದ ವಿಸ್ತರಿತ ಕಟ್ಟಡ ಉದ್ಘಾಟನೆ, ಅಭಿನಂದನೆ

ಕೈಕಂಬ: ಮಂಗಳೂರು ತಾಲೂಕು ಮರಾಠಿ ಸಮಾಜ ಸೇವಾ ಸಂಘ ಗಂಜಿಮಠ ಇದರ 6ನೇ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಮಂಗಳೂರು ನಗರ ಉತ್ತರ ಶಾಸಕರ ಮತ್ತು ಕರಾವಳಿ ಅಭಿವೃದ್ಧಿ ಮಂಡಳಿಯ ಅನುದಾನದಿಂದ ನಿರ್ಮಾಣ ಮಾಡಲಾಗಿರುವ ವಿಸ್ತರಿತ ಕಟ್ಟಡದ ಉದ್ಘಾಟನೆ, ಮಹಾಸಭೆ, ವಿದ್ಯಾರ್ಥಿಗಳಿಗೆ ಪುರಸ್ಕಾರ ಹಾಗೂ ಅಭಿನಂದನಾ ಕಾರ್ಯಕ್ರಮ ಜೂ.14ರಂದು ಗಂಜಿಮಠ ಮರಾಠಿ ಸಮಾಜ ಮಂದಿರದಲ್ಲಿ ನಡೆಯಲಿದೆ. ಬೆಳಿಗ್ಗೆ 8.30ರಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ವ್ರತ, 10.30ರಿಂದ ಮಹಾಸಭೆ, ಮಧ್ಯಾಹ್ನ 12ರಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜೂ.14: ಶೈಕ್ಷಣಿಕ ಸವಲತ್ತುಗಳ ವಿತರಣೆ


ಮುಲ್ಕಿ: ತೋಕೂರುಯುವಕ ಸಂಘ ಮತ್ತು ಮಹಿಳಾ ಮಂಡಲ ಆಶ್ರಯದಲ್ಲಿಗ್ರಾಮದ ಮೂರು ಅಂಗನವಾಡಿ ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ್, ಬರವಣಿಗೆ ಪುಸ್ತಕ ಹಾಗೂ ಶೈಕ್ಷಣಿಕ ಸವಲತ್ತುಗಳ ವಿತರಣಾ ಸಮಾರಂಭ ಜೂ.14ರಂದು ಸಂಜೆ ಗಂಟೆ 4.00ಕ್ಕೆ ತೋಕೂರು ಯುವಕ ಸಂಘದ ಸುವರ್ಣ ಸಭಾಂಗಣದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಎಂಆರ್‌ಪಿಎಲ್ ಪ್ರಬಂಧಕ ಎಂ. ರಿತೇಶ್ ಕುಮಾರ್ ವಹಿಸಲಿದ್ದಾರೆ. ಮುಲ್ಕಿ ಮೂಡುಬಿದಿರೆ ಕ್ಷೇತ್ರದ ಬಿಜೆಪಿ ಮಂಡಲಾಧ್ಯಕ್ಷ ದಿನೇಶ್ ಪುತ್ರನ್, ಮಾನಂಪಾಡಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ವಸಂತಿ ಕುಮಾರಿ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ

ಡಿವೈಡರ್‌ಗೆ ಕಾರು ಡಿಕ್ಕಿ

ಮೂಡುಬಿದಿರೆ: ಕಾರು ಮೂಡುಬಿದಿರೆ ಕಡೆಯಿಂದ ಕಾರ್ಕಳ ಕಡೆಗೆ ಬುಧವಾರ ಬೆಳುವಾಯಿ ಕೆಸರುಗದ್ದೆ ಹೆದ್ದಾರಿಯಲ್ಲಿ ಹೋಗುತಿದ್ದ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಡಿವೈಡರಿಗೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ. ಅಪಘಾತದ ತೀವ್ರತೆಗೆ ಕಾರಿನ ಮುಂಭಾಗ ಜಖಂಗೊಂಡಿದ್ದು ವಾಹನಕ್ಕೆ ಹಾನಿಯಾಗಿದೆ. ಕಾರಿನಲ್ಲಿದ್ದ ಯುವತಿಗೆ ಗಾಯಗಳಾಗಿದೆ.

ಮುಲ್ಕಿ: ಲಯನ್ಸ್ ಕ್ಲಬ್ ಬಪ್ಪನಾಡು ಇನ್ಸ್‌ಫೈರ್ ಅಧ್ಯಕ್ಷರಾಗಿ ಆಯ್ಕೆ

ಮುಲ್ಕಿ: ಲಯನ್ಸ್ ಕ್ಲಬ್ ಬಪ್ಪನಾಡು ಇನ್ಸ್ ಫೈರ್ ಮಾಸಿಕ ಸಭೆಯು ಬಪ್ಪನಾಡಿನ ಮಾತಾ ಪಂಚದುರ್ಗ ರೆಸಿಡೆನ್ಸಿಯ ಧನ್ವಂತರಿ ಭವನದಲ್ಲಿ ನಡೆಯಿತು. 2026– 27ನೇ ಸಾಲಿಗೆ ಸಂಸ್ಥೆಯ ಅಧ್ಯಕ್ಷರಾಗಿ ಕಲ್ಲಪ್ಪ ತಡವಲಗ ಆಯ್ಕೆಯಾಗಿದ್ದಾರೆ



ಕಾರ್ಯದರ್ಶಿಯಾಗಿ ಪುಷ್ಪರಾಜ ಚೌಟ ಕೋಶಾಧಿಕಾರಿಯಾಗಿ ಪ್ರಶಾಂತ ಶರ್ಮ ಆಯ್ಕೆಯಾದರು. ಸಭೆಯಲ್ಲಿ ಮಾಜಿ ಅಧ್ಯಕ್ಷ ಅನಿಲ್‌ಕುಮಾರ್ ಕಾರ್ಯದರ್ಶಿ, ಅಶ್ವಿನಿ ಶರ್ಮ ಕೋಶಾಧಿಕಾರಿ ಸಂತೋಷ್ ಕುಮಾರ್, ಸ್ಥಾಪಕ ಅಧ್ಯಕ್ಷ ವೆಂಕಟೇಶ್ ಹೆಬ್ಬಾರ್ ಪ್ರತಿಭಾ ಹೆಬ್ಬಾರ್ ಸುಧೀರ್ ಬಾಳಿಗ ಭಾಸ್ಕರ್ ಕಾಂಚನ್ ಬಿ. ಶಿವಪ್ರಸಾದ್ ಪ್ರಣವ್ ಶರ್ಮಾ ಉಪಸ್ಥಿತರಿದ್ದರು.

ಶ್ರೀ ಗಣೇಶೋತ್ಸವ ಸಮಿತಿ ಕಲ್ಲಬೆಟ್ಟು ಪದಾಧಿಕಾರಿಗಳ ಆಯ್ಕೆ

ಮೂಡುಬಿದಿರೆ: ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಕಲ್ಲಬೆಟ್ಟು ಇದರ ಅಧ್ಯಕ್ಷರಾಗಿ ರಾಜೇಶ್ ಬೈಲೂರು, ಕಾರ್ಯದರ್ಶಿಯಾಗಿ ಪ್ರಮೋದ್



ಆಚಾರ್ಯ ಮಾರೂರು, ಉಪಾಧ್ಯಕ್ಷರಾಗಿ ಪ್ರದೀಪ್ ರೈ ತೆಂಕಬೆಟ್ಟು, ಶಶಿಧರ್ ಶೆಟ್ಟಿ ಕರಿಂಜೆ, ಎಲ್.ಕೆ. ಸಾಲ್ಯಾನ್, ಧನಂಜಯ ಮಾರೂರು, ರಂಜಿತ್ ಕಲ್ಲಬೆಟ್ಟು, ಜೊತೆಕಾರ್ಯದರ್ಶಿಯಾಗಿ ನಿತಿನ್ ಕಲ್ಲಬೆಟ್ಟು, ವಿಜೇಶ್ ಕರಿಂಜೆ, ಸೂರಜ್ ಕೆ. ಕೊಡಂಗಲ್ಲು, ಸಾಂಸ್ಕೃತಿಕ ಸ್ಪರ್ಧಾ ನಿರ್ವಾಹಕರಾಗಿ ಜಿ. ಗೋಪಾಲಕೃಷ್ಣ, ಕ್ರೀಡಾ ಸ್ಪರ್ಧೆಗಳ ನಿರ್ವಾಹಕರಾಗಿ ಸುರೇಂದ್ರ ಉರ್ವೆಲ್‌ಪಾದೆ ಆಯ್ಕೆಯಾಗಿದ್ದಾರೆ.

ಪುತ್ತೂರು ನಗರಸಭೆಯಿಂದ ತ್ಯಾಜ್ಯಗಳು ನದಿಯನ್ನು ಸೇರದಂತೆ ತಡೆಯುವ ತಂತ್ರಜ್ಞಾನ ಅಳವಡಿಕೆ

ಜಲಮಾಲಿನ್ಯ ತಡೆಯಲು ಫ್ಲೋಟಿಂಗ್ ಟ್ರ್ಯಾಷ್ ಬ್ಯಾರಿಯರ್

ಪುತ್ತೂರು: ಪುತ್ತೂರು ನಗರಸಭೆ ಸಹಯೋಗದೊಂದಿಗೆ ಬೆಂಗಳೂರಿನ ಸಾಹಸ ಸಂಸ್ಥೆ ಹಾಗೂ ಎಚ್‌ಡಿಬಿ ಫೈನಾನ್ಶಿಯಲ್ ಸರ್ವೀಸಸ್‌ನ ಆರ್ಥಿಕ ನೆರವಿನೊಂದಿಗೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿ ರಾಜಕಾಲುವೆಗೆ ಅಳವಡಿಸಲಾದ ತೇಲುವ ಕಸದ ತಡೆಗೋಡೆಯನ್ನು (ಫ್ಲೋಟಿಂಗ್ ಟ್ರ್ಯಾಷ್ ಬ್ಯಾರಿಯರ್) ಪೌರಾಯುಕ್ತೆ ವಿದ್ಯಾ ಎಂ. ಕಾಳೆ ಉದ್ಘಾಟಿಸಿದರು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ರೋಟರಿ ಕ್ಲಬ್ ಅಧ್ಯಕ್ಷ, ವರ್ತಕರ ಸಂಘದ ಕಾರ್ಯದರ್ಶಿ ಉಲ್ಲಾಸ್ ಪೈ, ಪುತ್ತೂರು ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕ ರಾಮಚಂದ್ರ ಮತ್ತುಶ್ವೇತಾಕಿರಣ್, ಸಾಹಸ್ ಸಂಸ್ಥೆಯಸಂಯೋಜಕ ಅನಂತ ದೇಶಭಂಡಾರಿ ಮತ್ತು ಮೇಲ್ವಿಚಾರಕ ಗಣೇಶ್ ಹಾಗೂ ಇರ್ಫಾನ್, ದೇವಸ್ಥಾನದ ಸಿಬ್ಬಂದಿ ವರ್ಗದವರು, ಪುತ್ತೂರು ನಗರಸಭೆಯ ಕಮ್ಯುನಿಟಿ ಮೊಬಿಲೈಸರ್‌ಗಳು ಉಪಸ್ಥಿತರಿದ್ದರು.





ಏನಿದು ಟ್ರ್ಯಾಷ್ ಬ್ಯಾರಿಯರ್?

ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಚರಂಡಿಗಳಲ್ಲಿ ತುಂಬಿದ್ದು ರಾಶಿ ರಾಶಿ ಪ್ಲಾಸ್ಟಿಕ್ ತ್ಯಾಜ್ಯ ತೋಡುಗಳನ್ನು ಸೇರುತ್ತಿತ್ತು. ನೀರಿನ ಮೇಲೆ ತೇಲುವ ಇಂತಹ ಕಸ ಕಡ್ಡಿ, ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯ ನೀರಲ್ಲಿ ಹರಿದು ಹೋಗದಂತೆ ಟ್ರ್ಯಾಷ್ ಬ್ಯಾರಿಯರ್ ತಡೆಯುತ್ತದೆ. ಪ್ಲಾಸ್ಟಿಕ್ ಬಾಟಲಿ, ಬ್ಯಾಗ್ ಸಹಿತ ವಿವಿಧ ರೀತಿಯ ಪರಿಸರಕ್ಕೆ ಮಾರಕವಾದ ತ್ಯಾಜ್ಯವನ್ನು ತಡೆ ಹಿಡಿಯುವ ಮೂಲಕ ಹೊಳೆಗಳ ಮೂಲಕ ಸಮುದ್ರ ಸೇರುವ ತ್ಯಾಜ್ಯಗಳಿಗೆ ಮುಕ್ತಿ ಸಿಗಲಿದೆ. ಇದರಿಂದ ಜಲ ಮಾಲಿನ್ಯ ಕಡಿಮೆ ಆಗುವುದಲ್ಲದೆ ಜಲಚರಗಳಿಗೆ ಹಾನಿಯಾಗುವುದು ತಪ್ಪುತ್ತದೆ.

ನದಿ ಸೇರದು ಪ್ಲಾಸ್ಟಿಕ್ ತ್ಯಾಜ್ಯ

ಪ್ಲಾಸ್ಟಿಕ್ ತ್ಯಾಜ್ಯಗಳು ಮಳೆ ನೀರಿನ ಮೂಲಗಳನ್ನು ಸೇರಿ ಜಲಚರಗಳಿಗೆ ಕಂಟಕವಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಪುತ್ತೂರು ನಗರಸಭೆ ಖಾಸಗಿ ಸಹಭಾಗಿತ್ವದಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯ ರಾಜಕಾಲುವೆಗೆ ಟ್ರ್ಯಾಷ್ ಬ್ಯಾರಿಯರ್ ತಂತ್ರಜ್ಞಾನವನ್ನು ಅಳವಡಿಸಿದೆ. ನಗರದ ತೆಂಕಿಲ ಭಾಗದಿಂದ ಪ್ರಾರಂಭವಾಗುವ ಈ ರಾಜಕಾಲುವೆ ಬೆದ್ರಾಳದಲ್ಲಿ ನದಿಯನ್ನು ಸೇರುತ್ತದೆ. ಪುತ್ತೂರು ಪೇಟೆಯ ಸಮಗ್ರ ತ್ಯಾಜ್ಯವನ್ನು ಹೊತ್ತೊಯ್ದು ಅಣೆಕಟ್ಟುಗಳಲ್ಲಿ ಕುಡಿಯುವ ನೀರಿನ ಮೂಲಗಳನ್ನು ಸೇರಿ ಜಲ ಮಾಲಿನ್ಯ ಉಂಟಾಗುತ್ತಿತ್ತು. ಈ ಹೊಸ ತಂತ್ರಜ್ಞಾನವು ತೇಲುವ ಕಸವನ್ನು ಮೂಲದಲ್ಲೇ ತಡೆದು ನೀರಿನಿಂದ ಬೇರ್ಪಡಿಸಲು ಸಹಕಾರಿಯಾಗಿದೆ.

ಪಂಚಸಿರಿ ಕಾರ್ಯಕ್ರಮ

ಬೆಂಗಳೂರು ಮೂಲದ ಸಾಹಸ್ ಎನ್‌ಜಿಒ ಸಂಸ್ಥೆಯ ಪಂಚಸಿರಿ ಕಾರ್ಯಕ್ರಮದಡಿ ಪುತ್ತೂರು ನಗರಸಭೆ ವ್ಯಾಪ್ತಿಯಲ್ಲಿ ಟ್ರ್ಯಾಶ್ ಬ್ಯಾರಿಯರ್ ಅಳವಡಿಸುತ್ತಿದೆ. ಸ್ವಚ್ಛ ಪುತ್ತೂರು ಪರಿಕಲ್ಪನೆಯ ದೃಷ್ಟಿಯಿಂದ ಎಚ್‌ಡಿಬಿ ಫೈನಾನ್ಶಿಯಲ್ ಸರ್ವೀಸಸ್ ರೂ.5 ಲಕ್ಷ ಸಿಎಸ್‌ಆರ್ ಅನುದಾನದಲ್ಲಿ ತಂತ್ರಜ್ಞಾನ ಅಳವಡಿಸಲಾಗಿದೆ. ಮುಂದಿನ ನಿರ್ವಹಣೆಯನ್ನು ಪುತ್ತೂರು ನಗರಸಭೆ ಮಾಡಲಿದೆ.

> **ವಿಸ್ತರಣೆ ಗುರಿ**
>
> ಟ್ರ್ಯಾಶ್ ಬ್ಯಾರಿಯರ್ ಪ್ರಾಯೋಗಿಕವಾಗಿ ಬೆದ್ರಾಳದಲ್ಲಿ ಹಾಕಲಾಗಿತ್ತು. ಆದರೆ, ಖಾಸಗಿ ಜಾಗದವರಿಂದ ತಕರಾರು ಬಂದ ಹಿನ್ನೆಲೆಯಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿ ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ನಾಲ್ಕೈದು ಕಡೆಗಳಲ್ಲಿ ಟ್ರ್ಯಾಶ್ ಬ್ಯಾರಿಯರ್ ತಂತ್ರಜ್ಞಾನವನ್ನು ಅಳವಡಿಸುವ ಗುರಿ ಇದೆ.
>
> • ವಿದ್ಯಾ ಕಾಳೆ, ನಗರಸಭೆ ಪೌರಾಯುಕ್ತ

ಆಲಂಕಾರು ಸೊಸೈಟಿ ಮಹಾಸಭೆ: 2.91 ಕೋಟಿ ರೂ. ಲಾಭ, ಶೇ.12 ಲಾಭಾಂಶ

ಆಲಂಕಾರು: ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮಹಾ ಸಭೆ ಸಂಘದ ಪ್ರಧಾನ ಕಚೇರಿಯ ದೀನದಯಾಳು ರೈತ ಸಭಾಭವನದಲ್ಲಿ ಶನಿವಾರ ನಡೆಯಿತು. ಸಂಘದ ಅಧ್ಯಕ್ಷ ರಮೇಶ್ ಭಟ್ ಉಪ್ಪಂಗಳ ಅವರ ಅಧ್ಯಕ್ಷತೆ ವಹಿಸಿದ್ದರು. ಸಂಘದ ಸಿಇಒ ಮನೋಹರ ಪ್ರಕಾಶ್ ವರದಿ ಮಂಡಿಸಿ, ಸಂಘವು ಪ್ರಸ್ತಕ ವರ್ಷದಲ್ಲಿ 1289 ಕೋಟಿ ವ್ಯವಹಾರ ನಡೆಸಿ 2,91,08,219 ಕೋಟಿ ರೂ. ಲಾಭ ಗಳಿಸಿದೆ ಎಂದರು.

ವಾರ್ಷಿಕ ವಹಿವಾಟು 40 ಕೋಟಿ 63 ಲಕ್ಷ ಆಗಿರುತ್ತದೆ. ವರ್ಷಾಂತ್ಯದಲ್ಲಿ ಸಂಘದಲ್ಲಿ 115.33 ಕೋಟಿ ಠೇವಣಿ ಹೊಂದಿದ್ದು 181.75 ಕೋಟಿ ರೂ. ಸಾಲ ನೀಡಲಾಗಿದೆ. ಸದಸ್ಯರ ಸಾಲದ ಹೊರಬಾಕಿ ರೂ. 175.18 ಕೋಟಿ ರೂ. ಇದ್ದು ಶೇ 99.08 ಸಾಲ ವಸೂಲಾತಿಗೆ ಬಾಕಿ ಇದೆ ಎಂದರು.

ಅಧ್ಯಕ್ಷ ರಮೇಶ್ ಭಟ್ ಉಪ್ಪಂಗಳ ಮಾತನಾಡಿ, ಸಂಘಕ್ಕೆ ಐವತ್ತು ವರ್ಷ ತುಂಬುತ್ತಿದ್ದು ವಿವಿಧ ಯೋಜನೆಗಳೊಂದಿಗೆ ಸುವರ್ಣ ಮಹೋತ್ಸವ ಆಚರಿಸಲು ನಿರ್ಧರಿಸಲಾಗಿದೆ. ಸಂಘದ ಪ್ರಧಾನ ಕಚೇರಿ ಆವರಣದಲ್ಲಿ ಹೆಚ್ಚುವರಿಯಾಗಿ ಮಿನಿಹಾಲ್ ನಿರ್ಮಾಣ ಹಾಗೂ ಕುಂತೂರು ಶಾಖೆಯಲ್ಲಿ ಗೋದಾಮು ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ ಎಂದರು. ಈ ಬಗ್ಗೆ ಚರ್ಚೆ ನಡೆದು ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ಪಡೆಯಲಾಯಿತು.

ಹಳೆನೇರೆಂಕಿ ಶಾಖಾ ಕಟ್ಟಡದ ಕೆಲವು ಲೋಪದೋಷಗಳನ್ನು ಸರಿಪಡಿಸಿ ಸುಮಾರು 10.76 ಲಕ್ಷ ರೂ. ಹೆಚ್ಚುವರಿ ಖರ್ಚು ಮಾಡಿ ಕಾಮಗಾರಿ ಪೂರ್ತಿಗೊಳಿಸಿ ಲೋಕಾರ್ಪಣೆಗೊಳಿಸಲಾಗಿದೆ. ಸಿಬ್ಬಂದಿ ನೇಮಕ ವಿಚಾರದಲ್ಲಿ ಸದಸ್ಯರೊಬ್ಬರು ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಕಾನೂನು ತೊಡಕು ನಿವಾರಿಸಿಕೊಂಡು ನೇಮಕಾತಿ ಪ್ರಕ್ರಿಯೆ ಚಾಲನೆ ನೀಡಲಾಗಿದೆ ಎಂದರು.

ಮತ್ತೆ ಪ್ರತಿಧ್ವನಿಸಿದ ಸಭಾ ಭತ್ಯೆ ಪ್ರಕರಣ

ಈ ಹಿಂದಿನ ಆಡಳಿತ ಮಂಡಳಿ ಸಿಟ್ಟಿಂಗ್ ಫೀಸ್ ಪಡೆದಿರುವ ಬಗ್ಗೆ ಮಾಹಿತಿ ನೀಡುವಂತೆ ಎಂದು ಸದಸ್ಯರೊಬ್ಬರು ಮನವಿ ಮಾಡಿದರು. ಅಧ್ಯಕ್ಷ ರಮೇಶ್ ಭಟ್ ಮಾತನಾಡಿ, ನಾವು ಆಡಿಟ್ ವರದಿಯಲ್ಲಿ ಬಂದ ಪ್ರಕಾರ ಸಭಾ ಭತ್ಯೆಯನ್ನು ವಾಪಾಸ್ಸು ಮಾಡಬೇಕೆಂದು ಮನವಿ ಮಾಡಿರುವುದಕ್ಕೆ ಇಬ್ಬರು ಸದಸ್ಯರು ಹೆಚ್ಚುವರಿ ಪಡೆದ ಭತ್ಯೆಯನ್ನು ಸಂಘಕ್ಕೆ ಹಿಂದಿರುಗಿಸಿದ್ದಾರೆ. ಇನ್ನುಳಿದವರು ಲಾಯರ್ ನೋಟೀಸ್ ನೀಡಿದ್ದಾರೆ. ಅದಕ್ಕೆ ಪ್ರತಿಯಾಗಿ ಸಂಘದಿಂದಲೂ ಉತ್ತರ ನೀಡಲಾಗಿದೆ. ಇದನ್ನು ಸೌಹಾರ್ದವಾಗಿ ಮುಗಿಸಲು ಪ್ರಯತ್ನ ಮಾಡಲಾಗಿದೆ. ಆದರೆ ಪ್ರಕರಣವನ್ನು ಮತ್ತೆ ಜೀವಂತ ಇಡಲಾಗಿದೆ ಎಂದರು. ಬಳಿಕ ಮಾತನಾಡಿದ ಮಾಜಿ ಅಧ್ಯಕ್ಷ ಧರ್ಮಪಾಲ ರಾವ್ ಕಜೆ, ನಾವು ನಿಯಮಾನುಸಾರ ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರ ಸಲಹೆ ಮೇರೆಗೆ ನಾವು ಭತ್ಯೆ ಪಡೆದಿದ್ದೇವೆ ಎಂದು ಸಮಜಾಯಿಕೆ ನೀಡಿದರು. ಇದರಿಂದ ತೀವ್ರ ಅಸಮಾಧಾನಗೊಂಡ ಅಧ್ಯಕ್ಷರು, ನಿಮಗೆ ಕನಿಷ್ಠ ಕಾನೂನು ಜ್ಞಾನ ಬೇಕಿತ್ತು, ಗೊತ್ತಿಲ್ಲದಿದ್ದರೆ ಗೊತ್ತಿದ್ದವರಲ್ಲಿ ಕೇಳಿ ಮುಂದುವರಿಯಬೇಕಿತ್ತು. ತಪ್ಪು ಮಾಡಿ ಈಗ ಅನುಭವಿಸುವಂತಾಗಿದೆ. ನೀವು ಕಾನೂನು ಸಮರಕ್ಕೆ ಇಳಿದಿದ್ದೀರಿ ಇದರಿಂದ ನಿಮಗೂ ನಷ್ಟ ಸಂಘಕ್ಕೂ ನಷ್ಟ. ಸುಮ್ಮನೇ ಹಠ ಮಾಡದೆ ಈಗಾಗಲೇ ಇಬ್ಬರು ಪಾವತಿಸಿದಂತೆ ಹೆಚ್ಚುವರಿ ಭತ್ಯೆ ಪಡೆದಿರುವುದನ್ನು ಪಾವತಿಸಿ ಎಂದು ತಾಕೀತು ಮಾಡಿದರು.

ಸದಸ್ಯರಾದ ಉಮೇಶ್ ರೈ, ರಾಮಚಂದ್ರ ಭಟ್, ಪದ್ಮನಾಭ ಗೌಡ, ಸಂತೋಷ್ ಕುಮಾರ್, ಉದಯ ಕಶ್ಯಪ್, ಪ್ರಶಾಂತ್ ರೈ, ಈಶ್ವರ ಗೌಡ, ಮುರಿಕೃಷ್ಣ ಭಟ್, ಮುತ್ತಪ್ಪ ಪೂಜಾರಿ, ಸದಾಶಿವ ಶೆಟ್ಟಿ, ಮೋಹನ್‌ದಾಸ್ ಶೆಟ್ಟಿ ವೆಂಕಟ್ರಮಣ ಭಟ್ ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಿದ್ದರು. ಸಂಘದ ಉಪಾಧ್ಯಕ್ಷ ದಯಾನಂದ ರೈ ಮನವಳಿಕೆ ವಂದಿಸಿದರು. ಸಿಬ್ಬಂದಿ ಲೋಕನಾಥ ರೈ ನಿರೂಪಿಸಿದರು.



> **ಕಾಟು ಮಾವಿನ ಗಿಡ ನಾಟಿ**
>
> ನಶಿಸಿಹೋಗುತ್ತಿರುವ ಕಾಟು ಮಾವಿನ ಗಿಡ ವಿತರಣೆ ಮಾಡುವ ನಿಟ್ಟಿನಲ್ಲಿ ಸದಸ್ಯರು 5,700 ಮಾವಿನ ಗಿಡಗಳನ್ನು ನೀಡಲಿದ್ದಾರೆ. ಹೀಗೆ ಬಂದ ಗಿಡಗಳಿಗೆ ಕಸಿಕಟ್ಟುವ ಕಾರ್ಯ ಮಾಡಿ, ಸಂಘದ ಕಾರ್ಯ ವ್ಯಾಪ್ತಿಯ ಶಾಲೆ, ದೇವಸ್ಥಾನ, ಚರ್ಚ್, ಮಸೀದಿ ಆವರಣದಲ್ಲಿ ನಾಟಿ ಮಾಡಲು ಅವಕಾಶ ಮಾಡಿಕೊಡಲಾಗುವುದು ಎಂದು ರಮೇಶ್ ಭಟ್ ಉಪ್ಪಂಗಳ ಹೇಳಿದರು.

> **ಸೋಲಾರ್ ಸೌಲಭ್ಯ, ಎಲೆಕ್ಟ್ರಿಕ್ ವಾಹನಕ್ಕೆ ಸಾಲ**
>
> ಸಂಘದಲ್ಲಿ 2016-17 ಸಾಲಿನಲ್ಲಿ ಸೋಲಾರ್ ಅಳವಡಿಕೆಗೆ ಸಾಲ ಸೌಲಭ್ಯ ನೀಡಲು ಪ್ರಾರಂಭಿಸಲಾಗಿದೆ. ದೇಶದ ಆರ್ಥಿಕತೆಗೆ ಪೂರಕವಾಗಿ ಎಲೆಕ್ಟ್ರಿಕಲ್ ವಾಹನ ಬಳಕೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸಂಘದ ವತಿಯಿಂದ ಸದಸ್ಯರಿಗೆ ಶೇ. 10 ಬಡ್ಡಿ ದರದಲ್ಲಿ ಎಲೆಕ್ಟ್ರಿಕಲ್ ವಾಹನ ಖರೀದಿಗೆ ಸಾಲ ನೀಡಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

ಮೋದಿ 12 ವರ್ಷಗಳ ಆಡಳಿತ: ಕಾವೂರಿನಲ್ಲಿ ವಿಶೇಷ ರಂಗಪೂಜೆ



ಮಂಗಳೂರು: ಭಾರತದ ಯಶಸ್ವಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾಗಿ 12 ವರ್ಷಗಳನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಭಾರತೀಯ ಜನತಾ ಪಾರ್ಟಿ ಮಂಗಳೂರು ಉತ್ತರ ಮಂಡಲ ವತಿಯಿಂದ ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬುಧವಾರ ರಾತ್ರಿ ವಿಶೇಷ ರಂಗಪೂಜೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ವೇಳೆ, ನರೇಂದ್ರ ಮೋದಿಯವರ ನಾಯಕತ್ವದಲ್ಲಿ ದೇಶವು ಇನ್ನಷ್ಟು ಅಭಿವೃದ್ಧಿ ಕಾಣಲಿ ಎಂದು ಶಾಸಕ ಡಾ.ವೈ. ಭರತ್ ಶೆಟ್ಟಿ ಅವರ ನೇತೃತ್ವದಲ್ಲಿ ಪ್ರಾರ್ಥಿಸಿ, ಮೋದಿ ಅವರ ಮುಂದಿನ ಸೇವಾ ಪಯಣವು ಇನ್ನಷ್ಟು ಯಶಸ್ವಿಯಾಗಲೆಂದು ಶುಭ ಹಾರೈಸಲಾಯಿತು.

ಧಾರ್ಮಿಕ ಕಾರ್ಯಕ್ರಮದಲ್ಲಿ ಬಿಜೆಪಿ ಮಂಗಳೂರು ನಗರ ಉತ್ತರ ಮಂಡಲ ಅಧ್ಯಕ್ಷ ರಾಜೇಶ್ ಕೊಟ್ಟಾರಿ, ಪ್ರಧಾನ ಕಾರ್ಯದರ್ಶಿಗಳಾದ ರಂದೀಪ್ ಕಾಂಚನ್, ಸಂದೀಪ್ ಪಚ್ಚನಾಡಿ, ಪಕ್ಷದ ವಿವಿಧ ಪದಾಧಿಕಾರಿಗಳು, ಮಾಜಿ ಕಾರ್ಪೋರೇಟರ್‌ಗಳು, ಮುಖಂಡರು, ಕಾರ್ಯಕರ್ತರು ಇದ್ದರು.

> ■ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ರಂಗಪೂಜೆ
>
> ■ ಶಾಸಕ ಡಾ.ವೈ. ಭರತ್ ಶೆಟ್ಟಿ ಅವರ ನೇತೃತ್ವದಲ್ಲಿ ಪ್ರಾರ್ಥನೆ

ಸಾರ್ವಜನಿಕ ವರಮಹಾಲಕ್ಷ್ಮೀ ಪೂಜಾ ಸಮಿತಿ ಅಧ್ಯಕ್ಷರಾಗಿ ವೀಣಾ ಬಲ್ಲಾಳ್ ಆಯ್ಕೆ

ಪುತ್ತೂರು: ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಸಾರಥ್ಯದಲ್ಲಿ ಆ.28ರಂದು ನಡೆಯುವ ತೃತೀಯ ವರ್ಷದ ಸಾರ್ವಜನಿಕ ವರಮಹಾಲಕ್ಷ್ಮಿ ಪೂಜೆ ಪೂರ್ವಭಾವಿ ಸಭೆ ಹಾಗೂ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಮುಕ್ರಂಪಾಡಿ ಸುಭದ್ರಾ ಕಲ್ಯಾಣ ಮಂಟಪದಲ್ಲಿ ಜರುಗಿತು.













ಪುತ್ತಿಲ ಪರಿವಾರ ಸೇವಾ ಟ್ರಸ್ಟಿನ ಸಂಚಾಲಕರು, ಅಧ್ಯಕ್ಷರು, ನಿರ್ದೇಶಕರ ಸ'ವ'ುಖದ'ಲ್ಲಿ ವರಮಹಾಲಕ್ಷ್ಮಿ ಸಮಿತಿ ಅಧ್ಯಕ್ಷೆ ಪ್ರೇಮ ರಾಧಾಕೃಷ್ಣ ರೈ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಸಲಾಯಿತು. ಸಾರ್ವಜನಿಕ ಶ್ರೀ ವರಮಹಾಲಕ್ಷ್ಮಿ ಪೂಜಾ ಸಮಿತಿ ಗೌರವಾಧ್ಯಕ್ಷರಾಗಿ ಪ್ರತಿಭಾ ಓಕುಣ್ಣಾಯ ಬೊಳ್ಳಿಂಬಳಹಾಗೂರಜತಾ ಭಟ್ ಮುಕ್ರಂಪಾಡಿ, ಅಧ್ಯಕ್ಷರಾಗಿ ವೀಣಾ ಬಲ್ಲಾಳ್, ಪ್ರಧಾನ ಕಾರ್ಯದರ್ಶಿಗಳಾಗಿ ಪವಿತ್ರಾ ದೊಡ್ಡಡ್ಕ, ಸ್ವಯಂಪ್ರಭಾ ಅವರನ್ನು ನೇಮಿಸಲಾಯಿತು. ಈ ಬಾರಿ 10 ಸಾವಿರಕ್ಕೂ ಹೆಚ್ಚು ಪೂಜಾ ಸೇವೆ ಮಾಡಿಸಿ ಸೇವಾಕರ್ತರಿಗೆ ಪ್ರಸಾದ ರೂಪವಾಗಿ ಸೀರೆ, ರವಿಕೆ ಕಣ, ಬಳೆ, ಅರಶಿನ ಕುಂಕುಮ ನೀಡಲು ನಿರ್ಧರಿಸಲಾಯಿತು. ವಿವಿಧ ಸಮಿತಿ ರಚಿಸಲಾಯಿತು. ಗೌರವ ಸಲಹೆಗಾರರಾಗಿ ಪ್ರೇಮಾ ರಾಧಾಕೃಷ್ಣ ರೈ, ಶಶಿಕಲಾ ಮುಕ್ರಂಪಾಡಿ, ಅಮಿತಾ ಆರ್. ಶೆಟ್ಟಿ ನುಳಿಯಾಲು, ಸರಿತಾ ಗಣಪತಿ ನಾಯಕ್, ಪ್ರೇಮಾ ಮೋನಪ್ಪ ಗೌಡ ಮುಂಡೂರು, ಮಲ್ಲಿಕಾ ಪ್ರಸಾದ್ ಕನ್ನಯ, ರೇವತಿ ರೈ, ಉಪಾಧ್ಯಕ್ಷರಾಗಿ ಅನ್ನಪೂರ್ಣ ಜೆ. ರಾವ್, ವಿನಯಕೆಮ್ಮಿಂಜ, ಅರುಣಾ ಅನಿಲ್ ಕಣ್ಣನ್ನೂರಾಜಿ, ಅನ್ನಪೂರ್ಣ ಬಲ್ಲಾಳ್, ಕಿಶೋರಿ ಕಿಶೋರ್, ನಿಶಿತಾ ನಾಯಕ್, ಅರುಣಾ ಸನಿಲ್, ಸ್ವಪ್ನ ಜೀವನ್ ನೆಕ್ಕಿಲಾಡಿ, ಗೀತಾ ಕುರೆಮಜಲು, ವೀಣಾ ಪರ್ಲಡ್ಕ, ಜ್ಯೋತಿ ಎಸ್. ರಾವ್, ಪುಷ್ಪಾ ರಾಜೇಶ್, ಶ್ರುತಿ ಗಿರೀಶ್, ಪುಷ್ಪ ಕಲ್ಲರ್ಪೆ, ಅಶ್ವಿನಿ ಕಲ್ಲರ್ಪೆ, ಕಾರ್ಯದರ್ಶಿಗಳಾಗಿ ರತ್ನಾನಾಯರ್, ಸ್ವಾತಿ ಶ್ಯಾಮ್, ಸುಕನ್ಯಾ ನೇರಾಜೆ, ಸುಲೋಚನಾ ಪಾಣಾಜೆ ಮತ್ತು ಹತ್ತು ಮಂದಿಯನ್ನು ಅಲಂಕಾರ ಸಮಿತಿ ಸದಸ್ಯರಾಗಿ, 12 ಮಂದಿಯನ್ನು ಅನ್ನ ಸಂತರ್ಪಣಾ ಸಮಿತಿ ಸದಸ್ಯರಾಗಿ ನೇಮಿಸಲಾಯಿತು.

ಶ್ರೀರಾಮ ಪಿಯು ಕಾಲೇಜು ಪ್ರಥಮ ಪಿಯು ವಿದ್ಯಾರ್ಥಿಗಳ ಆಗತ- ಸ್ವಾಗತ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಆಗತ– ಸ್ವಾಗತ ಕಾರ್ಯಕ್ರಮ ಗುರುವಾರ ಆಜಾದ್ ಸಭಾಂಗಣದಲ್ಲಿ ನಡೆಯಿತು.

ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕ, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಮೂಲ ಚಿಂತನೆಯನ್ನು ಮೈಗೂಡಿಸಿಕೊಂಡು ದೇಶಕ್ಕಾಗಿ ಬದುಕುವುದನ್ನು ಕಲಿಯುವುದರ ಜೊತೆಗೆ ನಮ್ಮ ಪರಂಪರೆ, ರೂಢಿ, ಸಂಪ್ರದಾಯ, ಋಷಿ ಮುನಿಗಳ ಉದಾತ್ತ ಧ್ಯೇಯಗಳು ನಮ್ಮ ಬದುಕಿಗೆ ಪಾಠವಾಗಬೇಕು. ಜೊತೆಗೆ ಸ್ವದೇಶಿ ಚಿಂತನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕೆಂದರು.

ಮುಖ್ಯ ಅತಿಥಿಯಾಗಿದ್ದ ಉಡುಪಿ ಎಸ್‌ಕೆಪಿ ಗ್ರೂಪ್ ಮ್ಯಾನೇಜಿಂಗ್ ಡೈರೆಕ್ಟರ್ ಸಂಪತ್ ಶೆಟ್ಟಿ ಇನ್ನೋರ್ವ ಅತಿಥಿ ಬಿಜೆಪಿ ರಾಜ್ಯ ವಕ್ತಾರ ಸುರಭಿ ಹೊದಿಗೆರೆ ಮಾತನಾಡಿದರು. ಉಡುಪಿ ಎಸ್‌ಕೆಪಿ ಗ್ರೂಪ್ ಎಕ್ಸಿಕ್ಯೂಟಿವ್ ಡೈರೆಕ್ಟರ್ ವಿನಯ ಶೆಟ್ಟಿ, ಜನರಲ್ ಮ್ಯಾನೇಜರ್ ಶ್ರೀನಿವಾಸ್ ಶೆಟ್ಟಿ, ಪುತ್ತೂರು ರವೀಂದ್ರ ಇಂಜಿನಿಯರ್ ದಕ್ಷ ಕನ್ಸಲ್ಟೆನ್ಸಿಯ ರವೀಂದ್ರ ಮತ್ತು ಉಷಾ ಪುತ್ತೂರು, ಪತ್ರಕರ್ತ ಶ್ಯಾಮ ಸುದರ್ಶನ್, ಶ್ರೀ ರಾಮ ವಿದ್ಯಾಕೇಂದ್ರದ ಸಂಚಾಲಕರಾದ ವಸಂತ ಮಾಧವ ವೇದಿಕೆಯಲ್ಲಿದ್ದರು. ಪ್ರಥಮ ಪಿಯುಸಿ ವಿದ್ಯಾರ್ಥಿಗಳು ಹೋಮ ಕುಂಡಕ್ಕೆ ಅರ್ಘ್ಯವನ್ನು ಅರ್ಪಿಸಿ, ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಹಿರಿಯರಿಂದ ತಿಲಕ ಧಾರಣೆ ಮಾಡಿಸಿ, ಆಶೀರ್ವಾದ ಪಡೆದುಕೊಂಡರು. ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಸ್ವಾಗತಿಸಿದರು. ಮನಾಲಿ ವಂದಿಸಿದರು. ಕೃತಿಕಾ ನಿರೂಪಿಸಿದರು.

ಜೂ.13-22: ಜಿ.ಎಲ್.ಆಚಾರ್ಯ ಜ್ಯುವೆಲ್ಲರ್ಸ್ ಮುಂಗಾರು ಮೇಳ

ಪುತ್ತೂರು: ಪ್ರತಿಷ್ಠಿತ ಚಿನ್ನಾಭರಣ ಮಳಿಗೆಯಾದ ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್ ಸಂಸ್ಥೆಯು ಗ್ರಾಹಕರಿಗಾಗಿ ಮಳೆಗಾಲದ ವಿಶೇಷ ಖರೀದಿ ಉತ್ಸವ ಮುಂಗಾರು ಮೇಳವನ್ನು ಘೋಷಿಸಿದೆ. ಈ ಮೇಳವು ಜೂ.13ರಿಂದ ಜೂನ್ 22ರವರೆಗೆ ನಡೆಯಲಿದ್ದು ಸಾರ್ವಜನಿಕರಿಗೆ ಮುಕ್ತವಾಗಿದೆ.



ಮೇಳದ ಅಂಗವಾಗಿ ಚಿನ್ನದ ಸರಗಳ ತಯಾರಿಕೆ ಶುಲ್ಕ ಕೇವಲ ಶೇ. 8ರಿಂದ ಹಾಗೂ ಆಂಟಿಕ್ ಆಭರಣಗಳ ತಯಾರಿಕೆ ಶುಲ್ಕ ಶೇ.12ರಿಂದ ಆರಂಭವಾಗುತ್ತದೆ. ಜೊತೆಗೆ ವಿಎಫ್ ಎಂಡ್ ವಿವಿಎಸ್ ಗುಣಮಟ್ಟದ ವಜ್ರಾಭರಣಗಳು ಅತ್ಯಂತ ಕಡಿಮೆ ದರದಲ್ಲಿ ಲಭ್ಯವಿದ್ದು ಇತರೆ ಆಯ್ದ ಆಭರಣಗಳ ಖರೀದಿಯ ಮೇಲೂ ಆಕರ್ಷಕ ರಿಯಾಯಿತಿಗಳನ್ನು ಪಡೆಯಬಹುದು. ಇದಲ್ಲದೆ, ಹಳೆಯ 916 ಹಾಲ್‌ಮಾರ್ಕ್ ಚಿನ್ನವನ್ನು ಯಾವುದೇ ಕಡಿತವಿಲ್ಲದೆ ಪ್ರಸ್ತುತ ಚಿನ್ನದ ದರದಲ್ಲಿ ಮೌಲ್ಯಮಾಪನ ಮಾಡಿ ಹೊಸ ಆಭರಣಗಳಿಗೆ ವಿನಿಮಯ ಮಾಡಿಕೊಳ್ಳುವ ಸುವರ್ಣಾವಕಾಶವೂ ಗ್ರಾಹಕರಿಗಾಗಿ ಕಲ್ಪಿಸಲಾಗಿದೆ.

ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರ ಅಭಿರುಚಿಗೆ ತಕ್ಕ ವಿಶೇಷ ಆಭರಣಗಳ ವಿಶಾಲ ಸಂಗ್ರಹ, ಇಂದಿನ ಟ್ರೆಂಡಿಂಗ್ ಡಿಸೈನ್‌ಗಳ ಅದ್ಭುತ ಕಲೆಕ್ಷನ್‌ಗಳೊಂದಿಗೆ ನಿಮ್ಮ ಕನಸಿನ ಆಭರಣಗಳನ್ನು ಆಯ್ಕೆಮಾಡುವ ಅವಕಾಶ ಈ ಮುಂಗಾರು ಮೇಳದಲ್ಲಿ ಲಭ್ಯವಿದೆ. ಸಂಸ್ಥೆಯು ತನ್ನ ಸುದೀರ್ಘ ವರ್ಷಗಳ ವಿಶ್ವಾಸ, ಶುದತೆ ಹಾಗೂ ಉತ್ತಮ ಸೇವೆಯ ಮೂಲಕ ಗ್ರಾಹಕರ ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ. ಪುತ್ತೂರು ಸೇರಿದಂತೆ ಸುಳ್ಯ, ಹಾಸನ, ಕುಶಾಲನಗರ ಹಾಗೂ ಮೂಡಬಿದ್ರೆ ಶಾಖೆಗಳಲ್ಲಿಯೂ ಮುಂಗಾರು ಮೇಳ ನಡೆಯಲಿದ್ದು ಗ್ರಾಹಕರು ಈ ವಿಶೇಷ ಅವಕಾಶದ ಸದುಪಯೋಗ ಪಡೆದುಕೊಳ್ಳುವಂತೆ ಸಂಸ್ಥೆ ಮನವಿ ಮಾಡಿದೆ. ಮಳೆಗಾಲದ ಸಂಭ್ರಮವನ್ನು ಆಭರಣ ಖರೀದಿಯೊಂದಿಗೆ ಇನ್ನಷ್ಟು ವಿಶೇಷವಾಗಿಸಿಕೊಳ್ಳಲು, ಹೆಚ್ಚಿನ ಸಂಖ್ಯೆಯಲ್ಲಿ ಮೇಳಕ್ಕೆ ಭೇಟಿ ನೀಡಿ ಆಕರ್ಷಕ ಕೊಡುಗೆಗಳು, ರಿಯಾಯಿತಿಗಳ ಪ್ರಯೋಜನ ಪಡೆಯುವಂತೆ ಸಂಸ್ಥೆ ಪ್ರಕಟಣೆ ತಿಳಿಸಿದೆ.


> ■ ಉಳಿತಾಯದ ಮಳೆ; ಸಂಭ್ರಮದ ಖರೀದಿ


ಕಾವಳಕಟ್ಟೆ-ಧೂಮಳಿಕೆ ಸಂಪರ್ಕದ ರಸ್ತೆ ಸ್ಥಿತಿ ಆಯೋಮಯ। ಡಾಮರು ಕಿತ್ತುಹೋಗಿ ಸೃಷ್ಟಿಯಾಗಿವೆ ಹೊಂಡಗಳು

ಹಲವು ವರ್ಷಗಳಿಂದ ಡಾಮರು ಕಾಣದ ರಸ್ತೆಯಲ್ಲಿ ಸಂಚಾರವೇ ನರಕ ಯಾತನೆ

ಬಂಟ್ವಾಳ: ಕಾವಳಮೂಡೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಾವಳಕಟ್ಟೆ-ಧೂಮಳಿಕೆ ಸಂಪರ್ಕದ ರಸ್ತೆಯೊಂದು ಕಳೆದ ಹನ್ನೆರಡು ವರ್ಷಗಳಿಂದ ಡಾಮರೀಕರಣವನ್ನು ಕಾಣದೆ ನಿರ್ಲಕ್ಷ್ಯಕ್ಕೊಳಗಾದ ಪರಿಣಾಮವಾಗಿ ರಸ್ತೆಯ ಅಸ್ತಿತ್ವವೇ ಕಣ್ಮರೆಯಾಗಿದ್ದು, ಹೊಂಡಗಳ ನಡುವೆ ರಸ್ತೆ ಹುಡುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ತೀರಾ ನಾದುಸ್ತಿಯಲ್ಲಿರುವ ಈ ರಸ್ತೆಯಲ್ಲಿ ಸ್ಥಳೀಯರು ನಡೆದಾಡಲೂ ಹೆಣಗಾಟ ನಡೆಸಬೇಕಾದ ಪರಿಸ್ಥಿತಿ ಉಂಟಾಗಿದೆ. ಬಂಟ್ವಾಳ-ಧರ್ಮಸ್ಥಳ ರಾಷ್ಟ್ರೀಯ ಹೆದ್ದಾರಿಯ ಅಂಚಿನಲ್ಲೇ ಬರುವ ಈ ಸಂಪರ್ಕ ರಸ್ತೆಯ ಅವ್ಯವಸ್ಥೆಯಿಂದಾಗಿ ಜನ ನರಕ ಯಾತನೆ ಅನುಭವಿಸುವಂತಾಗಿದೆ. ರಸ್ತೆಯುದ್ದಕ್ಕೂ ಹೊಂಡ-ಗುಂಡಿಗಳೇ ರಾರಾಜಿಸುತ್ತಿದ್ದು ಮಳೆಗಾಲದಲ್ಲಂತೂ ಜನ ಸಂಚರಿಸಲಾಗದೆ ಹೈರಾಣಾಗಿದ್ದಾರೆ. ಕಾವಳಮೂಡೂರು ಗ್ರಾಮ ಪಂಚಾಯತ್ ಕಚೇರಿಯ ಮುಂಭಾಗದಲ್ಲೇ ಈ ರಸ್ತೆ ಹಾದು ಹೋಗುತ್ತಿದ್ದು, ಸಮರ್ಪಕವಾಗಿ ಡಾಮರೀಕರಣಗೊಳ್ಳದೆ ಸರಿಸುಮಾರು 12 ವರ್ಷವೇ ಸಂದಿದೆ ಎನ್ನುತ್ತಾರೆ ಈ ರಸ್ತೆಯಲ್ಲಿ ಓಡಾಡುವ ನಾಗರಿಕರು.





ಜೀವ ಕೈ ಹಿಡಿದು ಹೋಗಬೇಕು

ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ವಿವಿಧ ಉದ್ಯೋಗಕ್ಕೆ ತೆರಳುವವರು, ಹಿರಿಯ ನಾಗರಿಕರ ಸಹಿತ ಸಾರ್ವಜನಿಕರು ಇದೇ ರಸ್ತೆಯನ್ನೇ ಮುಖ್ಯ ಸಂಪರ್ಕ ಮಾರ್ಗವಾಗಿ ಬಳಸುತ್ತಿದ್ದಾರೆ. ಆದರೆ ರಸ್ತೆಯುದ್ದಕ್ಕೂ ಬಿದ್ದಿರುವ ಬೃಹತ್ ಹೊಂಡಗಳು, ಕೆಸರು ಮತ್ತು ಕಲ್ಲುಗಳಿಂದ ಸಂಚಾರ ದುಸ್ತರವಾಗಿದ್ದು ಪ್ರತಿದಿನವೂ ಜನರು ಜೀವ ಕೈಯಲ್ಲಿ ಹಿಡಿದು ಓಡಾಡುವಂತಾಗಿದೆ.

ದ್ವಿಚಕ್ರ ಸವಾರರಿಗೆ ಅಪಾಯಕಾರಿ

ಮಳೆಗಾಲದಲ್ಲಿ ರಸ್ತೆ ಸಂಪೂರ್ಣ ಕೆಸರುಮಯವಾಗುತ್ತಿದ್ದು ದ್ವಿಚಕ್ರ ವಾಹನ ಸವಾರರ ಪಾಡಂತೂ ಹೇಳತೀರದಂತಾಗಿದೆ. ನಿತ್ಯವೂ ದ್ವಿಚಕ್ರ ವಾಹನ ಸವಾರರು ಸ್ಕಿಡ್ ಆಗಿ ಬೀಳುತ್ತಿರುವ ದೃಶ್ಯ ಸಾಮಾನ್ಯವಾಗಿದೆ ಎನ್ನುತ್ತಾರೆ ಸ್ಥಳೀಯರು.

ತುರ್ತು ವಾಹನ ಸಹಿತ ಅಗತ್ಯ ಸೇವೆಗಳ ವಾಹನಗಳ ಸಂಚಾರಕ್ಕೂ ಇಲ್ಲಿನ ರಸ್ತೆ ಯೋಗ್ಯವಾಗಿಲ್ಲ. ಗ್ರಾಮಸ್ಥರ ನಿತ್ಯ ಸಂಚಾರಕ್ಕೆ ಅನುಕೂಲವಾಗಿರುವ ಈ ರಸ್ತೆಯ ಕಾಯಕಲ್ಪಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತುರ್ತು ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

> **ಕಾಯಕಲ್ಪಕ್ಕಾಗಿ ಮನವಿ**
>
> ಈ ರಸ್ತೆ ಕಾಯಕಲ್ಪಕ್ಕಾಗಿ ಸ್ಥಳೀಯರು ಹಲವು ಬಾರಿ ಗ್ರಾ.ಪಂ. ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಸ್ಪಂದನೆ ಸಿಕ್ಕಿಲ್ಲ ಎಂದು ಸ್ಥಳೀಯರು ದೂರಿದ್ದಾರೆ. ಪ್ರತಿ ವರ್ಷ ಹೊಂಡಗಳಿಗೆ ಮಣ್ಣು ಹಾಕಿತ್ತಿದ್ದರೂ ಅದು ಮಳೆಯಲ್ಲಿ ಕೊಚ್ಚಿ ಹೋಗಿ ರಸ್ತೆಯ ಯಥಾಸ್ಥಿತಿ ಮತ್ತೆ ಅನಾವರಣಗೊಳ್ಳುತ್ತಲೇ ಇದೆ ಎಂದು ತಿಳಿಸಿದ್ದಾರೆ.

ಬಂಟ್ವಾಳ ತಾ. ಪಂ.ನಲ್ಲಿ ಕೊರಗ ಸಮುದಾಯದ ಸಭೆ | ತಹಶೀಲ್ದಾರರ ವಿರುದ್ಧ ಮುಖಂಡರು ಗರಂ

ಸಮಸ್ಯೆ ಕೇಳುವವರೇ ಗೈರಾದರೆ ಪರಿಹರಿಸುವವರು ಯಾರು?

ಬಂಟ್ವಾಳ: ತಾಲೂಕು ಮಟ್ಟದಲ್ಲಿ ಆದಿವಾಸಿ ಕೊರಗ ಜನಾಂಗ ಸಮುದಾಯದ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ವರ್ಷಕ್ಕೆ ಎರಡು ಸಭೆ ನಡೆಯಬೇಕೆಂಬ ಸುತ್ತೋಲೆಯಿದ್ದರೂ, ಕಳೆದೆರಡೂ ಸಭೆಗೂ ತಹಶೀಲ್ದಾರರು ಗೈರು ಹಾಜರಾಗಿದ್ದು, ನಮ್ಮ ಸಮಸ್ಯೆಯನ್ನು ಪರಿಹರಿಸುವವರಾದರೂ ಯಾರು? ಎಂದು ಸಮುದಾಯದ ಮುಖಂಡರು ಗುರುವಾರ ಬಂಟ್ವಾಳ ತಾ.ಪಂ. ಎಸ್‌ಜಿಎಸ್‌ವೈ ಸಭಾಂಗಣದಲ್ಲಿ ನಡೆದ ಸಮುದಾಯದ ಕುಂದುಕೊರತೆ ಸಭೆಯಲ್ಲಿ ಅಳಲನ್ನು ತೋಡಿಕೊಂಡರು.



ಅವರೇ ದಿನಾಂಕ ನಿಗದಿಪಡಿಸಲಿ

ಸುಂದರಿ ಕನ್ನಾನ ವಿಷಯ ಪ್ರಸ್ತಾವಿಸಿ, ಕಳೆದ ರಡೂ ಸಭೆಗೂ ಬಂಟ್ವಾಳ ತಹಶೀಲ್ದಾರರು ಗೈರು ಹಾಜರಾಗಿದ್ದು ಕಂದಾಯ ಮತ್ತು ಭೂಮಿಗೆ ಸಂಬಂಧಿಸಿದ ವಿಷಯವನ್ನು ಅವರೇ ಇತ್ಯರ್ಥ ಪಡಿಸಬೇಕಾಗಿದೆ. ಆದರೆ ಅವರೇ ಗೈರಾದರೆ ನಮ್ಮ ಸಮಸ್ಯೆಯನ್ನು ಕೇಳುವವರು ಯಾರು? ಪರಿಹರಿಸುವವರು ಯಾರು? ಎಂದು ಪ್ರಶ್ನಿಸಿದರಲ್ಲದೆ, ಅವರೇ ನಿಗದಿತ ದಿನಾಂಕವನ್ನು ಗೊತ್ತುಪಡಿಸಿ ಆ ದಿನವೇ ಸಭೆ ನಡೆಸುವಂತೆ ಕೋರಿದ ಅವರು, ಇತರೆ ಅಧಿಕಾರಿಗಳ ಮೂಲಕ ನಾವು ಕೊಟ್ಟ ಯಾವುದೇ ಅರ್ಜಿ ತಹಶೀಲ್ದಾರರ ಕೈಗೆ ತಲುಪುದಿಲ್ಲ, ಖುದ್ದು ನಾವು ಅವರ ಕೊಠಡಿ ಒಳಪ್ರವೇಶಿಸಬೇಕಾದರೆ ಸಂಜೆಯವರೆಗೂ ಕಾದು ಕುಳಿತುಕೊಳ್ಳಬೇಕು ಎಂದು ತನಗಾದ ಅನುಭವವನ್ನು ಹಂಚಿಕೊಂಡರು.

ಸಭಾಧ್ಯಕ್ಷತೆ ವಹಿಸಿದ್ದ ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಸಚ್ಚಿನ್ ಕುಮಾರ್, ಮುಂದಿನ ಜುಲೈ ತಿಂಗಳಲ್ಲೇ ತಹಶೀಲ್ದಾರರ ಉಪಸ್ಥಿತಿಯಲ್ಲಿ ಸಭೆಯನ್ನು ಆಯೋಜಿಸಲು ಕ್ರಮ ಕೈಗೊಳ್ಳುವಂತೆ ಸಮಾಜಕಲ್ಯಾಣಾಧಿಕಾರಿ ಅವರಿಗೆ ಸೂಚಿಸಿದರು.

ಇದೇ ವೇಳೆ, ಸ್ವಂತ ನಿವೇಶನವಿದ್ದಲ್ಲಿ ಅಂತವರ ಹೆಸರನ್ನು ವಸತಿರಹಿತರ ಪಟ್ಟಿಯಲ್ಲಿ ಸೇರಿಸಿಕೊಂಡು ಅವರಿಗೆ ಮನೆಯನ್ನು ನೀಡಲು ಅವಕಾಶವಿದೆ ಎಂದು ಇಒ ಸಚ್ಚಿನ್ ತಿಳಿಸಿದರಲ್ಲದೆ, ಈಗಾಗಲೇ ನಾಲ್ಕು ಮಂದಿ ಫಲಾನುಭವಿಗಳಿಗೆ ಚೆನ್ನೈತ್ತೋಡಿ ಗ್ರಾಮದಲ್ಲಿ ನಿವೇಶನ ಕಾಯ್ದಿರಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಫಲಾನುಭವಿಗಳು ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿದರೆ ಶೀಘ್ರವಾಗಿ ಜಮೀನು ಮಂಜೂರುಗೊಳ್ಳಲಿದೆ ಎಂದು ತಿಳಿಸಿದರು.

ಜಮೀನಿನ ಅಲಭ್ಯತೆ

ಸಮುದಾಯ ಮುಖಂಡ ಸುಂದರ ಮಾತನಾಡಿ, ಕೊರಗ ಸಮುದಾಯ ಜಮೀನಿನ ಅಲಭ್ಯತೆಯಿಂದಾಗಿ ಕೊರಗುತ್ತಿದ್ದು, ಇದರಿಂದಾಗಿ ಸರಕಾರದ ಯಾವುದೇ ಯೋಜನೆಗಳನ್ನು ಪಡೆಯಲಾಗದೆ ವಂಚನೆಗೊಳಗಾಗುತ್ತಿದ್ದೇವೆ. ಕೊರಗ ಸಮುದಾಯದ ವಾಸಿಸುವ ಕುಟುಂಬ ವಾರುಸುದಾರರ ಹೆಸರಿನಲ್ಲಿ ಪೌತಿ ಖಾತೆಯ ಮೂಲಕ ಜಮೀನನ್ನು ದಾಖಲೆ ಮಾಡಿಕೊಡುವಂತೆ ಪ್ರತಿ ಸಭೆಯಲ್ಲೂ ಪದೇಪದೇ ಮನವಿ ಮಾಡಲಾಗುತ್ತಿದೆಯಾದರೂ, ಸಾಧ್ಯವಾಗಿಲ್ಲ, ಈ ಕಾರಣದಿಂದ ಸಮುದಾಯ ಇನ್ನೂ ಕೂಡ ಮುಖ್ಯ ವಾಹಿನಿಗೆ ಬರಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು.

ಇದಕ್ಕೆ ಉತ್ತರಿಸಿದ ಉಪತಹಶೀಲ್ದಾರ್ ದಿವಾಕರ ಮುಗುಳ್ಯ, ವಾರುಸುದಾರರ ಹೆಸರಿನಲ್ಲಿ ದಾಖಲಾತಿ ಮಾಡುವ ವಿಚಾರದಲ್ಲಿ ಜಿಲ್ಲಾಧಿಕಾರಿಗಳೇ ಆದೇಶ ಹೊರಡಿಸಬೇಕಾಗುತ್ತದೆ ಎಂದು ತಿಳಿಸಿದರು.

ಸಮುದಾಯದ ಹಿತದೃಷ್ಟಿಯಿಂದ ಸರಕಾರಗಳು ಸಾರ್ವತ್ರಿಕ ಕಾರ್ಯಕ್ರಮದಲ್ಲಿ ಕೊರಗ ಸಮುದಾಯ ಸಕ್ರಿಯವಾಗಿ ಪಾಲ್ಗೊಂಡು ಮುಖ್ಯವಾಹಿನಿ ಬರಲು ಹಿಂಜರಿಯುತ್ತಿರುವ ಬಗ್ಗೆ ತಾ.ಪಂ. ಇಒ ಸಚ್ಚಿನ್ ಅವರು ಬೇಸರ ವ್ಯಕ್ತಪಡಿಸಿದರು.

ಅತೀ ಸೂಕ್ಷ್ಮವಾದ ಸಮುದಾಯ

ಇದಕ್ಕೆ ಪ್ರತಿಕ್ರಿಯಿಸಿದ ಸಮುದಾಯದ ಮುಖಂಡ ಸುಂದರ, ಸರಕಾರಗಳು ನಮಗಾಗಿ ಸಾರ್ವತ್ರಿಕ ಕಾರ್ಯಕ್ರಮಗಳನ್ನು ಆಯೋಜಿಸಿದರೂ ಅವರನ್ನು ಅದರಲ್ಲಿ ಭಾಗವಹಿಸುವಂತೆ ಮಾಡಲು ಸಾಧ್ಯವಿಲ್ಲ. ನಮ್ಮದು ಅತೀ ಸೂಕ್ಷ್ಮವಾದ ಸಮುದಾಯವಾಗಿದ್ದು ಮುಖ್ಯ ವಾಹಿನಿಗೆ ಬರಲು ಇನ್ನೂ ಅನೇಕ ವರ್ಷಗಳು ಬೇಕಾಗಬಹುದು. ಹಾಗಿರುವಾಗ ಅಂಗನವಾಡಿ, ಆರೋಗ್ಯ ಕಾರ್ಯಕರ್ತೆಯರು ಮತ್ತು ಗ್ರಾ.ಪಂ. ಸದಸ್ಯರ ಮೂಲಕ ಅರಿವು ಮೂಡಿಸಿ, ತಿಳಿಹೇಳಿ ಸಮಾಜದ ಹಿತದೃಷ್ಟಿಯಿಂದ ನಡೆಯುವ ಸಭೆಗಳಿಗೆ ಕರೆದುಕೊಂಡು ಬರುವಂತಹ ವ್ಯವಸ್ಥೆಗಳನ್ನು ಮಾಡಬೇಕಷ್ಟೆ ಎಂದು ಸಭೆಯ ಗಮನಕ್ಕೆ ತಂದರು.

> **ನಾವ್ಯಾಕೆ ಸಭೆಗೆ ಬರಬೇಕು?**
> ಸಮಸ್ಯೆಯ ಕುರಿತು ಸಮಾಜ ಕಲ್ಯಾಣ ಇಲಾಖಾಧಿಕಾರಿಗಳಲ್ಲಿ ತಿಳಿಸಿದರೆ, ನೋಡ್ತೇವೆ, ಕೇಳ್ತೇವೆ ಎಂದು ಉತ್ತರಿಸುತ್ತಾರೆ. ನಮ್ಮ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ ಎಂದರೆ, ನಾವ್ಯಾಕೆ ಕುಂದು ಕೊರತೆ ಸಭೆಗೆ ಹಾಜರಾಗಬೇಕೆಂದು ನಮ್ಮವರು ಪ್ರಶ್ನಿಸುತ್ತಾರೆ. ಹಾಗಾಗಿ ಸಮುದಾಯದ ಯಾರು ಕೂಡ ಈ ಸಭೆಗೂ ಹಾಜರಾಗಲು ಒಪ್ಪುತ್ತಿಲ್ಲ ಸುಂದರಿ ಕನ್ನಾನ ಅವರು ತಿಳಿಸಿದರು.

ಅಜಲು ಪದ್ಧತಿ ಇನ್ನೂ ಇದೆ

ಜಿಲ್ಲೆಯಲ್ಲಿ ಅಜಲು ಪದ್ಧತಿ ಇನ್ನೂ ಕೂಡ ಸಂಪೂರ್ಣವಾಗಿ ನಿರ್ಮೂಲನೆಯಾಗಿಲ್ಲ, ಈ ನಿಟ್ಟಿನಲ್ಲಿ ಅಸ್ತಿತ್ವದಲ್ಲಿರುವ ಸಮಿತಿ ಕೂಡ ಬರ್ಕಾಸ್ತು ಆಗಿಲ್ಲ, ಈ ಸಂಬಂಧ ತಹಶೀಲ್ದಾರರ ಸಮಕ್ಷಮದಲ್ಲಿ ಕೊರಗ ಸಮುದಾಯದ ಸಭೆಯನ್ನು ನಡೆಸಬೇಕು ಎಂದು ಒತ್ತಾಯಿಸಿದ ಸುಂದರ, ಗ್ರಾ.ಪಂ.ಮಟ್ಟದಲ್ಲಿ ಸಭೆಗಳಾದಾಗ ಅಧಿಕಾರಿಗಳಿಗೂ ಅಜಲಿನ ಸ್ವರೂಪ ಅರಿವಾಗಬಹುದು ಎಂದರು.

ಆರೋಗ್ಯ ಸೇತು ಉತ್ತಮ ಕಾರ್ಯಕ್ರಮ

ಕೇಂದ್ರ ಸರಕಾರದ ಆರೋಗ್ಯ ಸೇತು ಉತ್ತಮ ಕಾರ್ಯಕ್ರಮವಾಗಿದೆ. ಆದರೆ ಮನೆಬಾಗಿಲಿಗೆ ಬರುವ ವೈದ್ಯರ ಜೊತೆ ಎಲ್ಲಾ ಔಷಧಿ ಹೊಂದಿರುವ ಕಿಟ್ ಇರುವುದಿಲ್ಲ, ಹೀಗಿದ್ದು ಮನೆಬಾಗಿಲಿಗೆ ವೈದ್ಯರ ತಂಡ ಬಂದು ಏನು ಪ್ರಯೋಜನ? ಕೇವಲ ಬಿ.ಪಿ., ಶುಗರ್ ತಪಾಸಣೆ ನಡೆಸಿದರೆ ಸಾಕೆ? ಉಳಿದಂತೆ ಇತರೆ ಖಾಯಿಲೆಗೆ ಔಷಧಿ ಇಲ್ಲ ಎಂದು ತಿಳಿಸಿದರು. ಇದಕ್ಕುತ್ತರಿಸಿದ ಗಿರಿಜನ ಸಂಚಾರಿ ಘಟಕದ ವೈದ್ಯೆ, ಔಷಧಿ ಕೊರತೆಯಾಗದಂತೆ ಬೇರೆ ಕಡೆಯಿಂದ ತರಿಸಿಕೊಂಡು ನೀಡಲಾಗುತ್ತಿದೆ ಎಂದು ಸಮಜಾಯಿಷಿ ನೀಡಿದರು.

ಪುರಸಭಾ ವ್ಯಾಪ್ತಿಯ ಪಾಣೆಮಂಗಳೂರಿನಲ್ಲಿ ಸರಕಾರಿ ಜಮೀನಿನಲ್ಲಿ ಹೆತ್ತವರ ಕಾಲದಿಂದಲೂ ಮನೆ ನಿರ್ಮಿಸಿ ವಾಸವಿರುವ ಸಮುದಾಯದ ಕುಟುಂಬವನ್ನು ಮನೆ ಖಾಲಿ ಮಾಡುವಂತೆ ಖಾಸಗಿ ವ್ಯಕ್ತಿಗಳು ಪೀಡಿಸುತ್ತಿದ್ದಾರೆ ಎಂದು ವೃದ್ಧೆಯೋರ್ವರು ಸಭೆಗೆ ತಿಳಿಸಿದರು. ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಇಒ ಮುಖ್ಯಾಧಿಕಾರಿಯವರಿಗೆ ಸೂಚಿಸಿದರು.

ಕೃಷಿ ಇಲಾಖೆಯಲ್ಲಿ ಸಮುದಾಯಕ್ಕೆ ಅನೇಕ ಯೋಜನೆಗಳಿದ್ದು ಆಸಕ್ತರಿದ್ದರೆ ಯೋಜನೆಯ ಸಂಪೂರ್ಣ ಮಾಹಿತಿಯನ್ನು ಮನೆಬಾಗಿಲಿಗೆ ಬಂದು ನೀಡುತ್ತೇವೆ ಎಂದು ಕೃಷಿ ಅಧಿಕಾರಿ ನಂದನ್ ಶೆಣೈ ತಿಳಿಸಿದರು. ಜಮೀನು ಇಲ್ಲದ ಕುಟುಂಬಗಳಿಗೆ ಜೇನು ಕೃಷಿಯನ್ನು ಮಾಡಲು ಅವಕಾಶವಿದ್ದು ಈ ಬಗ್ಗೆ ಆಸಕ್ತರು ಸಂಪರ್ಕಿಸುವಂತೆ ತೋಟಗಾರಿಕೆ ಸಹಾಯಕ ನಿರ್ದೇಶಕ ಪ್ರದೀಪ್ ಡಿ.ಸೋಜ ತಿಳಿಸಿದರು.

ನರಿಕೊಂಬು ಗ್ರಾಮ ಪಂಚಾಯತ್ ವ್ಯಾಪ್ತಿಯ ದಿಂಡಿಕೆರೆ ಎಂಬಲ್ಲಿ ಕೊರಗ ಕಾಲೊನಿಗೆ ಸಮರ್ಪಕವಾಗಿ ಪೂರೈಸದೆ ಬಗ್ಗೆ ಸಮುದಾಯದ ಮುಖಂಡರೋರ್ವರು ಅಧಿಕಾರಿಗಳ ಗಮನಕ್ಕೆ ತಂದರು.

ಕೊರಗ ಸಮುದಾಯಕ್ಕೆ ಸರಕಾರದಿಂದ ವಿವಿಧ ಯೋಜನೆಗಳು ದೊರಕುತ್ತಿದ್ದು ಮಾಹಿತಿ ಕೊರತೆಯಿಂದ ತಲುಪುವಲ್ಲಿ ವಿಳಂಬವಾಗುತ್ತಿದ್ದು ಸಮುದಾಯದ ನಾಯಕರು ತಿಳಿಹೇಳಿ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ಮುತುವರ್ಜಿ ವಹಿಸುವಂತೆ ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ (ಗ್ರೇಡ್2) ವಿನಯ ಕುಮಾರಿ ತಿಳಿಸಿದರು. ಪುರಸಭಾ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಇದ್ದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ (ಗ್ರೇಡ್ 2) ವಿನಯ ಕುಮಾರಿ ಸ್ವಾಗತಿಸಿ, ವಂದಿಸಿದರು.

ಸುತ್ತಮುತ್ತ

ಉಪ್ಪುಂದ: ಏಕಾಹ ಭಜನಾ ಮಹೋತ್ಸವ

ಬೈಂದೂರು: ಉಪ್ಪುಂದ ಜಿಎಸ್‌ಬಿ ಸಮಾಜದ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನದಲ್ಲಿ ಭಾನುವಾರ ಅಧಿಕಮಾಸದ ಬೆಳಗ್ಗೆ 8ರಿಂದ ರಾತ್ರಿ 8ರ ವರೆಗೆ ಏಕಾಹ ಭಜನಾ ಮಹೋತ್ಸವ ಜರುಗಿತು. ಉಪ್ಪುಂದ, ಶಿರೂರು, ನಾಯ್ಕನಕಟ್ಟೆ, ಶಿರಾಲಿ, ಸಿದ್ದಾಪುರ, ಅಂಪಾರು ಇಲ್ಲಿನ ಭಜನಾ ತಂಡಗಳಿಂದ ನಿರಂತರ ಭಜನಾ ಸಂಕೀರ್ತನೆ ನಡೆಯಿತು. ಮಧ್ಯಾಹ್ನ ಪರ್ಯಾಯ ಅರ್ಚಕ ಹರೀಶ್ ದೇವದಾಸ್ ಭಟ್ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿಗಳು, ಪಲ್ಲಪೂಜೆ, ಮಹಾಮಂಗಳಾರತಿ ನಂತರ ಸಮಾರಾಧನೆ ಜರುಗಿತು. ರಾತ್ರಿ ಶ್ರೀ ದೇವರ ವಿಶೇಷ ದೀಪಾರಾಧನೆ, ಮಹಾಪ್ರಸಾದ, ಅವಹಗಳ ದಾನ, ಪ್ರಸಾದ ವಿತರಣೆ ನಂತರ ವಿದೂಷಿ ಮಂಜರಿಚಂದ್ರ ಪುಷ್ಪರಾಜ್ ಅವರ ಶಿಷ್ಯೆ ಶ್ರುತಿ ಪ್ರಭು ಅವರಿಂದ ಭರತನಾಟ್ಯ ಸೇವೆ ನಡೆಯಿತು. ಈ ವಿಶೇಷ ದಿನದ ಸೇವಾದಾರರಾದ ಮಂಜುನಾಥ ಮಹಾಲೆ ಕುಟುಂಬ ಉಪ್ಪುಂದ, ಬೆಳಗಲ್‌ಕಟ್ಟೆ ಬಿ. ನಾಗೇಶ್ ವೆಂಕಟೇಶ್ ಪ್ರಭು ಮತ್ತು ಸಹೋದರರು ಹಾಗೂ ಸದಾನಂದ ಪ್ರಭು ಮತ್ತು ಸಹೋದರರು ರಾಯಚೂರು, ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಹಾಗೂ ಟ್ರಸ್ಟಿಗಳು, ಪೇಟೆಯ ಹತ್ತು ಸಮಸ್ತರು, ಪರವೂರಿನ ಸಮಾಜ ಬಾಂಧವರು ಇದ್ದರು.

ಸಾಲಿಗ್ರಾಮ ಪ.ಪಂ.: ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳ ಅನುಷ್ಠಾನಕ್ಕೆ ಸೂಚನೆ

ಉಡುಪಿ: ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರು, ವ್ಯಾಪಾರೋದ್ಯಮಗಳು, ಬಾರ್ ಮತ್ತು ರೆಸ್ಟೋರೆಂಟ್, ಹೋಟೇಲ್ ಮತ್ತು ಇತರೆ ವಾಣಿಜ್ಯ ಉದ್ದಿಮೆದಾರರುಗಳು, ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಏ.1ರಿಂದ ಜಾರಿಗೆ ತಂದಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು –2026 ರ ನಿಯಮದ ಪ್ರಕಾರ, ತಮ್ಮ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯ ವಸ್ತುಗಳನ್ನು 4 ವಿಧಗಳಾಗಿ ಕಡ್ಡಾಯವಾಗಿ ಮೂಲದಲ್ಲಿಯೇ ವಿಂಗಡಿಸಿ, ಪ. ಪಂ.ಘನತ್ಯಾಜ್ಯ ವಾಹನಗಳಿಗೆ ನೀಡಬೇಕು. ತಪ್ಪಿದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು–2026 ರಂತೆ ತ್ಯಾಜ್ಯ ವಿಂಗಡಣೆ ಮಾಡದೇ ಇರುವವರ ವಿರುದ್ಧ ದಂಡ ವಿಧಿಸುವುದಲ್ಲದೇ ಮೂಲಭೂತ ಸೌಕರ್ಯಗಳಾದ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕ್ರಮವಹಿಸಲಾಗುವುದು. ಆದ್ದರಿಂದ ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯ ಸಾರ್ವಜನಿಕರು ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು–2026 ರನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಕರಿಸುವಂತೆ ಪ. ಪಂ. ಮುಖ್ಯಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಸುಬ್ರಹ್ಮಣ್ಯ: ನಿವಾಸ ಗ್ರಂಥಾಲಯ ವೀಕ್ಷಣೆ, ಸಂವಾದ ಕಾರ್ಯಕ್ರಮ

ಸುಬ್ರಹ್ಮಣ್ಯ: ಸಂಧ್ಯಾರಶ್ಮಿ ಸಾಹಿತ್ಯ ಸಂಘ ಸುಳ್ಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಪಂಜ ಹೋಬಳಿ ಘಟಕ ಇವುಗಳ ಸಹಯೋಗದಲ್ಲಿ ಸುಬ್ರಹ್ಮಣ್ಯದ ಆಲೋಕ್ ಮೂಲೆಮಜಲು ಹಾಗೂ ಸುನಿತಾ ಆಲೋಕ್ ಮೂಲೆಮಜಲು ದಂಪತಿಯ ಮನೆಯಲ್ಲಿನ ನಿವಾಸ ಗ್ರಂಥಾಲಯದಲ್ಲಿ ಗ್ರಂಥಾಲಯ ವೀಕ್ಷಣೆ ಹಾಗೂ ಸಂವಾದ ಕಾರ್ಯಕ್ರಮ ಸೋಮವಾರ ನಡೆಯಿತು. ಡಾ.ಎಸ್. ರಂಗಯ್ಯ, ರಾಮಚಂದ್ರ ಪಳ್ಳತ್ತಡ್ಕ, ಬಾಬು ಗೌಡ ಅಚ್ರಪ್ಪಾಡಿ, ರಾಮಚಂದ್ರ ಪಲಂಗಾಯ, ವೆಂಕಪ್ಪ ಕೇನಾಜೆ, ಶ್ರೀಧರ ಭಾಗವತ್, ಯೋಗೀಶ್ ಹೊಸೋಳಿಕೆ, ಕುಮಾರಸ್ವಾಮಿ ತೆಕ್ಕುಂಜ, ಪ್ರಸನ್ನ ಕುಮಾರಿ, ಲೀಲಾ ದಾಮೋದರ, ಹೇಮಾ ದೇಂಗೋಡಿ, ನೀಲಾವತಿ, ಎ.ಕೆ. ಹಿಮಕರ, ಗಣೇಶ್ ಭಟ್ ಸಿ.ಎ., ಹರಿಹರ ಬಾಯಾರ, ಅಬ್ದುಲ್ಲಾ ಅರಂತೋಡು, ಸಂಜೀವ ಕುದ್ಪಾಜೆ, ಚೆನ್ನಕೇಶವ ಜಾಲ್ಸೂರು, ಶಿವದೇವಿ ಅವಿನಾಶ್ ದೇವರಮಜಲು, ಪಾರ್ವತಿ ಕಾಮತ್, ಉದಯ ಗೌರಿ, ಕಿಶೋರ್ ಕುಮಾರ್ ಕೂಜುಗೋಡು ಉಪಸ್ಥಿತರಿದ್ದರು. ರಾಮಚಂದ್ರ ಪಳ್ಳತ್ತಡ್ಕ ಸ್ವಾಗತಿಸಿ, ಬಾಬುಗೌಡ ಅಚ್ರಪ್ಪಾಡಿ ವಂದಿಸಿದರು.

ವೇದ ಸೂಕ್ತಗಳ ಸಾಮೂಹಿಕ ಪಠಣ

ಬಂಟ್ವಾಳ: ರುದ್ರ ಪಠಣ ಸಮಿತಿ ಬಂಟ್ವಾಳ ವತಿಯಿಂದ ಬಡಗು ಮಹಾಗಣಪತಿ ಮಹಾಲಿಂಗೇಶ್ವರ ದೇವಸ್ಥಾನ ಅಲಂಗಾರು, ಮೂಡಬಿದ್ರೆ ಶ್ರೀ ಕ್ಷೇತ್ರದಲ್ಲಿ ರುದ್ರ ನಮಕ ಚಮಕ ಸೂಕ್ತ, ಗಣಪತಿ ಸೂಕ್ತ ,ದೇವಿ ಸೂಕ್ತ , ಸೌರ ಸೂಕ್ತ ಮನ್ಯು ಸೂಕ್ತ,ಅಘಮರ್ಷಣ ಸೂಕ್ತ, ಮಂತ್ರ ಪುಷ್ಪ ಮೊದಲಾದ ವೇದ ಸೂಕ್ತಗಳನ್ನು ಸಾಮೂಹಿಕವಾಗಿ ಪಠಿಸಲಾಯಿತು. ಸಜೀಪ ಮಾಗಣೆ ತಂತ್ರಿ ಎಂ.ಸುಬ್ರಹ್ಮಣ್ಯ ಭಟ್, ಎ.ರವಿಶಂಕರ ಮಯ್ಯ, ದೇವಳದ ಅರ್ಚಕರಾದ ಸುಬ್ರಹ್ಮಣ್ಯ ಭಟ್ ,ಮಹೇಶ್ ಭಟ್ ,ಪ್ರಸಾದ್ ಭಟ್ ,ಕೂಟ ಮಹಾ ಜಗತ್ತು ಮೂಡುಬಿದಿರೆ ಅಂಗಸಂಸ್ಥೆ ಅಧ್ಯಕ್ಷ ಡಾ.ವಿದ್ವಾನ್ ಸೋಮಶೇಖರ ಮಯ್ಯ, ಬಂಟ್ವಾಳ ಎಸ್‌ವಿಎಸ್ ಕಾಲೇಜ್ ನಿವೃತ್ತ ಪ್ರಾಚಾರ್ಯ ಸೀತಾರಾಮ ಮಯ್ಯ, ಕೆ. ರಾಜಾರಾಮ ಐತಾಳ, ಕೃಷ್ಣಕುಮಾರ ಸೋಮಯಾಜಿ, ಎಂ.ಕಾಂತರಾಮ ರಾವ್, ರಾಮಚಂದ್ರ ಮಯ್ಯ, ಎ.ಶ್ರೀನಿವಾಸ ಹೊಳ್ಳ ಕೆ. ಮಿಥುನ ರಾವ್ ಕೆ., ರವಿ ಎಸ್. ಮಯ್ಯ, ವಿಶಾಲ್ ಹೆಗಡೆ, ವಿಭವ್ ಮಯ್ಯ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸ್ವಉದ್ಯೋಗ ಸಾಲಕ್ಕಾಗಿ ಅರ್ಜಿ ಆಹ್ವಾನ

ಕಾಸರಗೋಡು: ಕೇರಳ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 18 ರಿಂದ 55 ವರ್ಷದೊಳಗಿನ ಮಹಿಳೆಯರಿಗೆ ಸ್ವಉದ್ಯೋಗ ಸಾಲಗಳನ್ನು ಒದಗಿಸುತ್ತಿದೆ. ನಿಗಮದ ಅಧಿಕಾರಿಯ ಖಾತರಿ ಅಥವಾ ಆಸ್ತಿ ಖಾತರಿ ಅಗತ್ಯವಿದೆ. ಹೆಚ್ಚಿನ ವಿವರಗಳಿಗೆ 9496015014, 0467 2999940 ಕರೆ ಮಾಡಬಹುದು.

ಪ್ರಧಾನಿ ಮೋದಿ ದೀರ್ಘಾವಧಿ ಆಡಳಿತ: ಪೂಂಜ ಶ್ರೀ ದೇಗುಲದಲ್ಲಿ ವಿಶೇಷ ಪೂಜೆ



ಬಂಟ್ವಾಳ: ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಕೇಂದ್ರ ಸರ್ಕಾರ 12 ವರ್ಷಗಳನ್ನು ಪೂರೈಸಿದ ಮತ್ತು ಭಾರತದ ಅತೀ ದೀರ್ಘಾವಧಿ ಚುನಾಯಿತ ಪ್ರಧಾನ ಮಂತ್ರಿ ಎಂಬ ಹೆಗ್ಗಳಿಕೆಗೆ ನರೇಂದ್ರ ಮೋದಿಯವರು ಪಾತ್ರರಾದ ಹಿನ್ನಲೆಯಲ್ಲಿ ಬಿಜೆಪಿ ವತಿಯಿಂದ ಸಿದ್ದಕಟ್ಟೆ ಸಮೀಪದ ಶ್ರೀ ಪೂಂಜ ಶ್ರೀ ಪಂಚದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವಿಶೇಷ ಹೂವಿನ ಪೂಜೆ ಮತ್ತು ಸಾರ್ವತ್ರಿಕ ಪ್ರಾರ್ಥನೆ ನಡೆಯಿತು.

ದೇವಸ್ಥಾನದ ಕೃಷ್ಣ ಪ್ರಸಾದ್ ಅಸ್ರಣ್ಣ ಅವರು ವಿಶೇಷ ಪೂಜೆ ನೆರವೇರಿಸಿ, ದೇಶಕ್ಕೆ ಬರುವ ಆಪತ್ತು ಹಾಗೂ ಪ್ರಧಾನಿ ಮೋದಿ ಅವರಿಗೆ ಬರುವ ಎಲ್ಲಾ ವಿಧದ ಸಮಸ್ಯೆಗಳನ್ನು ಪರಿಹರಿಸಿ ಜಗತ್ತಿನಲ್ಲಿ ಭಾರತ ವಿಶ್ವಗುರು ಆಗುವ ಮೂಲಕ ಎಲ್ಲರಿಗೂ ಶಾಂತಿ ಲಭಿಸಲಿ ಎಂದು ಪ್ರಾರ್ಥಿಸಲಾಯಿತು.

ಸಿದ್ದಕಟ್ಟೆ ಪ್ರಾ. ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು, ದ. ಕ. ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ನಿರ್ದೇಶಕ ಪ್ರಭಾಕರ ಎಚ್. ಹುಲಿಮೇರು, ಸಿದ್ದಕಟ್ಟೆ ಪ್ರಾ. ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ರಾಜೇಶ್ ಶೆಟ್ಟಿ ಕೊನೆರಬೆಟ್ಟು, ದಿನೇಶ್ ಪೂಜಾರಿ ಹುಲಿಮೇರು, ಬಿಜೆಪಿ ಬೆಳ್ತಂಗಡಿ ಮಂಡಲ ಮಹಿಳಾ ಮೋರ್ಚಾದ ಉಪಾಧ್ಯಕ್ಷೆ ಆಶಾ ಎಸ್. ಶೆಟ್ಟಿ, ಬೆಳ್ತಂಗಡಿ ಮಂಡಲ ಆರಂಬೋಡಿ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಸುರೇಂದ್ರ ಶೆಟ್ಟಿ ಅಜ್ಜಾಡಿ, ಬಿಜೆಪಿ ಕಾರ್ಯಕರ್ತರು, ಮೋದಿ ಅಭಿಮಾನಿಗಳು ಉಪಸ್ಥಿತರಿದ್ದರು.

ಬಿ.ಸಿ.ರೋಡಿನ ಇಂದಿರಾ ಕ್ಯಾಂಟೀನ್‌ಗೆ ಮುಖ್ಯಾಧಿಕಾರಿ ದಿಢೀರ್ ಭೇಟಿ, ಪರಿಶೀಲನೆ



ಬಂಟ್ವಾಳ: ಬಿ.ಸಿ.ರೋಡಿನ ಆಡಳಿತ ಸೌಧದ ಸಮೀಪ ಕಾರ್ಯಾಚರಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗೆ ಪುರಸಭಾ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಕೆ.ಬಿ.ಅವರು ಗುರುವಾರ ಮಧ್ಯಾಹ್ನ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನಿರ್ವಹಣೆ, ಕಾರ್ಯನಿರ್ವಹಿಸದೆ ತುಕ್ಕು ಹಿಡಿಯುವ ಹಂತಕ್ಕೆ ತಲುಪಿರುವ ಸೊತ್ತುಗಳನ್ನು, ಕ್ಯಾಂಟೀನ್‌ನ ಒಳಗಡೆ ಸ್ವಚ್ಛತೆ ಹಾಗೂ ಆಹಾರದ ಗುಣಮಟ್ಟವನ್ನು ಖುದ್ದು ಪರಿಶೀಲಿಸಿದ ಅವರು, ಅಡುಗೆ ಸಿಬ್ಬಂದಿಗಳಿಂದ ಮಾಹಿತಿಯನ್ನು ಪಡೆದರು.

ಸ್ವಚ್ಛತೆಗೆ ಗಮನಕೊಡಿ

ಕ್ಯಾಂಟೀನ್‌ನ ಅಡುಗೆ ಕೋಣೆ ಸಹಿತ ಇಂಚು, ಇಂಚು ಪರಿಶೀಲಿಸಿದ ಅವರು, ಅಡುಗೆ ಕೋಣೆ ಮತ್ತು ಕ್ಯಾಂಟೀನ್ ಸುತ್ತ ಸ್ವಚ್ಛತೆಗೆ ಹೆಚ್ಚಿನ ಗಮನಹರಿಸುವಂತೆ ಸೂಚಿಸಿದರು. ಇಲ್ಲಿರುವ ಫ್ರಿಡ್ಜ್, ಚಪಾತಿ ಮೆಷಿನ್ ಹಾಗೂ ನೀರಿನ ಫಿಲ್ಟರ್ ಸಹಿತ ಇತರೆ ಮೆಷಿನ್‌ಗಳು ಕಳೆದ ಹಲವು ಸಮಯಗಳಿಂದ ಕೆಟ್ಟಿರುವುದನ್ನು ಮುಖ್ಯಾಧಿಕಾರಿಯವರ ಗಮನಕ್ಕೆ ತಂದರು.

ತಿಂಗಳಿಗೆ ಕೇವಲ ಒಂದು ಗ್ಯಾಸ್ ಸಿಲಿಂಡರ್ ಲಭ್ಯವಾಗುವುದರಿಂದ ಸೌದೆ ಒಲೆಯನ್ನು ಬಳಸಿ ತಾವೇ ಅಡುಗೆ ತಯಾರಿಸುವ ಬಗ್ಗೆಯು ಸಿಬ್ಬಂದಿಗಳು ಮುಖ್ಯಾಧಿಕಾರಿಯವರ ಗಮನಕ್ಕೆ ತಂದರು.

ಕ್ಯಾಂಟೀನ್ ಆಗಮಿಸುವ ಗ್ರಾಹಕರಿಗೆ ಶುಚಿ ಮತ್ತು ರುಚಿಯಾದ ಆಹಾರವನ್ನು ಪೂರೈಸುವಂತೆ ಅವರು ಸೂಚಿಸಿದರು.



ನಂದಾವರ ಚಿಕ್ಕಮೇಳ ಆರನೇ ವರ್ಷದ ಮಳೆಗಾಲದ ತಿರುಗಾಟ ಮನೆ ಮನೆಗೆ ಯಕ್ಷಗಾನವು ಬಂಟ್ವಾಳದ ಶ್ರೀ ಕ್ಷೇತ್ರ ನಂದಾವರಶ್ರೀ ವಿನಾಯಕ ಶಂಕರನಾರಾಯಣ ದುರ್ಗಾಂಬ ದೇವಸ್ಥಾನದಲ್ಲಿ ಗೆಜ್ಜೆ ಪೂಜೆಯೊಂದಿಗೆ ಪ್ರಥಮ ಸೇವೆ ಆದ ಮೂಲಕ ಚಾಲನೆ ನೀಡಲಾಯಿತು. ಸಜೀಪ ಮಾಗಣೆ ತಂತ್ರಿ ಎಂ.ಸುಬ್ರಹ್ಮಣ್ಯ ಭಟ್, ದೇವಳದ ಪ್ರಧಾನ ಅರ್ಚಕ ಮಹೇಶ್ ಕುಮಾರ್ ಭಟ್, ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೆ. ಪ್ರಭಾಕರ ಶೆಟ್ಟಿ, ಮಾಜಿ ಅಧ್ಯಕ್ಷ ಪದ್ಯಾಣ ಅರವಿಂದ ಭಟ್, ಚಿಕ್ಕ ಮೇಳದ ಸಂಚಾಲಕ ಭಾಸ್ಕರ ಸರಪಾಡಿ ಹಿಮ್ಮೇಳ, ಮುಮ್ಮೇಳದ ಕಲಾವಿದರು ಉಪಸ್ಥಿತರಿದ್ದರು.



ಕಾಪು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್, ಜಿ.ಪಂ. ಉಡುಪಿ, ತಾ. ಪಂ. ಕಾಪು, 'ಸಂಜೀವಿನಿ' ಜೀವನೋಪಾಯ ಸೇವಾ ಕೇಂದ್ರದ ಉದ್ಘಾಟನೆಯನ್ನು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ನೆರವೇರಿಸಿದರು. ಸಂಜೀವಿನಿ ಒಕ್ಕೂಟದ ಅಧ್ಯಕ್ಷ ಜಯಶ್ರೀ ಶಿರ್ವ, ಕಾಪು ತಾಲೂಕು ಕಾರ್ಯನಿರ್ವಹಣಾಧಿಕಾರಿ ವಿಜಯ ಕುಮಾರ್, ಎನ್‌ಎಲ್‌ಆರ್‌ಎಂ ಜಿಲ್ಲಾ ವ್ಯವಸ್ಥಾಪಕಿ ಸೌಮ್ಯ, ಕಾಪು ಮೇಲ್ವಿಚಾರಕರಾದ ಶ್ರೀಮತಿ ಮೊದಲಾದವರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಆಡಳಿತಕ್ಕೆ 12 ವರ್ಷ: ಕಾರ್ಕಳ ಬಿಜೆಪಿಯಿಂದ ವಿಶೇಷ ಪೂಜೆ



ಕಾರ್ಕಳ: ವಿಶ್ವ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರು ಜವಾಹರಲಾಲ್ ನೆಹರು ನಂತರ ಸುದೀರ್ಘ ಅವಧಿಗೆ ದೇಶದ ಚುನಾಯಿತ ಪ್ರಧಾನಿಯಾಗಿ ಹೊಸ ದಾಖಲೆ ಬರೆದ ಪ್ರಯುಕ್ತ ಕಾರ್ಕಳ ನಗರ ಬಿಜೆಪಿಯ ವತಿಯಿಂದ ಕಾರ್ಕಳ ಬಂಡಿಮಠ ಶ್ರೀ ಮೂಡುಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ವಿಕಸಿತ ಭಾರತ ಪರಿಕಲ್ಪನೆಯಲ್ಲಿ ಭಾರತ ವಿಶ್ವಗುರುವಾಗಲಿ, ಪ್ರಧಾನ ಮಂತ್ರಿಯವರಿಗೆ ಒಳ್ಳೆಯ ಆರೋಗ್ಯ ಮತ್ತು ದೀರ್ಘಾಯುಷ್ಯ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸಲಾಯಿತು.

ಮಂಡಲ ಅಧ್ಯಕ್ಷ ನವೀನ್ ನಾಯಕ್, ಹಿರಿಯರಾದ ಟಿ ರಾಮಚಂದ್ರ ನಾಯಕ್, ಕಾರ್ಯಕರ್ತರಾದ ರವೀಂದ್ರ ಮೊಯಿಲಿ, ಗಿರಿಧರ್ ನಾಯಕ್, ಪ್ರಕಾಶ್ ರಾವ್, ಅಶೋಕ್ ಕುಮಾರ್, ಸುಮಕೇಶವ್ ಮತ್ತಿತರರು ಉಪಸ್ಥಿತರಿದ್ದರು.

ಸುಳ್ಯ ಪ್ರೆಸ್ ಕ್ಲಬ್ ಮುಂಭಾಗದ ರಸ್ತೆ ಕಾಂಕ್ರೀಟೀಕರಣಕ್ಕೆ ಗುದ್ದಲಿ ಪೂಜೆ



ಸುಳ್ಯ: ಪ.ಪಂ. ವತಿಯಿಂದ ಸುಳ್ಯ ಪ್ರೆಸ್ ಕ್ಲಬ್ ಮುಂಭಾಗದ ರಸ್ತೆ ಅಭಿವೃದ್ಧಿಗೆ ರೂ. 4 ಲಕ್ಷ ವೆಚ್ಚದ ಕಾಂಕ್ರೀಟೀಕರಣಕ್ಕೆ ಗುದ್ದಲಿಪೂಜೆ ನಡೆಯಿತು.

ಮಾಜಿ ಪ. ಪಂ. ಸದಸ್ಯೆ ಶೀಲಾ ಕುರುಂಜಿ, ಪ.ಪಂ. ಇಂಜಿನಿಯರ್ ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು. ಸುಳ್ಯ ಪ್ರೆಸ್ ಕ್ಲಬ್ ಗೌರವಾಧ್ಯಕ್ಷ ಹರೀಶ್ ಬಂಟ್ವಾಳ್, ಗುತ್ತಿಗೆದಾರ ಮಂಜುನಾಥ ಕಾಯರ್ತೋಡಿ, ಪ್ರೆಸ್ ಕ್ಲಬ್ ಅಧ್ಯಕ್ಷ ಶರೀಫ್ ಜಟ್ಟಿಪಳ್ಳ ಪ್ರಮುಖರಾದ ಕಿರಣ್ ಕುರುಂಜಿ, ಗಂಗಾಧರ ಕಲ್ಲಪಳ್ಳಿ ಕೃಷ್ಣ ಬೆಟ್ಟ ಯಶ್ವಿತ್ ಕಾಳಂಮನೆ, ರಮೇಶ್ ನೀರಬಿದಿರೆ, ಜಯಶ್ರೀ ಕೊಯಿಂಗೋಡಿ ಸದಸ್ಯ ಗಂಗಾಧರ ಮಟ್ಟಿ ಶಿವಪ್ರಸಾದ್ ಕೇರ್ಪಳ, ಗಣೇಶ್ ಕುಕ್ಕುದಡಿ, ಭಾಗೀಶ್ ಕೆ.ಟಿ., ಪ್ರಜ್ಞಾ ಎಸ್. ನಾರಾಯಣ್ ಅಚ್ರಪ್ಪಾಡಿ, ಪೂಜಾಶ್ರೀ ವಿತೇಶ್ ಕೋಡಿ, ಪದ್ಮನಾಭ ಮುಂಡೋಕಜೆ ಉಪಸ್ಥಿತರಿದ್ದರು.

ಕಾಪು ಪುರಸಭೆ: 'ಲೋಕ ಕಲ್ಯಾಣ ಮೇಳ' ಕಾರ್ಯಕ್ರಮ ಉದ್ಘಾಟನೆ



ಕಾಪು: ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾನಗರಾಭಿವೃದ್ಧಿ– ಕೋಶ ಉಡುಪಿ ಮತ್ತು ಪುರಸಭಾ ವ್ಯಾಪ್ತಿಯ ರಾಷ್ಟ್ರೀಕೃತ ಬ್ಯಾಂಕ್‌ಗಳ ವತಿಯಿಂದ ಕಾಪು ಪುರಸಭೆಯ ಸಭಾಂಗಣದಲ್ಲಿ ಆಯೋಜಿಸಲಾದ 'ಲೋಕ ಕಲ್ಯಾಣ ಮೇಳ' ಕಾರ್ಯಕ್ರಮವನ್ನು ಗುರುವಾರ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಉದ್ಘಾಟಿಸಿದರು. ಪ್ರಧಾನಮಂತ್ರಿ ಕಿರು ಆಹಾರ ತಯಾರಿ ಘಟಕ ಸ್ಥಾಪಿಸುವ ಸಲುವಾಗಿ ಪರಿಶಿಷ್ಟ ಜಾತಿಯ 11 ಫಲಾನುಭವಿಗಳಿಗೆ 40,000 ದಂತೆ 4 ಲಕ್ಷ 40 ಸಾವಿರ ರೂ. ಮೊತ್ತದ ಸಾಲ ಮಂಜೂರಾತಿ ಪತ್ರ ವಿತರಿಸಿದರು. ಪುರಸಭೆ ಅಧ್ಯಕ್ಷ ಮೋಹಿನಿ ಶೆಟ್ಟಿ ಕಂದಾಯ ಅಧಿಕಾರಿ ಶಶಿಕಲಾ, ಬ್ಯಾಂಕ್ ಅಧಿಕಾರಿಗಳು ಇದ್ದರು.

ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯಿಂದ ಗ್ರಾಮೀಣ ಭಾಗಗಳನ್ನು ಕೈಬಿಡುವಂತೆ ಆಗ್ರಹ

ಬರೋಬ್ಬರಿ 260ನೇ ದಿನಕ್ಕೆ ಕಾಲಿಟ್ಟ ರೈತ ಸಂಘದ ಅನಿರ್ದಿಷ್ಟಾವಧಿ ಧರಣಿ

ಬೈಂದೂರು: ಸ್ಥಳೀಯ ಪಟ್ಟಣ ಪಂಚಾಯತ್ ವ್ಯಾಪ್ತಿಯಿಂದ ಗ್ರಾಮೀಣ ಭಾಗಗಳನ್ನು ಕೈಬಿಡಬೇಕೆಂದು ಆಗ್ರಹಿಸಿ ತಾಲೂಕು ರೈತ ಸಂಘದ ವತಿಯಿಂದ ಬೈಂದೂರು ಆಡಳಿತ ಸೌಧದ ಎದರು ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಬುಧವಾರ 260ನೇ ದಿನಕ್ಕೆ ಕಾಲಿಟ್ಟಿದೆ. ಈ ಕುರಿತು ಸಮಾಲೋಚನಾ ಹಾಗೂ ಮುಂದಿನ ಹೋರಾಟ ಕುರಿತು ಪೂರ್ವ ಭಾವಿ ಸಭೆ ನಡೆಸಿದ ರೈತರು ಬೈಂದೂರು ತಾಲೂಕು ಆಡಳಿತ ಸೌಧಕ್ಕೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.



ಕಚೇರಿಗೆ ಮುತ್ತಿಗೆ ಹಾಕಲು ಯತ್ನ

ರೈತರ ಬೇಡಿಕೆಗಳಿಗೆ ಬೆಲೆಕೊಡದೇ ಅನಗತ್ಯ ವಿಳಂಬ ಮಾಡುತ್ತಿರುವ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ರೈತರು, ತಾಲೂಕು ಕಚೇರಿ ಮುತ್ತಿಗೆ ಪ್ರಯತ್ನಿಸಿದಾಗ ಪೊಲೀಸರು ತಡೆದರು.

ಒಂದು ತಿಂಗಳ ಗಡುವು

ತಾಲೂಕು ರೈತ ಸಂಘದ ಅಧ್ಯಕ್ಷ ನೆಲ್ಯಾಡಿ ದೀಪಕ್ ಕುಮಾರ್ ಶೆಟ್ಟಿ ಮಾತನಾಡಿ, ಹೋರಾಟಕ್ಕೆ ಒಂದು ವರ್ಷ ಸಮೀಪಿಸಿದರೂ ಕೂಡ ಸರ್ಕಾರ, ಇಲಾಖೆ ಹಾಗೂ ಜನಪ್ರತಿನಿಧಿಗಳು ರೈತರಿಗೆ ನ್ಯಾಯ ಕೊಟ್ಟಿಲ್ಲ, ರೈತರ ನೋವಿಗೆ ಬೆಲೆ ಇಲ್ಲದಂತೆ ವರ್ತಿಸುತಿದ್ದಾರೆ. ನಮ್ಮ ಹೋರಾಟ ನ್ಯಾಯ ಸಿಗುವ ವರಗೆ ಮುಂದುವರಿಯುತ್ತದೆ. ಒಂದು ತಿಂಗಳ ಒಳಗೆ ಗ್ರಾಮೀಣ ಭಾಗದ ಸಾವಿರಾರು ಜನರು ವಿಷದ ಬಾಟಲಿ ಹಿಡಿದು ಬರುತ್ತೇವೆ ನ್ಯಾಯ ಪಡೆಯಲು ಪ್ರಾಣ ತ್ಯಾಗಕ್ಕೂ ಸಿದ್ದ ಎಂದರು.

> **ಒಂದು ವಾರದ ಒಳಗೆ ಸ್ಪಷ್ಟ ಮಾಹಿತಿ**
> ರೈತರ ಹೋರಾಟದ ಗಂಭೀರತೆಯ ಕುರಿತು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿ ಸರ್ಕಾರದ ಗಮನಕ್ಕೆ ತರುತ್ತೇವೆ. ಒಂದು ವಾರದ ಒಳಗೆ ರೈತರಿಗೆ ಮಾಹಿತಿ ನೀಡುತ್ತೇವೆ.
> ● ಡಿ. ಜಿ. ಮಹಾತ್, ತಹಶೀಲ್ದಾರ್

ಹೋರಾಟದ ಕಿಚ್ಚು ಹೆಚ್ಚಿ ರೈತರು ಕಚೇರಿಯ ಹೊರಗೆ ಆಕ್ರೋಶಭರಿತರಾಗಿ ಘೋಷಣೆ ಕೂಗಿದರು.

ಈ ವೇಳೆ ದೀಪಕ್ ಕುಮಾರ್ ಶೆಟ್ಟಿಗೆ ಎದೆನೋವು ಕಾಣಿಸಿಕೊಂಡು ಅಸ್ವಸ್ಥರಾದ ಘಟನೆಯು ನಡೆಯಿತು. ಈ ಸಂದರ್ಭ ಕೆಲಹೊತ್ತು ಆತಂಕದ ಪರಿಸ್ಥಿತಿ ಉಂಟಾಯಿತು. ಬಳಿಕ ಆರೋಗ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಪ್ರಥಮ ಚಿಕಿತ್ಸೆ ನೀಡಿದರು.


ಹಿರಿಯರಾದ ಕೃಷ್ಣ ದೇವಾಡಿಗ, ದೇವಪ್ಪ ಮರಾಠಿ, ಅರುಣ್ ಕುಮಾರ್ ಶಿರೂರು, ಪದ್ಮಾಕ್ಷ ಗೋಳಿಬೇರು, ಥೋಮಸ್ ಮಾಸ್ಟರ್, ಗಣೇಶ ಪೂಜಾರಿ, ಸುಧಾಕರ ಶೆಟ್ಟಿ ನೆಲ್ಯಾಡಿ, ಪೌಲೂಸ್ ಹಾಗೂ ನೂರಾರು ರೈತರು ಹಾಜರಿದ್ದರು. ರೈತ ಮುಖಂಡ ವೀರಭದ್ರ ಗಾಣಿಗ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಸುಭಾಷ್ ಗಂಗನಾಡು ವಂದಿಸಿದರು.

ಬೈಂದೂರು ರೈತ ಸಂಘದ ಕಚೇರಿಯಿಂದ ಆಡಳಿತ ಸೌಧದ ಕಚೇರಿಯವರೆಗೆ ಜಾಥಾ ನಡೆಯಿತು.

ಸುತ್ತಮುತ್ತ

ಮಡಿಕೇರಿ ನಗರ: ಬಿಜೆಪಿ ಪ್ರಧಾನ ಕಾರ್ಯದರ್ಶಿ ನೇಮಕ

ಮಡಿಕೇರಿ: ಮಡಿಕೇರಿ ನಗರ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿಯಾಗಿ ಬಿ.ಎಸ್.ಪ್ರಶಾಂತ್ ಕುಮಾರ್ ಆಯ್ಕೆಯಾಗಿದ್ದಾರೆ. ಪಕ್ಷ ಸಂಘಟನೆಯ ಹಿನ್ನೆಲೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರ ಶಿಫಾರಸ್ಸಿನ ಮೇರೆಗೆ ಪ್ರಶಾಂತ್ ಕುಮಾರ್ ಅವರನ್ನು ಆಯ್ಕೆ ಮಾಡಿರುವುದಾಗಿ ನಗರಾಧ್ಯಕ್ಷ ಉಮೇಶ್ ಸುಬ್ರಮಣಿ ಅವರು ತಿಳಿಸಿದ್ದಾರೆ.



ಆಲ್ ಬಿರ್ರ್ ಸ್ಕೂಲ್ ಉದ್ಘಾಟನಾ ಸಮಾರಂಭ

ಬಂಟ್ವಾಳ: ಅಲ್ ಹುದಾ ಎಜ್ಯುಕೇಷನ್ ಟ್ರಸ್ಟ್ ಫರಂಗಿಪೇಟೆ ಇದರ ಆಧೀನದಲ್ಲಿ ಅಲ್ ಬಿರ್ರ್ ಸ್ಕೂಲ್ ಉದ್ಘಾಟನಾ ಸಮಾರಂಭ ನಡೆಯಿತು. ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ ಅಧ್ಯಕ್ಷ ಸಯ್ಯದುಲ್ ಉಲಮಾ ಸಯ್ಯದ್ ಜಿಫ್ರೀ ಮುತ್ತುಕೋಯ ತಂಙಳ್ ಅವರು, ಅಲ್ ಬಿರ್ರ್ ಸ್ಕೂಲ್ ಉದ್ಘಾಟಿಸಿದರು. ಫರಂಗಿಪೇಟೆ ರೇಂಜ್ ಮದ್ರಸ ಮ್ಯಾನೇಜ್ ಮೆಂಟ್ ಅಧ್ಯಕ್ಷ ಹಸನಬ್ಬ ಗುಡ್ಡುಮನೆ ಅವರಿಗೆ ಕಟ್ಟಡದ ಕೀ ಹಸ್ತಾಂತರಿಸಿದರು. ಮುಖ್ಯ ಅತಿಥಿಯಾಗಿ ಶೈಖುನಾ ಅಬ್ಬುಲ್ ಖಾದರ್ ಅಲ್ ಖಾಸಿಮಿ ಬಂಬ್ರಾಣ ಭಾಗವಹಿಸಿದರು. ಫರಂಗಿಪೇಟೆ ಅಲ್ ಹುದಾ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಜನಾಬ್ ಉಮರ್ ಫಾರೂಕ್ ಅಧ್ಯಕ್ಷತೆ ವಹಿಸಿದ್ದರು. ಪುದು ಗ್ರಾ.ಪಂ. ಅಧ್ಯಕ್ಷ ರಮ್ಲಾನ್ ಮಾರಿಪಳ್ಳ, ಇರ್ಷಾದ್ ದಾರಿಮಿ ಮಿತ್ತಬೈಲ್, ವಳಚ್ಚಿಲ್ ಮಸೀದಿಯ ಖತೀಬ್, ಕುಕ್ಕಿಲ ದಾರಿಮಿ, ತುಂಬೆ ಮಸೀದಿಯಾ ಖತೀಬ್, ಅಬುಸಾಲಿ ಫೈಜೀ, ಪರಂಗಿಪೇಟೆ ಮಸೀದಿ ಖತೀಬ್ ಅಬ್ದುಲ್ ರಶೀದ್ ಹುಮಾನಿ, ಕುಂಪಲ ಮಜಲ್ ಮಸೀದಿಯ ಖತೀಬ್ ಉಬೆದುಲ್ಲಾ ಅಝ್ಹರಿ ಉಪಸ್ಥಿತರಿದ್ದರು. ಈ ಸಂದರ್ಭ ಕೇರಳ ಜಂಇಯ್ಯತುಲ್ ಉಲಮಾ ಅಧ್ಯಕ್ಷ ಸಯ್ಯದುಲ್ ಉಲಮಾ ಸಯ್ಯದ್ ಜಿಫ್ರೀ ಮುತ್ತುಕೋಯ ತಂಙಳ್ ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು. ಮುಹಮ್ಮದ್ ಬುಖಾರಿ ಕುಂಪನಮಜಲ್, ರಮಲಾನ್ ಮಾರಿಪಳ್ಳ ಇಮ್ತಿಯಾಜ್ ತುಂಬೆ, ಮಹಮ್ಮದ್ ಶರೀಫ್ ತುಂಬೆ, ಇಸ್ಮಾಯಿಲ್ ತುಂಬೆ, ಹಾಜಿ ಅಬೂಸ್ವಾಲಿಹ್ ಫರಂಗಿಪೇಟೆ, ಅಶ್ರಫ್ ಕುಂಜತ್ಕಳ, ಫೈರೋಝ್ ಫರಂಗಿಪೇಟೆ ಇಸ್ಮಾಯಿಲ್ ಯಮಾನಿ ತಿಂಗಳಾಡಿ, ಅಜೀಜ್ ಅಮ್ಮೆಮಾರ್, ಶಾಕಿರ್ ಅಮ್ಮೆಮಾರ್ ಹಾಗೂ ಅಲ್ ಹುದಾ ಎಜ್ಯುಕೇಶನ್ ಟ್ರಸ್ಟ್ ಸದಸ್ಯರು ಇದ್ದರು. ಪ್ರಧಾನ ಕಾರ್ಯದರ್ಶಿ ಸೇಲಿಂ ಕುಂಪನಮಜಲ್ ಸ್ವಾಗತಿಸಿ, ಇಮ್ತಿಯಾಜ್ ತುಂಬೆ ವಂದಿಸಿದರು.

ಕ್ರಾಂತಿಕಾರಿ ಯುವಜನ ಸಂಘಟನೆ ಸಮಾವೇಶ

ಬಂಟ್ವಾಳ: ಕ್ರಾಂತಿಕಾರಿ ಯುವಜನ ಸಂಘಟನೆ (ಆರ್‌ವೈಎ) ರಾಜ್ಯ ಸಮಾವೇಶ ಹಾಗೂ 'ಪ್ರಸ್ತುತ ದೇಶದ ಮುಂದಿರುವ ಸವಾಲುಗಳಲ್ಲಿ ವಿದ್ಯಾರ್ಥಿ ಯುವ ಜನತೆಯ ಪಾತ್ರ' ಎಂಬ ವಿಚಾರದ ಬಗ್ಗೆ ಬಿ.ಸಿ. ರೋಡಿನ ಡಾ. ಬಿ. ಆರ್. ಅಂಬೇಡ್ಕರ್ ಭವನದಲ್ಲಿ ವಿಚಾರ ಸಂಕಿರಣವು ನಡೆಯಿತು. ಸಿಪಿಐಎಂಎಲ್ ಲಿಬರೇಶನ್ ರಾಜ್ಯ ಕಾರ್ಯದರ್ಶಿ ಕ್ಲಿಫ್ಟನ್ ಡಿ'ರೋಜಾರಿಯೋ ಭಾಗವಹಿಸಿ, ಮಾತನಾಡಿದರು. ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ್ ಪುಣಚ, ಬಿ.ಸಿ.ರೋಡಿನ ಯುವ ನ್ಯಾಯವಾದಿ ತುಳಸೀದಾಸ್ ಆರ್. ನಿವೃತ್ತ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ. ಬದ್ರುದ್ದೀನ್, ಸಿಪಿಐಎಂಎಲ್ ಲಿಬರೇಶನ್ ದ.ಕ. ಜಿಲ್ಲಾ ಕಾರ್ಯದರ್ಶಿ ರಾಮಣ್ಣ ವಿಟ್ಲ, ನಮ್ಮ ಮತ ನಮ್ಮ ಹಕ್ಕು ಸಂಘಟನೆಯ ಪಾದರ್ ವಿನೋದ್, ಸಿಪಿಐಎಂಎಲ್ ಕೊಡಗು ಜಿಲ್ಲಾ ಕಾರ್ಯದರ್ಶಿ ಮೋಹನ್ ಎಂ.ಕೆ., ಎಐಸಿಸಿಟಿಯು ರಾಜ್ಯ ಗೌರವಾಧ್ಯಕ್ಷ ಮೋಹನ್ ಕೆಇ, ಆಟೋ ರಿಕ್ಷಾ ಚಾಲಕರ ಸಂಘದ ಜಿಲ್ಲಾಧ್ಯಕ್ಷ ಅನ್ಸಾರ್ ಬಜಾಲ್, ಐಸಾ ರಾಜ್ಯ ಮುಖಂಡರಾದ ಸತ್ಯಂ ಪಾಂಡೆ, ಹೇಮಂತ್ ಬೆಂಗಳೂರು, ಲಿಯೋನ್ ಬೆಂಗಳೂರು ಸಮಾವೇಶವನ್ನುದ್ದೇಶಿಸಿ, ಮಾತನಾಡಿದರು. ಮಹಮ್ಮದ್ ಲುಕ್ಮಾನ್ ಕೆ.ಎಂ ಸ್ವಾಗತಿಸಿದರು. ಇದೇ ವೇಳೆ ನೂತನ ಸಂಚಾಲಕ ಸಮಿತಿ ರಚಿಸಲಾಯಿತು. ಸಂಚಾಲಕರುಗಳಾಗಿ ತುಳಸೀದಾಸ್ ಆರ್, ಚೆನ್ನಯ್ಯ ಬೆಂಗಳೂರು, ಸಹ ಸಂಚಾಲಕರುಗಳಾಗಿ ಮಹಮ್ಮದ್ ಲುಕ್ಮಾನ್ ಕೆ ಎಂ, ಹೇಮಂತ್ ಬೆಂಗಳೂರು, ರಮೇಶ್ ಗಂಗಾವತಿ ಹಾಗೂ ಹನ್ನೆರಡು ಜನ ಸದಸ್ಯರ ಸಮಿತಿಯನ್ನು ರಚಿಸಲಾಯಿತು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಪೊನ್ನಂಪೇಟೆ 66/11 ಕೆ.ವಿ ವಿದ್ಯುತ್ ವಿತರಣಾ ಉಪಕೇಂದ್ರದಿಂದ ಹೊರಹೊಮ್ಮುವ ಎಫ್7-ಆರುವತ್ತೊಕ್ಕು, ಎಫ್8-ಗೋಣಿಕೊಪ್ಪ ಎಫ್9-ಹಾತೂರು, ಎಫ್12-ಪಾಲಿಬೆಟ್ಟ, ಎಫ್13 ಹೊಸೂರು, ಎಫ್18-ತಿತಿಮತಿ, ಫೀಡರ್'ನಲ್ಲಿ ಜಂಗಲ್ ಕಟ್ಟಿಂಗ್ ಹಾಗೂ ತುರ್ತು ನಿರ್ವಹಣೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಜೂ.12 ರಂದುನ ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಆರುವತ್ತೊಕ್ಕು, ಗೋಣಿಕೊಪ್ಪ ಹಾತೂರು, ಪಾಲಿಬೆಟ್ಟ ಹೊಸೂರು, ತಿತಿಮತಿ, ಶಾಂತಿನಗರ, ಗಣಪತಿ ನಗರ, ಜೋಡುಬೀಟಿ, ಹಿಹೆಚ್‌ಎಸ್ ಕಾಲೋನಿ, ಹರಿಶ್ಚಂದ್ರಪುರ, ಕೈಕೇರಿ, ಈರಣ್ಣ ಕಾಲೋನಿ, ಗದ್ದೆಮನೆ, ಬೆಟ್ಟಗೇರಿ, ಚೆನ್ನಂಗೊಲ್ಲಿ, ಅತ್ತೂರು, ಹುಂಡಿ, ಚೆನ್ನಯ್ಯನಕೋಟೆ, ಅಬ್ಬೂರು, ಹಂಚಿಕಾಡು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ತಿಳಿಸಿದ್ದಾರೆ.

ಶಿಕ್ಷಕರ ಹುದ್ದೆ ಖಾಲಿ

ಕಾಸರಗೋಡು: ಪೆರಡಾಲ ಸರಕಾರಿ ಪ್ರೌಢಶಾಲೆಯಲ್ಲಿ ಯುಪಿಎಸ್‌ಟಿ (ಮಲೆಯಾಳ), ಎಲ್‌ಪಿಎಸ್‌ಟಿ (ಮಲೆಯಾಳ) ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಜೂ.15ರಂದು ಬೆಳಗ್ಗೆ 10.30ಕ್ಕೆ ಶಾಲಾ ಕಚೇರಿಯಲ್ಲಿ ನಡೆಯಲಿದೆ.

ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಜಿಲ್ಲಾಡಳಿತದಿಂದ ಸಿದ್ಧತೆ | ನೋಡಲ್ ಅಧಿಕಾರಿಗಳ ನೇಮಕ

ಕೊಡಗು ಜಿಲ್ಲೆಯಲ್ಲಿ ಸಹಾಯವಾಣಿ ಕೇಂದ್ರ ಕಾರ್ಯಾರಂಭ

ಮಡಿಕೇರಿ: ಪ್ರಾಕೃತಿಕವಿಕೋಪನಿರ್ವಹಣೆಸಂಬಂಧ ಜಿಲ್ಲಾಡಳಿತ ಆಗತ್ಯ ಸಿದ್ಧತೆ ಮಾಡಿಕೊಂಡಿದ್ದು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸಹಾಯವಾಣಿ ಕೇಂದ್ರ ಆರಂಭಿಸಿದೆ. ಜೊತೆಗೆ ನೋಡಲ್ ಹಾಗೂ ಸಹಾಯಕ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಆದೇಶ ಹೊರಡಿಸಿದ್ದಾರೆ.

ಸಹಾಯವಾಣಿ ಕೇಂದ್ರ ವಿವರ ಇಂತಿದೆ: ಜಿಲ್ಲಾಡಳಿತ ಭವನದಲ್ಲಿರುವ ಸಹಾಯವಾಣಿ ಸಂಖ್ಯೆ 8550001077 ಸಂಪರ್ಕಿಸಬಹುದಾಗಿದೆ. ಮಡಿಕೇರಿ ತಾಲೂಕು 08272-228396, ಸೋಮವಾರಪೇಟೆ ತಾಲೂಕು 08276-282045, ಕುಶಾಲನಗರ ತಾಲೂಕು 08276-200198, ವೀರಾಜಪೇಟೆ ತಾಲೂಕು 08274-257328 ಹಾಗೂ ಪೊನ್ನಂಪೇಟೆ ತಾಲೂಕು 08274-249700 ನ್ನು ಸಂಪರ್ಕಿಸಬಹುದಾಗಿದೆ. ಜಿಲ್ಲೆಯ ವಿವಿಧ ಪ್ರದೇಶಗಳಿಗೆ ನಿಯೋಜಿಸಿರುವ ನೋಡಲ್ ಅಧಿಕಾರಿ ಹಾಗೂ ಸಹಾಯಕ ನೋಡಲ್ ಅಧಿಕಾರಿಗಳ ದೂರವಾಣಿ ಸಂಖ್ಯೆ ವಿವರ ಇಂತಿದೆ.



ಮಡಿಕೇರಿ ನಗರವ್ಯಾಪ್ತಿ ಹಾಗೂ ಕೆ. ನಿಡುಗಣೆ ಗ್ರಾ.ಪಂ. ವ್ಯಾಪ್ತಿಗೆ ನೋಡಲ್ ಅಧಿಕಾರಿ ಮಡಿಕೇರಿ ನಗರಸಭೆ ಪೌರಾಯುಕ್ತರು ದೂ.ಸಂ. 9845 723666, ಸಹಾಯಕ ನೋಡಲ್ ಅಧಿಕಾರಿ ಕಂದಾಯ ಅಧಿಕಾರಿ, ನಗರಸಭೆ, ಮಡಿಕೇರಿ ದೂ.ಸಂ. 9743132759. ಮಡಿಕೇರಿ ಗ್ರಾಮಾಂತರ ವ್ಯಾಪ್ತಿ (ಕೆ.ನಿಡುಗಣೆ ಗ್ರಾ.ಪಂ. ಹೊರತುಪಡಿಸಿ) ನೋಡಲ್ ಅಧಿಕಾರಿ ಸಹಾಯಕ ಕೃಷಿ ನಿರ್ದೇಶಕರು, ಮಡಿಕೇರಿ ತಾಲೂಕು ದೂ.ಸಂ.8277931900, ಸಹಾಯಕ ನೋಡಲ್ ಅಧಿಕಾರಿ ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಮಡಿಕೇರಿ ದೂ.ಸಂ.8971009312. ಸಂಪಾಜೆ ಹೋಬಳಿಗೆ ನೋಡಲ್ ಅಧಿಕಾರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಡಿಕೇರಿ ದೂ.ಸಂ. 9035510168, ಸಹಾಯಕ ನೋಡಲ್ ಅಧಿಕಾರಿ ಉಪ ತಹಶೀಲ್ದಾರರು, ಸಂಪಾಜೆ ಹೋಬಳಿ ದೂ.ಸಂ.9743703977. ಭಾಗಮಂಡಲ ಹೋಬಳಿಗೆ ನೋಡಲ್ ಅಧಿಕಾರಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಮಡಿಕೇರಿ ತಾಲೂಕು ದೂ.ಸಂ.994562916, ಸಹಾಯಕ ನೋಡಲ್ ಅಧಿಕಾರಿ ಉಪ ತಹಶೀಲ್ದಾರರು, ಭಾಗಮಂಡಲ ಹೋಬಳಿ ದೂ.ಸಂ.9449614572. ನಾಪೋಕ್ಲು ಹೋಬಳಿಗೆ ನೋಡಲ್ ಅಧಿಕಾರಿ ಸಹಾಯಕ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಮಡಿಕೇರಿ ತಾಲೂಕು ದೂ.ಸಂ. 8762360208, ಸಹಾಯಕ ನೋಡಲ್ ಅಧಿಕಾರಿ ಉಪ ತಹಶೀಲ್ದಾರ್, ನಾಪೋಕ್ಲು ಹೋಬಳಿ ದೂ.ಸಂ.8310524060,. ಕುಶಾಲನಗರ (ನಗರ ವ್ಯಾಪ್ತಿ) ನೋಡಲ್ ಅಧಿಕಾರಿ ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ದೂ. 9731442624, ಸಹಾಯಕ ನೋಡಲ್ ಅಧಿಕಾರಿ ಕಂದಾಯ ಅಧಿಕಾರಿ, ಪುರಸಭೆ, ಕುಶಾಲನಗರ ದೂಸಂ.8310496527. ಕುಶಾಲನಗರ (ಗ್ರಾಮಾಂತರ ವ್ಯಾಪ್ತಿ) ನೋಡಲ್ ಅಧಿಕಾರಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಸೋಮವಾರಪೇಟೆ ದೂ.ಸಂ. 9731259287, ಸಹಾಯಕ ನೋಡಲ್ ಅಧಿಕಾರಿ ಸಹಾಯಕ ಇಂಜಿನಿಯರ್, ಗುಣ ಭರವಸೆ, ಕುಶಾಲನಗರ ಉಪ ವಿಭಾಗ, ಲೋಕೋಪಯೋಗಿ ಇಲಾಖೆ ದೂ.ಸಂ.9108514552. ಸೋಮವಾರಪೇಟೆ (ನಗರ ವ್ಯಾಪ್ತಿ) ನೋಡಲ್ ಅಧಿ ಕಾರಿ ಮುಖ್ಯಾಧಿಕಾರಿ, ಪ.ಪಂ., ಸೋಮವಾರಪೇಟೆ ದೂ.ಸಂ. 9480869105, ಸಹಾಯಕ ನೋಡಲ್ ಅಧಿಕಾರಿ ಕಂದಾಯ ಅಧಿ ಕಾರಿ, ಪ.ಪಂ., ಸೋಮವಾರಪೇಟೆ ದೂ. ಸಂ.8123897324. ಸೋಮವಾರಪೇಟೆ (ಗ್ರಾಮಾಂತರ ವ್ಯಾಪ್ತಿ) ನೋಡಲ್ ಅಧಿಕಾರಿ ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಸೋಮವಾರಪೇಟೆ ದೂ.ಸಂ.9980360200, ಸಹಾಯಕ ನೋಡಲ್ ಅಧಿಕಾರಿ ಶರತ್, ಕಿರಿಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸೋಮವಾರಪೇಟೆ ಉಪ ವಿಭಾಗ ದೂ.ಸಂ.8746945321. ಶಾಂತಳ್ಳಿ ಹೋಬಳಿಗೆ ನೋಡಲ್ ಅಧಿಕಾರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರ್ ಉಪ ವಿಭಾಗ, ಸೋಮವಾರಪೇಟೆ ದೂ.ಸಂ. 9019358035, ಸಹಾಯಕ ನೋಡಲ್ ಅಧಿಕಾರಿ ಉಪತಹಶೀಲ್ದಾರರು, ಶಾಂತಳ್ಳಿ ಹೋಬಳಿ ದೂ.ಸಂ.9008903685. ಕೊಡ್ಲಿಪೇಟೆ ಹೋಬಳಿಗೆ ನೋಡಲ್ ಅಧಿಕಾರಿ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಸೋಮವಾರಪೇಟೆ ದೂ.ಸಂ. 9900924565, ಸಹಾಯಕ ನೋಡಲ್ ಅಧಿಕಾರಿ ಉಪ ತಹಶೀಲ್ದಾರರು, ಕೊಡ್ಲಿಪೇಟೆ ಹೋಬಳಿ ದೂ.ಸಂ. 9036215097. ಶನಿವಾರಸಂತೆ ಹೋಬಳಿಗೆ ನೋಡಲ್ ಅಧಿಕಾರಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸೋಮವಾರಪೇಟೆ ಉಪ ವಿಭಾಗ ದೂ.ಸಂ. 9740781526, ಸಹಾಯಕ ನೋಡಲ್ ಅಧಿಕಾರಿ ಉಪ ತಹಶೀಲ್ದಾರರು, ಶನಿವಾರಸಂತೆ ಹೋಬಳಿ ದೂ.ಸಂ.9448588060 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.

ಕಲ್ಲಬೆಟ್ಟು ಶ್ರೀ ಗಣೇಶೋತ್ಸವ: ವಿಜ್ಞಾಪನಾ ಪತ್ರ ಬಿಡುಗಡೆ, ಪದಾಧಿಕಾರಿಗಳ ನೇಮಕ



ಮೂಡುಬಿದಿರೆ: ಶ್ರೀ ಗಣೇಶ ಸೇವಾ ಟ್ರಸ್ಟ್ ಕಲ್ಲಬೆಟ್ಟು ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಮತ್ತು ಸ್ವರ್ಣಗೌರಿ ಮಾತೃ ಮಂಡಳಿಯ ಜಂಟಿ ಸಭೆಯು ಕಲ್ಲಬೆಟ್ಟು ಭಜನಾ ಮಂದಿರದಲ್ಲಿ ಜರಗಿತು.

ಶ್ರೀ ಗಣೇಶೋತ್ಸವ ಸಮಿತಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ಅಧ್ಯಕ್ಷರಾಗಿ ರಾಜೇಶ್ ಬೈಲೂರು, ಕಾರ್ಯದರ್ಶಿಯಾಗಿ ಪ್ರಮೋದ್ ಆಚಾರ್ಯ ಮಾರೂರು ಮತ್ತು ಇತರ ಪದಾಧಿಕಾರಿಗಳ ಆಯ್ಕೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಟ್ರಸ್ಟ್‌ನ ಅಧ್ಯಕ್ಷ ಎಂ. ಬಾಹುಬಲಿ ಪ್ರಸಾದ್ ವಹಿಸಿ ನೂತನ ಕಟ್ಟಡದ ನೀಲ ನಕಾಶೆ ವಿವರ ನೀಡಿ ವಿಜ್ಞಾಪನಾ ಪತ್ರ ಬಿಡುಗಡೆಗೊಳಿಸಿ ಸಹಕಾರ ಕೋರಿದರು. ಗಣೇಶೋತ್ಸವ ಸಮಿತಿಯು 24 ವರ್ಷ ಪೂರೈಸಿ ಬೆಳ್ಳಿ ಹಬ್ಬ ಆಚರಿಸುವ ಸಂಭ್ರಮದಲ್ಲಿ ಹಲವಾರು ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದು ವಿನಂತಿಸಿಕೊಂಡರು. ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷರು ಶ್ರೀಪತಿ ಭಟ್, ಕಾರ್ಯಕರ್ತರ ಸೇವೆಯನ್ನು ಸ್ಮರಿಸಿಕೊಂಡರು. ಟ್ರಸ್ಟಿನ ನಿಕಟಪೂರ್ವ ಅಧ್ಯಕ್ಷ ಶಿಕಾರಿಪುರ ಈಶ್ವರ ಭಟ್ ಟ್ರಸ್ಟ್‌ನ ಉದ್ದೇಶ ಮತ್ತು ಜನಪರ ಕಾಳಜಿ ಬಗ್ಗೆ ಕಾರ್ಯಕ್ರಮಕ್ಕೆ ಒತ್ತು ಕೊಡಬೇಕೆಂದು ಕರೆನೀಡಿದರು. ಟ್ರಸ್ಟಿಗಳಾದ ಪದ್ಮಯ್ಯ ಸುವರ್ಣ, ಕೇಶವ ಹೆಗ್ಡೆ, ರಮೇಶ್‌ಚಂದ್ರ ಪಿ, ಸುಧೀರ್ ಪೈ ಕರುಣಾಕರ್ ಶೆಟ್ಟಿ, ಯೋಗೀಶ್ ಪೈ, ಕೃಷ್ಣಪ್ಪ ರಂಜಿತ್ ಪಿ, ಗಣೇಶೋತ್ಸವ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಸತೀಶ್ ಶೆಟ್ಟಿ ಕಾರ್ಯದರ್ಶಿ ವಿಶಾಲ್ ಮಾರೂರು, ಸ್ವರ್ಣಗೌರಿ ಮಾತೃ ಮಂಡಳಿಯ ಅಧ್ಯಕ್ಷೆ ಪ್ರಿಯಾಂಕ ಬರ್ಮನ್ ಹಾಗೂ ಸದಸ್ಯರು ಇದ್ದರು. ಖಜಾಂಜಿ ರೋಹನ್ ಬಂಗೇರ ಸ್ವಾಗತಿಸಿದರು. ವಿಜೇಶ್ ಧನ್ಯವಾದವಿತ್ತರು. ಜಿ.ಕೆ ಭಟ್ ಕಾರ್ಯಕ್ರಮ ನಿರೂಪಿಸಿದರು.

ಆತ್ಮಶಕ್ತಿ ಸಹಕಾರಿ ಸಂಘ ಉಳ್ಳಾಲ ಶಾಖಾ ವಾರ್ಷಿಕೋತ್ಸವ, ಗ್ರಾಹಕರ ಸಭೆ



ಆತ್ಮಶಕ್ತಿ: ವಿವಿಧೋದ್ದೇಶ ಸಹಕಾರಿ ಸಂಘ ಉಳ್ಳಾಲ ಶಾಖೆಯ 11ನೇ ವಾರ್ಷಿಕೋತ್ಸವ ಹಾಗೂ ಗ್ರಾಹಕ ಸಭೆಯು ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಘದ ಸದಸ್ಯ ವಿಜಯ್ ಕುಮಾರ್, ಪುರುಷೋತ್ತಮ ಕೆ., ಗೋಪಾಲ್ ಯು.ಕೆ, ಹಾಗೂ ದೇವಕಿ ಆರ್. ಉಳ್ಳಾಲ್ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಚಿತ್ತರಂಜನ್ ಬೋಳಾರ್ ಮಾತನಾಡಿ. ಸಹಕಾರಿ ಸಂಘದ ಸದಸ್ಯರ ಸಹಕಾರದಿಂದಲೇ ನಾವು ಇಷ್ಟು ಯಶಸ್ಸು ಸಾಧಿಸಲು ಸಾಧ್ಯವಾಯಿತು. ಸಂಘದಲ್ಲಿ 95 ಶೇ. ಮಹಿಳಾ ಸಿಬ್ಬಂದಿಗಳೇ ಕಾರ್ಯನಿರ್ವಹಿಸುತ್ತಿದ್ದು, ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲಾಗುತ್ತಿದೆ. ಎಂದರು.

ಉಳ್ಳಾಲ ಶಾಖೆಯ 11ನೇ ವಾರ್ಷಿಕೋತ್ಸವದ ಪ್ರಯುಕ್ತ 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50 ವನ್ನು ನೀಡಲಾಗುತ್ತಿದ್ದು, ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂಗೆ ಗರಿಷ್ಟ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು. ಜೀವ ವಿಮೆ, ವಾಹನ ವಿಮೆ, ಆರೋಗ್ಯ ವಿಮೆ ಸೇವಾ ಸೌಲಭ್ಯವನ್ನು ಸ್ಪರ್ಧಾತ್ಮಕ ಪ್ರೀಮಿಯಂನಲ್ಲಿ ನೀಡಲಾಗುತ್ತಿದೆ. ನಗರದ ಸ್ಟೇಟ್‌ಬ್ಯಾಂಕ್ ಬಳಿಯ ಡಿ.ಸಿ ಆಫೀಸ್ ಶಾಖೆಯಲ್ಲಿ ವ್ಯವಹಾರದ ದಿನಗಳಲ್ಲಿ ಸಂಜೆ 7ರವರೆಗೆ ಇ-ಸ್ಟ್ಯಾಂಪ್ ಪೇಪರ್ ಸೇವೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಂಘದ ಸದಸ್ಯ ವಿಜಯ್ ಕುಮಾರ್ ಮಾತನಾಡಿ, ಸಂಘವು ಇತರೆ ಸಂಘ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ನಿರಂತರವಾಗಿ ಆರೋಗ್ಯ ಶಿಬಿರವನ್ನು ಏರ್ಪಡಿಸುತ್ತಾ ಬರುತ್ತಿರುವುದು ಶ್ಲಾಘನೀಯ ಎಂದರು.

ಸಂಘದ ಸದಸ್ಯ ಪುಷ್ಪರಾಜ್, ಯು. ಐತ್ತಪ್ಪ ಶೆಟ್ಟಿಗಾರ್ ಮತ್ತು ಮಾಧವ ಶೆಟ್ಟಿ ಶುಭ ಹಾರೈಸಿದರು. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನಿರ್ದೇಶಕ ರಮನಾಥ್ ಸನಿಲ್, ಗೋಪಾಲ್ ಎಂ., ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್ ಮತ್ತಿತರರು ಉಪಸ್ಥಿತರಿದ್ದರು. ಶಾಖೆಯ ಸಿಬ್ಬಂದಿ ಪವಿತ್ರ ಯು ಜೆ., ಸ್ವಾಗತಿಸಿ, ಹಿರಿಯ ಶಾಖಾಧಿಕಾರಿ ಸಚಿನ್ ಕಾರ್ಯಕ್ರಮ ನಿರೂಪಿಸಿದರು.

ಕೆ.ಸಿ.ಇ.ಟಿ: ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ವಿದ್ಯಾರ್ಥಿಗಳಿಗೆ ಹಲವು ರ್‍ಯಾಂಕ್



ಕುಂದಾಪುರ: ಇತ್ತೀಚೆಗೆ ಪ್ರಕಟಗೊಂಡ ರಾಜ್ಯಮಟ್ಟದ ಕೆ.ಸಿ.ಇ.ಟಿ ಪರೀಕ್ಷೆಯಲ್ಲಿ ಕುಂದಾಪುರದ ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ಸುಜ್ಞಾನ ಪಿಯು ಕಾಲೇಜು ಹಾಗೂ ಸುಜ್ಞಾನ ನೀಟ್ ಅಕಾಡೆಮಿಯ ವಿದ್ಯಾರ್ಥಿಗಳು ಅತ್ಯುತ್ತಮ ರ್‍ಯಾಂಕ್‌ಗಳನ್ನು ಪಡೆಯುವ ಮೂಲಕ ಸಂಸ್ಥೆಗೆ ಹಾಗೂ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ.

ಧನುಷ್ ದೇವಾಡಿಗ (ಎನ್‌ಎಲ್‌ಟಿ) ರಾಜ್ಯ ಮಟ್ಟದಲ್ಲಿ 391ನೇ ರ್‍ಯಾಂಕ್, ಇಂಚರಾ 616ನೇ ರ್‍ಯಾಂಕ್, ಸಮೃದ್ಧ ಪಾರೀಸ್ 888ನೇ ರ್‍ಯಾಂಕ್, ಪ್ರಿಯಾಂಕ ಶೆಟ್ಟಿ 2680ನೇ ರ್‍ಯಾಂಕ್, ಸೃಷ್ಟಿ ಶಿವಾಜಿ 3345ನೇ ರ್‍ಯಾಂಕ್, ಸಿಂಚನಾ 4731ನೇ, ರಜತ್ ಅಡಿಗ 5389ನೇ, ಕೌಶಿಕ್ ಶೆಟ್ಟಿ 6093, ಜಯರಾಜ್ ಜೆ.ಎಸ್. 6166 ಎಂಬ ವಿದ್ಯಾರ್ಥಿಗಳು ಹತ್ತು ಸಾವಿರ ಒಳಗಡೆ ರ್‍ಯಾಂಕ್ ಗಳಿಸಿ ಸಾಧನೆ ಮೆರೆದಿದ್ದಾರೆ. ವಿದ್ಯಾರ್ಥಿಗಳಿಗೆ ದೇಶದ ನಾನಾ ಭಾಗದ ಪರಿಣಿತ ತರಬೇತುದಾರರು ತರಬೇತಿ ನೀಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸುಜ್ಞಾನ ಎಜುಕೇಶನಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ರಮೇಶ್ ಶೆಟ್ಟಿ ಕಾರ್ಯದರ್ಶಿ ಪ್ರತಾಪ್ ಶೆಟ್ಟಿ ಖಜಾಂಚಿ ಭರತ್ ಶೆಟ್ಟಿ ಹರ್ಷ ವ್ಯಕ್ತಪಡಿಸಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಸುಜ್ಞಾನ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರರು ಅಭಿನಂದಿಸಿ, ಶುಭ ಹಾರೈಸಿದ್ದಾರೆ.

ಪಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೋಟ್ ಪುಸ್ತಕ ವಿತರಣೆ



ಕಾರ್ಕಳ: ವಿದ್ಯಾರ್ಥಿಗಳು ಕಲಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರೊಂದಿಗೆ ಬರುವ ಸವಾಲುಗಳನ್ನು ಎದುರಿಸಿ ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕು. ಏನೇ ಕಷ್ಟಗಳು ಎದುರಾದರೂ ನಿರ್ದಿಷ್ಟ ಗುರಿಯನ್ನು ಮುಟ್ಟುವವರೆಗೆ ವಿರಮಿಸಬಾರದು ಎಂದು ಉದ್ಯಮಿ ಭರತ್ ಹೆಗ್ಡೆ ಪಳ್ಳಿ ಹೇಳಿದರು.

ಗುರುವಾರ ಕಾರ್ಕಳ ತಾಲೂಕಿನ ಪಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಅಗತ್ಯ ನೋಟ್ ಪುಸ್ತಕಗಳ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಂಡು ಮುನ್ನಡೆಯಬೇಕು. ಸಾಧನೆಗೆ ಯಾವುದೂ ಅಡ್ಡಿಯಾಗಬಾರದು. ತಮ್ಮ ಹೆತ್ತವರು, ಪೋಷಕರಿಗೆ ಕೀರ್ತಿ ತರುವ ಕೆಲಸವನ್ನು ವಿದ್ಯಾರ್ಥಿಗಳು ಮಾಡಬೇಕು ಎಂದರು.

ಉದ್ಯಮಿಗೆ ಸನ್ಮಾನ

ವಿದ್ಯಾರ್ಥಿಗಳಿಗೆ ಶಾಲಾ ನೋಟ್ ಬುಕ್ ಕೊಡುಗೆ ನೀಡಿದ ಭರತ್ ಹೆಗ್ಡೆಯವರನ್ನು ಈ ಸಂದರ್ಭ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಪ್ರಭಾಕರ ಬಂಗೇರ, ಸದಸ್ಯೆ ಅಶ್ವಿನಿ ನಾಯಕ್ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕಿ ನಾಗರತ್ನ ಸ್ವಾಗತಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ಲ್ಯಾನ್ಸ್ ಲೆಟ್ ಕಿರಣ್ ಬರ್ಬೋಜ ವಂದಿಸಿದರು. ಇಂಗ್ಲೀಷ್ ಶಿಕ್ಷಕಿ ಚಿತ್ರಾಕ್ಷಿ ಕಾರ್ಯಕ್ರಮ ನಿರೂಪಿಸಿದರು.

ಸುಲ್ಕೇರಿ ಸರಕಾರಿ ಶಾಲೆಗೆ ರೋಟರಿಯಿಂದ 1 ಲ.ರೂ. ನೆರವು



ಬಂಟ್ವಾಳ: ತಾಲೂಕಿನ ಹೊಕ್ಕಾಡಿಗೋಳಿ ಸಮೀಪದ ಸುಲ್ಕೇರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಲೊರೆಟ್ಟೋ ಹಿಲ್ಸ್ ರೋಟರಿ ಕ್ಲಬ್ ವತಿಯಿಂದ 1 ಲಕ್ಷ ರೂ. ಮೊತ್ತದ ದೇಣಿಗೆ ಚೆಕ್ ಅನ್ನು ಸೋಮವಾರ ಹಸ್ತಾಂತರಿಸಲಾಯಿತು.

ರೋಟರಿ ಮಾಜಿ ಸಹಾಯಕ ಗವರ್ನರ್ ರಾಘವೇಂದ್ರ ಭಟ್, ಕ್ಲಬ್‌ನ ಅಧ್ಯಕ್ಷ ವಿಜಯ ಫೆರ್ನಾಂಡಿಸ್ ಕ್ಲಬ್‌ನ ಕಾರ್ಯವನ್ನು ವಿವರಿಸಿದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಮತ್ತು ಕೊಡೆ ಮತ್ತಿತರ ಸಾಮಗ್ರಿ ವಿತರಿಸಲಾಯಿತು. ಕ್ಲಬ್‌ನ ಮಾಜಿ ಅಧ್ಯಕ್ಷ ಸುರೇಶ ಶೆಟ್ಟಿ ಸಿದ್ದಕಟ್ಟೆ, ಸದಸ್ಯ ಕಿರಣ್ ಕುಮಾರ್ ಮಂಜಿಲ, ಶಶಿಧರ ಶೆಟ್ಟಿ ಹರಿಪ್ರಸಾದ್ ಶೆಟ್ಟಿ, ಶಾಲೆಯ ಆಡಳಿತಮಂಡಳಿ ಗೌರವಾಧ್ಯಕ್ಷ ಗಣೇಶ ಹೆಗಡೆ, ಅಧ್ಯಕ್ಷ ರಾಜು ಪೂಜಾರಿ, ಮುಖ್ಯಶಿಕ್ಷಕ ಪ್ರಮೋದ್ ಕುಮಾರ್, ಸಮಿತಿ ಸದಸ್ಯ ಯೋಗೀಶ್, ಶಶಿಧರ ಶೆಟ್ಟಿ ಮತ್ತಿತರರಿದ್ದರು.



ಮಂಗಳೂರು ತಾಲೂಕಿನ ತೆಂಕ ಎಡಪದವಿನ ಕಜ್ಲೋರಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಆಯೋಧ್ಯ ಫ್ರೆಂಡ್ಸ್ ವತಿಯಿಂದ ಪುಸ್ತಕ ವಿತರಿಸಲಾಯಿತು. ಪ್ರಮುಖರಾದ ಗಂಗಾಧರ್ ಪೂಜಾರಿ, ಕುಶಾಲ್ ಕುಮಾರ್, ಗಣೇಶ್ ಕುಮಾರ್, ಶಾಲಾಭಿವೃದ್ಧಿ ಸಮಿತಿಯ ಪದಾಧಿಕಾರಿಗಳು, ಶಾಲಾ ಮುಖ್ಯ ಶಿಕ್ಷಕಿ ಜಯಲಕ್ಷ್ಮಿ ಎ, ಸಹ ಶಿಕ್ಷಕಿ ವಸಂತ ಶ್ರೀ, ಶಿಕ್ಷಕಿ ಸುಭಾಷಿಣಿ, ಸತೀಶ್ ಪೂಜಾರಿ, ಪ್ರಶಾಂತ್ ಗೌಡ, ಹಿಮಕರ, ಹರ್ಷಿತ್, ಕುಶಾಲ್ ಕುಮಾರ್ ಸಪಲಿಗ ದೇವದವು, ಶೈಲೇಶ್, ಕಿಶೋರ್, ಪೋಷಕರು ಮತ್ತಿತರರಿದ್ದರು.

ಬಿಜೈ: ಯೋಗ ತರಬೇತಿ ತರಗತಿ



ಮಂಗಳೂರು: ಪತಂಜಲಿ ಯೋಗ ಸಮಿತಿ ಭಾರತ್ ಸ್ವಾಭಿಮಾನ್ ಟ್ರಸ್ಟಿನ ಜಿಲ್ಲಾಧ್ಯಕ್ಷ ಯೋಗ ಗುರು ಡಾ.ಎಂ. ಜಗದೀಶ್ ಶೆಟ್ಟಿ ಬಿಜೈ ಅವರು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಬಿಜೈ ಕಾಪಿಕಾಡ್ ಹಿರಿಯ ಪ್ರಾಥಮಿಕ ಶಾಲೆ ಮಂಗಳೂರು ಇಲ್ಲಿ ಮಕ್ಕಳಿಗೆ ಯೋಗ ತರಗತಿಯನ್ನು ಜಿಲ್ಲಾಡಳಿತ, ಜಿ.ಪಂ., ಆಯುಷ್ ಇಲಾಖೆ ದ.ಕ. ಜಿಲ್ಲೆ ಆಯುಷ್ ವಿಭಾಗ, ಜಿಲ್ಲಾ ವೆನ್ಲಾಕ್ ಆಸ್ಪತ್ರೆ ಮಂಗಳೂರು ಇವರ ಸಹಯೋಗದೊಂದಿಗೆ ನಡೆಸಿದರು.

ಜಿಲ್ಲಾ ವೆನ್ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಪ್ರಕಾಶ್ ಎ.ಜೆ., ಯೋಗ ಗುರು ಡಾ. ಎಂ ಜಗದೀಶ್ ಶೆಟ್ಟಿ ಅವರು ಯೋಗದ ಮಹತ್ವ ಹಾಗೂ ಪ್ರಯೋಜನದ ಬಗ್ಗೆ ತಿಳಿಸಿದರು. ಈ ಸಂದರ್ಭ ಸಹಶಿಕ್ಷಕಿ ಭಾರತಿ ಶೆಟ್ಟಿ ಶಾಲೆಯ ಮುಖ್ಯ ಶಿಕ್ಷಕಿ ಶೀಲಾವತಿ ಶೆಟ್ಟಿ ಹಿರಿಯ ಶಿಕ್ಷಕಿ ಸಿಲಿಯಾ ಅಪೋಲಿನ್, ಅತಿಥಿ ಶಿಕ್ಷಕಿ ಬಿಂದು ಆರ್, ಕಂಪ್ಯೂಟರ್ ಶಿಕ್ಷಕಿ ವೈಷ್ಣವಿ ಎಂ., ಗೌರವ ಶಿಕ್ಷಕಿ ಮತ್ತಿತರರಿದ್ದರು.

ಬಂಟ್ವಾಳ ತಾ.ಪಂ.ನಲ್ಲಿ ಆದಾಯ ತೆರಿಗೆ, ಘನತ್ಯಾಜ್ಯ ನಿರ್ವಹಣಾ ನಿಯಮ' ಕಾರ್ಯಾಗಾರ | ಇಒ ಸಚಿನ್‌ಕುಮಾರ್ ನಿರ್ದೇಶನ

ಗ್ರಾ.ಪಂ. ವ್ಯಾಪ್ತಿಯಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸದಂತೆ ಮುಂಜಾಗ್ರತೆ ವಹಿಸಿ

ಬಂಟ್ವಾಳ: ಆದಾಯ ತೆರಿಗೆ ಹಾಗೂ 'ಘನ ತ್ಯಾಜ್ಯ ನಿರ್ವಹಣಾ ನಿಯಮಗಳು' 2026 ಕುರಿತ ಪ್ರಗತಿ ಪರಿಶೀಲನೆ ಸಭೆ, ಕಾರ್ಯಾಗಾರ ಬಂಟ್ವಾಳ ತಾಲೂಕು ಪಂಚಾಯತ್ ಎಸ್‌ಜಿಎಸ್‌ವೈ ಸಭಾಂಗಣದಲ್ಲಿ ಬುಧವಾರ ನಡೆಯಿತು.

ಬಂಟ್ವಾಳ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಸಚಿನ್ ಕುಮಾರ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ನರೇಗಾ ಮಾನವ ದಿನಗಳ ಸೃಜನೆ ಗುರಿ, ನೋಂದಾಯಿತ ಕೂಲಿಕಾರರ ಇಕೆವೈಸಿ ಪ್ರಗತಿ, 'ನಮ್ಮ ಗ್ರಾಮ ನಮ್ಮ ಪರಂಪರೆ', ಎಫ್‌ಟಿಕೆ, ವಸತಿ ಯೋಜನೆಗಳು, ತೆರಿಗೆ ಸಂಗ್ರಹ ಹಾಗೂ ಎಸ್‌ಬಿಎಂ ವಿಷಯಗಳಿಗೆ ಸಂಬಂಧಿಸಿ ಅಧಿಕಾರಿಗಳಿಗೆ ಅಗತ್ಯ ಸಲಹೆ ನೀಡಲಾಯಿತು. ಮಳೆಗಾಲ ಆರಂಭವಾಗಿರುವುದರಿಂದ ಗ್ರಾ.ಪಂ. ವ್ಯಾಪ್ತಿಯಲ್ಲಿ ಪ್ರಾಕೃತಿಕ ವಿಕೋಪಗಳು ಸಂಭವಿಸದಂತೆ ಮುಂಜಾಗ್ರತೆ ವಹಿಸಬೇಕು. ಗುಡ್ಡ ಪ್ರದೇಶಗಳಲ್ಲಿ ಹಾಗೂ ಅವಘಡ ಸಂಭವಿಸುವ ಸಾಧ್ಯತೆ ಇರುವ ಸೂಕ್ಷ್ಮ ಪ್ರದೇಶಗಳಲ್ಲಿನ ಮನೆಗಳಿಗೆ ಮುಂಚಿತವಾಗಿಯೇ ಎಚ್ಚರಿಕೆ ವಹಿಸುವಂತೆ ಸೂಚಿಸಬೇಕು ಎಂದು ಇಒ ಸಚಿನ್ ಕುಮಾರ್ ಅಧಿಕಾರಿಗಳಿಗೆ ಈ ಸಂದರ್ಭ ಸೂಚನೆ ನೀಡಿದರು.



ಇದಕ್ಕೂ ಮುನ್ನ ಆದಾಯ ತೆರಿಗೆ ಕಾಯ್ದೆ 2025ರ ಅಡಿಯಲ್ಲಿ 'ಮೂಲದಲ್ಲಿ ತೆರಿಗೆ ಕಡಿತ' (ಟಿಡಿಎಸ್) ಕುರಿತು ವಿಶೇಷ ಕಾರ್ಯಾಗಾರ ನಡೆಸಲಾಯಿತು. ಮಂಗಳೂರು ವಾರ್ಡ್ 1ರ ಆದಾಯ ತೆರಿಗೆ ಅಧಿಕಾರಿ ಸುನಂದಾ ಆರ್. ಪ್ರಸಾದ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಟಿಡಿಎಸ್ ಸಲ್ಲಿಕೆ, ಟಿಡಿಎಸ್ ರಿಟರ್ನ್ ಹಾಗೂ ಹೊಸ ಸರಳ ನಿಯಮಗಳ ಕುರಿತು ಮಾಹಿತಿ ನೀಡಿದರು. ಆಧುನಿಕ ಡಿಜಿಟಲ್ ಪೋರ್ಟಲ್ ಮೂಲಕ ಸುಲಭವಾಗಿ ಟಿಡಿಎಸ್ ರಿಟರ್ನ್ಸ್ ಸಲ್ಲಿಸುವ ವಿಧಾನದ ಬಗ್ಗೆ ವಿವರಿಸಿದರು. ಇದೇ ವೇಳೆ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಹೊಸದಾಗಿ ಜಾರಿಗೆ ತಂದಿರುವ 'ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026' ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಮಾಹಿತಿ ನೀಡಲಾಯಿತು. ಎಸ್‌ಬಿಎಂ ಜಿಲ್ಲಾ ಸಮಾಲೋಚಕ ನವೀನ್ ಹಾಗೂ ಜಿಲ್ಲಾ ಐಇಸಿ ಸಂಯೋಜಕ ಡೊಂಬಯ್ಯ ಮಾಹಿತಿ ನೀಡಿ, ಈ ನಿಯಮಗಳು 2026ರ ಏ.1ರಿಂದ ಜಾರಿಗೆ ಬಂದಿವೆ. ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026ರನ್ವಯ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸಿ, ಮರುಬಳಕೆ ಮತ್ತು ವೈಜ್ಞಾನಿಕ ನಿರ್ವಹಣೆ ಮೂಲಕ ಸ್ವಚ್ಛ ಹಾಗೂ ಆರೋಗ್ಯಕರ ಭಾರತ ನಿರ್ಮಿಸುವುದಾಗಿದೆ ಎಂದರು. ತಾ.ಪಂ. ವ್ಯವಸ್ಥಾಪಕ ಪ್ರಕಾಶ್ ಪಿ., ಹಿರಿಯ ಸಹಾಯಕ ನಿರ್ದೇಶಕ ಪ್ರದೀಪ್ ಡಿಸೋಜ, ಸಹಾಯಕ ನಿರ್ದೇಶಕ ವಿಶ್ವನಾಥ್ ಬಿ, ವಿಜಯ್‌ಶಂಕರ್ ಆಳ್ವ ಆದಾಯ ತೆರಿಗೆ ಇಲಾಖೆಯ ಅಧಿಕಾರಿ ಚಂದ್ರಮೋಹನ್, ರಾಹುಲ್, ಗ್ರಾ.ಪಂ. ಪಿಡಿಒಗಳು ತಾ.ಪಂ. ವಿಷಯ ನಿರ್ವಾಹಕರು, ನರೇಗಾ ಸಿಬ್ಬಂದಿ ಹಾಜರಿದ್ದರು.

ಸುತ್ತ ಮುತ್ತ

ಇಂದು ಜನಗಣತಿ ರಸಪ್ರಶ್ನೆ ಸ್ಪರ್ಧೆ

ಕಾಸರಗೋಡು: ಜನಗಣತಿ ಅಂಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಮಾಹಿತಿ ಕಚೇರಿ ಜಂಟಿಯಾಗಿ ಕಾಸರಗೋಡು ಜಿಲ್ಲೆಯಲ್ಲಿ ಸರಕಾರಿ ನೌಕರರಿಗಾಗಿ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಲಿದ್ದಾರೆ. ಸ್ಪರ್ಧೆಯು ಜೂ.12ರಂದು ಬೆಳಗ್ಗೆ 11 ಗಂಟೆಗೆ ವಿದ್ಯಾನಗರ ಕಲೆಕ್ಟರೇಟ್ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ 04994 255 145 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಮಿತಿ ಸಭೆ ಮುಂದೂಡಿಕೆ

ಕಾಸರಗೋಡು: ಜೂ.12ರಂದು ನಡೆಯಬೇಕಿದ್ದ ವೆಳ್ಳರಿಕುಂಡು ತಾಲೂಕು ಅಭಿವೃದ್ಧಿ ಸಮಿತಿ ಸಭೆಯನ್ನು ಮುಂದೂಡಲಾಗಿದ್ದು, ಜೂ.20ರಂದು ಬೆಳಗ್ಗೆ 10.30ಕ್ಕೆ ನಿಗದಿಪಡಿಸಲಾಗಿದೆ ಎಂದು ತಾಲೂಕು ಆಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ನೀರ್ಚಾಲು ವ್ಯಾಪಾರಿ ಘಟಕದ ಮಹಾಸಭೆ

ಬದಿಯಡ್ಕ: ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿ ನೀರ್ಚಾಲು ಯೂನಿಟ್ ಇದರ ದ್ವೈ ವಾರ್ಷಿಕ ಮಹಾಸಭೆಯು ನೀರ್ಚಾಲು ವ್ಯಾಪಾರ ಭವನದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಯೂನಿಟ್ ಅಧ್ಯಕ್ಷ ಸುಬ್ರಹ್ಮಣ್ಯ ಎಂ.ಭಟ್ ವಹಿಸಿದ್ದರು. ಜಿಲ್ಲಾಧ್ಯಕ್ಷ ಅಹಮ್ಮದ್ ಶರೀಫ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಜೆ. ಸಜಿ, ಜಿಲ್ಲಾ ಕಾರ್ಯದರ್ಶಿ ದಾಮೋದರನ್ ಕುತ್ತಿಕೋಲು, ಬದಿಯಡ್ಕ ವಲಯ ಸಂಚಾಲಕ ಕುಂಜಾರು ಮೊಹಮ್ಮದ್ ಮುಂತಾದವರು ಭಾಗವಹಿಸಿದ್ದರು.





2026–28ನೇ ವರ್ಷಕ್ಕೆ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಸುಬ್ರಹ್ಮಣ್ಯ ಭಟ್ ಎಂ., ಪ್ರಧಾನ ಕಾರ್ಯದರ್ಶಿಯಾಗಿ ರವಿ ನೀರ್ಚಾಲು, ಕೋಶಾಧಿಕಾರಿಯಾಗಿ ಥೋಮಸ್ ಡಿಸೋಜ ಅವರನ್ನು ಆಯ್ಕೆ ಮಾಡಲಾಯಿತು. ಮಹೇಶ್ ವಳಕ್ಕುಂಜ ಸ್ವಾಗತಿಸಿ, ವಂದಿಸಿದರು.

ಪೆರ್ಲದಲ್ಲಿ ಜೂ.14ರಿಂದ ಉಚಿತ ಯೋಗ ಶಿಬಿರ

ಪೆರ್ಲ: ಮಹಿಳೆಯರ ಆರೋಗ್ಯ, ದೈಹಿಕ ಸದೃಢತೆ ಹಾಗೂ ಜೀವನಶೈಲಿ ಸಂಬಂಧಿತ ಕಾಯಿಲೆಗಳನ್ನು ತಡೆಗಟ್ಟುವ ಉದ್ದೇಶದಿಂದ ಜೂ.14ರಿಂದ 20ರ ವರೆಗೆ ಪೆರ್ಲ ಶ್ರೀ ಭಾರತಿ ಸದನದಲ್ಲಿ ಉಚಿತ ಶಕ್ತಿ ಯೋಗ ಶಿಬಿರವನ್ನು ಆಯೋಜಿಸಲಾಗಿದೆ. ಪ್ರತಿದಿನ ಸಂಜೆ 4.30ರಿಂದ 6 ಗಂಟೆಯ ವರೆಗೆ ನಡೆಯಲಿರುವ ಈ ವಿಶೇಷ ಶಿಬಿರದಲ್ಲಿ ಸ್ನಾಯು ಮತ್ತು ಮೂಳೆಗಳ ಬಲವರ್ಧನೆ, ಕೀಲುಗಳ ಆರೋಗ್ಯ, ಸಮತೋಲನ ತರಬೇತಿ, ಮೆನೋಪಾಸ್ ಆರೋಗ್ಯ ಹಾಗೂ ಆರೋಗ್ಯಕರ ಆಹಾರ ಪದ್ಧತಿ ಕುರಿತು ಮಾರ್ಗದರ್ಶನ ನೀಡಲಾಗುವುದು. ಯೋಗಾಭ್ಯಾಸದ ಜೊತೆಗೆ ಪ್ರತಿದಿನ ಆರೋಗ್ಯ ಜಾಗೃತಿ ಉಪನ್ಯಾಸಗಳು ಹಾಗೂ ಪ್ರಾಯೋಗಿಕ ತರಬೇತಿಗಳು ನಡೆಯಲಿದ್ದು, ಯೋಗ ತರಬೇತಿ ಅವಧಿಯಲ್ಲಿ ಡಾ.ಪಲ್ಲವಿ ಸಹ ತರಬೇತುದಾರರಾಗಿ ಭಾಗವಹಿಸಿ ಮಾರ್ಗದರ್ಶನ ನೀಡಲಿದ್ದಾರೆ. ಶಿಬಿರದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ, ಆಸಕ್ತ ಮಹಿಳೆಯರು ಹೆಚ್ಚಿನ ಮಾಹಿತಿಗಾಗಿ ಡಾ.ಸಪ್ನಾ ಜೆ. (ಉಕ್ಕಿನಡ್ಕಾಸ್ ಆಯುರ್ವೇದ) 9645443993 ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಐಲ ತರುಣ ಕಲಾವೃಂದದ ಪದಾಧಿಕಾರಿಗಳ ಆಯ್ಕೆ

ಉಪ್ಪಳ: ಐಲ ತರುಣ ಕಲಾವೃಂದದ ವಾರ್ಷಿಕ ಮಹಾಸಭೆಯು ಸಂಘದ ಕಾರ್ಯಾಲಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಲಾವೃಂದದ ಅಧ್ಯಕ್ಷ ಮೋಹನದಾಸ್ ಐಲ ವಹಿಸಿದ್ದರು.

ಕಲಾವೃಂದದ ಪ್ರಧಾನ ಕಾರ್ಯದರ್ಶಿ ಉದಯ್ ಕುಮಾರ್ ಐಲ ಲೆಕ್ಕಪತ್ರ ಮಂಡಿಸಿದರು. ಸಭೆಯಲ್ಲಿ ಮುಂದಿನ ಸಮಾಜಮುಖಿ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಇದೇ ವೇಳೆ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಸಮಿತಿಯ ಗೌರವಾಧ್ಯಕ್ಷರಾಗಿ ಬಿ.ಪಿ.ಆಚಾರ್ಯ ಬತ್ತೇರಿ, ಗೌರವ ಸಲಹೆಗಾರರಾಗಿ ರಾಜೀವ್ ಕೈಕಂಬ, ಅಧ್ಯಕ್ಷರಾಗಿ ಮೋಹನದಾಸ್ ಐಲ, ಉಪಾಧ್ಯಕ್ಷರಾಗಿ ಚಂದ್ರರಾಜ್ ಐಲ, ಮೃತ್ಯುಂಜಯ ಐಲ, ಪ್ರಧಾನ ಕಾರ್ಯದರ್ಶಿಯಾಗಿ ಉದಯಕುಮಾರ್ ಐಲ, ಜೊತೆ ಕಾರ್ಯದರ್ಶಿಗಳಾಗಿ ಕಿಶೋರ್ ಗುರಿಕಾರ ಬೇರಿಕೆ, ದೀಪಕ್ ಬತ್ತೇರಿ, ಕೋಶಾಧಿಕಾರಿಯಾಗಿ ಚಿನ್ನಾ ಐಲ, ಕಾರ್ಯಕಾರಿ ಸದಸ್ಯರಾಗಿ ದಯಾನಂದ ಐಲ, ಸುರೇಶ ಐಲ, ಕಮಲಾಕ್ಷ ಐಲ, ಬಾಲಕೃಷ್ಣ ಐಲ, ರವಿಕುಮಾರ್ ಮಯ್ಯ ಐಲ, ನಿಖಿಲ್ ಐಲ ಅವರನ್ನು ಆಯ್ಕೆ ಮಾಡಲಾಯಿತು.

ಅಪಾಯಕಾರಿ ಮರಗಳ ತೆರವಿಗೆ ಸೂಚನೆ

ಕಾಸರಗೋಡು: ಚೆಮ್ನಾಡು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಖಾಸಗಿ ಭೂಮಿಯಲ್ಲಿರುವ ಅಪಾಯಕಾರಿ ಮರಗಳನ್ನು ತಮ್ಮ ಸ್ವಂತ ವೆಚ್ಚ ಮತ್ತು ಜವಾಬ್ದಾರಿಯ ಮೇರೆಗೆ ಕಡಿದು ತೆರವುಗೊಳಿಸಬೇಕು ಎಂದು ಚೆಮ್ನಾಡು ಗ್ರಾಮ ಪಂಚಾಯತ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ನಮಸ್ತೆ ಕಲೆಕ್ಟರ್’ ಕಾರ್ಯಕ್ರಮದಲ್ಲಿ ಅರ್ಜುನ್ ಪಾಂಡ್ಯನ್‌ಗೆ ಶಾಲಾ ಮಕ್ಕಳಿಂದ ಮನವಿ

ಧಾರಾಕಾರ ಮಳೆ ಸುರಿದಾಗ ರಜೆ ಕೊಡಿ ಸಾರ್ ಪ್ಲೀಸ್...!

ಕಾಸರಗೋಡು: ಕಾಸರಗೋಡು ಜಿಲ್ಲಾಡಳಿತದಿಂದ ಹಮ್ಮಿಕೊಂಡಿರುವ ‘ನಮಸ್ತೆ ಕಲೆಕ್ಟರ್’ ಎಂಬ ವಿಶೇಷ ಕಾರ್ಯಕ್ರಮದಲ್ಲಿ ಈ ಬಾರಿ ತಚ್ಚಂಗಾಡು ಸರಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ಭಾಗವಹಿಸಿದರು. ಸಮಸ್ಯೆಗಳ ಬಗ್ಗೆ ದೂರುಗಳನ್ನು ಸಲ್ಲಿಸಿ, ಜಿಲ್ಲಾಡಳಿತದ ವ್ಯವಸ್ಥೆಗಳ ಕುರಿತು ಅನೇಕ ಮಾಹಿತಿ, ಯೋಜನೆಗಳ ಬಗ್ಗೆ ವಿಷಯಗಳನ್ನು ತಿಳಿದುಕೊಂಡರು.

ತಚ್ಚಂಗಾಡು ಜಿಎಚ್‌ಎಸ್‌ನ ಮಕ್ಕಳು ಜಿಲ್ಲಾಧಿಕಾರಿಯ ಭೇಟಿ ಸಂದರ್ಭ ಅನೇಕ ಪ್ರಶ್ನೆಗಳನ್ನು ಸಿದ್ಧಪಡಿಸಿದ್ದರು. ಆದರೆ ಜಿಲ್ಲಾಧಿಕಾರಿಗಳ ಸ್ನೇಹಪರ ಹಾಗೂ ಸೌಮ್ಯ ಸ್ವಭಾವವನ್ನು ಪ್ರತ್ಯಕ್ಷವಾಗಿ ಕಂಡುಕೊಂಡ ವಿದ್ಯಾರ್ಥಿಗಳು ಅವರೊಂದಿಗೆ ಆತ್ಮೀಯ ಸಂಬಂಧಕ್ಕೆ ಹೆಚ್ಚು ಆದ್ಯತೆ ನೀಡಿರುವುದು ಕಂಡುಬಂತು. ಅಲ್ಲದೇ ಮಕ್ಕಳು ಡಿಸಿಯೊಂದಿಗೆ ಮುಕ್ತವಾಗಿ ಸಂವಾದ ನಡೆಸಿ, ಸಂತಸಗೊಂಡರು.

ಇದೇ ವೇಳೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರಿಗೆ ಶಾಲಾ ವಿದ್ಯಾರ್ಥಿಗಳು ‘ಈ ಹಿಂದೆ ನೀವು ಕರ್ತವ್ಯ ನಿರ್ವಹಿಸಿದ್ದ ತ್ರಿಶೂರು ಹಾಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಾಸರಗೋಡು ಜಿಲ್ಲೆಯಲ್ಲಿ ಯಾವ ಜಿಲ್ಲೆಯಲ್ಲಿ ಆಯ್ಕೆ ಮಾಡಲು ಬಯಸುವಿರಿ’ ಎಂದು ಮಕ್ಕಳು ಮುಗ್ಧತೆಯಿಂದ ಪ್ರಶ್ನೆ ಮಾಡಿದರು. ಇದಕ್ಕೆ ಜಿಲ್ಲಾಧಿಕಾರಿಗಳು ಅವರು ಮುಗುಳ್ನಗೆಯಿಂದ ಉತ್ತರಿಸಿ, ಗಮನ ಸೆಳೆದರು.



ಏನಿದು ‘ನಮಸ್ತೆ ಕಲೆಕ್ಟರ್’?

ಕಾಸರಗೋಡು ಜಿಲ್ಲಾಡಳಿತ ಮತ್ತು ಜಿಲ್ಲೆಯ ಸರ್ಕಾರಿ ಶಾಲೆಯ ಮಕ್ಕಳ ನಡುವಿನ ಸಂವಾದ ಹಾಗೂ ಭೇಟಿಯ ಕಾರ್ಯಕ್ರಮವೇ ‘ನಮಸ್ತೆ ಕಲೆಕ್ಟರ್’ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಪ್ರಾರಂಭಿಸಿದ ಮಹತ್ತರ ಯೋಜನೆಗಳಲ್ಲಿ ಇದು ಒಂದಾಗಿದೆ.

ನಾನು ಡಿಸಿ ಆದರೆ ರಜೆ ನೀಡುವೆ!

ಧಾರಾಕಾರವಾಗಿ ಮಳೆ ಸುರಿದರೆ ಒಂದು ದಿನ ರಜೆ ನೀಡಬೇಕೆಂಬುದು ಡಿಸಿಗೆ ಶಾಲಾ ವಿದ್ಯಾರ್ಥಿಗಳ ಮೊದಲ ಬೇಡಿಕೆಯಾಗಿತ್ತು. ಇದೇ ವೇಳೆ ನಾಲ್ಕನೇ ತರಗತಿ ವಿದ್ಯಾರ್ಥಿ ಆದವ್ ಆಶೋಕ್ ಮಾತನಾಡಿ, ತಾನು ಕಲೆಕ್ಟರ್ ಆಗಬೇಕೆಂದು ಬಯಸಿದ್ದು ಒಂದು ವೇಳೆ ಕಲೆಕ್ಟರ್ ಆದರೆ ತನ್ನ ಜಿಲ್ಲೆಯ ಮಕ್ಕಳಿಗೆ ಬೇಕಾದಂತೆ ರಜೆ ನೀಡಬಹುದು ಎಂದು ತಿಳಿಸಿದಾಗ ಕಲೆಕ್ಟರ್ ಸೇರಿದಂತೆ ನೆರೆದಿದ್ದವರನ್ನು ನಗೆಗಡಲಲ್ಲಿ ತೇಲಿಸುವಂತಾಯಿತು. ಇದೇ ವೇಳೆ ಕಲೆಕ್ಟರ್‌ನ ಬಾಲ್ಯದ ಶಿಕ್ಷಣವು ನಾಗರಿಕ ಸೇವೆಗೆ ಸೇರಲು ಅವರಿಗೆ ಹೇಗೆ ಸಹಾಯ ಮಾಡಿತು, ಈಗ ಓದಲು ಸಮಯ ಸಿಗುತ್ತದೆಯೇ, ಅವರು ಮೊದಲು ಉದ್ಯೋಗಕ್ಕೆ ಸೇರಿದಾಗ ಮನಸ್ಸಿನಲ್ಲಿ ಏನಿತ್ತು ಮೊದಲಾದ ಮಕ್ಕಳ ಪ್ರಶ್ನೆಗಳಿಗೆ ಜಿಲ್ಲಾಧಿಕಾರಿಗಳು ನಯವಾಗಿ ಹಾಗೂ ಸಮರ್ಥವಾಗಿ ಉತ್ತರಿಸಿದರು.

ನನಗೆ ಎರಡು ಜಿಲ್ಲೆಯೂ ಇಷ್ಟ!

‘ತಾವು ತ್ರಿಶೂರು ಜಿಲ್ಲಾಧಿಕಾರಿ ಅಥವಾ ಕಾಸರಗೋಡು ಜಿಲ್ಲಾಧಿಕಾರಿ ಇವುಗಳಲ್ಲಿ ಯಾವುದನ್ನು ಹೆಚ್ಚು ಇಷ್ಟಪಡುತ್ತಿದ್ದೀರಿ’ ಎಂದು ವಿದ್ಯಾರ್ಥಿಗಳು ಕೇಳಿದಾಗ ಜಿಲ್ಲಾಧಿಕಾರಿಗಳು, ತಾನು ಕೆಲಸಕ್ಕೆ ಹೆಚ್ಚು ಆದ್ಯತೆ ನೀಡುತ್ತೇನೆ. ಎಲ್ಲಾ ಹುದ್ದೆಯನ್ನೂ ಸಮಾನವಾಗಿ ಇಷ್ಟಪಡುವುದಾಗಿ ತಿಳಿಸಿದರು. ಕಾಸರಗೋಡು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಜಿಲ್ಲೆಯಲ್ಲಿ ಪ್ರಾಕೃತಿಕ ಸಂಪತ್ತು ಹೇರಳ ರೂಪದಲ್ಲಿದೆ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳ ಪ್ರಗತಿಗೆ ವಿಶೇಷ ಆದ್ಯತೆ ನೀಡಿ ಮೂಲಸೌಕರ್ಯ ಅಭಿವೃದ್ಧಿಪಡಿಸಬೇಕಾಗಿದೆ. ಜೊತೆಗೆ ಪ್ರವಾಸೋದ್ಯಮ ವಿಭಾಗದ ಸಮಗ್ರ ಪುನರುದ್ಧಾರಕ್ಕೆ ರೂಪರೇಷೆ ತಯಾರಿಸಲಾಗಿದೆ ಎಂದು ಡಿಸಿ ಮಕ್ಕಳಿಗೆ ತಿಳಿಸಿದರು.

ಡಿಸಿಗೆ ಭಾವಚಿತ್ರ ಹಸ್ತಾಂತರ



ಕಳೆದ ವರ್ಷ ‘ಉಜ್ವಲ ಬಾಲಯಂ’ ಪ್ರಶಸ್ತಿ ವಿಜೇತೆ, ವಿದ್ಯಾರ್ಥಿನಿ ಇಶಾನಾ ಅವರು ಡಿಸಿ ಅವರಿಗೆ ತನ್ನ ಕೈಯಾರೆ ಬಿಡಿಸಿದ ಭಾವಚಿತ್ರವನ್ನು ಹಸ್ತಾಂತರಿಸಿದಳು. ಇದೇ ಸಂದರ್ಭ ಎಲ್ಲಾ ಮಕ್ಕಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ತಚ್ಚಂಗಾಡು ಜಿಎಚ್ ಎಸ್‌ನ ಸುಮಾರು 20 ಮಂದಿ ಮಕ್ಕಳು ಮತ್ತು 4 ಮಂದಿ ಶಿಕ್ಷಕರು ‘ನಮಸ್ತೆ ಕಲೆಕ್ಟರ್’ನಲ್ಲಿ ಪಾಲ್ಗೊಂಡಿದ್ದರು. ಶಿಕ್ಷಕ ಟಿ.ಮಧುಸೂದನನ್, ಕೆ.ವಿ.ಸೌಮ್ಯಾ, ಕೆ. ಪ್ರೇಮಚಂದ್ರನ್, ಎಚ್.ಶಬ್ನಾ ಹಾಜರಿದ್ದರು.

ಶಾಲಾ ಮುಂಭಾಗ ಜೀಬ್ರಾ ಲೈನ್ ಇಲ್ಲ!

ಶಾಲೆಯ ಮುಂಭಾಗದ ರಸ್ತೆಯಲ್ಲಿ ಜೀಬ್ರಾ ಲೈನ್ ಮತ್ತು ವಿಭಜಕದ ಕೊರತೆ ಬಗ್ಗೆ ಮಕ್ಕಳು ಹೇಳಿದಾಗ, ಮಳೆಗಾಲದಲ್ಲಿ ಜೀಬ್ರಾ ಲೈನ್ ಎಳೆಯುವ ಕೆಲಸವನ್ನು ಅಧಿಕಾರಿಗಳಿಗೆ ವಹಿಸ ಲಾಗುವುದು ಎಂದು ಡಿಸಿ ಭರವಸೆ ನೀಡಿದರು. ತಚ್ಚಂಗಾಡು ಸರಕಾರಿ ಪ್ರೌಢಶಾಲಾ ಕಟ್ಟಡವನ್ನು ಸುವ್ಯವಸ್ಥಿತಗೊಳಿಸಬೇಕೆಂದು ಮಕ್ಕಳು ಒತ್ತಾಯಿಸಿದರು. ಕಟ್ಟಡ ನಿರ್ಮಾಣದ ಕ್ರಮಗಳನ್ನು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನಲ್ಲಿ ಸೇರಿಸಲಾಗುವುದು. ಹಾಗೂ ಚಟ್ಟೆ ಧಾಮ ಮತ್ತು ಪ್ರಕೃತಿ ಉದ್ಯಾನವನದ ಬೇಡಿಕೆಯೂ ಪರಿಗಣನೆಯಲ್ಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು. 4ನೇ ತರಗತಿ ವಿದ್ಯಾರ್ಥಿ ನೈತಿಕ್ ಬಾಬುರಾಜ್ ಸ್ಮಾರ್ಟ್ ತರಗತಿ ಕೊಠಡಿಯ ಬೇಡಿಕೆ ಸಲ್ಲಿಸಿದರು. ಈ ಬೇಡಿಕೆಗೆ ಡಿಸಿ ಪೂರಕವಾಗಿ ಸ್ಪಂದಿಸಿದರು. ಇದೇ ಸಂದರ್ಭ ಮಕ್ಕಳಿಗೆ ತಮ್ಮ ಬಾಲ್ಯದ ಬಗ್ಗೆ ತಿಳಿಸಿದ ಜಿಲ್ಲಾಧಿಕಾರಿಗಳು, ಜೀವನದ ಸವಾಲು ಹಾಗೂ ಮೊಬೈಲ್ ವ್ಯಸನ ಬಗ್ಗೆ ಸೂಕ್ಷ್ಮವಾಗಿ ವಿವರಿಸಿದರು.

ಜನಗಣತಿ 2027: ಕಾಸರಗೋಡು ತಾಲೂಕಿನ ಸಿಬ್ಬಂದಿಗಳಿಗೆ ತರಬೇತಿ



ಕಾಸರಗೋಡು: ಭಾರತ ಜನಗಣತಿ 2027ಕ್ಕೆ ಸಂಬಂಧಿಸಿದಂತೆ ಕಾಸರಗೋಡು ತಾಲೂಕಿನ ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಯಿತು.

ತರಬೇತಿ ಕಾರ್ಯಕ್ರಮದ ಅಂಗವಾಗಿ ಕಾಸರಗೋಡು ಜಿಲ್ಲೆಯ ತರಬೇತುದಾರರು ಮತ್ತು ಅಧಿಕಾರಿಗಳಾದ ರಾಜ್‌ಕುಮಾರ್ ಮತ್ತು ಜಶಾ ಅವರು ಸಿಬ್ಬಂದಿಗಳಿಗೆ ತರಬೇತಿ ನೀಡಿ ಮೌಲ್ಯಮಾಪನ ನಡೆಸಿದರು. ಈ ಸಂದರ್ಭ ಗಣತಿಗೆ ಡಿಜಿಟಲ್ ತಂತ್ರಜ್ಞಾನ ಬಳಸುವಿಕೆ ಬಗ್ಗೆ ಮಾಹಿತಿ ನೀಡಿದರು. ಬಳಿಕ ಆಗತ್ಯದ ಸಲಹೆಗಳನ್ನು ನೀಡಿದರು. ತರಬೇತಿ ಪಡೆಯುವ ಗಣತಿದಾರರು ಮತ್ತು ಮೇಲ್ವಿಚಾರಕರು ಜನಗಣತಿ ಕಾರ್ಯದ ಸಂದರ್ಭ ನಿಖರವಾಗಿ ಮತ್ತು ಸಮಯೋಚಿತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಅಧಿಕಾರಿಗಳು ಸಲಹೆ ನೀಡಿದರು. ನಿಗದಿ ಮಾಡಿದಂತೆ ಪಾಲಿಸುವ ಮೂಲಕ ತರಬೇತಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲಾಗುತ್ತಿದೆ ಎಂದರು. ಇದೇ ಸಂದರ್ಭ ತರಬೇತಿ ತಂಡ ಹಾಗೂ ಸಿಬ್ಬಂದಿಗಳನ್ನು ಅಭಿನಂದಿಸಿದರು.

ಯುಡಿಎಫ್ ಜನರಿಗೆ ನೀಡಿದ್ದ ಭರವಸೆ ಈಡೇರಿಸಲು ವಿಫಲ: ಕೆ. ಸುರೇಂದ್ರನ್

ಕಾಸರಗೋಡು: ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುವಾಗಲೂ ಜನರಿಗೆ ವಂಚಿಸುವುದೇ ಕಾಂಗ್ರೆಸ್ ಧೋರಣೆ ಎಂದು ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ.ಸುರೇಂದ್ರನ್ ಆರೋಪಿಸಿದ್ದಾರೆ.



ಪೊಳ್ಳು ಭರವಸೆ ನೀಡಿ ಚುನಾವಣೆಗಳಲ್ಲಿ ಜಯಗಳಿಸುವುದು, ನಂತರ ಅವುಗಳನ್ನು ಪಾಲಿಸದೆ ಜನರನ್ನು ವಂಚಿಸುವುದು ಕಾಂಗ್ರೆಸ್‌ನ ಡಿಎನ್‌ಎ ಆಗಿದೆಯೆಂದೂ ಅವರು ದೂರಿದ್ದಾರೆ. ತಿರುವನಂತಪುರದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ ಅವರು ಈ ವಿಷಯ ತಿಳಿಸಿದರು. ಕೇರಳದಲ್ಲೂ ಅಧಿಕಾರಕ್ಕೇರಿದ ಯುಡಿಎಫ್ ಸರಕಾರವು ಜನರಿಗೆ ವಂಚಿಸುವ ಸರಕಾರವಾಗಿ ಬದಲಾಗಿದೆ. ರಾಜ್ಯದ ಎಲ್ಲಾ ಮಹಿಳೆಯರಿಗೂ ಕೆಎಸ್ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಎಂದು ಘೋಷಿಸಿ ಯುಡಿಎಫ್ ಅಧಿಕಾರಕ್ಕೆ ಬಂದಿದೆ. ಆದರೆ ಈಗ ಆಡಿನ ಬಸ್‌ಗಳಲ್ಲಿ ಮಾತ್ರ 100 ದಿನ ಪ್ರಯೋಗಾರ್ಥ ಉಚಿತ ಪ್ರಯಾಣ ಸೌಲಭ್ಯ ಏರ್ಪಡಿಸಲು ತೀರ್ಮಾನಿಸಲಾಗಿದೆ ಎಂದು ಕೆ.ಸುರೇಂದ್ರನ್ ಉಲ್ಲೇಖಿಸಿದರು.

ಎಲ್ಲಾ ವಿಷಯಗಳಲ್ಲೂ ಇದೇ ರೀತಿಯ ನಿಲುವನ್ನು ಯುಡಿಎಫ್ ಸರಕಾರವು ಅನುಸರಿಸುತ್ತಿದೆ. ಯುಡಿಎಫ್ ಅಧಿಕಾರಕ್ಕೇರಲು ಅತೀ ಹೆಚ್ಚು ಸಹಾಯಕವಾದ ವಿಷಯ ಶಬರಿಮಲೆ ಕ್ಷೇತ್ರದ ಚಿನ್ನ ಕಳವು ಪ್ರಕರಣವಾಗಿದೆ. ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಯುಡಿಎಫ್ ಒಕ್ಕೂಟವು ಅಂದು ನಡೆಸಿದ ಸೆಕ್ರೆಟರಿಯೇಟ್ ಧರಣಿಯನ್ನು ಉದ್ಘಾಟಿಸಿದ ವಿ.ಡಿ.ಸತೀಶನ್ ಅವರು ಯುಡಿಎಫ್ ಅಧಿಕಾರಕ್ಕೇರಿದರೆ ಈ ಪ್ರಕರಣದ ತನಿಖೆಯನ್ನು ಕೇಂದ್ರ ಏಜೆನ್ಸಿಗಳಿಗೆ ವಹಿಸಿ ಕೊಡುವುದಾಗಿಯೂ ಆ ಮೂಲಕ ಎಲ್ಲಾ ಆರೋಪಿಗಳನ್ನೂ ಕಾನೂನಿನ ಮುಂದೆ ಹಾಜರುಪಡಿಸುವುದಾಗಿ ತಿಳಿಸಿದ್ದರು. ಆದರೆ ಇದುವರೆಗೆ ನಡೆದ ಮೂರು ಸಚಿವ ಸಂಪುಟ ಸಭೆಗಳಲ್ಲಿ ಈ ವಿಷಯದಲ್ಲಿ ಯಾವುದೇ ಚರ್ಚೆ ನಡೆದಿಲ್ಲ. ಅದೇ ರೀತಿ ಶಬರಿಮಲೆಗೆ ಯುವತಿಯರ ಪ್ರವೇಶದ ವಿರುದ್ಧ ನಡೆಸಿದ ಚಳವಳಿಯಲ್ಲಿ ಪಾಲ್ಗೊಂಡವರ ಮೇಲೆ ಹೊರಿಸಲಾದ ಎಲ್ಲಾ ಕೇಸುಗಳನ್ನೂ ಹಿಂತೆಗೆಯುವುದಾಗಿಯೂ ಯುಡಿಎಫ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ. ಅದಕ್ಕಿರುವ ಕ್ರಮಗಳನ್ನು ಸರಕಾರವು ಕೈಗೊಂಡಿಲ್ಲ. ಹೀಗೆ ಯುಡಿಎಫ್ ಭರವಸೆ ಉಲ್ಲಂಘನೆಗಳ ವಿರುದ್ಧ ಮುಂದಿನ ದಿನಗಳಲ್ಲಿ ಬಿಜೆಪಿ ನೇತೃತ್ವದಲ್ಲಿ ಪ್ರಬಲ ಜನಪರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸುರೇಂದ್ರನ್ ಮಾಹಿತಿ ನೀಡಿದ್ದಾರೆ.

ಬಾಲಗೋಕುಲ ರಾಜ್ಯ ಸಮ್ಮೇಳನ: ತಾಲೂಕು ಸಮನ್ವಯ ಸಮಿತಿ ಸಭೆ



ಬದಿಯಡ್ಕ: ಬಾಲಗೋಕುಲ ಉತ್ತರ ಕೇರಳ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ಬದಿಯಡ್ಕ ತಾಲೂಕು ಸಮನ್ವಯ ಸಮಿತಿ ಸಭೆಯು ಬುಧವಾರ ಬದಿಯಡ್ಕ ಶ್ರೀ ಗಣೇಶ ಮಂದಿರದಲ್ಲಿ ಜರಗಿತು.

ಸಮಿತಿಯ ಕಾರ್ಯಾಧ್ಯಕ್ಷ, ನಿವೃತ್ತ ಪೊಲೀಸ್ ಅಧಿಕಾರಿ ಹರಿಶ್ಚಂದ್ರ ನಾಯ್ಕ್ ಮಾಹಿತಿ ನೀಡಿ ರಾಜ್ಯ ಸಮ್ಮೇಳನದ ಯಶಸ್ಸಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ನಮ್ಮ ಧಾರ್ಮಿಕ ಪರಂಪರೆಯ ಭದ್ರವಾದ ಅಡಿಪಾಯಕ್ಕೆ ಪಣತೊಡಬೇಕು ಎಂದರು.

ಸ್ವಾಗತ ಸಮಿತಿ ಅಧ್ಯಕ್ಷ ಸಿ.ವಿ. ಪೊದುವಾಳ್, ಜಿಲ್ಲಾಧ್ಯಕ್ಷ ದಿನೇಶ್ ಮಾಸ್ತರ್ ಕೆಡೆಂಜಿ, ಜಿಲ್ಲಾ ಕಾರ್ಯದರ್ಶಿ ರಾಜೇಂದ್ರ ಮವ್ವಾರು, ಜಿಲ್ಲಾ ಕೋಶಾಧಿಕಾರಿ ನಟರಾಜ ಕಲ್ಲಕಳಂಬಿ, ರಕ್ಷಾಧಿಕಾರಿ ಜಯರಾಮ ಚೆಟ್ಟಿಯಾರ್ ಬದಿಯಡ್ಕ ಉಪಸ್ಥಿತರಿದ್ದು ಮಾತನಾಡಿದರು. ತಾಲೂಕು ಅಧ್ಯಕ್ಷ ರಮೇಶ್ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಕಾರ್ಯದರ್ಶಿ ಪ್ರೇಮಲತಾ ಸ್ವಾಗತಿಸಿ, ತಾಲೂಕು ಸಮನ್ವಯ ಸಮಿತಿಯ ಸಂಚಾಲಕ ಗಣೇಶ್ ಬಿ. ವಂದಿಸಿದರು.



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರಕಾರವು ಇನ್ನಷ್ಟು ವರ್ಷ ಭಾರತವನ್ನು ಆಳುವಂತಾಗಲಿ ಎಂಬುದಾಗಿ ಉಪ್ಪಳ ಐಲ ಶ್ರೀ ದುರ್ಗಾಪರಮೇಶ್ವರಿ ಸನ್ನಿಧಿಯಲ್ಲಿ ವಿಶೇಷ ಪ್ರಾರ್ಥನೆಯನ್ನು ಸಾಮೂಹಿಕವಾಗಿ ಸಲ್ಲಿಸಲಾಯಿತು. ಬಿಜೆಪಿ ಪ್ರಮುಖರು ಇದ್ದರು.

ಸೌರಶಕ್ತಿ ಯೋಜನೆ, ಸೂರ್ಯ ಘರ್ ಯೋಜನೆಯ ಕುರಿತು ಕಾರ್ಯಾಗಾರ



ಕುಂಬಳೆ: ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ಹಾಗೂ ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮಂಗಳೂರು ಇವುಗಳ ಸಹಕಾರದಲ್ಲಿ ಸೌರಶಕ್ತಿ ಜೀವನೋಪಾಯ ಯೋಜನೆ ಹಾಗೂ ಸೂರ್ಯ ಘರ್ ಯೋಜನೆ ಬಗ್ಗೆ ಮಾಹಿತಿ ಕಾರ್ಯಕ್ರಮವು ನಾಯ್ಕಾಪು ಸಮೀಪದ ನಾರಾಯಣಮಂಗಲ ಶ್ರೀ ಗಣೇಶ ಮಂದಿರದಲ್ಲಿ ಜರಗಿತು.

ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮಂಗಳೂರು ಇದರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜ್ಯೋತಿರಾಜ್ ಕಾರ್ಯಕ್ರಮ ಉದ್ಘಾಟಿಸಿ, ಯೋಜನೆಯ ಪ್ರಯೋಜನ ಪಡೆಯುವಂತೆ ಕರೆ ನೀಡಿದರು. ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ಇದರ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಕೊಲ್ಯ ಪ್ರಾಸ್ತಾವಿಕ ಮಾತನಾಡಿ, ಕಾರ್ಯಕ್ರಮ ಆಯೋಜನೆ ಮತ್ತು ಉದ್ದೇಶದ ಬಗ್ಗೆ ತಿಳಿಸಿದರು. ಸೌರಶಕ್ತಿ ಆಧಾರಿತ ಮಾಹಿತಿ ಪಡೆದು ನಾವೆಲ್ಲರೂ ಸೌರಶಕ್ತಿ ಅಳವಡಿಸಬೇಕು. ಸರಕಾರದ ಯೋಜನೆಗಳ ಬಗ್ಗೆ ಮಾಹಿತಿ ಪಡೆದು ಮಹಿಳೆಯರು, ರೈತರು ಸೌರಶಕ್ತಿ ಜೀವನೋಪಾಯ ಯಂತ್ರಗಳ ಬಳಕೆ ಮಾಡಲು ಸಲಹೆಯಿತ್ತರು.

ಸಂಪನ್ಮೂಲ ವ್ಯಕ್ತಿಗಳಾದ ಸೆಲ್ಕೋ ಸಂಸ್ಥೆಯ ವ್ಯವಸ್ಥಾಪಕರಾದ ಸಂಚಿತ್ ರೈ, ಉದಯ್ ಅವರು ಸೌರಶಕ್ತಿ ಜೀವನೋಪಾಯ, ಸೂರ್ಯ ಘರ್ ಯೋಜನೆ ಬಗ್ಗೆ ಮಾಹಿತಿ ನೀಡಿದರು. ವನಿತಾ ಮಹಿಳಾ ಸಮಾಜದ ಅಧ್ಯಕ್ಷೆ ವಿಜಯಲಕ್ಷ್ಮಿ ಸೂರಂಬೈಲು ವಾರ್ಡ್ ಸದಸ್ಯೆ ಲಕ್ಷ್ಮಿಭಟ್, ಮಹಿಳಾ ಐಕ್ಯ ವೇದಿಕೆ ಅಧ್ಯಕ್ಷೆ ವಸಂತಿ, ಹೊಲಿಗೆ ತರಬೇತುದಾರೆ ವಿಜಯ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಶ್ವಿನಿ ಸ್ವಾಗತಿಸಿ, ಪ್ರತಿಮಾ ವಂದಿಸಿದರು. ಪೂರ್ಣಿಮಾ ಕಾರ್ಯಕ್ರಮ ನಿರೂಪಿಸಿದರು. ನಾಯ್ಕಾಪು ಸುತ್ತಮುತ್ತಲಿನ ರೈತರು, ಸ್ವ ಸಹಾಯ ಸಂಘದ ಸದಸ್ಯರು ಭಾಗವಹಿಸಿ ಮಾಹಿತಿ ಪಡೆದರು.

ನೆಟ್ಟಣಿಗೆ ಶಾಲೆಯಲ್ಲಿ ಪರಿಸರ ದಿನ



ಮುಳ್ಳೇರಿಯ: ಬೆಳ್ಳೂರು ಗ್ರಾಮ ಪಂಚಾಯತ್ ಮಟ್ಟದ ವಿಶ್ವ ಪರಿಸರ ದಿನವನ್ನು ಕೃಷಿ ಅಧಿಕಾರಿಗಳು, ಪಂಚಾಯತ್ ಜನಪ್ರತಿನಿಧಿಗಳ ಸಹಾಯ ಸಹಕಾರದೊಂದಿಗೆ ನೆಟ್ಟಣಿಗೆ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಗ್ರಾ.ಪಂ. ಅಧ್ಯಕ್ಷೆ ಮಾಲಿನಿ ಎ. ಅವರು ಗಿಡ ನೆಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಶುಭಕೋರಿದರು. ಬಳಿಕ ಜರಗಿದ ಸಮಾರಂಭದ ಅಧ್ಯಕ್ಷತೆಯನ್ನು ಬೆಳ್ಳೂರು ಗ್ರಾ.ಪಂ. ಅಧ್ಯಕ್ಷೆ ಮಾಲಿನಿ ಎ. ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯಿನಿ ಜಯಲತಾ ಎಸ್. ಅವರು ಪರಿಸರ ದಿನದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ವರ್ಷದ ಪರಿಸರ ದಿನದ ಧ್ಯೇಯ ವಾಕ್ಯದಂತೆ ಸಸ್ಯ ಸಂಪತ್ತನ್ನು ಬೆಳೆಸಿ ಸಂರಕ್ಷಣೆ ಮಾಡುವುದರೊಂದಿಗೆ, ಪ್ರಕೃತಿಗೆ ಹಾನಿಕಾರಕವಾಗುವ ವಸ್ತುಗಳ ಬಳಕೆಯನ್ನು ಕನಿಷ್ಠಗೊಳಿಸಿ, ಪ್ರಕೃತಿಯ ಸಂಪತ್ತುಗಳನ್ನು ಪರಿಸರ ಸಂರಕ್ಷಣೆಯ ಮೂಲಕ ನಡೆಸುವೆನೆಂಬ ಪ್ರತಿಜ್ಞೆಯನ್ನು ಎಲ್ಲಾ ಮಕ್ಕಳು, ಅಧ್ಯಾಪಕರು, ಸಭಿಕರು ಸ್ವೀಕರಿಸಿದರು. ಬೆಳ್ಳೂರು ಗ್ರಾ.ಪಂ. ಉಪಾಧ್ಯಕ್ಷ ಪುರುಷೋತ್ತಮ ಸಿ.ವಿ., ಗೀತಾ ಬಾಲಕೃಷ್ಣ, ಜಯರಾಜ್, ಮೂರನೇ ವಾರ್ಡ್ ಸದಸ್ಯ ಸುಕುಮಾರನ್, ಎಸ್‌ಎಸ್‌ಜಿ ಸದಸ್ಯ ಚಂದ್ರಹಾಸ ರೈ, ಸುಧಾಕರ ಹೆಗ್ಡೆ ಶಶಿಧರ ಗೋಳಿಕಟ್ಟೆ ಶುಭಹಾರೈಸಿದರು. ಕಾರಡ್ಕ ಬ್ಲಾಕ್ ಪಂಚಾಯತ್ ಸದಸ್ಯ ಜಯಾನಂದ ಕುಳದಪಾರೆ ಮಕ್ಕಳಿಗೆ ಸಿಹಿತಿಂಡಿ ವಿತರಿಸಿದರು. ಕೃಷಿ ಅಧಿಕಾರಿ ಅದ್ವೈತ್ ಸ್ವಾಗತಿಸಿ, ಕೃಷಿ ಅಧಿಕಾರಿ ಸತೀಶ್ ಕಾರ್ಯಕ್ರಮ ವಂದಿಸಿದರು.



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರಕಾರವು ಇನ್ನಷ್ಟು ವರ್ಷ ಭಾರತವನ್ನು ಆಳುವಂತಾಗಲಿ ಎಂಬುದಾಗಿ ಅಂಬಾರು ಶ್ರೀ ಸದಾಶಿವ ದೇವಸ್ಥಾನದಲ್ಲಿ 98 ಮತ್ತು 101ನೇ ಬೂತ್ ಬಿಜೆಪಿ ಸಮಿತಿ ವತಿಯಿಂದ ಬುಧವಾರ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭ 12 ರುದ್ರಾಭಿಷೇಕ ಸೇವೆ ಸಲ್ಲಿಸಿ ಪ್ರಾರ್ಥಿಸಲಾಯಿತು. ಶ್ರೀ ಕ್ಷೇತ್ರದ ಆಡಳಿತ ಮುಖ್ಯಸ್ಥ ಎಚ್.ಕುಂಞಣ್ಣ ಶೆಟ್ಟಿ, ಸೇವಾ ಸಮಿತಿಯ ಗೌರವಾಧ್ಯಕ್ಷ ಎಸ್.ಕೊರಗಪ್ಪ ಶೆಟ್ಟಿ, ಉತ್ಸವ ಸಮಿತಿಯ ಅಧ್ಯಕ್ಷ ಬಾಲಕೃಷ್ಣ ಅಂಬಾರು, ರವಿ, ರಘು ಸಿ., ನಾಗೇಶ್ ಮೊದಲಾದವರು ಉಪಸ್ಥಿತರಿದ್ದರು.

ಚೆಂಗಳ-ಚೆಮ್ನಾಡು ಗ್ರಾಮಗಳ ಸಂಪರ್ಕ ಕೊಂಡಿ | ಜೂ.15ರ ಕೇರಳ ಬಜೆಟ್‌ನಲ್ಲಿ ಘೋಷಣೆಯ ನಿರೀಕ್ಷೆ

ಚೇರೂರು ಸೇತುವೆ ನಿರ್ಮಾಣಕ್ಕೆ 33.70 ಕೋ.ರೂ.ಗಳ ಅಂದಾಜು ಪಟ್ಟಿ ತಯಾರಿ

ಕಾಸರಗೋಡು: ಕಾಸರಗೋಡು ಜಿಲ್ಲೆಯ ಚೆಂಗಳ ಮತ್ತು ಚೆಮ್ನಾಡು ಗ್ರಾಮ ಪಂಚಾಯತ್‌ಗಳ ಸಾವಿರಕ್ಕೂ ಅಧಿಕ ಕುಟುಂಬಗಳ ಅನೇಕ ವರ್ಷಗಳ ಕನಸಾದ ಚೇರೂರು ರಸ್ತೆ ಸೇತುವೆಗೆ ಆಡಳಿತಾನುಮತಿ ಲಭಿಸುವ ನಿಟ್ಟಿನಲ್ಲಿ ಇಡೀ ನಾಡು ಕಾಯುತ್ತಿದೆ. ಮಾರ್ಚ್ 21ರಂದು ಲೋಕೋಪಯೋಗಿ ಸೇತುವೆ ವಿಭಾಗದ ಮುಖ್ಯ ಇಂಜಿನಿಯರ್ ಅಂದಾಜುಪಟ್ಟಿಯೊಂದಿಗೆ ಸಮಗ್ರ ವರದಿಯನ್ನು ಕಾಸರಗೋಡು ಶಾಸಕರಾಗಿದ್ದ ಎನ್.ಎ. ನೆಲ್ಲಿಕುನ್ನು ಅವರ ನಿರ್ದೇಶನದ ಪ್ರಕಾರ ಆಡಳಿತ ಅನುಮತಿಗಾಗಿ ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿಗೆ ಸಲ್ಲಿಸಿದ್ದರು.

ಒಟ್ಟು 33.70 ಕೋ.ರೂ.ಗಳ ಅಂದಾಜು ಪಟ್ಟಿ ತಯಾರಿಸಲಾಗಿದೆ. ಜೂ.15ರ ಕೇರಳ ವಿಧಾನ ಸಭೆಯಲ್ಲಿ ಮಂಡಿಸಲಿರುವ ಮುಂಗಡಪತ್ರದಲ್ಲಿ ಈ ಯೋಜನೆಯನ್ನು ಸೇರ್ಪಡೆಗೊಳಿಸಬಹುದು ಎಂಬ ನಿರೀಕ್ಷೆ ನಾಗರಿಕರದ್ದಾಗಿದೆ. ಅಂದಾಜು ಪಟ್ಟಿ ಮೊತ್ತ ಹೆಚ್ಚಿರುವುದರಿಂದ ನಬಾರ್ಡ್ ಯೋಜನೆಯಲ್ಲಿ ಅಥವಾ ಕಿಫ್ ಬಿಯಲ್ಲಿ ಸೇರ್ಪಡೆಗೊಳಿಸಬೇಕಿದೆ.



ಸಂಗಮ ವಿಶೇಷ

ಭಯದಲ್ಲಿಯೇ ವಿದ್ಯಾರ್ಥಿಗಳ ಸಂಚಾರ!

ಉಕ್ಕಿ ಹರಿಯುವ ಚಂದ್ರಗಿರಿ ಹೊಳೆಗೆ ನಿರ್ಮಿಸಿದ ಚೇರೂರು ತೂಗು ಸೇತುವೆಯು ಅಲುಗಾಡುತ್ತಿದ್ದು, ಮಕ್ಕಳು ಸಹಿತ ಸಾರ್ವಜನಿಕರು ಭಯದಿಂದಲೇ ಸಂಚರಿಸುತ್ತಿದ್ದಾರೆ. ಅತ್ಯಂತ ಹಳೆಯದಾದ ಕಾರಣ ತೂಗು 125 ಮೀಟರ್‌ನಷ್ಟು ಉದ್ದ ಮತ್ತು 1.50 ಮೀಟರ್‌ನಷ್ಟು ಅಗಲವಿರುವ ತೂಗು ಸೇತುವೆ ಇದಾಗಿದೆ. ಇಕ್ಕೆಲಗಳಲ್ಲಿ ನಿರ್ಮಿಸಿದ ಕಾಂಕ್ರೀಟ್ ಕಂಬಗಳಲ್ಲಿ ಕಬ್ಬಿಣದ ಸರಳುಗಳನ್ನು ಜೋಡಿಸಿ ಸೇತುವೆ ನಿರ್ಮಿಸಲಾಗಿದೆ.

ಸೇತುವೆ ಕಾರ್ಯಾರಂಭಗೊಂಡರೆ ರಾಷ್ಟ್ರೀಯ ಹೆದ್ದಾರಿ ಮೂಲಕ ಹಾದು ಹೋಗುವ ವಾಹನಗಳಿಗೆ ನಾಲ್ಕನೇ ಮೈಲಿನಿಂದ ಈ ಮೂಲಕ ಚಟ್ಟಂಚಾಲ್‌ಗೆ ಮತ್ತು ಮೇಲ್ಪರಂಬಕ್ಕೆ ತೆರಳಲು ಕಿಲೋ ಮೀಟರ್‌ಗಟ್ಟಲೆ ಸಂಚಾರ ಉಳಿಯಲಿದೆ. ಚೆಂಗಳ, ಕಾಸರಗೋಡು, ಚೆಮ್ನಾಡು, ಉದುಮ ಮೊದಲಾದ ಪ್ರದೇಶಗಳು ಇದರ ವ್ಯಾಪ್ತಿಯಲ್ಲಿವೆ. ಚೇರೂರು ತೂಗು ಸೇತುವೆಯ ದಕ್ಷಿಣ ಭಾಗದ 200 ಮೀಟರ್ ದೂರದಲ್ಲಿ ನಿರ್ದಿಷ್ಟ ಸೇತುವೆ ನಿರ್ಮಾಣಕ್ಕೆ ಸೂಚಿಸಲಾಗಿದೆ. ಚೆಂಗಳ ನಾಲ್ಕನೇ ಮೈಲಿನಿಂದ ಚಟ್ಟಂಚಾಲ್ ದೇಳಿ ರಸ್ತೆಗೆ ಆಗಮಿಸಲು ಅನುಕೂಲಕರ. 340 ಮೀಟರ್ ಉದ್ದ, 12 ಮೀಟರ್ ಅಗಲದೊಂದಿಗೆ ನೂತನ ಸೇತುವೆ ನಿರ್ಮಿಸುವ ನೀಲ ನಕ್ಷೆ ಸಿದ್ಧಗೊಂಡಿದೆ.

22 ವರ್ಷಗಳ ಹಿಂದಿನ ತೂಗು ಸೇತುವೆ

ಈಗ ಇರುವ ತೂಗು ಸೇತುವೆ 22 ವರ್ಷಗಳ ಹಿಂದೆ 36 ಲಕ್ಷ ರೂ. ವೆಚ್ಚದಲ್ಲಿ ತೂಗು ಸೇತುವೆ ನಿರ್ಮಿಸಲಾಗಿತ್ತು. ವಾಹನಗಳಲ್ಲಿ ತಲುಪಬೇಕಾದರೆ 15 ಕಿಲೋ ಮೀಟರ್‌ಗಳಷ್ಟು ಸುತ್ತುವರಿದು ಪೆರುಂಬಳ ಕಡವ್ ಸೇತುವೆ ಮೂಲಕ ಅಥವಾ ತೆಕ್ಕಿಲ್ ಸೇತುವೆ ಮೂಲಕ ಸಂಚರಿಸಬೇಕು. ವಿದ್ಯಾರ್ಥಿಗಳು ಭಯ ಭೀತಿಯಿಂದಲೇ ಈ ತೂಗು ಸೇತುವೆ ಮೂಲಕ ಸಂಚರಿಸುತ್ತಿದ್ದಾರೆ. ಇಲ್ಲಿ ಸೇತುವೆಯೊಂದಿಗೆ ಅಣೆಕಟ್ಟನ್ನು ನಿರ್ಮಿಸಿದರೆ ಕುಡಿಯುವ ನೀರಿನ ಸಮಸ್ಯೆಗೂ ಶಾಶ್ವತ ಪರಿಹಾರ ಲಭಿಸಲಿದೆ.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶುಕ್ರವಾರ 12, ಜೂನ್ 2026

ಸುತ್ತ ಮುತ್ತ

ಆನೆಗುಂದಿ ಗುರು ಸೇವಾ ಪರಿಷತ್‌ಗೆ ಆಯ್ಕೆ

ಕೋಟ: ಆನೆಗುಂದಿ ಗುರು ಸೇವಾ ಪರಿಷತ್ ಕೋಟ ಮಂಡಲ 2026-27ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ಕೆ. ರಮೇಶ ಆಚಾರ್ಯ, ಚೇಂಪಿ,



ಗೌರವಾ ಧ್ಯಕ್ಷರಾಗಿ ಸುಬ್ರಾಯ ಆಚಾರ್ಯ ಮಣೂರು ಮತ್ತು ಎಸ್. ಬಿ. ರಾಘವೇಂದ್ರ ಆಚಾರ್ಯ ದೇವಿ ಪಾತ್ರಿ ಸಾಲಿಗ್ರಾಮ, ಉಪಾಧ್ಯಕ್ಷರಾಗಿ ಕೃಷ್ಣಯ್ಯ ಆಚಾರ್ಯ ಗಿಳಿಯಾರು, ಮತ್ತು ದಯಾನಂದ ಆಚಾರ್ಯ ಕೋಟ, ಪ್ರದಾನ ಕಾರ್ಯದರ್ಶಿಯಾಗಿ ನಾಗೇಂದ್ರ ಆಚಾರ್ಯ, ಚಿತ್ರಪಾಡಿ, ಜೊತೆ ಕಾರ್ಯದರ್ಶಿಯಾಗಿ ಗುರುರಾಜ ಆಚಾರ್ಯ ಗಿಳಿಯಾರು, ಸುರೇಶ ಆಚಾರ್ಯ ಚೇಂಪಿ, ಕೋಶಾಧಿಕಾರಿಯಾಗಿ ಅಶೋಕ ಆಚಾರ್ಯ ಪಾಂಡೇಶ್ವರ, ಸಂಚಾಲಕರಾಗಿ ಎ. ಗಣೇಶ ಆಚಾರ್ಯ ಕೋಟ, ಸಂಘಟನಾ ಕಾರ್ಯದರ್ಶಿಯಾಗಿ ಮಾಧವ ಆಚಾರ್ಯ ಗುಂಡ್ಮಿ, ರಾಜೇಶ ಆಚಾರ್ಯ ಚೇಂಪಿ,ಪ್ರಕಾಶ ಆಚಾರ್ಯ ಗುಂಡ್ಮಿ, ಶೈಲೇಂದ್ರ ಆಚಾರ್ಯ ಚೇಂಪಿ, ಬಾಬುರಾಯ ಆಚಾರ್ಯ ಕಾರ್ಕಡ ,ಗೌರವ ಸಲಹೆಗಾರರಾಗಿ ವೇ.ಮೂ.ಲಕ್ಷ್ಮೀಕಾಂತ ಶರ್ಮ ಚೇಂಪಿ, ಜನಾರ್ದನ ಆಚಾರ್ಯ, ಗೋವರ್ಧನ ಆಚಾರ್ಯ ಚೇಂಪಿ, ಗಣಪಯ್ಯ ಆಚಾರ್ಯ ಐರೋಡಿ , ಗ್ರಾಮವಾರು ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಪಾಂಡೇಶ್ವರ ವಿಜಯ ಆಚಾರ್ಯ, ಯಡಬೆಟ್ಟು ವ್ಯಾಪ್ತಿಗೆ ಸುದರ್ಶನ ಆಚಾರ್ಯ, ಬಾಳ್ಕುದ್ರು ಭಾಗ ಬಿ.ಎಸ್. ರಾಘವೇಂದ್ರ ಆಚಾರ್ಯ ಗುಂಡ್ಮಿ-ಮಾಧವ ಆಚಾರ್ಯ, ಗಿಳಿಯಾರು - ಕೇಶವ ಆಚಾರ್ಯ, ಪಾರಂಪಳ್ಳಿ - ನಾರಾಯಣ ಆಚಾರ್ಯ, ಕಾರ್ಕಡ - ರಾಘವೇಂದ್ರ ಆಚಾರ್ಯ ದೇವಿ ಗೋಲ್ಡ್, ಐರೋಡಿ - ಸಂತೋಷ ಆಚಾರ್ಯ, ಕೋಟ ಮತ್ತು ಮಣೂರು - ಚಂದ್ರ ಆಚಾರ್ಯ, ಕಾವಡಿ - ಪ್ರಶಾಂತ ಆಚಾರ್ಯ, ಚಿತ್ರಪಾಡಿ - ಪ್ರಭಾಕರ ಆಚಾರ್ಯ, ವಡ್ಡರ್ಸೆಮತ್ತು ಬನ್ನಾಡಿ- ಪ್ರಶಾಂತ ಆಚಾರ್ಯ ಮತ್ತುಪದ್ಮನಾಭ ಆಚಾರ್ಯ, ಸಾಹೇಬರಕಟ್ಟೆ - ಸುಬ್ರಾಯ ಆಚಾರ್ಯ ಅಲ್ತಾರು,ಭಜನಾ ಮಂಡಳಿ ಉಸ್ತುವಾರಿಯಾಗಿ ರಾಮಚಂದ್ರ ಆಚಾರ್ಯ ಯಡಬೆಟ್ಟು ಸುರೇಶ ಆಚಾರ್ಯ ಚೇಂಪಿ, ಪ್ರಶಾಂತ ಆಚಾರ್ಯ ಕಾರ್ಕಡ, ರವಿರಾಜ್ ಆಚಾರ್ಯ ಸಾಲಿಗ್ರಾಮ, ವಸಂತ ಆಚಾರ್ಯ ಪಡುಬೈಲು ಆಯ್ಕೆಯಾದರು.

ಮೊದಲನೇ ಪುಟದಿಂದ

ಬಸ್ ಸರದಿ!

5 ವರ್ಷಗಳಲ್ಲಿ ನಾವು ಯಾವುದೇ ಟಿಕೇಟ್ ದರ ಏರಿಕೆ ಮಾಡಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಡಿಸೇಲ್ ಬೆಲೆಯಲ್ಲಿ ಗಣನೀಯವಾಗಿ ಹಾಗೂ ನಿರಂತರವಾಗಿ ಏರಿಕೆಯಾಗುತ್ತಿದ್ದು, ಬಸ್ಸುಗಳ ನಿರ್ವಹಣಾ ವೆಚ್ಚವು ಸಹ ಬಹಳಷ್ಟು ಹೆಚ್ಚಾಗಿದೆ. ವಿಶೇಷವಾಗಿ ಟೈರುಗಳು, ಬಿಡಿಭಾಗಗಳು, ಆಯಿಲ್ ಮತ್ತು ಗ್ರೀಸ್ (ಲೂಬ್ರಿಕಂಟ್ಸ್), ಚಾಸಿಸ್ ದರ (ಬಾಡಿ ಬಿಲ್ಡಿಂಗ್), ಇನ್ಶೂರೆನ್ಸ್ ಪ್ರೀಮಿಯಮ್, ಮೆಕ್ಯಾನಿಕಲ್ ಲೇಬರ್, ಟೈರ್ ರೀಬಿಲ್ಟ್ ಚಾರ್ಜ್ (ಟೈರ್ ರಿಸೋಲ್), ಟೋಲ್ ಶುಲ್ಕಗಳು, ಬ್ಯಾಟರಿ ದರ, ಕಾರ್ಮಿಕರ ವೇತನ ಸೇರಿದಂತೆ ಹಾಗೂ ಇತರ ಅಗತ್ಯ ಸಾಮಗ್ರಿಗಳ ಬೆಲೆಗಳು ಸುಮಾರು 40 ಶೇಕಡಾದಷ್ಟು ಅಧಿಕಗೊಂಡಿದ್ದು ನಿತ್ಯ ಬಳಕೆಯ ವಸ್ತುಗಳ ದರಗಳು ಗಣನೀಯವಾಗಿ ಏರಿಕೆಯಾಗುತ್ತಿದ್ದು ಬಸ್ಸು ಉದ್ಯಮವನ್ನು ನಿರ್ವಹಿಸುವುದು ಅತ್ಯಂತ ಕಷ್ಟಕರವಾಗಿದೆ. ಈ ಎಲ್ಲಾ ಸಮಸ್ಯೆಗಳಿಂದ ಬಸ್ಸು ಮಾಲಕರು ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ ಆದ್ದರಿಂದ ಬಸ್ ಪ್ರಯಾಣ ದರ ಏರಿಕೆ ಅನಿವಾರ್ಯ ವಾಗಿದೆ ಎಂದು ಅಝೀಜ್ ಪರ್ತಿಪ್ಪಾಡಿ ತಿಳಿಸಿದ್ದಾರೆ.

ಎಲ್ಲೆಡೆ ಕಟ್ಟೆಚ್ಚರ

ಗೋದಾಮು ಶುಚಿಗೊಳಿಸಿದ ನಂತರ ಅವರಲ್ಲಿ ತೀವ್ರ ಜ್ವರ ಮತ್ತು ಮೈ ಕೈ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ನಿಫಾ ವೈರಸ್ ಬಾವಲಿಗಳಿಂದ ಹರಡುವ ಸಾಂಕ್ರಾಮಿಕ ರೋಗವಾಗಿದೆ. ಈ ಬಗ್ಗೆ ಜನರು ಗರಿಷ್ಠ ಜಾಗರೂಕತೆ ಪಾಲಿಸಬೇಕು. ಅಲ್ಲದೆ ಮುನ್ನೆಚ್ಚರಿಕೆ ವಹಿಸಬೇಕೆಂದು ಆರೋಗ್ಯ ಇಲಾಖೆಯು ತಿಳಿಸಿದೆ. ಇದೇ ವೇಳೆ ಕಾಸರಗೋಡು ಜಿಲ್ಲೆಯಲ್ಲಿ ನಿಫಾ ವೈರಸ್‌ನ ಯಾವುದೇ ನಿದರ್ಶನಗಳು ಇಲ್ಲಿಯ ತನಕ ಕಂಡು ಬರದಿದ್ದರೂ ಗರಿಷ್ಠ ಎಚ್ಚರಿಕೆ ವಹಿಸುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ವಿನಂತಿಸಿದ್ದಾರೆ. ಮಾತ್ರವಲ್ಲದೆ ಬಾವಲಿಗಳ ಸಂಪರ್ಕ ಹೊಂದಿರುವ ಯಾವುದೇ ಹಣ್ಣು ಹಂಪಲು, ತರಕಾರಿ ಇತ್ಯಾದಿಗಳನ್ನು ಸೇವಿಸಬಾರದೆಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಜಿಲ್ಲೆಯಲ್ಲಿ ಮುಂದುವರಿದ ಸಾಧಾರಣ ಮುಂಗಾರು | ಇನ್ನು ಸಿದ್ಧಗೊಳ್ಳದ ಸ್ಥಳೀಯಾಡಳಿತ

ನಗರಸಭೆಯ ಅಪೂರ್ಣ ಕಾಮಗಾರಿಗಳಿಂದ ಕೃತಕ ನೆರೆ ಭೀತಿ!

ಉಡುಪಿ: ಜಿಲ್ಲೆಯಲ್ಲಿ ಮುಂಗಾರು ಮಳೆಯ ಕಾವು ನಿಧಾನವಾಗಿ ಹೆಚ್ಚಾಗುತ್ತಿದ್ದರೂ, ಉಡುಪಿ ನಗರಸಭೆ ಮಾತ್ರ ಇಂದಿಗೂ ಮಳೆಗಾಲ ಎದುರಿಸಲು ಸಂಪೂರ್ಣ ಸನ್ನದ್ಧವಾಗಿಲ್ಲದಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ಹವಾಮಾನ ಇಲಾಖೆ ಮುನ್ಸೂಚನೆಗಳ ನಡುವೆ ನಗರದ ಪ್ರಮುಖ ವಾರ್ಡ್‌ಗಳಲ್ಲಿ ರಾಜಕಾಲುವೆ ಹಾಗೂ ಚರಂಡಿಗಳ ಹೂಳು ಎತ್ತುವ ಪ್ರಕ್ರಿಯೆ ಮಂದಗತಿಯಲ್ಲಿ ಸಾಗುತ್ತಿದ್ದು ಕೃತಕ ನೆರೆ ಸೃಷ್ಟಿಯಾಗುವ ಭೀತಿ ಎದುರಾಗಿದೆ.

ನಗರದ ಹೃದಯಭಾಗದಲ್ಲಿರುವ ಬನ್ನಂಜೆ, ಅಜ್ಜರಕಾಡು, ಬ್ರಹ್ಮಗಿರಿ ಭಾಗಗಳಲ್ಲಿ ಇನ್ನೂ ಸಮರ್ಪಕವಾದ ಚರಂಡಿ ದುರಸ್ತಿ ಅಥವಾ ಹೂಳು ಇಳಿಸುವ ಕಾರ್ಯ ನಡೆದಿಲ್ಲ. ಜಗಜೀವನ್ ರಾಮ್ ರಸ್ತೆ, ನಾಯರ್ ಕೆರೆ ಪರಿಸರ ಹಾಗೂ ಕಾಡುಬೆಟ್ಟು ಸೇರಿದಂತೆ ಬಹುತೇಕ ಎಲ್ಲ ಬಡಾವಣೆಗಳಲ್ಲೂ ಚರಂಡಿ ವ್ಯವಸ್ಥೆ ಅಯೋಮಯವಾಗಿದೆ. ಕಸ-ಕಡ್ಡಿಗಳಿಂದ ತುಂಬಿರುವ ಚರಂಡಿಗಳಿಂದ ಮಳೆನೀರು ಸರಾಗವಾಗಿ ಹರಿದು ಹೋಗಲು ದಾರಿಯಿಲ್ಲದೆ ರಸ್ತೆಗೇ ನುಗ್ಗುವ ಪರಿಸ್ಥಿತಿ ನಿರ್ಮಾಣವಾಗಿದೆ.





ಅಂಬಲಪಾಡಿ ಸರ್ವಿಸ್ ರಸ್ತೆ ಗುಂಡಿಮಯ: ಸವಾರರ ಪರದಾಟ

ರಾಷ್ಟ್ರೀಯ ಹೆದ್ದಾರಿಯ ಅಂಬಲಪಾಡಿ ಸರ್ವಿಸ್ ರಸ್ತೆ ಈಗಾಗಲೇ ಸಂಪೂರ್ಣ ಗುಂಡಿಮಯವಾಗಿದ್ದು ವಾಹನ ಸಂಚಾರ ದುಸ್ತರವಾಗಿದೆ. ಬಿದ್ದಿರುವ ಬೃಹತ್ ಗುಂಡಿಗಳಲ್ಲಿ ಮಳೆನೀರು ತುಂಬಿಕೊಳ್ಳುತ್ತಿರುವುದರಿಂದ ಆಳದ ಅರಿವಿಲ್ಲದೆ ದ್ವಿಚಕ್ರ, ನಾಲ್ಕು ಚಕ್ರಗಳ ವಾಹನ ಸವಾರರು ದಿನನಿತ್ಯ ಅಪಘಾತಕ್ಕೀಡಾಗುತ್ತಿದ್ದಾರೆ. ಪಾದಚಾರಿಗಳು ರಸ್ತೆ ದಾಟಲೂ ಪರದಾಡುವಂತ ಸ್ಥಿತಿ ನಿರ್ಮಾಣವಾಗಿದ್ದರೂ ಸ್ಥಳೀಯಾಡಳಿತ ತಾತ್ಕಾಲಿಕ ದುರಸ್ತಿಗೂ ಮುಂದಾಗಿಲ್ಲ.

ಗಾಳಿ-ಮಳೆಗೆ 3 ಮನೆಗಳಿಗೆ ಭಾಗಶಃ ಹಾನಿ

ಮಳೆಯೊಂದಿಗೆ ಆಗಾಗ ಬೀಸುತ್ತಿರುವ ತಂಪು ಗಾಳಿಯ ತೀವ್ರತೆಗೆ ಜಿಲ್ಲೆಯ 3 ಮನೆಗಳು ಭಾಗಶಃ ಹಾನಿಗೊಳಗಾಗಿದ್ದು, ಆಸ್ತಿಪಾಸ್ತಿ ನಷ್ಟ ಸಂಭವಿಸಿದೆ: ಹಳನಾಡು ಗ್ರಾಮ (ಕುಂದಾಪುರ): ಸೀತಾ ಎಂಬುವವರ ಮನೆಗೆ ಭಾಗಶಃ ಹಾನಿಯಾಗಿದ್ದು, ಅಂದಾಜು 30,000 ನಷ್ಟವಾಗಿದೆ. ಹೊಸಾಡು ಗ್ರಾಮ (ಕುಂದಾಪುರ): ಲಕ್ಷ್ಮೀ ಖಾರ್ವಿ ಅವರ ಮನೆ ಕುಸಿದಿದ್ದು, 60,000ದಷ್ಟು ಹಾನಿ ಅಂದಾಜಿಸಲಾಗಿದೆ. ಶಿರೂರು ಗ್ರಾಮ (ಬೈಂದೂರು): ಬಿದೀನಾ ಎಂಬುವವರ ಮನೆಗೆ ಗಾಳಿಯ ರಭಸಕ್ಕೆ ಹಾನಿಯಾಗಿದ್ದು, 60,000 ನಷ್ಟ ಸಂಭವಿಸಿದೆ.

'ರೆಡ್ ಅಲರ್ಟ್' ನಡುವೆ ಸಾಧಾರಣ ಮಳೆ

ಹವಾಮಾನ ಇಲಾಖೆಯು ಜಿಲ್ಲೆಗೆ ಭಾರಿ ಮಳೆಯ 'ರೆಡ್ ಅಲರ್ಟ್', ಅದಕ್ಕೆ ವ್ಯತಿರಿಕ್ತ ಜಿಲ್ಲಾದ್ಯಂತ ಕೇವಲ ಸಾಧಾರಣ ಮಳೆ ಮುಂದುವರಿದಿದೆ. ದಿನದಲ್ಲಿ ಒಂದೆರಡು ಬಾರಿ ಜೋರಾಗಿ ಮಳೆ ಸುರಿದಿರುವುದನ್ನು ಬಿಟ್ಟರೆ, ಹೆಚ್ಚಿನ ಕಡೆಗಳಲ್ಲಿ ಹನಿಮಳೆಯಷ್ಟೇ ದಾಖಲಾಗಿದೆ. ಉಡುಪಿ, ಕುಂದಾಪುರ, ಬೈಂದೂರು, ಬ್ರಹ್ಮಾವರ ಹಾಗೂ ಕಾಪು ಸೇರಿದಂತೆ ಕರಾವಳಿಯ ಪ್ರಮುಖ ಭಾಗಗಳಲ್ಲಿ ಮಳೆಗಾಲದ ಆರಂಭಿಕ ದಿನಗಳಲ್ಲಿ ಕಂಡುಬರುವ ನಿರಂತರ 'ಜಡಿ ಮಳೆ' ಇನ್ನೂ ಪ್ರಾರಂಭವಾಗಿಲ್ಲ.

ಮೀನುಗಾರರು ಸಮುದ್ರಕ್ಕಿಳಿಯದಂತೆ ಸೂಚನೆ

ಹವಾಮಾನ ಇಲಾಖೆ ಮುಂಬರುವ 3 ದಿನಗಳ ಕಾಲ ಕರಾವಳಿಯುದ್ದಕ್ಕೂ ವೇಗದ ಗಾಳಿ ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿದ್ದು, ಅರಬ್ಬೀ ಸಮುದ್ರದ ಕಡೆಯಿಂದ ಗಂಟೆಗೆ ಗರಿಷ್ಠ 60 ಕಿ.ಮೀ. ವೇಗದಲ್ಲಿ ಬಲವಾದ ಬಿರುಗಾಳಿ ಬೀಸುವ ಸಾಧ್ಯತೆ ಇರುವುದರಿಂದ ಸಮುದ್ರ ಪ್ರಕ್ಷುಬ್ಧವಾಗಿರಲಿದ್ದು, ಯಾವುದೇ ಕಾರಣಕ್ಕೂ ಮೀನುಗಾರರು ಆಳ ಸಮುದ್ರಕ್ಕೆ ಇಳಿಯಬಾರದು ಎಂದು ಕಟ್ಟುನಿಟ್ಟಿನ ಎಚ್ಚರಿಕೆ ಜಾರಿಗೊಳಿಸಲಾಗಿದೆ.

ಸಲ್ಕೋಡು ಸರ್ಕಾರಿ ಶಾಲೆಯಲ್ಲಿ ನೂತನ ಹೈಟೆಕ್ ಶೌಚಾಲಯ ಉದ್ಘಾಟನೆ

ಸಂಸ್ಕಾರಯುತ ಶಿಕ್ಷಣದಿಂದ ಜೀವನದಲ್ಲಿ ಯಶಸ್ಸು

ಬೈಂದೂರು: ಹಳ್ಳಿಯ ಶಾಲೆಗಳಲ್ಲಿ ಹೃದಯವಂತಿಕೆ, ನಗರಗಳಲ್ಲಿ ಬುದ್ಧಿವಂತಿಕೆ ಉಳಿದಿದೆ. ಗರ್ವ, ಗೌಪ್ಯತೆಗಳಿಗೆ ಮಹತ್ವವಿಲ್ಲದ ಸಂಸ್ಕಾರಯುತ ಶಿಕ್ಷಣ ಅಳವಡಿಸಿಕೊಂಡಾಗ ಜೀವನದಲ್ಲಿ ಯಶಸ್ಸು ಸಾಧ್ಯ. ಪೋಷಕರು ಮಕ್ಕಳ ಭವಿಷ್ಯವನ್ನು ಶಾಲೆ ಮತ್ತು ಶಿಕ್ಷಕರಿಗೆ ಒಪ್ಪಿಸಿ ನಿಶ್ಚಿಂತರಾಗುವಂತಿಲ್ಲ, ಅವರು ಮಕ್ಕಳಿಗೆ ಒಳ್ಳೆಯ ಮಾದರಿಗಳಾಗಬೇಕೆಂದು ಶಾಸಕ ಗುರುರಾಜ್ ಗಂಟಿಹೊಳೆ ಹೇಳಿದ್ದಾರೆ.

ಸಮೃದ್ಧ ಬೈಂದೂರು ಪರಿಕಲ್ಪನೆಯ 300 ಟ್ರೀಸ್ ಯೋಜನೆಯಲ್ಲಿ ಜಡ್ಕಲ್ ಗ್ರಾಮದ ಸಲ್ಕೋಡು ಸರ್ಕಾರಿ ಹಿ.ಪ್ರಾ.ಶಾಲೆಯಲ್ಲಿ ಕ್ಯಾನ್ ಫಿನ್ ಹೋಮ್ಸ್‌ನ ಸಿಎಸ್‌ಆರ್ ನಿಧಿಯಿಂದ ವಿದ್ಯಾರ್ಥಿನಿಯರಿಗಾಗಿ ನಿರ್ಮಿಸಿರುವ ನೂತನ ಹೈಟೆಕ್ ಶೌಚಾಲಯ ಉದ್ಘಾಟಿಸಿ ಹಾಗೂ ಕೋಡ್‌ಕ್ರಾಫ್ಟ್ ಟೆಕ್ನಾಲಜೀಸ್ ನವರು ಸಿಎಸ್‌ಆರ್ ನಿಧಿಯಿಂದ ನೀಡಿದ ನೂತನ ಶಾಲಾ ಬಸ್ ಅನ್ನು ಶಾಲೆಗೆ ಹಸ್ತಾಂತರಿಸಿ ಮಾತನಾಡಿದರು.



ಪಠ್ಯಪುಸ್ತಕ ವಿತರಣೆ

ಜಿಲ್ಲಾ ಪಂಚಾಯತ್‌ನ 2025-26ನೇ ಸಾಲಿನ ಅನುದಾನದಿಂದ ಶಾಲೆಯಲ್ಲಿ ನಿರ್ಮಿಸಿದ ಬಾಲವನವನ್ನು ಉದ್ಘಾಟಿಸಿದ ಶಾಸಕರು, ದ್ವಿಭಾಷಾ (ಕನ್ನಡ-ಇಂಗ್ಲಿಷ್) ಮಾಧ್ಯಮ ತರಗತಿಗಳಿಗೆ ಚಾಲನೆ ನೀಡಿ ಸಾಂಕೇತಿಕವಾಗಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಪರಿಸರ ಜಾಗೃತಿ ಕಾರ್ಯಕ್ರಮ ನಡೆಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ ನಾಯ್ಕ್, ಸಿಆರ್‌ಪಿ ಶೈಲಜಾ, ಎಸ್‌ಡಿಎಂಸಿ ಅಧ್ಯಕ್ಷೆ ಪ್ರೇಮಾ ಎಸ್. ನಾಯ್ಕ, ಧಗ್ರಾಯೋಜನೆಯ ಕೃಷಿ ಅಧಿಕಾರಿ ಕೃಷ್ಣಮೂರ್ತಿ, ವಲಯ ಮೇಲ್ವಿಚಾರಕ ಮಹೇಶ್, ಒಕ್ಕೂಟದ ಅಧ್ಯಕ್ಷ ರವೀಂದ್ರ ಶೆಟ್ಟಿ ಸೇವಾ ಪ್ರತಿನಿಧಿಗಳಾದ ಶ್ರೀರಾಮ ಶೆಟ್ಟಿ ಅತ್ತಿಕಾರು, ಜ್ಯೋತಿ ಶೆಟ್ಟಿ ಸುವರ್ಣ ವಿದ್ಯಾನಿಧಿ ಅಧ್ಯಕ್ಷ ಸುರೇಂದ್ರ ನಾಯ್ಕ ನೇತ್ರಾಡಿ, ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಭಾರತಿ ಜಿ. ಶೆಟ್ಟಿ ಲಕ್ಷ್ಮಣ ಶೆಟ್ಟಿ ಮಾಜಿ ಸದಸ್ಯ ನಾರಾಯಣ ಶೆಟ್ಟಿ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ನಕ್ಷತ್ರ ನಾಯ್ಕ, ಉದ್ಯಮಿಗಳಾದ ನಕ್ಷತ್ರ ಬೋವಿ, ಸುಬೋದ್ ಶೆಟ್ಟಿ ದಾನಿ ಗಣೇಶ ಶೆಟ್ಟಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶಾಲಾ ಮುಖ್ಯ ಶಿಕ್ಷಕ ನಾಗರಾಜ ಶೆಟ್ಟಿ ಸ್ವಾಗತಿಸಿದರು. ಸಹ ಶಿಕ್ಷಕರಾದ ಭಾಸ್ಕರ ನಾಯ್ಕ ಪ್ರಸ್ತಾವನೆಗೈದರು. ಸತೀಶ್ ದೇವಾಡಿಗ ಕಾರ್ಯಕ್ರಮ ನಿರೂಪಿಸಿದರು.

ಸನ್ಮಾನಿತರು

ಶಾಲೆಯ ಹತ್ತಾರು ವರ್ಷದ ಬೇಡಿಕೆಯಾಗಿದ್ದ ಶೌಚಾಲಯವನ್ನು ತಮ್ಮ ಮನವಿಯ ಮೇರೆಗೆ ನಿರ್ಮಿಸಿ ಕೊಟ್ಟಿರುವ ಕ್ಯಾನ್ ಫಿನ್ ಹೋಮ್ಸ್ ಸಂಸ್ಥೆ ಉಪಾಧ್ಯಕ್ಷ ಪ್ರಶಾಂತ್ ಜೋಯಿಷಿ, ಕೋಡ್‌ಕ್ರಾಫ್ಟ್ ಟೆಕ್ನಾಲಜೀಸ್‌ನ ಸಹ ಸಂಸ್ಥಾಪಕ ಪ್ರವೀಣ್ ಕಾಸ್ಟಲಿನೊ ಹಾಗೂ ಜೋಬಿನ್ ಜೋಸೆಫ್ ಪಿ.ಜಿ. ಅವರನ್ನು ಸನ್ಮಾನಿಸಲಾಯಿತು.

ಕಟಪಾಡಿ ಎಸ್‌ವಿಎಸ್ ಕಾಲೇಜಿನಲ್ಲಿ ಪೋಕ್ಸೊ ಕಾಯ್ದೆ ಉಪನ್ಯಾಸ

ಪೋಕ್ಸೊ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ

ಶಿರ್ವ: ಪೋಕ್ಸೋ ಪ್ರಕರಣದ ಸಂತ್ರಸ್ತೆಯರಿಗೆ ನ್ಯಾಯಾಲಯವು ಪ್ರಕರಣದ ತೀರ್ಪಿನಲ್ಲಿ ಪರಿಹಾರ ಆದೇಶಿಸುತ್ತದೆ. ಆಕೆಯ ಮುಂದಿನ ಜೀವನಕ್ಕೆ ಸಹಕಾರಿಯಾಗುವಂತೆ, ಸಮಾಜದಲ್ಲಿ ಉತ್ತಮ ಜೀವನ ಕಟ್ಟಿಕೊಳ್ಳಲು ಪ್ರಕರಣದ ಗಂಭೀರತೆ ಆಧಾರದಲ್ಲಿ ಪರಿಹಾರವನ್ನು ನಿರ್ಧರಿಸಲಾಗುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಪುರುಷೋತ್ತಮ್ ಸಲಹೆ ನೀಡಿದರು.

ಸರ್ವೋಚ್ಚ ನ್ಯಾಯಾಲಯದ ಮಾರ್ಗ ಸೂಚಿಯಂತೆ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಕಾಲೇಜುಗಳಲ್ಲಿ ಪೋಕ್ಸೊ ಕಾಯ್ದೆಯ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮದ ಅಂಗವಾಗಿ, ಗುರುವಾರ ಕಟಪಾಡಿಯ ಎಸ್‌ವಿಎಸ್ ಪಿಯು ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ನೀಡಿದರು.



ಜೀವಾವಧಿ ಶಿಕ್ಷೆಯ ಅವಕಾಶ

ಸಾಕ್ಷಿಗಳು ನ್ಯಾಯಾಲಯದಲ್ಲಿ ಸರಿಯಾದ ಹೇಳಿಕೆ ನೀಡದೇ ಇದ್ದರೂ, ವೈದ್ಯಕೀಯ ಪರೀಕ್ಷೆಯ ಆಧಾರದಲ್ಲಿ ಆರೋಪ ಸಾಭೀತು ಪಡಿಸಲು ಸಾಧ್ಯವಿದೆ. ಆರೋಪ ಸಾಭೀತಾದಲ್ಲಿ ಕನಿಷ್ಠ 10 ವರ್ಷದಿಂದ ಜೀವಾವಧಿ ಶಿಕ್ಷೆ ನೀಡುವ ಅವಕಾಶ ಈ ಕಾಯ್ದೆಯಲ್ಲಿದೆ. ಕೊಲೆ ಅಥವಾ ಇತರ ಪ್ರಕರಣಗಳಲ್ಲಿ ಜೀವಾವಧಿ ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷೆಗೆ ಒಳಗಾದವರಿಗೆ ಜೈಲಿನಲ್ಲಿ ಸನ್ನಡತೆ ಆಧಾರದಲ್ಲಿ ಶಿಕ್ಷೆಯ ಪ್ರಮಾಣ ತಗ್ಗಿಸಲು ವಿನಂತಿಸುವ ಅವಕಾಶ ಇದೆ. ಆದರೆ ಪೋಕ್ಸೊ ಕಾಯ್ದೆಯಲ್ಲಿ ಶಿಕ್ಷೆಗೆ ಒಳಗಾದರೇ ಆರೋಪಿ ಈ ಅವಕಾಶದಿಂದ ವಂಚಿತನಾಗುತ್ತಾನೆ ಎಂದು ಅವರು ಹೇಳಿದರು.

ಕಾಲೇಜಿನ ಆಡಳಿತ ಮಂಡಳಿಯ ಸದಸ್ಯ ನಿತ್ಯಾನಂದ ಶೆಣೈ, ವೆಂಕರಮಣ ಭಟ್, ಪ್ರಾಂಶುಪಾಲ ಡಾ.ದಯಾನಂದ್ ಪೈ ಮತ್ತಿತರರು ಉಪಸ್ಥಿತರಿದ್ದರು.

ದೂರು ದಾಖಲಿಸಲು ಕಾನೂನಿನಲ್ಲಿ ಅವಕಾಶ

ಅನೇಕರಲ್ಲಿ ಪೋಲಿಸ್ ಠಾಣೆಗೆ ನೀಡುವುದೇ ದೂರು ಎಂಬ ತಪ್ಪು ಕಲ್ಪನೆ ಇದೆ. ಬಿಎನ್‌ಎಸ್‌ಎಸ್ ಸೆಕ್ಷನ್ 2 (1) ನಲ್ಲಿ ದೂರು ಎಂದರೇ ಏನು..? ಎಂದು ವಿವರಿಸಲಾಗಿದೆ. ಅದರಂತೆ ಪೋಲಿಸ್ ಠಾಣೆಗೆ ನೀಡುವುದು ಪ್ರಥಮ ಮಾಹಿತಿ ಮಾತ್ರ. ಅದರ ಆಧಾರದಲ್ಲಿ ಎಫ್‌ಐಆರ್ (ಪ್ರಥಮ ವರ್ತಮಾನ ವರದಿ) ದಾಖಲಿಸುತ್ತಾರೆ. ನಂತರ ನ್ಯಾಯಾಲಯದಲ್ಲಿ ದೂರು ದಾಖಲಾಗುತ್ತದೆ. ನ್ಯಾಯಾಲಯದಲ್ಲಿ ಮಾತ್ರ ದೂರು ದಾಖಲಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

● ನ್ಯಾ। ಎಂ. ಪುರುಷೋತ್ತಮ್

ಅವ್ಯವಸ್ಥೆಯ ಆಗರವಾಗಿದೆ ಗಂಗೊಳ್ಳಿ ಪೇಟೆ: ಇಲ್ಲಿ, ರಸ್ತೆಯಲ್ಲೇ ಹರಿಯುತ್ತಿದೆ ಮಳೆ ನೀರು!



ಕುಂದಾಪುರ: ಅವ್ಯವಸ್ಥೆಯ ಆಗರವಾಗಿರುವ ಗಂಗೊಳ್ಳಿ ಮುಖ್ಯರಸ್ತೆಯ ಚರಂಡಿಯಿಂದಾಗಿ ಸಾರ್ವಜನಿಕರು ನಿತ್ಯ ಸಂಕಷ್ಟಕ್ಕೊಳಗಾಗುವಂತಾಗಿದೆ.

ಮಳೆ ನೀರು ರಸ್ತೆಯಲ್ಲೇ ಹರಿಯುತ್ತಿದ್ದರೂ ಸಮಸ್ಯೆ ಸರಿಪಡಿಸದಿರುವ ಬಗ್ಗೆ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಗಂಗೊಳ್ಳಿಯ ಮುಖ್ಯ ರಸ್ತೆಯಲ್ಲಿ ಮಳೆ ನೀರು ಹರಿದು ಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆ ನೀರು ಮುಖ್ಯ ರಸ್ತೆ ಮೇಲೆ ಹರಿಯುತ್ತದೆ. ನೀರು ಹರಿದು ಹೋಗಲು ಇರುವ ಚರಂಡಿಗಳಲ್ಲಿ ಹೂಳು ತುಂಬಿ ಗಿಡ ಗಂಟಿ ಬೆಳೆದು ನಿಂತಿದೆ. ಇದರಿಂದ ಮಳೆ ನೀರು ಸರಾಗ ಹರಿದು ಹೋಗಲು ಸಮಸ್ಯೆಯಾಗುತ್ತಿದೆ. ಮಳೆಗಾಲ ಪ್ರಾರಂಭವಾಗುವ ಮೊದಲೇ ಚರಂಡಿಯಲ್ಲಿನ ಹೂಳು ತೆಗೆದು ಸ್ವಚ ಗೊಳಿಸಲು ಸ್ಥಳೀಯರು ಮನವಿ ಮಾಡಿದ್ದರು. ಸ್ಥಳೀಯಾಡಳಿತದ ಮನವಿ ಮೇರೆಗೆ ಚರಂಡಿ ಸ್ವಚ್ಛತೆ ಕಾರ್ಯಕೈಗೆತ್ತಿಕೊಂಡಿರುವ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಕಳೆದ ಒಂದೆರೆಡು ದಿನಗಳಿಂದ ಚರಂಡಿಯಲ್ಲಿನ ಹೂಳು ತೆಗೆದು ಸ್ವಚ್ಛಗೊಳಿಸುವ ಕಾರ್ಯನಡೆಸುತ್ತಿದ್ದು, ಇದು ಕೇವಲ ತೋರಿಕೆಗಷ್ಟೇ ಎಂದು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾನೂನು ಕ್ರಮ ಕೈಗೊಳ್ಳಲಾಗುವುದು

ಚರಂಡಿ ಸರಿಯಾಗಿ ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗಿದೆ ಮತ್ತು ಚರಂಡಿಯಿಂದ ತೆಗೆದ ಹೂಳನ್ನು ಬೇರೆಡೆ ಸ್ಥಳಾಂತರಿಸುವಂತೆ ತಿಳಿಸಲಾಗಿದೆ. ಮಳೆ ನೀರು ಹರಿದು ಹೋಗುವ ಚರಂಡಿ ಮುಚ್ಚಿ ನೀರಿನ ಹರಿವಿಗೆ ಅಡ್ಡಿಯುಂಟು ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು

● ಜಯಂತಿ ಖಾರ್ವಿ, ಅಧ್ಯಕ್ಷರು, ಗ್ರಾ.ಪಂ.ಗಂಗೊಳ್ಳಿ

ಬಿಜೆಪಿ ಪಳ್ಳಿ ಕುಕ್ಕುಂದೂರು ಗ್ರಾಮಗಳ ಕಾರ್ಯಕರ್ತರ ಬೂತ್ ಸಂಘಟನಾ ಸಭೆ



ಕಾರ್ಕಳ: ಕಾರ್ಕಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಪಳ್ಳಿ ಕುಕ್ಕುಂದೂರು ಗ್ರಾಮಗಳ ಕಾರ್ಯಕರ್ತರ ಬೂತ್ ಸಂಘಟನಾ ಸಭೆ ನಕ್ರೆ ಕುಂಜುಬೆಟ್ಟುವಿನಲ್ಲಿ ನಡೆಯಿತು.

ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಕ್ಷೇತ್ರದ ಶಾಸಕ ವಿ. ಸುನಿಲ್ ಕುಮಾರ್, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ರಾಜ್ಯದ ಜನತೆಗೆ ಆದ ದ್ರೋಹದ ಬಗ್ಗೆ ಉಲ್ಲೇಕಿಸುತ್ತಾ ಕೇವಲ ಗ್ಯಾರಂಟಿ ಯೋಜನೆಗಳಿಗೆ ಪ್ರಚಾರ ಗಿಟ್ಟಿಸಿಕೊಂಡು ಅಧಿಕಾರಕ್ಕಾಗಿ ಕಚ್ಚಾಟ ಮಾಡಿಕೊಂಡು ಕಾಲ ಕಳೆದದ್ದು ಬಿಟ್ಟರೆ ಬೇರೆ ಯಾವ ಸಾಧನೆ ಈ ಸರಕಾರದ್ದು ಇಲ್ಲವಾಗಿದೆ. ದಬ್ಬಾಳಿಕೆ, ದೌರ್ಜನ್ಯ, ಸ್ವಜನ ಪಕ್ಷಪಾತ, ಆಡಳಿತ ಯಂತ್ರದ ದುರುಪಯೋಗದ ಬಗ್ಗೆ ತಳಮಟ್ಟದಲ್ಲಿ ಧ್ವನಿ ಎತ್ತುವ ಕೆಲಸವಾಗಬೇಕಿದೆ. ಅಭಿವೃದ್ಧಿ ಚಟುವಟಿಕೆಗಳಿಗೆ ಅನುದಾನ ನೀಡದೆ ಅಧಿಕಾರದ ಅಮಲಿನಲ್ಲಿ ತೇಲಾಡುತ್ತಿರುವ ಸರಕಾರಕ್ಕೆ ಜನಾಕ್ರೋಶದ ಬಿಸಿ ಮುಟ್ಟಿಸುವ ಕೆಲಸವಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಂಡಲ ಅಧ್ಯಕ್ಷ ನವೀನ್ ನಾಯಕ್, ಪಕ್ಷ ಸಂಘಟನೆಗೆ ನಮ್ಮ ಮುಂದಿರುವ ಕೆಲವು ವಿಶೇಷ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ತಾ.ಪಂ.ಮಾಜಿ ಉಪಾಧ್ಯಕ್ಷ ರವೀಂದ್ರ ಕುಮಾರ್ ಗ್ರಾಮೀಣ ಭಾಗದಲ್ಲಿ ಪಕ್ಷದ ಬಲವರ್ಧನೆಗೆ ಒತ್ತು ನೀಡುವ ನಿಟ್ಟಿನಲ್ಲಿ ಪ್ರತಿ ಬೂತಿನ ಜವಾಬ್ದಾರಿ ವಹಿಸಿರುವ ಪದಾಧಿಕಾರಿಗಳು ನಿಷ್ಠೆ - ಶ್ರದ್ಧೆಯಿಂದ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಜನರ ಕಷ್ಟಗಳಿಗೆ ಧ್ವನಿಯಾಗಬೇಕೆಂದರು.

ಪಕ್ಷದ ಹಿರಿಯರಾದ ಅಂತೋನಿ ಡಿಸೋಜಾ, ಮಂಡಲ ಕಾರ್ಯದರ್ಶಿ ಸುಮಿತ್ ಶೆಟ್ಟಿ ಶಕ್ತಿ ಕೇಂದ್ರ ಅಧ್ಯಕ್ಷ ಸಂದೀಪ್ ಅಂಚನ್, ಪ್ರಧಾನ ಕಾರ್ಯದರ್ಶಿ, ಯೋಗೀಶ್ ಸಾಲಿಯಾನ್, ಪದಾಧಿಕಾರಿಗಳಾದ ರಾಕೇಶ್ ಶೆಟ್ಟಿ , ರವಿಕುಮಾರ್ ಶೆಟ್ಟಿ, ಮೋಹನ್ ದಾಸ್ ಮತ್ತಿತರರಿದ್ದರು.

---

4 ಕೋ.ರೂ.ವೆಚ್ಚದ ತೆಂಕ ನಿಡಿಯೂರು ಗ್ರಾಮದ ಕುಮ್ಮೆಕೆರೆ ಕಾಮಗಾರಿ ಉದ್ಘಾಟನೆ



ಉಡುಪಿ: ತೆಂಕನಿಡಿಯೂರು ಗ್ರಾಮದಲ್ಲಿ ಸಣ್ಣ ನೀರಾವರಿ ಇಲಾಖೆ ಮೂಲಕ ಸುಮಾರು ರೂ. 4 ಕೋ.ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿದ ಕುಮ್ಮೆಕೆರೆ ಕಾಮಗಾರಿಯನ್ನು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಉದ್ಘಾಟಿಸಿದರು.

ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್, ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ತಾ.ಪಂ. ಉಪಾಧ್ಯಕ್ಷ ಶರತ್ ಕುಮಾರ್ ಬೈಲಕೆರೆ, ತೆಂಕನಿಡಿಯೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಗಾಯತ್ರಿ ಸುರೇಶ್, ಕೃಷ್ಣ ಶೆಟ್ಟಿ ಪ್ರಶಾಂತ ಸಾಲ್ಯಾನ್, ಪಕ್ಷದ ಪ್ರಮುಖರಾದ ಉಮೇಶ್ ಪೂಜಾರಿ ಬಡಾನಿಡಿಯೂರು, ಪ್ರಭಾಕರ ತಿಂಗಳಾಯ, ನಾಗರಾಜ ಕುಂದರ್, ಕೃಷ್ಣ ದೇವಾಡಿಗ, ಸತೀಶ್ ನಾಯ್ಕ್, ನವೀನ್ ಕಾಂಚನ್, ಅರುಣ್ ಜತ್ತನ್, ವಿನೋದ್ ಸುವರ್ಣ, ಸತೀಶ್ ಪೂಜಾರಿ, ಮಾಲಿನಿ ಜತ್ತನ್, ವಿಕಿತ ಸುರೇಶ್, ಪ್ರಶಾಂತ ಹೆಬ್ಬಾರ್, ಗೀತಾ ಶೆಟ್ಟಿ ಶಂಕರ್ ಬೈಲಕೆರೆ, ಸುರೇಶ್ ಸಾಲ್ಯಾನ್, ಅಪ್ಪಣ್ಣ ತೊಟ್ಟಂ, ಸುದೀಪ್ ತೊಟ್ಟಂ, ಗುರು ತೊಟ್ಟಂ, ಶಂಕರ್ ಬೈಲಕರೆ, ರವಿ ಬಂಗೇರ, ರಮೇಶ್ ಮತ್ತಿತರರಿದ್ದರು.

ಅಭಿವೃದ್ಧಿ

ತೆಂಕನಿಡಿಯೂರು ಗ್ರಾಮದ ಬಹುವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಕುಮ್ಮಕೆರೆಯನ್ನು ವಿಶೇಷ ಆದ್ಯತೆ ವಹಿಸಿ ಅಭಿವೃದ್ಧಿ ಪಡಿಸಲಾಗಿದ್ದು, ಕ್ಷೇತ್ರದ ಎಲ್ಲಾ ಕೆರೆಗಳ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದು, ಈ ಮೂಲಕ ಅಂತರ್ಜಲ ಪುನಶ್ಚೇತನಗೊಳಿಸಿ ಗ್ರಾಮದ ಕೃಷಿ ಚಟುವಟಿಕೆಗಳಿಗೆ ಪೂರಕ ವಾತಾವರಣ ನಿರ್ಮಿಸಲಾಗುವುದು.

● ಯಶ್‌ಪಾಲ್ ಸುವರ್ಣ

ಕೋಡಿ ಕನ್ಯಾಣದಲ್ಲಿ ಪಚ್ಚಿಲೆ ಕ್ಷೇತ್ರೋತ್ಸವ | ಹಿರಿಯ ವಿಜ್ಞಾನಿ ಡಾ.ಧನಂಜಯರಿಂದ ಪಚ್ಚಿಲೆ ಚಿಪ್ಪು ಬಿಡಿಸುವ ಮೂಲಕ ಉದ್ಘಾಟನೆ

ಸಾಂಪ್ರಾದಾಯಿಕ ಪದ್ಧತಿ ಜೊತೆ ಆಧುನಿಕ ಮೀನು ಕೃಷಿಯತ್ತ ಒಲವು ತೋರುವುದು ಇಂದಿನ ಅಗತ್ಯ

ಕೋಟ: ಕೋಡಿ ಕನ್ಯಾಣದಲ್ಲಿ ಇತ್ತೀಚೆಗೆ ಪಚ್ಚಿಲೆ ಕ್ಷೇತ್ರೋತ್ಸವ ಕೋಡಿ ಕನ್ಯಾಣದ ಸೇತುವೆ ಸಮೀಪ ಜರುಗಿತು. ಕ್ಷೇತ್ರೋತ್ಸವವನ್ನು ಉಡುಪಿ ಕಿನಾರ ಮೀನುಗಾರರ ಉತ್ಪಾದಕ ಕಂಪನಿ, ಅಮೃತೇಶ್ವರಿ ರೈತ ಉತ್ಪಾದಕ ಕಂಪನಿ ನಿಯಮಿತ, ಗೋವಾದ ಕರಾವಳಿ ಕೃಷಿ ಸಂಶೋಧನಾ ಸಂಸ್ಥೆ ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ-ಉಡುಪಿ, ಮೀನುಗಾರಿಕೆ ಇಲಾಖೆ-ಉಡುಪಿ, ಭಾ.ಕೃ.ಅ.ಪ. ಕೃಷಿ ವಿಜ್ಞಾನ ಕೇಂದ್ರ-ಬ್ರಹ್ಮಾವರ, ಅರಬ್ಬಿ ಸಮುದ್ರ ಮೀನುಗಾರಿಕೆ ನಿರ್ವಹಣೆ ಸಮನ್ವಯ ಸಮಿತಿ, ಕೆನರಾ ಬ್ಯಾಂಕ್, ಯುಕೋ ಬ್ಯಾಂಕ್, ಸ್ಕೋಡ್‌ವೆಸ್ ಸಂಸ್ಥೆ, ಆಯುಷ್ಮಾನ್ ಭವ ಸಂಸ್ಥೆ ಜಂಟಿಯಾಗಿ ಆಯೋಜಿಸಿತು.

ಬ್ರಹ್ಮಾವರ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಹಾಗೂ ಹಿರಿಯ ವಿಜ್ಞಾನಿ ಡಾ. ಧನಂಜಯ ಅವರು ಪಚ್ಚಿಲೆಯ ಚಿಪ್ಪನ್ನು ಬಿಡಿಸುವ ಮೂಲಕ ಈ ಕ್ಷೇತ್ರೋತ್ಸವಕ್ಕೆ ಅಧಿಕೃತ ಚಾಲನೆ ನೀಡಿದರು.



ಆದಾಯ ಹೆಚ್ಚಳಕ್ಕೆ ಹೊಸ ತಳಿಗಳ ಕೃಷಿ ಅಗತ್ಯ

ಕಾರ್ಯಕ್ರಮದಲ್ಲಿ ಮಾತನಾಡಿದ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಧನಂಜಯ, ಮೀನುಗಾರರು ಸಾಂಪ್ರದಾಯಿಕ ಪದ್ಧತಿಯ ಜೊತೆಗೆ ಹೊಸ ತಳಿಗಳ ಮೀನು ಕೃಷಿಯತ್ತ ಹೆಚ್ಚಿನ ಒಲವು ತೋರಬೇಕು. ಇಂತಹ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿದ್ದು, ಗ್ರಾಹಕರು ಇವುಗಳನ್ನು ಹೆಚ್ಚು ಇಷ್ಟಪಡುತ್ತಾರೆ. ವೈಜ್ಞಾನಿಕ ತಂತ್ರಜ್ಞಾನ ಬಳಸಿಕೊಂಡು ಕೃಷಿ ಮಾಡುವುದರಿಂದ ಮೀನುಗಾರರು ತಮ್ಮ ಆದಾಯ ಗಣನೀಯವಾಗಿ ಹೆಚ್ಚಿಸಿಕೊಳ್ಳಲು ಸಾಧ್ಯ ಎಂದು ತಿಳಿಸಿದರು.

ಉಡುಪಿ ಜಿಲ್ಲಾ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಕುಮಾರ್ ಸ್ವಾಮಿ ಮಾತನಾಡಿದರು.

ಯಾವುದೇ ದುಷ್ಪರಿಣಾಮ ಬೀರುವುದಿಲ್ಲ

ಹಿರಿಯ ಕೃಷಿ ವಿಜ್ಞಾನಿ ಡಾ. ಶ್ರೀಕಾಂತ್ ಮಾತನಾಡಿ, ಪಚ್ಚಿಲೆ ಕೃಷಿಯು ಸಂಪೂರ್ಣವಾಗಿ ನೈಸರ್ಗಿಕವಾಗಿದ್ದು ಇದರಿಂದ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ. ಈ ವರ್ಷ ಪಚ್ಚಿಲೆ ಉತ್ಪಾದನೆ ಹೆಚ್ಚಿರುವುದರಿಂದ ಮಾರುಕಟ್ಟೆಯಲ್ಲಿ ಎದುರಾಗಿರುವ ಕೆಲವು ಸವಾಲುಗಳನ್ನು ನಿವಾರಿಸಲು ಸಂಶೋಧನಾ ಸಂಸ್ಥೆಯು ಪ್ರಯತ್ನಿಸುತ್ತಿದೆ ಎಂದು ಅವರು ಭರವಸೆ ನೀಡಿದರು.

ಆರ್ಥಿಕ ನೆರವು ಮತ್ತು ಪ್ರಗತಿಪರ ರೈತರ ಭಾಗಿತ್ವದಡಿ ಬ್ಯಾಂಕಿಂಗ್ ವಲಯದಿಂದ ಸಿಗುವ ಸಾಲ ಸೌಲಭ್ಯಗಳ ಕುರಿತು ಕೆನರಾ ಬ್ಯಾಂಕ್‌ನ ಮೀರಾ ಹಾಗೂ ಕೋಟ ಯುಕೋ ಬ್ಯಾಂಕ್‌ನ ನರೇಶ್ ಮಾಹಿತಿ ನೀಡಿದರು. ಇದೇ ಸಂದರ್ಭ ವಿಜ್ಞಾನಿ ಡಾ.ಎಲ್ರೋಯ್ ಫೇರೆರಾ ,ಪ್ರಗತಿಪರ ಕೃಷಿಕರಾದ ಗಣಪ ಪೂಜಾರಿ, ಸುಶ್ಮಿತಾ, ರವಿ ಖಾರ್ವಿ ಮತ್ತು ಕೃಷಿ ಸಖಿ ತನುಜಾ, ಉಡುಪಿ ಕಿನಾರ ಮೀನುಗಾರರ ಉತ್ಪಾದಕ ಕಂಪನಿ ನಿರ್ದೇಶಕ ಸುದಿನ ಕೋಡಿ ಅವರು ಉಪಸ್ಥಿತರಿದ್ದು, ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಈ ಸಂದರ್ಭ ಪಚ್ಚಿಲೆ ಬಳಸಿ ತಯಾರಿಸಿದ ವಿವಿಧ ನೂತನ, ರುಚಿಕರವಾದ ತಿಂಡಿ ತಿನಿಸು ಪ್ರದರ್ಶಿಸಲಾಯಿತು. ಕರಾವಳಿ ನೂರಾರು ಕೃಷಿಕರು, ಆಸಕ್ತರು ತರಬೇತಿ , ಪ್ರಾತ್ಯಕ್ಷಿಕೆ ಪ್ರಯೋಜನ ಪಡೆದರು. ಬ್ರಹ್ಮಾವರ ಕೃಷಿ ವಿಜ್ಞಾನ ಕೇಂದ್ರದ ಮೀನುಗಾರಿಕೆ ವಿಜ್ಞಾನಿ ಡಾ. ಸದಾನಂದ ಆಚಾರ್ಯ ಸ್ವಾಗತಿಸಿದರು.

ಸಬ್ಸಿಡಿ ಸೌಲಭ್ಯವನ್ನು ಪಡೆದುಕೊಳ್ಳಬೇಕು

ಆಧುನಿಕ ವಿಧಾನಗಳ ಅಳವಡಿಸಿಕೊಳ್ಳುವ ಮೂಲಕ ಮೀನು , ಇತರ ಜಲಚರಗಳ ಉತ್ಪಾದನೆ ಹೆಚ್ಚಿಸಿ ಸುಸ್ಥಿರ ಆದಾಯ ಗಳಿಸಲು ಉತ್ತಮ ಅವಕಾಶಗಳಿವೆ. ಇದೇ ವೇಳೆ ಇಲಾಖೆ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ಶೀಘ್ರವಾಗಿ ಸಲ್ಲಿಸಿ, ಸರ್ಕಾರದಿಂದ ಸಿಗುವ ಸಬ್ಸಿಡಿ (ಸಹಾಯಧನ) ಸೌಲಭ್ಯವನ್ನು ಪಡೆದುಕೊಳ್ಳಬೇಕು.

● ಕುಮಾರ್ ಸ್ವಾಮಿ

ಮಂಗಳೂರು
ಶುಕ್ರವಾರ, 12 ಜೂನ್ 2026
ಸಂಪುಟ 48, ಸಂಚಿಕೆ 85 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

824 ಸ್ಥಾನಗಳಿಗೆ ಏರಿಕೆಗೆ ಇಎಸಿ-ಪಿಎಂ ಶಿಫಾರಸು | ೦೨
ಅಭಿವೃದ್ಧಿಗೆ ₹1,750 ಕೋಟಿ ಸಾಲ | ೦೫
ಫಿಫಾ! 48 ತಂಡಗಳಿಗೆ ಈ ಸಲ ಕಪ್ ನಮ್ದೇ ಎಂಬ ಕನಸು | ೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಅಶ್ವಿನಿ ಉಪರಿ ಭರಣಿ

ದಿನದ ಮಾತು

ಸಿಟ್ಟಿನಿಂದ ಮಾತನಾಡುವಾಗ ತಿಳುವಳಿಕೆ ತನ್ನ ಮೇಲೆ ಮುಸುಕು ಹಾಕಿಕೊಳ್ಳುತ್ತದೆ.

▲ನಾಣ್ನುಡಿ

ದೀರ್ಘಾವಧಿ ಪ್ರವಾಸ; ನೆಹರು ದಾಖಲೆ ಅಬಾಧಿತ!

ಉಘೇ ವೀರ ಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ರಾಜ್ಯಸಭೆಗೆ ಖರ್ಗೆ ಸೇರಿ ನಾಲ್ವರ ಅವಿರೋಧ ಆಯ್ಕೆ

• **ಬೆಂಗಳೂರು:** ನಿರೀಕ್ಷೆಯಂತೆ ಕರ್ನಾಟಕದಿಂದ ರಾಜ್ಯಸಭೆಗೆ ಸ್ಪರ್ಧಿಸಿದ್ದ ನಾಲ್ವರು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮನ್ಸೂರ್ ಅಲಿ ಖಾನ್, ಪವನ್ ಖೇರಾ ಮತ್ತು ಬಿಜೆಪಿಯ ಅಭ್ಯರ್ಥಿ ಪ್ರೊ.ಎಂ ನಾಗರಾಜ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿಯಾಗಿರುವ ಎಂ.ಕೆ. ವಿಶಾಲಾಕ್ಷಿ ಅವರು ಪ್ರಕಟಿಸಿದ್ದಾರೆ. ➡ಪುಟ ೪

ಕೆಲವು ಎಥನಾಲ್ ಮಿಶ್ರಿತ ಪೆಟ್ರೋಲ್ ಸುಂಕ ಮುಕ್ತ

• **ಹೊಸದಿಲ್ಲಿ:** ಕೆಲವು ಎಥನಾಲ್ ಮಿಶ್ರಿತ ಪೆಟ್ರೋಲ್ ಪ್ರಭೇದಗಳನ್ನು ಕೇಂದ್ರ ಸರ್ಕಾರವು ಅಬಕಾರಿ ಸುಂಕದಿಂದ ಸಂಪೂರ್ಣ ಮುಕ್ತಗೊಳಿಸಿದೆ. ಇ-ಪೆಟ್ರೋಲ್ ಪ್ರಭೇದಗಳ ಮೇಲಿನ ಅಬಕಾರಿ ಸುಂಕಕ್ಕೆ ಸಂಪೂರ್ಣ ವಿನಾಯಿತಿ ನೀಡಿರುವುದಾಗಿ ಕೇಂದ್ರ ವಿತ್ತೀಯ ಸಚಿವಾಲಯವು ಗುರುವಾರ ಪ್ರಕಟಣೆ ಹೊರಡಿಸಿದೆ.

ಶಾಲೆಯಿಂದ ಕೋಟಿ ನಗದು, ಆಕ್ಷೇಪಾರ್ಹ ವಸ್ತುಗಳ ವಶ

• ಪುಟ ೭

ಕೇಂದ್ರ-ರಾಜ್ಯಗಳ ಸಹಕಾರದಿಂದ ದೇಶಾಭಿವೃದ್ಧಿಗೆ ಮೋದಿ ಕರೆ

ನೀತಿ ಆಯೋಗ ಸಭೆ | ಅಭಿವೃದ್ಧಿ ಭಾರತದ ಗುರಿಗೆ ಹೊಸ ದಿಕ್ಕು

100 ದಿನಗಳ ಗುರಿ

• **ಹೊಸದಿಲ್ಲಿ:** ರಾಜ್ಯಗಳು ಸ್ಪಷ್ಟವಾದ 100 ದಿನಗಳ ಗುರಿ ಹಾಗೂ ಐದು ವರ್ಷದ ಅಭಿವೃದ್ಧಿ ಚೌಕಟ್ಟು ರೂಪಿಸಬೇಕು ಎಂದು ಸೂಚಿಸಿದ ಪ್ರಧಾನಿ ನರೇಂದ್ರ ಮೋದಿಯವರು, ಪಾರದರ್ಶಕ ಆಡಳಿತ, ಮೂಲಸೌಕರ್ಯ ಹಾಗೂ ಹೂಡಿಕೆ ಸ್ನೇಹಿ ನೀತಿಗಳು ಭಾರತದ ಅಭಿವೃದ್ಧಿಗೆ ಪ್ರಮುಖ ಆಧಾರವಾಗಲಿವೆ ಎಂದು ಹೇಳಿದರು.

ಹೊಸದಿಲ್ಲಿಯಲ್ಲಿ ನಡೆದ ನೀತಿ ಆಯೋಗದ 11ನೇ ಆಡಳಿತ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, 'ವಿಕಸಿತ ಭಾರತ 2047' ದೃಷ್ಟಿಕೋನದ ಬೆಳವಣಿಗೆ ಮಾರ್ಗಸೂಚಿಯನ್ನು ಅನಾವರಣಗೊಳಿಸಿದರು. "ಸಮಗ್ರ ಮಾನವ ಅಭಿವೃದ್ಧಿ-ವಿಕಸಿತ ಭಾರತ 2047" ಎಂಬ ವಿಷಯ ಕುರಿತು ನಡೆದ ಸಭೆಯಲ್ಲಿ 28 ರಾಜ್ಯಗಳು ಹಾಗೂ 5 ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು ಮತ್ತು ಆಡಳಿತಾಧಿಕಾರಿಗಳು ಭಾಗವಹಿಸಿದ್ದರು.

NITI Aayog

ಜಾಗತಿಕ ಸವಾಲಿನ ನಡುವೆಯೂ ಭಾರತದ ಬೆಳವಣಿಗೆ: ಪ್ರಪಂಚದ ಅನೇಕ ಆರ್ಥಿಕತೆಗಳು ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಭಾರತ ಅಭಿವೃದ್ಧಿಯ ಕೇಂದ್ರಬಿಂದುವಾಗಿ ಹೊರಹೊಮ್ಮಿದೆ. ಆದರೆ, ಆತ್ಮನಿರ್ಭರ ಭಾರತ ಗುರಿಯನ್ನು ಬಲಪಡಿಸುವ ಜತೆಗೆ ನವೀಕರಿಸಬಹುದಾದ ಇಂಧನ ಸೇರಿದಂತೆ ಜಾಗತಿಕ ಉತ್ತಮ ಮಾದರಿಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದರು.

ಯುವಜನತೆ ಮತ್ತು ಮಹಿಳಾ ಸಬಲೀಕರಣಕ್ಕೆ ಒತ್ತು: ದೇಶದಲ್ಲಿ ಸುಮಾರು 70 ಕೋಟಿ ಜನರು 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು, ಇವರನ್ನು ಅಭಿವೃದ್ಧಿಯ ಶಕ್ತಿಯಾಗಿ ರೂಪಿಸಬೇಕು ಎಂದು ಹೇಳಿದರು. ➡ಪುಟ ೪

ಅಪರೂಪದ ಪೂರ್ಣ ಹಾಜರಾತಿ

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನೀತಿ ಆಯೋಗದ 11ನೇ ಆಡಳಿತ ಮಂಡಳಿ ಸಭೆ ಈ ಬಾರಿ ವಿಶೇಷ ಗಮನ ಸೆಳೆಯಿತು. ಕಳೆದ ಕೆಲವು ವರ್ಷಗಳಲ್ಲಿ ವಿರೋಧ ಪಕ್ಷ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳ ಬಹಿಷ್ಕಾರ ಮತ್ತು ಗೈರುಹಾಜರಿಯಿಂದ ಗುರುತಿಸಿಕೊಂಡಿದ್ದ ಸಭೆಗೆ ಈ ಬಾರಿ ಎಲ್ಲ 28 ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ➡ಪುಟ ೪



ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲು ಹೊಸದಿಲ್ಲಿಗೆ ತೆರಳಿದ್ದ ಸಿಎಂ ಡಿ.ಕೆ. ಶಿವಕುಮಾರ್ ಅವರು, ಗುರುವಾರ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ವಿಶ್ವಗುರು ಬಸವಣ್ಣನವರ ಮೂರ್ತಿ ನೀಡಿದರು.

ಸರ್ಕಾರಿ ಶಾಲೆ-ಕಾಲೇಜುಗಳಿಗೆ ವಿಶೇಷ ಅನುದಾನ ನೀಡಿ: ಸಿಎಂ

• **ಹೊಸದಿಲ್ಲಿ:** ಖಾಸಗಿ ವಲಯಕ್ಕೆ ಸಮಾನ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರಿ ಶಾಲೆ- ಕಾಲೇಜುಗಳಿಗೆ ಒಂದು ಬಾರಿಯ ಮೂಲಸೌಕರ್ಯ ಅನುದಾನ ನೀಡುವಂತೆ ಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರಕ್ಕೆ ಮನವಿ ಮಾಡಿದ್ದಾರೆ.

ಪ್ರಮುಖ ಬೇಡಿಕೆಗಳು

1. ಪೌಷ್ಟಿಕತೆ, ಆರೋಗ್ಯ, ಶಿಕ್ಷಣ ಹಾಗೂ ಉದ್ಯೋಗ ಸೂಚ್ಯಂಕ ಸುಧಾರಣೆಗೆ ರಾಜ್ಯಗಳಿಗೆ ಪ್ರೋತ್ಸಾಹ
2. ತಂತ್ರಜ್ಞಾನ, ಸಂಶೋಧನೆ ಮತ್ತು ಮಾನವ ಸಂಪನ್ಮೂಲ ಹೂಡಿಕೆಗೆ ಒತ್ತು
3. ಗ್ರಾಮೀಣ ಆರೋಗ್ಯ-ಶಿಕ್ಷಣ ಅಭಿವೃದ್ಧಿಗೆ ಸಿಎಸ್‌ಆರ್ ನಿಯಮ ಜಾರಿ
4. ಉದ್ಯಮಗಳು ಉದ್ಯೋಗ ಅಗತ್ಯತೆ ಕೇಂದ್ರೀಕೃತ ಪೋರ್ಟಲ್‌ನಲ್ಲಿ ಹಂಚಿಕೊಳ್ಳುವ ವ್ಯವಸ್ಥೆ
5. ಬೆಂಗಳೂರಿನ ಹೊರಗೂ ಗುಣಮಟ್ಟದ ಉದ್ಯೋಗ ಕೇಂದ್ರಗಳ ಅಭಿವೃದ್ಧಿ.

➡ಪುಟ ೪

ನಾವಿಕರ ಸಾವಿಗೆ ಭಾರತ ತೀವ್ರ ಪ್ರತಿಭಟನೆ

ದಾಳಿ ತಕ್ಷಣ ನಿಲ್ಲಿಸಿ, ಅಮೆರಿಕಕ್ಕೆ ಸೂಚನೆ

• **ಹೊಸದಿಲ್ಲಿ:** ಕಳೆದ ನಾಲ್ಕು ದಿನಗಳಲ್ಲಿ ಒಮಾನ್ ಕರಾವಳಿ ಪ್ರದೇಶದ ಸಮೀಪ ಅಮೆರಿಕದ ಸೈನಿಕ ಕ್ರಮಗಳಲ್ಲಿ ಭಾರತೀಯ ಸಿಬ್ಬಂದಿಯಿದ್ದ ಮೂರು ವ್ಯಾಪಾರಿ ಹಡಗುಗಳು ಗುರಿಯಾಗಿದ್ದ ಹಿನ್ನೆಲೆ, ಭಾರತ ಸರ್ಕಾರ ಅಮೆರಿಕದ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ. ಈ ಘಟನೆಗಳಲ್ಲಿ ಮೂವರು ಭಾರತೀಯ ನಾವಿಕರು ಮೃತಪಟ್ಟಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಇಎಂ) ತಿಳಿಸಿದೆ.

ಈ ಕುರಿತು ಭಾರತದಲ್ಲಿನ ಅಮೆರಿಕದ ಕಾರ್ಯನಿರ್ವಹಣಾ ರಾಯಭಾರಿ ಜೇಸನ್ ಮೀಕ್ಸ್ ಅವರನ್ನು ಸಚಿವಾಲಯಕ್ಕೆ ಕರೆಯಿಸಿಕೊಂಡು ಭಾರತದ ಕಳವಳ ಮತ್ತು ಆಕ್ಷೇಪವನ್ನು ಅಧಿಕೃತವಾಗಿ ತಿಳಿಸಲಾಗಿದೆ. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ನಮ್ಮ ಸಮುದ್ರಯಾನ ಸಮುದಾಯದ ಸುರಕ್ಷತೆ ಮತ್ತು ಕಲ್ಯಾಣಕ್ಕೆ ನಾವು ಅತ್ಯಂತ ಮಹತ್ವ ನೀಡುತ್ತೇವೆ. ಎಂ.ಟಿ. ಸೆಟ್ಟೆಬೆಲ್ಲೊ ಹಡಗಿನ ಮೇಲೆ ನಡೆದ ದಾಳಿಯ ಬಳಿಕ ಅಮೆರಿಕದ ಮುಂದೆ ನಮ್ಮ ತೀವ್ರ ಪ್ರತಿಭಟನೆಯನ್ನು ದಾಖಲಿಸಿದ್ದೇವೆ ಎಂದರು.



ನಡೆಯುತ್ತಿರುವ ದಾಳಿಗಳ ಬಗ್ಗೆ ನಮ್ಮ ಆಳವಾದ ಕಳವಳವನ್ನು ವ್ಯಕ್ತಪಡಿಸಿದ್ದೇವೆ. ಇಂತಹ ದಾಳಿಗಳು ಕೂಡಲೇ ನಿಲ್ಲಬೇಕು ಎಂದು ಅವರು ಹೇಳಿದರು. ಮಾತುಕತೆ ಮತ್ತು ರಾಜತಾಂತ್ರಿಕ ಪರಿಹಾರವೇ ದೀರ್ಘಕಾಲಿಕ ಶಾಂತಿಗೆ ದಾರಿ ಎಂದು ಭಾರತ ಸರ್ಕಾರ ಸ್ಪಷ್ಟಪಡಿಸಿದೆ. ಜತೆಗೆ ಅಂತಾರಾಷ್ಟ್ರೀಯ ಕಾನೂನುಗಳಿಗೆ ಅನುಗುಣವಾಗಿ ಹಾರ್ಮುಜ್ ಜಲಸಂಧಿಯಲ್ಲಿ ಅಡೆತಡೆರಹಿತ ಸಂಚಾರ ಇರಬೇಕು ಎಂದು ಒತ್ತಿಹೇಳಿದೆ.

ದಾಳಿಗೊಳಗಾದ ಹಡಗುಗಳು: ಜೈಸ್ವಾಲ್ ಮಾಹಿತಿ ಪ್ರಕಾರ, ದಾಳಿಗೊಳಗಾದ 3 ಹಡಗುಗಳಲ್ಲಿ 2 ಪಲಾವು ದೇಶದ ಧ್ವಜ ಹೊಂದಿದ್ದರೆ, ಮತ್ತೊಂದು ಗಿನಿಯಾ-ಬಿಸ್ಸಾ ಧ್ವಜ ಹೊಂದಿತ್ತು. ಅವು ಭಾರತೀಯ ಮಾಲೀಕತ್ವದ ಹಡಗುಗಳಲ್ಲ. ಜೂ.8ರಂದು ಪಲಾವು ಧ್ವಜದ ಮಾರಿವೆಕ್ಸ್ ತೈಲ ಟ್ಯಾಂಕರ್ ಮೇಲೆ ಕ್ರಮ ಕೈಗೊಳ್ಳಲಾಗಿದ್ದು, ಅದರಲ್ಲಿದ್ದ 24 ಭಾರತೀಯ ನಾವಿಕರನ್ನು ರಕ್ಷಿಸಲಾಯಿತು. ➡ಪುಟ ೪

- ಒಮಾನ್ ಸಮುದ್ರ ತೀರದಲ್ಲಿ ಹಡಗುಗಳ ಮೇಲೆ ಅಮೆರಿಕ ದಾಳಿ
- ಭಾರತೀಯ ನಾವಿಕರ ಸುರಕ್ಷತೆ ಬಗ್ಗೆ ಭಾರತ ಕಳವಳ, ಆಕ್ರೋಶ



ಖಾರ್ಗ್ ದ್ವೀಪ ವಶಕ್ಕೆ: ಟ್ರಂಪ್ ಬೆದರಿಕೆ

• **ದುಬೈ:** ಅಗತ್ಯವಿದ್ದರೆ ದೊಡ್ಡ ಮಟ್ಟದ ದಾಳಿ ನಡೆಸಿ ಇರಾನ್‌ನ ತೈಲ ಮತ್ತು ಅನಿಲ ಕ್ಷೇತ್ರಗಳ ಮೇಲೆ ನಿಯಂತ್ರಣ ಸಾಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಪ್ರಮುಖವಾಗಿ ಇರಾನ್‌ನ ಪ್ರಮುಖ ತೈಲ ರಫ್ತು ಕೇಂದ್ರವಾದ ಖಾರ್ಗ್ ದ್ವೀಪವನ್ನು ವಶಕ್ಕೆ ಪಡೆಯುವ ಸಾಧ್ಯತೆಯನ್ನೂ ಪ್ರಸ್ತಾಪಿಸಿದ್ದಾರೆ. ➡ಪುಟ ೪

ರಾಜ್ಯ ಸರ್ಕಾರದಿಂದ ಮಹತ್ತರ ಯೋಜನೆ ಪರಿಷ್ಕರಣೆ

1.12 ಲಕ್ಷ ಗೃಹಲಕ್ಷ್ಮಿಯರಿಗೆ ಕೊಕ್

ಗೃಹಲಕ್ಷ್ಮಿ ಪ್ರತಿ ಯಜಮಾನಿಗೆ ಪ್ರತಿ ತಿಂಗಳು ₹2,000

• **ಬೆಂಗಳೂರು:** ಗ್ಯಾರಂಟಿ ಯೋಜನೆಗಳ ಪೈಕಿ ಅತೀ ಪ್ರಮುಖ ಯೋಜನೆಯಾದ ಗೃಹಲಕ್ಷ್ಮೀ ಯೋಜನೆಯ ಪರಿಷ್ಕರಣೆಯನ್ನು ರಾಜ್ಯ ಸರ್ಕಾರ ಕೈಗೊಂಡಿದ್ದು, ರಾಜ್ಯಾದ್ಯಂತ 1 ಲಕ್ಷದ 12 ಸಾವಿರ ಅನರ್ಹರನ್ನು ಗುರುತಿಸುವ ಮೂಲಕ ಪಟ್ಟಿಯಿಂದ ಕೈಬಿಟ್ಟಿರುವುದನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡಿದ್ದಾರೆ.

ಈಗಾಗಲೇ ಅನ್ನಭಾಗ್ಯ ಯೋಜನೆ ಪ್ರಯೋಜನ ಪಡೆಯುತ್ತಿರುವ ಅನರ್ಹರನ್ನು ಪತ್ತೆ ಹಚ್ಚುವ ಕಾರ್ಯ ನಡೆದಿದ್ದು, ಇದೀಗ ಗೃಹಲಕ್ಷ್ಮೀ ಯೋಜನೆ ಪರಿಷ್ಕರಣೆ ಜತೆಗೆ ಗೃಹ ಜ್ಯೋತಿ ಫಲಾನುಭವಿಗಳ ಪರಿಷ್ಕರಣೆ ನಡೆದಿದೆ. ಗೃಹಲಕ್ಷ್ಮೀ ಯೋಜನೆ ಮೃತ ಫಲಾನುಭವಿಗಳ ಹೆಸರಿನಲ್ಲಿ ಬೇರೆಯವರು ಹಣ ಪಡೆಯುತ್ತಿದ್ದಾರೆ ಎಂದು ತಿಳಿಸಿದರು. ➡ಪುಟ ೪

ಅನರ್ಹರನ್ನು ಪತ್ತೆ ಹಚ್ಚುವ ಕಾರ್ಯ

ಗೃಹಲಕ್ಷ್ಮೀ ಯೋಜನೆಯ 1 ಲಕ್ಷದ 12 ಸಾವಿರ ಫಲಾನುಭವಿಗಳಲ್ಲಿ 55,232 ಮಹಿಳೆಯರು ಮೃತರಾಗಿದ್ದು, 56,860 ಮಹಿಳೆಯರು ತೆರಿಗೆ ಪಾವತಿದಾರರು ಎಂದು ತಿಳಿದುಬಂದಿದ್ದು, 17 ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಟ್ಟು 1,12,092ಕ್ಕೂ ಹೆಚ್ಚು ಮಹಿಳೆಯರ ಹೆಸರನ್ನು ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ಪಟ್ಟಿಯಿಂದ ಕೈಬಿಡಲಾಗಿದೆ. ಗೃಹಲಕ್ಷ್ಮೀ ಯೋಜನೆಯ ಪ್ರತಿ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುವ ಯೋಜನೆ 2023ರ ಆಗಸ್ಟ್‌ನಿಂದ ಆರಂಭವಾಗಿದೆ. ➡ಪುಟ ೪

ಭವಿಷ್ಯದ ಅಗತ್ಯತೆಗಳಿಗಾಗಿ ರಾಜ್ಯ ಸರ್ಕಾರದ ಮಹತ್ವದ ಹೆಜ್ಜೆ


ಕೆಪಿಎಸ್‌ನಲ್ಲಿ ಕಂಪ್ಯೂಟರ್, ಎಐ ಶಿಕ್ಷಣ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಕೃತಕ ಬುದ್ಧಿಮತ್ತೆ(ಎಐ), ಮೆಷಿನ್ ಲರ್ನಿಂಗ್, ರೋಬೋಟಿಕ್ಸ್ ಮತ್ತು ಡಿಜಿಟಲ್ ತಂತ್ರಜ್ಞಾನಗಳು ಜಗತ್ತಿನ ಉದ್ಯೋಗ ಮಾರುಕಟ್ಟೆ ಹಾಗೂ ಜೀವನಶೈಲಿಯನ್ನು ವೇಗವಾಗಿ ಬದಲಾಯಿಸುತ್ತಿರುವ ಈ ಸಂದರ್ಭದಲ್ಲಿ, ರಾಜ್ಯ ಸರ್ಕಾರಿ ಶಿಕ್ಷಣ ವ್ಯವಸ್ಥೆಯು ಭವಿಷ್ಯದ ಅಗತ್ಯತೆಗಳಿಗೆ ಹೊಂದಿಕೊಳ್ಳುವ ಮಹತ್ವದ ಹೆಜ್ಜೆ ಇಟ್ಟಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ(ಕೆಪಿಎಸ್) ಪ್ರಥಮ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ಮತ್ತು ಮೂರನೇ ತರಗತಿಯಿಂದ ಎಐ ಶಿಕ್ಷಣವನ್ನು ಪರಿಚಯಿಸುವ ಮೂಲಕ ರಾಜ್ಯವು ದೇಶದ ಶಿಕ್ಷಣ ಕ್ಷೇತ್ರದಲ್ಲಿ ಮಾದರಿಯಾಗುವ ಪ್ರಯತ್ನ ನಡೆಸಿದೆ. ರಾಜ್ಯದಲ್ಲಿ ಪ್ರಸ್ತುತ ಸುಮಾರು 309 ಕೆಪಿಎಸ್ ಶಾಲೆಗಳಿದ್ದು, ಸರ್ಕಾರವು ಹೆಚ್ಚುವರಿಯಾಗಿ 800 ಕನ್ನಡ ಮಾಧ್ಯಮ ಮತ್ತು 100 ಉರ್ದು ಮಾಧ್ಯಮ ಶಾಲೆಗಳನ್ನು ಕೆಪಿಎಸ್ ಸ್ಥಾನಮಾನಕ್ಕೆ ಮೇಲ್ದರ್ಜೆಗೇರಿಸಲು ಯೋಜಿಸಿದೆ. ➡ಪುಟ ೪

ಡಿಜಿಟಲ್ ಶಿಕ್ಷಣ ಪರಿಣಾಮಕಾರಿ ಜಾರಿ



ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗೆ ದೊರೆಯುವ ತಂತ್ರಜ್ಞಾನ ಆಧಾರಿತ ಶಿಕ್ಷಣದ ಅವಕಾಶಗಳು ಸರ್ಕಾರಿ ಶಾಲೆ ಮಕ್ಕಳಿಗೂ ದೊರೆಯಬೇಕು ಎಂಬ ಉದ್ದೇಶದಿಂದ ಕೆಪಿಎಸ್ ಶಾಲೆಗಳ ಮೂಲಕ ಈ ಕಾರ್ಯಕ್ರಮ ಜಾರಿಗೊಳ್ಳುತ್ತಿದೆ. ➡ಪುಟ ೪

ಎನ್‌ಡಿಎ ಸ್ವಚ್ಛ ಆಡಳಿತ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕಳೆದ 12 ವರ್ಷಗಳಲ್ಲಿ ಎನ್‌ಡಿಎ ಭ್ರಷ್ಟಾಚಾರ ರಹಿತ, ಸ್ವಚ್ಛ ಆಡಳಿತವನ್ನು ನೀಡುತ್ತಿದೆ. ಮೂಲಸೌಕರ್ಯಕ್ಕೆ 12 ಲಕ್ಷ ಕೋಟಿ ರೂ.ಗೂ ಅಧಿಕ ಅನುದಾನ ಒದಗಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಆಯೋಜಿಸಿದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಆಡಳಿತದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ, ಕೋಟ್ಯಂತರ ಯುವಕರು ಭವಿಷ್ಯ ಕಟ್ಟಿಕೊಡಲು ಅಸಾಧ್ಯ ಎಂಬ ಸ್ಥಿತಿ ಇತ್ತು. ಆದರೆ, ಮೋದಿ ಅವರು ನೇತೃತ್ವ ವಹಿಸಿಕೊಂಡ ನಂತರ ಭಾರತ ವಿಶ್ವದಲ್ಲೇ ಬಲಿಷ್ಠ ದೇಶವಾಗಿ ಬದಲಾಗಿದೆ ಎಂದರು. ➡ಪುಟ ೪



ಪಿಒಕೆಯಲ್ಲಿ ಪಾಕ್ ಸೇನೆ ನರಮೇಧ

• **ಇಸ್ಲಾಮಾಬಾದ್:** ಪಾಕಿಸ್ತಾನ ಆಕ್ರಮಿತ ಕಾಶ್ಮೀರದ(ಪಿಒಕೆ) ರಾವಲಕೋಟ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಜನರ ಮೇಲೆ ಪಾಕಿಸ್ತಾನ ಸೇನೆ ಮತ್ತು ರೇಂಜರ್ಸ್ ಗುಂಡಿನ ದಾಳಿ ನಡೆಸಿದ ಪರಿಣಾಮ ಮತ್ತೆ ಕನಿಷ್ಠ 16 ಮಂದಿ ಮೃತಪಟ್ಟಿದ್ದು, 37ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ವಿದ್ಯುತ್ ದರ ಏರಿಕೆ, ಬೆಲೆ ಏರಿಕೆ, ಮೂಲಭೂತ ರಾಜಕೀಯ ಮತ್ತು ಆರ್ಥಿಕ ಹಕ್ಕುಗಳ ಕೊರತೆ ವಿರೋಧಿಸಿ ಸಾವಿರಾರು ಜನರು ಪ್ರತಿಭಟನೆ ನಡೆಸುತ್ತಿದ್ದರು. ➡ಪುಟ ೪

ಕಿರುಸುದ್ದಿ

ಜೂ. 14, 15: ಅಧಿಕಮಾಸದ ಮಂಗಳಾಚರಣೆ

ಮಂಗಳೂರು: ನಗರದ ವಿ.ಟಿ. ರಸ್ತೆಯಲ್ಲಿರುವ ಶ್ರೀಕೃಷ್ಣ ಮಂದಿರದಲ್ಲಿ ಅಧಿಕ ಪುರುಷೋತ್ತಮಮಾಸದ ಪ್ರಯುಕ್ತ ನಿರಂತರ ಒಂದು ತಿಂಗಳು ಜರುಗಿದ ಸಾಮೂಹಿಕ ಶ್ರೀಮದ್ ಭಗವದ್ಗೀತಾ ಪಠಣದ ಮಂಗಳಾಚಾರಣೆಯು ಜೂ. 14 ಮತ್ತು 15 ರಂದು ನಡೆಸಲು ಆಡಳಿತ ಮಂಡಳಿಯಿಂದ ನಿರ್ಧರಿಸಲಾಗಿದೆ. ಆದರ ಭಾಗವಾಗಿ 14 ರಂದು ಬೆಳಗ್ಗೆ ಶ್ರೀ ಭಗವದ್ಗೀತಾ ಹವನ, ಶ್ರೀ ವೀರ ವೆಂಕಟೇಶ ಭಜನಾ ಮಂಡಳಿಯವರಿಂದ ಭಜನೆ, ಸಾಮೂಹಿಕ ಶ್ರೀವಿಷ್ಣು ಸಹಸ್ರ ನಾಮ ಪಾರಾಯಣ, ವಿಶೇಷವಾಗಿ ಗೋಗ್ರಾಸದ ಬಗ್ಗೆ ಹೊರೆ ಕಾಣಿಕೆಯ ಮೂಲಕ ಗೋಶಾಲೆಗೆ ಗೋವಿನ ಆಹಾರ ಸಮರ್ಪಣೆ, ಸಂಜೆ 4 ಗಂಟೆಯಿಂದ ಸಾಮೂಹಿಕ ಸಂಪೂರ್ಣ ಶ್ರೀಮದ್ ಭಗವದ್ಗೀತಾ ಪಠಣ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸಾಯಂಕಾಲ 6.30 ರಿಂದ ಮುಂಬೈಯ ಖ್ಯಾತ ಹಿಂದುಸ್ತಾನಿ ಗಾಯಕಿ ವಿದುಷಿ ಭಾಗ್ಯಶ್ರೀ ದೇಶಪಾಂಡೆ ಅವರಿಂದ ಭಜನ ಸಂಧ್ಯಾ ಕಾರ್ಯಕ್ರಮ ಜರಗುವುದು. ಜೂ. 15 ರಂದು ಸಂಜೆ 4 ಗಂಟೆಯಿಂದ ಸಾಮೂಹಿಕ ಸಂಪೂರ್ಣ ಶ್ರೀಮದ್ ಭಗವದ್ಗೀತಾ ಪಠಣ ಮತ್ತು 6.30ಕ್ಕೆ ಸಭಾ ಕಾರ್ಯಕ್ರಮ, ಶ್ರೀ ದೇವರ ಮಂಗಳಾರತಿ ನಂತರ ಪಠಣದಲ್ಲಿ ಭಾಗವಹಿಸಿದ ಎಲ್ಲಾ ಭಗವದ್ಭಕ್ತರಿಗೆ ಅನುಗ್ರಹ ಪ್ರಸಾದ ವಿತರಣೆ ಜರಗಲಿರುವುದು. ಈ ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಭಗವದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಜೂ.13: ರೆಡ್‌ಕ್ರಾಸ್‌ನಿಂದ ವಿಶ್ವ ತಂಬಾಕು ರಹಿತ ದಿನಾಚರಣೆ

ಮಂಗಳೂರು: ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ಸರ್ಕಾರಿ ಪ.ಪೂ. ಕಾಲೇಜು ಹಂಪನಕಟ್ಟೆ, ಜಿಲ್ಲಾ ಸರ್ವೇಕ್ಷಣಾ ಘಟಕ ಮತ್ತು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ ಜೂ.13ರಂದು ಬೆಳಗ್ಗೆ 11ಕ್ಕೆ ಹಂಪನಕಟ್ಟೆ ಸರ್ಕಾರಿ ಪ.ಪೂ. ಕಾಲೇಜಿನ ಸಭಾಂಗಣದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ನಡೆಯಲಿದೆ. ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸರ್ಕಾರಿ ಪ.ಪೂ.ಕಾಲೇಜಿನ ಪ್ರಾಂಶುಪಾಲ ವಿನ್ಸೆಂಟ್ ಆಂತೋನಿ ಮಸ್ಕರೇನ್ಹಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಮಾಲೋಚಕ ಪುಂಡಲೀಕ ಲಕಾಟೆ ಮತು ವೆನ್ಲಾಕ್ ಆಸ್ಪತ್ರೆಯ ತಂಬಾಕು ನಿಯಂತ್ರಣ ಕೇಂದ್ರದ ಸಮಾಲೋಚಕ ವಿಜಯಕುಮಾರ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ ಎಂದು ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನಾ ಬಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಸೂರಜ್



ಪುತ್ತೂರು: ಬನ್ನೂರು ಗೋಳಿತ್ತಿಲ ನಿವಾಸಿ ಉಮ್ಮಣ್ಣ ಗೌಡರ ಪುತ್ರ ಸೂರಜ್ (51) ಜೂ. 11ರಂದು ನಸುಕಿನ ಜಾವ ನಿಧನರಾಗಿದ್ದಾರೆ. ಒಕ್ಕಲಿಗ ಗೌಡ ಸೇವಾ ಸಂಘದ ಬನ್ನೂರು ಗ್ರಾಮದ ಅಧ್ಯಕ್ಷರಾಗಿದ್ದು, ಬಿಜೆಪಿ ಶಕ್ತಿಕೇಂದ್ರದ ಅಧ್ಯಕ್ಷರೂ ಆಗಿರುವ ಸೂರಜ್ ಅವರು ರಾತ್ರಿ ಊಟ ಮಾಡಿ ಮಲಗಿದ್ದವರು ಬೆಳಗ್ಗೆ ಏಳದೆ ಇರುವುದನ್ನು ಗಮನಿಸಿ ನೋಡಿದಾಗ ಅವರು ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಘಟನೆಗೆ ಸಂಬಂಧಿಸಿ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಪುತ್ತೂರು ಸರಕಾರಿ ಆಸ್ಪತ್ರೆಗೆ ಕೊಂಡೊಯ್ಯಲಾಗಿದೆ. ಮೃತರು ತಂದೆ ಉಮ್ಮಣ್ಣ ಗೌಡ, ತಾಯಿ , ಪತ್ನಿ, ಸಹೋದರ, ಸಹೋದರಿಯನ್ನು ಆಗಲಿದ್ದಾರೆ.

ಸುಧಾಕರ ಶ್ರೀಯಾನ್



ಉಡುಪಿ: ಉಡುಪಿ ಗುಂಡಿಬೈಲು ನಿವಾಸಿ ಸುಧಾಕರ ಶ್ರೀಯಾನ್ (67) ಜೂ. 10ರಂದು ಅಲ್ಪಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನ ಹೊಂದಿದರು. 20 ವರ್ಷಗಳ ಕಾಲ ರಿಕ್ಷಾ ಚಾಲಕ ಹಾಗೂ ಮಾಲಕರಾಗಿದ್ದ ಇವರು ಉಡುಪಿ ರಥಬೀದಿ ಆಟೋ ಚಾಲಕ-ಮಾಲಕ ಶ್ರೀ ಗಣೇಶೋತ್ಸವ ಸಮಿತಿಯ ಸಕ್ರಿಯ ಸದಸ್ಯರಾಗಿದ್ದರು. ಇವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಆಗಲಿದ್ದಾರೆ.

ರಾಜೇಂದ್ರ



ಉಪ್ಪಳ: ಉಪ್ಪಳ ಬಳಿಯ ಕೊಂಡೆವೂರು ನಿವಾಸಿ, ಇದೀಗ ಮಂಗಳೂರು ಪಂಪ್‌ವೆಲ್‌ನ ಫ್ಲಾಟೊಂದರಲ್ಲಿ ವಾಸವಾಗಿದ್ದ ರಾಜೇಂದ್ರ (48) ಅಲ್ಪಕಾಲದ ಅಸೌಖ್ಯದಿಂದ ಬುಧವಾರ ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಈ ಹಿಂದೆ ಹಲವು ವರ್ಷಗಳ ಕಾಲ ಉಪ್ಪಳದಲ್ಲಿ ಟೈಲರ್ ವೃತ್ತಿಯನ್ನು ನಡೆಸುತ್ತಿದ್ದರು. ಆರ್‌ಎಸ್ ಎಸ್‌ನ ಕಾರ್ಯಕರ್ತರಾಗಿದ್ದರು. ಮೃತರು ಪತ್ನಿ ಸುಪ್ರೀತ, ಪುತ್ರ ಲಕ್ಷನ್, ಸಹೋದರಿಯರಾದ ಜಯಂತಿ, ಲಲಿತಾ, ಗೀತಾ ಅವರನ್ನು ಆಗಲಿದ್ದಾರೆ.

ಮುತ್ತು



ಉಪ್ಪಳ: ಮಂಗಲ್ಪಾಡಿ ಅಂಬಾರು ಬಳಿಯ ಚೆರುಗೋಳಿ ನಿವಾಸಿ ಪೂವಪ್ಪ ಚೆನಿಲುರವರ ಪತ್ನಿ ಮುತ್ತು (82) ಅಲ್ಪಕಾಲದ ಅಸೌಖ್ಯದಿಂದ ಬುಧವಾರ ಮಧ್ಯಾಹ್ನ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತಿ, ಮಕ್ಕಳಾದ ಯೋಗೇಂದ್ರ, ಪುರುಷೋತ್ತಮ, ಕಮಲಾಕ್ಷಿ , ಕೋಟಿ, ಸೂರ್ಯ, ಸುಮತಿ, ಪುಷ್ಪಾ, ಭವಾನಿ, ಪರಮೇಶ್ವರೀ, ಜ್ಯೋತಿ ಅವರನ್ನು ಆಗಲಿದ್ದಾರೆ.

ಶಕುಂತಳಾ



ಉಪ್ಪಳ: ಉಪ್ಪಳ ಬಳಿಯ ಶಾರದಾನಗರ ನಿವಾಸಿ ಜಗಜೀವನ್‌ರವರ ಪತ್ನಿ, ಹಿರಿಯ ಮೀನು ವ್ಯಾಪಾರಿ ಶಕುಂತಳಾ ಸಾಲಿಯಾನ್ (64) ಅಲ್ಪಕಾಲದ ಅಸೌಖ್ಯದಿಂದ ಬುಧವಾರ ಸಂಜೆ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಮಂಜೇಶ್ವರದಲ್ಲಿ ಹಲವು ವರ್ಷಗಳ ಕಾಲ ಮೀನು ವ್ಯಾಪಾರಿಯಾಗಿದ್ದರು. ಮೃತರು ಮಕ್ಕಳಾದ ಸತೀಶ, ಸೌಮ್ಯಾ, ಸುಷ್ಮಾ ಅವರನ್ನು ಆಗಲಿದ್ದಾರೆ.

ಸಿ.ಎಂ.ದಾಮೋದರ ಮಣಿಯಾಣಿ

ಕಾಸರಗೋಡು: ಮಧೂರು ಮಣಂಗಳ ನಿವಾಸಿ ಸಿ.ಎಂ.ದಾಮೋದರ ಮಣಿಯಾಣಿ (75) ನಿಧನ ಹೊಂದಿದರು. ಅವರು ಮಧೂರು ದೇವಾಲಯದ ನಿವೃತ್ತ ನೌಕರರಾಗಿದ್ದರು. ಮೃತರು ಮಕ್ಕಳಾದ ಮಂಜುಳಾ, ಮೃದುಲಾ ಅವರನ್ನು ಆಗಲಿದ್ದಾರೆ.



ಆದಮಾರು ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆಯ ಎಲ್ ಕೆ ಜಿ ಮಕ್ಕಳಿಗೆ ಭಾರತೀಯ ಸಂಪ್ರದಾಯ ದಂತೆ ಪುರೋಹಿತರ ಮಂತ್ರದೊಂದಿದೆ ಹೆತ್ತವರಿಂದ ಮಕ್ಕಳ ಕೈ ಹಿಡಿದು ಅಕ್ಕಿಯಲ್ಲಿ ಅಕ್ಷರ ಬರೆಸುವ ಮೂಲಕ ವಿದ್ಯಾರಂಭ ಕಾರ್ಯಕ್ರಮ ವನ್ನು ಪುರೋಹಿತರಾದ ಜ್ಞಾನೇಶ್ವರ ಅವರು ನಡೆಸಿಕೊಟ್ಟರು. ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಕಾಂತಿ ಭಟ್, ಎಲ್‌ಕೆಜಿ ಶಿಕ್ಷಕಿ ನಿಶ್ವಿತಾ ಹಾಗೂ ಎಲ್ಲಾ ಪುಟಾಣಿಗಳ ಪೋಷಕರು, ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

ಪುತ್ತೂರು: ನಾಳೆ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ವಾರ್ಷಿಕ ಪ್ರಶಸ್ತಿ ಪ್ರದಾನ

ಪುತ್ತೂರು: ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ವಾರ್ಷಿಕ ಪ್ರಶಸ್ತಿ ಪ್ರದಾನ ಮತ್ತು ಸಂಘದ ಮಹಾಸಭೆಯು ಜೂ. 13ರಂದು ಬೆಳಗ್ಗೆ ಗಂಟೆ 9.30ರಿಂದ ನಗರದ ಜೈನ ಭವನದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಿ.ಐತ್ತಪ್ಪ ನಾಯ್ಕ ಅವರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ಸ್ವರ್ಣಮಹೋತ್ಸವದ ಸಂದರ್ಭ 'ಸ್ವರ್ಣ ಸಾಧನಾ' ಪ್ರಶಸ್ತಿ ಸ್ಥಾಪಿಸಿ, ಪ್ರತಿವರ್ಷ ದ.ಕ.ಜಿಲ್ಲೆಗೆ ಸೀಮಿತವಾಗಿ ಈ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದೇವೆ. ಈ ಬಾರಿ ಸಾಮಾಜಿಕ ಮತ್ತು ಪತ್ರಿಕೋದ್ಯಮ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಡಾ.ಯು.ಪಿ.ಶಿವಾನಂದ ಅವರಿಗೆ 'ಸ್ವರ್ಣ ಸಾಧನಾ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ರೂ.15 ಸಾವಿರ ನಗದು, ಶಾಲು, ಹಾರ, ಸ್ಮರಣಿಕೆ, ಫಲಪುಷ್ಪವನ್ನೊಳಗೊಂಡಿರುತ್ತದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಸಂಘದ ಹಿರಿಯ ಸದಸ್ಯರಾಗಿರುವ ಶತಾಯುಷಿ, ನಿವೃತ್ತ ತಹಶೀಲ್ದಾರ್ ಬಿ.ಎಸ್. ಕುಲಾಲ್ ಅವರು ಉದ್ಘಾಟಿಸಲಿದ್ದಾರೆ. ನಿವೃತ್ತ ಪ್ರಾಂಶುಪಾಲ ಬಿ.ವಿ.ಸೂರ್ಯನಾರಾಯಣ ಅವರು ಪ್ರಶಸ್ತಿ ಪುರಸ್ಕೃತರ ಬಗ್ಗೆ ಅಭಿನಂದನಾ ಭಾಷಣ ಮಾಡಲಿದ್ದಾರೆ. ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಆಚಾರ್ಯ ಉಪಸ್ಥಿತರುವರು ಎಂದು ಹೇಳಿದರು.

ಸಂಘದ ಶಾಶ್ವತ ನಿಧಿಗೆ ರೂ.25 ಸಾವಿರದಂತೆ ದೇಣಿಗೆ ನೀಡಿದ ಸಂಘದ ಮೂವರು ಸದಸ್ಯರನ್ನು ಮತ್ತು ಸಂಘದ ಸದಸ್ಯ ಶತಾಯುಷಿ ಬಿ.ಎಸ್ ಕುಲಾಲ್, 90 ವರ್ಷ ಪ್ರಾಯ ದಾಟಿದ 12 ಜನ ಹಿರಿಯ ಸದಸ್ಯರಿಗೆ, 85 ವರ್ಷ ಪೂರ್ಣಗೊಂಡ 12 ಮಂದಿ ಸದಸ್ಯರಿಗೆ, 80 ವರ್ಷ ಪೂರ್ಣಗೊಂಡ 13 ಜನಸದಸ್ಯರಿಗೆ ಹಾಗೂ 75 ವರ್ಷ ಪೂರ್ಣಗೊಳಿಸಿದ 27 ಮಂದಿ ಸದಸ್ಯರನ್ನು ಸನ್ಮಾನಿಸಿ ಅಭಿನಂದಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷರಾದ ಪ್ರೊ. ವತ್ಸಲಾ ರಾಜ್ಞೆ, ಝೇವಿಯರ್‌ಡಿ'ಸೋಜ, ಕಾರ್ಯದರ್ಶಿ ತಿರುಮಲೇಶ್ವರ ಭಟ್, ಕೋಶಾಧಿಕಾರಿ ಸೂರಪ್ಪ ಗೌಡ, ಸಂಘಟನಾ ಕಾರ್ಯದರ್ಶಿ ಜಗನ್ನಾಥ ರೈ ಉಪಸ್ಥಿತರಿದ್ದರು.

ಬಿಲ್ಲವ– ಬಂಟರ ಸಮಾಜದಿಂದ ಮಡಿಕೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲು

ಜಾತಿ ಅವಹೇಳನ: ಮಹಿಳೆ ವಿರುದ್ಧ ಆಕ್ರೋಶ

ಮಡಿಕೇರಿ: ಸಾಮಾಜಿಕ ಜಾಲತಾಣದಲ್ಲಿ ಬಿಲ್ಲವ ಹಾಗೂ ಬಂಟರ ಸಮಾಜವನ್ನು ಅವಹೇಳನ ಮಾಡಿರುವ ಅನಿತಾ ಕಾಸರಗೋಡು ಹೆಸರಿನ ಮಹಿಳೆ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕೊಡಗು ಜಿಲ್ಲಾ ಬಿಲ್ಲವ ಸಮಾಜ ಮತ್ತು ಬಂಟರ ಸಮಾಜ ಜಂಟಿಯಾಗಿ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿವೆ.



ಜಾತಿ ಜನಾಂಗಗಳ ನಡುವೆ ವಿಷ ಬೀಜ ಬಿತ್ತುವ ಮತ್ತು ದ್ವೇಷವನ್ನು ಬೆಳೆಸುವ ಉದ್ದೇಶದಿಂದ ಅನಿತಾ ಕಾಸರಗೋಡು ಎಂಬ ಮಹಿಳೆ ತನಗೆ ತೋಚಿದಂತೆ ವಿವಾದಾತ್ಮಕ ಹೇಳಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದಾರೆ. ಈಕೆ ತನ್ನ ಫೇಸ್‌ಬುಕ್ ಖಾತೆಯಲ್ಲಿ ಬಹಿರಂಗವಾಗಿ ಬಿಲ್ಲವ ಮತ್ತು ಬಂಟರ ಜನಾಂಗವನ್ನು ಕೀಳಾಗಿ ಹೀಯಾಳಿಸಿ ಅವಹೇಳನಕಾರಿ ಪದ ಗಳನ್ನು ಬಳಸಿ ನಿಂದಿಸಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣ ಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿದೆ. ಇದು ಜಾತಿಗಳ ನಡುವೆ ವೈಷಮ್ಯ ಮೂಡಿಸುವ ಮತ್ತು ಗಲಭೆಗೆ ಪ್ರಚೋದನೆ ನೀಡಲು ಹೂಡಿರುವ ಸಂಚೆಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.

ಲಕ್ಷಾಂತರ ಬಿಲ್ಲವ ಹಾಗೂ ಬಂಟರ ಸಮುದಾಯದ ಜನರ ಧಾರ್ಮಿಕ ಮತ್ತು ಸಾಮಾಜಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡಿ ನಿಂದಿಸಿರುವ ಮಹಿಳೆ ಯನ್ನು ತಕ್ಷಣ ಬಂಧಿಸಿ ಬೇಷರತ್ ಕ್ಷಮೆ ಕೋರಲು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

ನಗರ ಠಾಣಾಧಿಕಾರಿಗಳಿಗೆ ದೂರು ಸಲ್ಲಿಸುವ ಸಂದರ್ಭ ಬಂಟರ ಸಂಘದ ಗೌರವಾಧ್ಯಕ್ಷ ಬಿ.ಬಿ.ಐತ್ತಪ್ಪ ರೈ, ನಗರಾಧ್ಯಕ್ಷ ಬಿ.ಎಸ್.ಪ್ರಭು, ರೈ, ಬಿ.ಬಿ.ಗಿರೀಶ್ ರೈ, ಬಿಲ್ಲವ ಸಮಾಜದ ಮಾಜಿ ಅಧ್ಯಕ್ಷ ಎಲ್ಯಣ್ಣ ಪೂಜಾರಿ, ಕಾರ್ಯದರ್ಶಿ ಪ್ರಶಾಂತ್ ಪೂಜಾರಿ, ಪ್ರಮುಖರಾದ ರಾಜೀವಲೋಚನ, ಗಣೇಶ್ ಪೂಜಾರಿ, ತಿರುಪತಿ ಪೂಜಾರಿ, ತುಳುವೆರ ಜನಪದ ಕೂಟದ ತಾಲೂಕು ಸಂಚಾಲಕ ಪ್ರಸಾದ್ ಪೂಜಾರಿ ಹಾಗೂ ಬಿಲ್ಲವ ಮತ್ತು ಬಂಟರ ಸಮಾಜದ ಪದಾಧಿಕಾರಿಗಳು ಹಾಜರಿದ್ದರು.

> **ಮಹಿಳೆ ತನಗೆ ತೋಚಿದಂತೆ ವಿವಾದಾತ್ಮಕ ಹೇಳಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದ್ದಾರೆ.**
>
> **ಬಿಲ್ಲವ ಮತ್ತು ಬಂಟರ ಜನಾಂಗವನ್ನು ಕೀಳಾಗಿ ಹೀಯಾಳಿಸಿ ಅವಹೇಳನಕಾರಿ ಪದಗಳನ್ನು ಬಳಸಿ ನಿಂದಿಸಿದ್ದಾರೆ.**

ಅನಿತಾ ಕಾಸರಗೋಡು ವಿರುದ್ಧ ಕುಶಾಲನಗರ ಠಾಣೆಗೆ ದೂರು



ಮಡಿಕೇರಿ: ಸಾಮಾಜಿಕ ಜಾಲತಾಣಗಳಲ್ಲಿ ಬಿಲ್ಲವ ಸಮಾಜದ ಬಗ್ಗೆ ಅವಹೇಳನಕಾರಿಯಾಗಿ ನಿಂದನೆ ಮಾಡಿರುವ ಅನಿತಾ ಕಾಸರಗೋಡು ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕುಶಾಲನಗರದ ಕೋಟಿ ಚೆನ್ನಯ ಬಿಲ್ಲವ ಸಮಾಜ ಒತ್ತಾಯಿಸಿದೆ.

ಈ ಸಂಬಂಧ ಕುಶಾಲನಗರ ಡಿವೈಎಸ್ಪಿ ಹಾಗೂ ನಗರ ಠಾಣೆಗೆ ದೂರು ನೀಡಿರುವ ಸಮಾಜದ ಪ್ರಮುಖರು, ಅನಿತಾ ಕಾಸರಗೋಡು ಇತ್ತೀಚೆಗೆ ತಮ್ಮ ಫೇಸ್‌ಬುಕ್ ಹಾಗೂ ಇತರ ಸಾಮಾಜಿಕ ಜಾಲತಾಣಗಳಲ್ಲಿ ಬಿಲ್ಲವ ಜಾತಿಯ ಬಗ್ಗೆ ಪೂಜಾರಿಯವರು ಕಳ್ಳರು, ಪೂಜಾರಿಯವರು ವಶೀಕರಣ ಮಾಡುವವರು ಎಂಬ ಹೇಳಿಕೆಯನ್ನು ನೀಡಿ, ನಮ್ಮ ಸಮಾಜವನ್ನುಕೆಟ್ಟದಾಗಿಬಿಂಬಿಸಿ ಅವಹೇಳನ ಮಾಡಿದ್ದಾರೆ. ಇದರಿಂದಾಗಿ ನಮಗೆ ಮತ್ತು ನಮ್ಮ ಸಮಾಜಕ್ಕೆ ತೀವ್ರ ಆಘಾತ ವಾಗಿದೆ. ಆದುದರಿಂದ ಸಾಮಾಜಿಕ ಜಾಲತಾಣಗಳಲ್ಲಿ ಸದಾ ವಿವಾದಾತ್ಮಕ ಹೇಳಿಕೆಗಳನ್ನು ಹರಿಯಬಿಡುತ್ತಾ, ಸಮಾಜದಲ್ಲಿ ಜಾತಿ ಜಾತಿಗಳ ಮಧ್ಯೆ ದ್ವೇಷ ವನ್ನು ಬಿತ್ತುವ, ಪರಸ್ಪರ ಅಪನಂಬಿಕೆಗಳನ್ನು ಉಂಟು ಮಾಡುವ ಅನಿತಾ ಕಾಸರ ಗೋಡು ಎಂಬಾಕೆಯನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಠಾಣಾಧಿಕಾರಿಯುವರು, ಅನಿತಾ ಕಾಸರಗೋಡು ಎಂಬಾಕೆಯ ವಿರುದ್ಧ ರಾಕೇಶ್ ಎಂಬವರು ಈಗಾಗಲೇ ಮಂಗಳೂರು ನಗರದ ಬರ್ಕೆ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನ ಅನ್ವಯ ಪ್ರಕರಣ ದಾಖಲಾಗಿ ತನಿಖೆ ಪ್ರಗತಿಯಲ್ಲಿದೆ. ಅದರ ಅನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು. ಕುಶಾಲನಗರದ ಕೋಟಿ ಚೆನ್ನಯ ಬಿಲ್ಲವ ಸಮಾಜದಅಧ್ಯಕ್ಷಸುಧೀರ್ ಎಸ್. ಹಾಗೂ ಪದಾ ಧಿಕಾರಿಗಳು ಈ ಸಂದರ್ಭ ಹಾಜರಿದ್ದರು.

ಕುದ್ರೋಳಿ ಶ್ರೀ ಭಗವತಿ ದೇವಸ್ಥಾನ ಬಳಿ ರಸ್ತೆ ಅಗಲೀಕರಣ

ಶಾಸಕ ಕಾಮತ್ ನೇತೃತ್ವದಲ್ಲಿ ಸಭೆ



ಮಂಗಳೂರು: ನಗರದ ಕೊಡಿಯಲ್ ಬೈಲ್‌ನಲ್ಲಿರುವ ಕುದ್ರೋಳಿ ಶ್ರೀ ಭಗವತಿ ದೇವಸ್ಥಾನದಿಂದ ಕಟ್ಟೆಮಾರುವರೆಗೆ ರಸ್ತೆ ಆಗಲೀಕರಣ ನಡೆಯಬೇಕಿರುವ ಕುರಿತು ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಪಾಲಿಕೆಯ ಹಿರಿಯ ಅಧಿಕಾರಿಗಳ ವಿಶೇಷ ಸಭೆಯು ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ನಡೆಯಿತು.

ಇಲ್ಲಿನ ರಸ್ತೆ ಆಗಲೀಕರಣವು ಸ್ಥಳೀಯ ನಾಗರಿಕರ ಹಲವಾರು ವರ್ಷಗಳ ಬೇಡಿಕೆಯಾಗಿದೆ. ಈ ಬಗ್ಗೆ ಹಿಂದಿನ ಹಲವು ಜನಪ್ರತಿನಿಧಿಗಳು ಪ್ರಯತ್ನಿಸಿದರೂ ಯಶಸ್ವಿಯಾಗಿರಲಿಲ್ಲ. ರಸ್ತೆಗಳು ಆಗಲವಾದಲ್ಲಿ ಸುತ್ತಮುತ್ತಲಿನ ಎಲ್ಲಾ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ. ಬೆಳೆಯುತ್ತಿ ರುವ ನಗರ, ಇಲ್ಲಿಗೆ ಆಗಮಿಸುವ ಭಕ್ತರ ಸಹಿತ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಆಗಲೀಕರಣ ಅನಿವಾರ್ಯವಾಗಿದ್ದು ಟಿ.ಡಿ.ಆರ್. ಮೂಲಕ ಪ್ರಕ್ರಿಯೆ ಪೂರ್ಣಗೊಳಿಸುವಂತೆ ನಾವು ಮಾಡಿದ ಮನವಿಗೆ ಭಗವತಿ ದೇವಸ್ಥಾನದ ಆಡಳಿತ ಸಮಿತಿಯು ಸಕಾರಾತ್ಮಕವಾಗಿ ಸ್ಪಂದಿಸಿರುವುದಕ್ಕೆ ವಿಶೇಷ ಧನ್ಯವಾದಗಳು. ನಿಯಮಗಳನುಸಾರ ಟಿಡಿಆರ್ ಸಹಿತ ಯಾವುದೇ ರೀತಿಯ ಗೊಂದಲಕ್ಕೆ ಆಸ್ಪದವಿಲ್ಲದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಲು ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಉಪ ಆಯುಕ್ತ ನರೇಶ್ ಶೆಣೈ, ನಿಕಟ ಪೂರ್ವ ಪಾಲಿಕೆ ಸದಸ್ಯರಾದ ಲೀಲಾವತಿ ಪ್ರಕಾಶ್, ಕಾವ್ಯ ನಟರಾಜ್ ಆಳ್ವ, ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷ ಗಣೇಶ್ ಕುಂಟಲ್ಪಾಡಿ, ಆಡಳಿತ ಮೊಕ್ತೇಸರ ವಿಶ್ವನಾಥ್ ಮಂಕಿಸ್ಟ್ಯಾಂಡ್, ಪ್ರಧಾನ ಕಾರ್ಯದರ್ಶಿ ಸುಧೀರ್, ಕೋಶಾಧಿಕಾರಿ ಲೋಕೇಶ್ ಬೋಳಾರ್, ಮೊಕ್ತೇಸರರಾದ ಸುಜನ್ ದಾಸ್ ಕುಡುಪು ಹಾಗೂ ರವೀಂದ್ರ ಕೆ., ಉಪಾಧ್ಯಕ್ಷ ಉದಯ ಕುಮಾರ್ ಕುಡುಪು, ಮಹಿಳಾ ಸಮಿತಿಯ ಜಾಸ್ಮಿನ್ ಸುಜನ್ ದಾಸ್, ನಗರ ಯೋಜನಾಧಿಕಾರಿ ಶರತ್ ಗೌಡ, ಸಹಾಯಕ ನಗರ ಯೋಜನಾಧಿಕಾರಿ ಗುರುಪ್ರಸಾದ್, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್, ಪುನೀತ್ ಶಿವಲಿಂಗಯ್ಯ, ಸಹನಾ, ಚಿನ್ಮಯಿ ಗೋಪಾಲ್ ಹಾಗೂ ಶಿವುಕುಮಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಂಸದ, ಶಾಸಕರಿಂದ ವೆನ್ಲಾಕ್‌ನ ಪಿಎಂ ಅಭಿಮ್ ಯೋಜನಾ ಕಾಮಗಾರಿ ವೀಕ್ಷಣೆ

ಮಂಗಳೂರು: ನಗರದ ವೆನ್ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಧಾನ ಮಂತ್ರಿ ಅಭಿಮ್ (ಪಿಎಂ ಅಭಿಮ್) ಯೋಜನೆಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಸಂಸದ ಕ್ಯಾ.ಬ್ರಿಜೇಶ್ ಚೌಟ ಹಾಗೂ ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುರುವಾರ ವೀಕ್ಷಿಸಲಾಯಿತು.



ಪಿಎಂ ಅಭಿಮ್ ಯೋಜನೆಯಲ್ಲಿ 24 ಕೋಟಿ ವೆಚ್ಚದಲ್ಲಿ ನಿರ್ಮಾಣ ಆಗುತ್ತಿರುವ ಕ್ರಿಟಿಕಲ್ ಕೇರ್ ಬ್ಲಾಕ್, 1.3 ಕೋಟಿ ವೆಚ್ಚದ ಇಂಟಿಗ್ರೇಟ್ ಹೆಲ್ತ್ ಲ್ಯಾಬ್ (ಎಚ್‌ಐಎಚ್‌ಎಲ್) ಮೊದಲಾದ ಕಾಮಗಾರಿಗಳನ್ನು ವೀಕ್ಷಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಜನರ ಅವಶ್ಯಕತೆಗೆ ತಕ್ಕಂತೆ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವಂತೆ, ಆಸ್ಪತ್ರೆ ಆವರಣಕ್ಕೆ ಅನಗತ್ಯ ಸಾರ್ವಜನಿಕರು ಮುಕ್ತವಾಗಿ ಬರುವಂತೆ ಆಗದಂತೆ ಪರಿಹಾರ ಕಾಮಗಾರಿ ಯೋಜನೆ, ಹಳೆ ಕಟ್ಟಡ ಮತ್ತು ಹೊಸ ಕಟ್ಟಡಗಳ ಸಂಪರ್ಕ ವ್ಯವಸ್ಥೆ ಮೊದಲಾದ ಬಗ್ಗೆ ಮಾಹಿತಿ ಪಡೆದು ಸಲಹೆ–ಸೂಚನೆಗಳನ್ನು ನೀಡಲಾಯಿತು.

ಬಳಿಕ ಸಂಸದರು ಆಸ್ಪತ್ರೆಯ ಕೆಲ ಕಚೇರಿ, ಬ್ಲಾಕ್, ಚಿಕಿತ್ಸಾ ಕೊಠಡಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳದಲ್ಲಿದ್ದವರ ಜೊತೆ ಮಾತನಾಡಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಸಂಸದ ಕ್ಯಾ.ಬ್ರಿಜೇಶ್ ಚೌಟ, ನರೇಂದ್ರ ಮೋದಿ ಪ್ರಧಾನಿಯಾಗಿ 12 ವರ್ಷ ಪೂರ್ತಿಗೊಳಿಸಿದ ಹಿನ್ನೆಲೆಯಲ್ಲಿ ಜನಸಂಪರ್ಕ ಅಭಿಯಾನ ಆಯೋಜಿಸಿದ್ದು, ಅದರಂತೆ ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿ ಕೇಂದ್ರದಿಂದ ಆಗುತ್ತಿರುವ ಅಭಿವೃದ್ಧಿ ಕೆಲಸಗಳ ಪರಿಶೀಲನೆ, ಸಮಾಜದ ಪ್ರಮುಖರ ಭೇಟಿ, ಜನಸಂಪರ್ಕ ಕಾರ್ಯಕ್ರಮ ಸೇರಿದಂತೆ ಬೇರೆ ಬೇರೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದರ ಭಾಗವಾಗಿ ಇಂದು ವೆನ್ಲಾಕ್ ಆಸ್ಪತ್ರೆಗೆ ಭೇಟಿ ನೀಡಿ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಪಿಎಂ ಅಭಿಮ್ ಯೋಜನೆಯಡಿಯ ಕ್ರಿಟಿಕಲ್ ಕೇರ್ ಬ್ಲಾಕ್, ಎಚ್‌ಐಎಚ್ ಎಲ್ (ಲ್ಯಾಬ್) ಕಾಮಗಾರಿ ಪರಿಶೀಲನೆ ನಡೆಸಲಾಗಿದೆ. ಎಂಆರ್‌ಪಿಎಲ್‌ನ ಸಿಎಸ್ ಆರ್‌ನ 10 ಕೋಟಿ ರೂ. ಅನುದಾನದ ಕಾಮಗಾರಿಗೆ ಟೆಂಡರ್ ಆಗಿದ್ದು, ಶೀಘ್ರ ಕೆಲಸ ಆರಂಭವಾಗಲಿದೆ ಎಂದರು.

ಒಟ್ಟು ಇಲ್ಲಿ 35 ಕೋಟಿ ರೂ. ವರೆಗಿನ ಕೆಲಸಗಳು ನಡೆಯಲಿದ್ದು, ವೀಕ್ಷಣೆ ನಡೆಸಲಾಗಿದೆ. ಲ್ಯಾಬ್ ಇನ್ನು 2–3 ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಉಳಿದ ಕಾಮಗಾರಿಗಳಿಗೂ ಪ್ರಗತಿಯಲ್ಲಿದ್ದು, ಆದಷ್ಟು ಶೀಘ್ರ ಪೂರ್ಣಗೊಳ್ಳುವ ವಿಶ್ವಾಸ ಇದೆ. ಯೋಜನೆಯಡಿ 24 ಸಿಬ್ಬಂದಿ ಮಂ ಜೂರಾಗಿದ್ದು, ಆದರ ಪ್ರಕ್ರಿಯೆಗೂ ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದರು. ವೆನ್ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಶಿವಪ್ರಕಾಶ್ ಮತ್ತಿತರ ಅಧಿಕಾರಿಗಳು ಇದ್ದರು.

ಭಾರತ್ ಸಿನಿಮಾಸ್‌ನಲ್ಲಿ ಬಹು ನಿರೀಕ್ಷಿತ 'ಕಜ್ಜ' ಚಿತ್ರ ತೆರೆಗೆ

ಮಂಗಳೂರು: ಸುಮುಖ ಪ್ರೊಡಕ್ಷನ್ಸ್ ಲಾಂಛನದಲ್ಲಿ ಜಿಷ್ಣು ಎಸ್. ಮೆನನ್ ಮತ್ತು ಸಿದ್ಧಾರ್ಥ್ ಶೆಟ್ಟಿ ನಿರ್ದೇಶನ, ವಿಶಾಂತ್ ಮಿನೇಜಸ್ ನಿರ್ಮಾಣದಲ್ಲಿ ತಯಾರಾದ 'ಕಜ್ಜ' ತುಳು ಸಿನಿಮಾ ಮಂಗಳೂರಿನ ಭಾರತ್ ಮಾಲ್‌ನಲ್ಲಿರುವ ಭಾರತ್ ಸಿನಿಮಾಸ್‌ನಲ್ಲಿ ಗುರುವಾರ ಬಿಡುಗಡೆಗೊಂಡಿತು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ಹರಿಕೃಷ್ಣ ಪುನರೂರು, ತುಳುಚಿತ್ರರಂಗಕ್ಕೆ ತನ್ನದೇ ಆದ ಇತಿಹಾಸ ಇದೆ. 'ಕಜ್ಜ' ತುಳು ಸಿನಿಮಾ ಯಶಸ್ವಿ ಪ್ರದರ್ಶನಗಳನ್ನು ದಾಖಲಿಸಲಿ ಎಂದರು. ಕಲ್ಕೂರ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ಮಾತನಾಡಿ, ತುಳು ಭಾಷೆಯ ಬೆಳವಣಿಗೆಯಲ್ಲಿ ತುಳು ಚಿತ್ರರಂಗದ ದೊಡ್ಡ ಕೊಡುಗೆ ಇದೆ. 'ಕಜ್ಜ' ಸಿನಿಮಾವನ್ನು ಪ್ರತಿಯೊರ್ವರು ನೋಡಿ ಪ್ರೋತ್ಸಾಹಿಸಬೇಕೆಂದರು. ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್ ಬೈಲ್ ಮಾತನಾಡಿ, ನಾಯಕ ನಟ ಸಿದ್ಧಾರ್ಥ್ ಶೆಟ್ಟಿ ಮತ್ತು ಮೋಹನ್ ರಾಜ್ ಕಜ್ಜ ಸಿನಿಮಾಕ್ಕಾಗಿ ದುಡಿದಿದ್ದಾರೆ. ಅವರ ತಪಸ್ಸು ಫಲ ಕೊಡಲಿ, ತುಳು ಸಿನಿಮಾ ರಂಗದಲ್ಲಿ ಕಜ್ಜ ದಾಖಲೆ ಬರೆಯಲಿ ಎಂದರು.

ನಿರ್ದೇಶಕ ಪ್ರಕಾಶ್ ಪಾಂಡೇಶ್ವರ್ ಮಾತನಾಡಿ, ಕಜ್ಜ ಸಿನಿಮಾ ಪ್ರೀಮಿಯರ್ ಶೋ ಮೂಲಕ ಮೆಚ್ಚುಗೆ ಗಳಿಸಿದೆ. ಎಲ್ಲರೂ ಸಿನಿಮಾ ನೋಡಿ ಪ್ರೋತ್ಸಾಹಿಸಿ ಎಂದರು.

> **ಹಲವು ಕಡೆ ತೆರೆಗೆ**
>
> **'ಕಜ್ಜ' ತುಳು ಸಿನಿಮಾ ಮಂಗಳೂರು, ಸುರತ್ಕಲ್, ಪಡುಬಿದ್ರೆ, ಉಡುಪಿ, ಮಣಿಪಾಲ, ಕಾರ್ಕಳ ಕುಂದಾಪುರ, ಬೆಳ್ತಂಗಡಿ, ಸುಳ್ಯ, ಮುಡಿಪು ಮೊದಲಾದ ಕಡೆಗಳಲ್ಲಿ ತೆರೆಕಂಡಿದೆ.**
>
> **ಕಾರ್ಯ ಎಂದರ್ಥ**
>
> **'ಕಜ್ಜ' ಅಂದರೆ ತುಳುವಿನಲ್ಲಿ ಕಾರ್ಯ ಎಂದರ್ಥ. ಒಂದು ಒಳ್ಳೆಯ ಕಾರ್ಯವನ್ನು ಮಾಡಲು ನಾವೆಲ್ಲ ಒಂದಾಗಿದ್ದೇವೆ. ಹಿಂದಿನ ಸಿನಿಮಾ 'ತುಡರ್' ಸಿನಿಮಾಕ್ಕೆ ನೀಡದ ಪ್ರೋತ್ಸಾಹ ಪ್ರೀತಿಯನ್ನು ಈ ಬಾರಿಯೂ 'ಕಜ್ಜ' ಸಿನಿಮಾಕ್ಕೂ ನೀಡಿ ಎಂದು ನಟ ಸಿದ್ಧಾರ್ಥ್ ಶೆಟ್ಟಿ ಹೇಳಿದರು.**

ಪ್ರಮುಖರಾದ ನಿಟ್ಟೆಗುತ್ತು ರವಿರಾಜ್ ಶೆಟ್ಟಿ, ಬಾಲಕೃಷ್ಣ ಶೆಟ್ಟಿ, ಹರೀಶ್ ಶೆಟ್ಟಿ, ಪ್ರೇಮ್ ಶೆಟ್ಟಿ ಸುರತ್ಕಲ್, ಮೋಹನ್ ಕೊಪ್ಪಲ, ಸಂದೇಶ್ ಸುವರ್ಣ, ಕ್ಲಿಫರ್ಡ್ ಸ್ಟಿಕೇರ, ಸಂದೇಶ್ ಬಂಗೇರ, ಸ್ವರಾಜ್ ಶೆಟ್ಟಿ, ಮೋಹನ್ ರಾಜ್, ಸಿದ್ಧಾರ್ಥ್ ಶೆಟ್ಟಿ, ರೂಪ ವರ್ಕಾಡಿ, ವೆನ್ಸಿಟಾ ಡಯಾಸ್, ಶ್ವೇತಾ ಕೋಟ್ಯಾನ್, ಗೌತಮ್ ಬಂಗೇರ ಉಪಸ್ಥಿತರಿದ್ದರು.

ಕಜ್ಜ ಸಿನಿಮಾದಲ್ಲಿ ಕನ್ನಡದ ನಟ ವಸಿಷ್ಠ ಸಿಂಹ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸಿದ್ಧಾರ್ಥ್ ಶೆಟ್ಟಿ, ಅರವಿಂದ ಬೋಳಾರ್, ಉದಯ ಪೂಜಾರಿ, ಉಮೇಶ್ ಮಿಜಾರ್, ಜಯಶ್ರೀ, ಶ್ವೇತಾ ಕೋಟ್ಯಾನ್, ಸಹನಾ ಸುಧಾಕರ್, ವೆನ್ಸಿಟಾ ಡಯಾಸ್, ಮೋಹನ್ ರಾಜ್, ಗೌತಮ್ ಬಂಗೇರ, ಸುವರ್ಣ ಪೂಜಾರಿ, ಸವಿತಾ ಅಂಚನ್, ಶಾಹಿನ್ ಶೇಖ್, ಸ್ನಿಗ್ಧ ಶೆಟ್ಟಿ ಅಭಿನಯಿಸಿದ್ದಾರೆ.

ಕಿರುಸುದ್ದಿ

ಪುತ್ತೂರು ವಿವೇಕಾನಂದ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಭಾರತೀಯ ಸೇನೆಗೆ ಆಯ್ಕೆ






ಪುತ್ತೂರು: ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ಶ್ರವಣೇಶ್ ಮತ್ತು ಅಭಿತ್ ಅವರು ಅಗ್ನಿವೀರ್ ಮೂಲಕ ಭಾರತೀಯ ಸೇನೆಗೆ ಆಯ್ಕೆಯಾಗಿದ್ದಾರೆ. ಶ್ರವಣೇಶ್ ತಮ್ಮ ಮುಂದಿನ ತರಬೇತಿಯನ್ನು ಹೈದರಾಬಾದ್‌ನ ಸೇನಾ ತರಬೇತಿ ಕೇಂದ್ರದಲ್ಲಿ ಪಡೆದುಕೊಳ್ಳಲಿದ್ದಾರೆ. ಅವರು ಪುಣಚ ಗ್ರಾಮದ ಅಜೇರು ಅಣ್ಣು ಪೂಜಾರಿ ಮತ್ತು ನಳಿನಾಕ್ಷಿ ದಂಪತಿಯ ಪುತ್ರ. ಅಭಿತ್ ತಮ್ಮ ಮುಂದಿನ ತರಬೇತಿಯನ್ನು ಬೆಂಗಳೂರಿನ ಸಿ.ಪಿ.ಎಂ. ತರಬೇತಿ ಕೇಂದ್ರದಲ್ಲಿ ಪಡೆದುಕೊಳ್ಳಲಿದ್ದಾರೆ. ಅವರು ಮೊಟ್ಟೆತಡ್ಕ ಅನಿಲ್ ಕುಮಾರ್ ಮತ್ತು ಅನಿತಾ ದಂಪತಿಯ ಪುತ್ರ.

ಜೂ.13: ಕಾರ್ಗಿಲ್ ಹುಲಿ ಕ್ಯಾ. ನವೀನ್ ನಾಗಪ್ಪ ಅಂಬಿಕಾಕ್ಕೆ

ಪುತ್ತೂರು: ಕಾರ್ಗಿಲ್ ಹೋರಾಟದಲ್ಲಿ ಅಪ್ರತಿಮ ಶೌರ್ಯ ಪ್ರದರ್ಶಿಸಿ ಪಾಕಿಸ್ಥಾನದ ಸೈನಿಕರನ್ನು ಹಿಮ್ಮೆಟ್ಟಿಸುವಲ್ಲಿ ತನ್ನದಾದ ಕೊಡುಗೆ ನೀಡಿರುವ, ಸೇನಾ ಪದಕ ವಿಜೇತ ಕ್ಯಾಪ್ಟನ್ ನವೀನ್ ನಾಗಪ್ಪ ಜೂ.13ರಂದು ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಲಿದ್ದಾರೆ. ಬಪ್ಪಳಿಗೆ ಹಾಗೂ ನೆಲ್ಲಿಕಟ್ಟೆಯ ಅಂಬಿಕಾ ಪದವಿ ಪೂರ್ವ ವಿದ್ಯಾಲಯಗಳು ಹಾಗೂ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯ ವಿದ್ಯಾರ್ಥಿ ಸಂಘದ ಪದಗ್ರಹಣವನ್ನು



ಅವರು ಬಪ್ಪಳಿಗೆಯ ಶ್ರೀ ಶಂಕರ ಸಭಾಭವನದಲ್ಲಿ ಬೆಳಗ್ಗೆ 11 ಗಂಟೆಗೆ ನೆರವೇರಿಸಿ ಕೊಡಲಿದ್ದಾರೆ ಹಾಗೂ ಸಶಸ್ತ್ರ ಪಡೆಗಳ ಬಣ್ಣದ ವಿದ್ಯಾರ್ಥಿ ಸಮವಸ್ತ್ರವನ್ನು ಅನಾವರಣಗೊಳಿಸಲಿದ್ದಾರೆ. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯದರ್ಶಿ ರಾಜಶ್ರೀ ಎಸ್. ನಟ್ಟೋಜ, ಬಪ್ಪಳಿಗೆ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯ ಪ್ರಾಂಶುಪಾಲೆ ಮಾಲತಿ ಡಿ., ಅಂಬಿಕಾ ಪ.ಪೂ. ವಿದ್ಯಾಲಯದ ಪ್ರಾಚಾರ್ಯ ಗಣೇಶ್ ಪ್ರಸಾದ್ ಡಿ.ಎಸ್, ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯದ ಪ್ರಾಚಾರ್ಯ ಸತ್ಯಜಿತ್ ಉಪಾಧ್ಯಾಯ ಉಪಸ್ಥಿತರಿರುವರು.

ಆಳ್ವಾಸ್ ರಂಗ ತಂಡಕ್ಕೆ ಕಲಾವಿದರಿಂದ ಅರ್ಜಿ ಆಹ್ವಾನ

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ನಾಟಕ ವಿಭಾಗ ಆಳ್ವಾಸ್ ರಂಗ ಅಧ್ಯಯನ ಕೇಂದ್ರದ ತಂಡಕ್ಕೆ ಕಲಾವಿದರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರತಿವರ್ಷವೂ ಹಲವು ಶ್ರೇಷ್ಠ ನಾಟಕಗಳನ್ನು ಕನ್ನಡ ರಂಗಭೂಮಿಗೆ ನೀಡಿದ ಕೀರ್ತಿ ಆಳ್ವಾಸ್ ರಂಗ ತಂಡದ್ದು. ರಂಗಾಭಿನಯ, ಮಾತುಗಾರಿಕೆ ಹಾಗೂ ತಾಂತ್ರಿಕವಾಗಿಯೂ ತರಬೇತಿ ಪಡೆದು ಸಂಪೂರ್ಣ ವೃತ್ತಿಪರ ತಂಡದಂತೆ ತಿರುಗಾಟ ಮಾಡಲು ಆಸಕ್ತಿ ಇರುವ ರಂಗ ಕಲಾವಿದರು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಹತೆ ಒಂದು ವರ್ಷದ ರಂಗ ಶಿಕ್ಷಣ ಪದವಿ ಅಥವಾ ಕನಿಷ್ಠ ನಾಲ್ಕೈದು ನಾಟಕಗಳಲ್ಲಿ ಅಭಿನಯಿಸಿದ ಅನುಭವ ಹೊಂದಿರಬೇಕು. ವಯೋಮಿತಿ 20 ರಿಂದ 35 ವರ್ಷದೊಳಗಿನವರು ಜೂನ್ 17 ರೊಳಗೆ ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮೂಡುಬಿದಿರೆ ದ.ಕ. ಈ ವಿಳಾಸಕ್ಕೆ ಅರ್ಜಿಯನ್ನು ಕಳುಹಿಸಲು ಕೋರಲಾಗಿದೆ. ಸಂದರ್ಶನದಲ್ಲಿ ಆಯ್ಕೆ ಆದವರಿಗೆ ಉಚಿತ ಊಟ, ವಸತಿ ಹಾಗೂ ಪ್ರತಿಭೆಗೆ ಅನುಸಾರ ತಿಂಗಳ ವೇತನ ನೀಡಲಾಗು ವುದು. ಮಾಹಿತಿಗಾಗಿ ಡಾ. ಜೀವನ್ ರಾಂ ಸುಳ್ಯ, ನಿರ್ದೇಶಕರು, ಆಳ್ವಾಸ್ ರಂಗ ಅಧ್ಯಯನ ಕೇಂದ್ರ ಇವರನ್ನು 9448215946 ಸಂಖ್ಯೆಯಲ್ಲಿ ಸಂಪರ್ಕಿಸಬಹುದೆಂದು ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಮೋಹನ ಆಳ್ವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಾವಳಿಯವರೇ ಆದ ಆರೋಗ್ಯ ಸಚಿವ ಯು.ಟಿ. ಖಾದರ್ ಮೇಲಿದೆ ನಿರೀಕ್ಷೆಯ ನೋಟ

ಉಡುಪಿ ಜಿಲ್ಲಾಸ್ಪತ್ರೆಗೆ ಕಾಯಕಲ್ಪ ಕೊಡುವಿರಾ?

ಸುದೀಪ್ ರಾಜ್ ಸುಳ್ಯ



ದಿಗಂತ ವಿಶೇಷ

ಉಡುಪಿ: ಉಡುಪಿಯ ಸರ್ಕಾರಿ ಜಿಲ್ಲಾ ಆಸ್ಪತ್ರೆಯ ನೂತನ ಕಟ್ಟಡದ ಕಾಮಗಾರಿ ಹೊರಗಿನಿಂದ ನೋಡಲು ಭವ್ಯವಾಗಿ ಪೂರ್ಣಗೊಂಡಿದ್ದರೂ, ಒಳಗಡೆ ಬೇಕಾಗುವ ಮೆಷಿನರಿ ಹಾಗೂ ಸಿಬ್ಬಂದಿಗಳ ವ್ಯವಸ್ಥೆ ಇನ್ನೂ ಆಗದೇ ಇರುವುದು ಬಡವರ ಜೀವನದೊಂದಿಗೆ ಸರ್ಕಾರ ಚೆಲ್ಲಾಟವಾಡುತ್ತಿರುವುದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಜಿಲ್ಲೆಯ ಬಡ ರೋಗಿಗಳ ಹಿತದೃಷ್ಟಿಯಿಂದ ಈಗ ಇಡೀ ಕರಾವಳಿ ಭಾಗದ ಜನತೆಯ ಕಣ್ಣುಗಳು ನೂತನ ಆರೋಗ್ಯ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ, ಕರಾವಳಿ ಮಣ್ಣಿನವರೇ ಆದ ಯು.ಟಿ. ಖಾದರ್ ಅವರ ಮೇಲೆ ನೆಟ್ಟಿವೆ. ಈ ಹಿಂದೆ ಆರೋಗ್ಯ ಸಚಿವರಾಗಿ ಕೆಲಸ ಮಾಡಿದ ಅನುಭವ ಹೊಂದಿರುವ ಖಾದರ್ ಅವರು, ಈ ಗಂಭೀರ ಸಮಸ್ಯೆಯ ಕುರಿತು ಎಷ್ಟು ಮುತುವರ್ಜಿ ವಹಿಸಿ ಉಡುಪಿಗೆ ಸುಸಜ್ಜಿತ ಜಿಲ್ಲಾಸ್ಪತ್ರೆಯನ್ನು ಶೀಘ್ರವಾಗಿ ಒದಗಿಸಿಕೊಡಲಿದ್ದಾರೆ ಎಂಬ ಮಹತ್ತರ ನಿರೀಕ್ಷೆಯಲ್ಲಿ ಸಾರ್ವಜನಿಕರಿದ್ದಾರೆ.

ವರ್ಷಗಳು ಉರುಳಿದರೂ ಮುಗಿಯದ ಕಾಮಗಾರಿ

ಹಿನ್ನೆಲೆಯನ್ನು ಗಮನಿಸಿದರೆ, 2020ರವರೆಗೂ ಉಡುಪಿಯ ಅಜ್ಜರಕಾಡಿನಲ್ಲಿ ಕೇವಲ 124 ರಿಂದ 135 ಬೆಡ್‌ಗಳ ಸಾಮರ್ಥ್ಯದ ತಾಲೂಕು ಆಸ್ಪತ್ರೆಯೇ ಜಿಲ್ಲಾಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ನಂತರ 2020ರಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 250 ಬೆಡ್‌ಗಳ ಹೊಸ ಜಿಲ್ಲಾಸ್ಪತ್ರೆ ಕಟ್ಟಡಕ್ಕೆ 115 ಕೋಟಿ ರೂಪಾಯಿ ಮಂಜೂರುಗೊಳಿಸಿದ್ದರು. ತದನಂತರ 2021ರ ಆಗಸ್ಟ್‌ನಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ನೂತನ ಕಟ್ಟಡಕ್ಕೆ ಅದ್ದೂರಿಯಾಗಿ ಶಿಲಾನ್ಯಾಸ ನೆರವೇರಿಸಿದ್ದರು. ಕಟ್ಟಡಕ್ಕೆ 115 ಕೋಟಿ ರೂಪಾಯಿ ಹಾಗೂ ಸಿಬ್ಬಂದಿ, ಪೀಠೋಪಕರಣ, ಅಗತ್ಯ ಮೂಲಸೌಕರ್ಯ ಒಳಗೊಂಡು ಒಟ್ಟು 150 ಕೋಟಿ ರೂಪಾಯಿ ವೆಚ್ಚ ಅಂದಾಜಿಸಲಾಗಿತ್ತು. ಆದರೆ ಶಿಲಾನ್ಯಾಸ ನಡೆದು ಇಷ್ಟು ವರ್ಷಗಳು ಕಳೆದರೂ ಇಲಾಖೆಯ ಆಮೆಗತಿಯ ನಡಿಗೆಯಿಂದಾಗಿ ಕಾಮಗಾರಿ ಸಂಪೂರ್ಣವಾಗಿ ಮುಕ್ತಾಯಗೊಂಡು ಸಾರ್ವಜನಿಕರ ಸೇವೆಗೆ ಮುಕ್ತವಾಗಿಲ್ಲ. ಸರ್ಕಾರದ ಈ ಅಲಕ್ಷ್ಯದ ಧೋರಣೆಯಿಂದಾಗಿ ಕರಾವಳಿಯ ಜನತೆ ಸದ್ಯ ಆಕ್ರೋಶಗೊಂಡಿದ್ದು, ವ್ಯವಸ್ಥೆಯ ವಿರುದ್ಧ ಹೈರಾಣಾಗಿದ್ದಾರೆ.

ಹಳೆಯ ಆಸ್ಪತ್ರೆಯ ಸೋರಿಕೆ ಮತ್ತು ರೋಗಿಗಳ ಚಿತ್ರಹಿಂಸೆ

ಪ್ರಸ್ತುತ ಕಾರ್ಯಾಚರಿಸುತ್ತಿರುವ ಹಳೆಯ ಜಿಲ್ಲಾಸ್ಪತ್ರೆಯ ಸ್ಥಿತಿ ದಿನದಿಂದ ದಿನಕ್ಕೆ ಅತ್ಯಂತ ಕರುಣಾಜನಕವಾಗುತ್ತಿದೆ. ಸಣ್ಣ ಮಳೆ ಬಂದರೂ ಸಾಕು ಆಸ್ಪತ್ರೆಯ ಛಾವಣಿ ಸೋರುತ್ತಿದ್ದು, ರೋಗಿಗಳು ತೀವ್ರ ಚಿತ್ರಹಿಂಸೆ ಅನುಭವಿಸುವಂತಾಗಿದೆ. ಆಸ್ಪತ್ರೆಯ ಒಳಗೆ ಸರಿಯಾದ ಸ್ವಚ್ಛತೆ ಇಲ್ಲದೆ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಇವೆಲ್ಲದರ ನಡುವೆ ತೀವ್ರವಾಗಿ ಕಾಡುತ್ತಿರುವ ಸಿಬ್ಬಂದಿಗಳ ಕೊರತೆಯಿಂದಾಗಿ, ಸದ್ಯ ಇರುವ ಅಲ್ಪಸಂಖ್ಯಾತ ಸಿಬ್ಬಂದಿಗಳು ಹಗಲಿರುಳು ಕೆಲಸ ಮಾಡಿ ಹೈರಾಣಾಗಿದ್ದಾರೆ. ಅತ್ಯಾಧುನಿಕ ಚಿಕಿತ್ಸೆ ಇರಲಿ, ಕನಿಷ್ಠ ಮೂಲಸೌಕರ್ಯವೂ ಇಲ್ಲದೆ ಬಡ ರೋಗಿಗಳು ಖಾಸಗಿ ಆಸ್ಪತ್ರೆಗಳತ್ತ ಮುಖ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿದೆ.

ಆಸ್ಪತ್ರೆಗೆ ಬೃಹತ್ ಸಂಖ್ಯೆಯ ಸಿಬ್ಬಂದಿಗಳ ಅವಶ್ಯಕತೆ

ನೂತನ 250 ಹಾಸಿಗೆಗಳ ಆಸ್ಪತ್ರೆ ಸುಸೂತ್ರವಾಗಿ ನಡೆಯಲು ಬೃಹತ್ ಪ್ರಮಾಣದ ಹೆಚ್ಚುವರಿ ಮಾನವ ಸಂಪನ್ಮೂಲದ ತುರ್ತು ಅಗತ್ಯವಿದೆ. ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಒಟ್ಟು 72 ವೈದ್ಯಾಧಿಕಾರಿಗಳ ಅಗತ್ಯವಿದ್ದು, ಸದ್ಯ ಕೇವಲ 27 ವೈದ್ಯರು ಮಾತ್ರ ಲಭ್ಯವಿದ್ದಾರೆ ಮತ್ತು ಇನ್ನು 22 ಹೆಚ್ಚುವರಿ ವೈದ್ಯರ ನೇಮಕಾತಿ ತಕ್ಷಣ ಆಗಬೇಕಿದೆ. ಅದೇ ರೀತಿ ಶುಶ್ರೂಷಕ ಅಧೀಕ್ಷಕರು, ಹಿರಿಯ ಮತ್ತು ಕಿರಿಯ ಶುಶ್ರೂಷಕರು (ನರ್ಸ್‌ಗಳು) ಸೇರಿದಂತೆ ಬರೋಬ್ಬರಿ 57 ಶುಶ್ರೂಷಕರ ವಾರ್ಡ್ ಹುದ್ದೆಗಳು ಬೇಕಾಗಿದ್ದು, ಪ್ರಸ್ತುತ ಕೇವಲ 17 ಮಂದಿ ಮಾತ್ರ ಕೆಲಸ ಮಾಡುತ್ತಿದ್ದಾರೆ ಹಾಗೂ ಇನ್ನು 40 ಹುದ್ದೆಗಳನ್ನು ಭರ್ತಿ ಮಾಡಬೇಕಿದೆ. ಕಚೇರಿ ನಿರ್ವಹಣೆಗೆ ಬೇಕಾದ ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ಸಹಾಯಕರು, ಒಂಬತ್ತು ಡಾಟಾ ಎಂಟ್ರಿ ಆಪರೇಟರ್‌ಗಳು, ಪ್ರಯೋಗಶಾಲಾ ತಂತ್ರಜ್ಞರು (ಲ್ಯಾಬ್ ಟೆಕ್ನಿಷಿಯನ್ಸ್) ಮತ್ತು ಗ್ರೂಪ್-ಡಿ ದರ್ಜೆಯ 40 ಕ್ಕೂ ಹೆಚ್ಚು ಬಿಸಿಯೂಟ ಹಾಗೂ ಸ್ವಚ್ಛತಾ ಸಹಾಯಕರ ನೇಮಕಾತಿ ಬಾಕಿ ಉಳಿದಿದೆ. ಒಟ್ಟಾರೆಯಾಗಿ ಇಡೀ ಆಸ್ಪತ್ರೆಗೆ 442 ವೈದ್ಯಾಧಿಕಾರಿಗಳು ಹಾಗೂ ಇತರ ತಾಂತ್ರಿಕ ಸಿಬ್ಬಂದಿಗಳ ಅವಶ್ಯಕತೆ ಇದ್ದು, ಪ್ರಸ್ತುತ ಕೇವಲ 134 ಸಿಬ್ಬಂದಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ 272 ಬೃಹತ್ ಸಂಖ್ಯೆಯ ಹುದ್ದೆಗಳು ಖಾಲಿ ಉಳಿದಿದ್ದು, ಸರ್ಕಾರ ತಕ್ಷಣವೇ ಈ ಹುದ್ದೆಗಳ ಸೃಜನೆಗೆ ಅನುಮೋದನೆ ನೀಡಿ ನೇಮಕಾತಿ ಪ್ರಕ್ರಿಯೆ ಮುಗಿಸಬೇಕಾಗಿದೆ.

ಕುಂದಾಪುರದ ಎಂಐಟಿ ವಿದ್ಯಾರ್ಥಿನಿಯರಿಂದ

'ಸ್ಮಾರ್ಟ್ ಹೈಡ್ರೋಪೋನಿಕ್ಸ್' ತಂತ್ರಜ್ಞಾನದ ಹೊಸ ಆವಿಷ್ಕಾರ



ಕುಂದಾಪುರ: ಆಧುನಿಕ ಕೃಷಿ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತರಬಲ್ಲ 'ಐಒಟಿ ಆಧಾರಿತ ಸ್ಮಾರ್ಟ್ ಹೈಡ್ರೋಪೋನಿಕ್ಸ್' ತಂತ್ರಜ್ಞಾನವನ್ನು ಮೂಡ್ಲಕಟ್ಟೆಯ ಇಂಜಿನಿಯರಿಂಗ್ ವಿದ್ಯಾರ್ಥಿನಿಯರು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದ್ದಾರೆ.

ಮಣ್ಣಿಲ್ಲದೆ ಕೇವಲ ಪೋಷಕಾಂಶಯುಕ್ತ ನೀರನ್ನು ಬಳಸಿ ಗಿಡಗಳನ್ನು ಬೆಳೆಸುವ ಪದ್ಧತಿಯೇ ಹೈಡ್ರೋಪೋನಿಕ್ಸ್. ವಿದ್ಯಾರ್ಥಿನಿಯರು ಅಭಿವೃದ್ಧಿಪಡಿಸಿರುವ ಈ ವ್ಯವಸ್ಥೆಯು ನ್ಯೂಟ್ರಿಯೆಂಟ್ ಫಿಲ್ಮ್ ಟೆಕ್ನಿಕ್‌ನ್ನು ಬಳಸುತ್ತದೆ. ಅಂದರೆ, ಗಿಡಗಳ ಬೇರುಗಳಿಗೆ ನಿರಂತರವಾಗಿ ಪೋಷಕಾಂಶ ಭರಿತ ನೀರು ತೆಳುವಾದ ಪದರದಂತೆ ಹರಿಯುವಂತೆ ಮಾಡಲಾಗುತ್ತದೆ. ಇದಕ್ಕೆ ಐಒಟಿ ತಂತ್ರಜ್ಞಾನವನ್ನು ಅಳವಡಿಸಿರುವುದರಿಂದ, ಕೃಷಿಕರು ತಾವಿದ್ದ ಜಾಗದಿಂದಲೇ ಮೊಬೈಲ್ ಅಥವಾ ಕಂಪ್ಯೂಟರ್ ಮೂಲಕ ಗಿಡಗಳಿಗೆ ಬೇಕಾದ ನೀರಿನ ಪ್ರಮಾಣ, ತಾಪಮಾನ ಮತ್ತು ಪೋಷಕಾಂಶಗಳ ಮಟ್ಟವನ್ನು ನಿಖರವಾಗಿ ನಿಯಂತ್ರಿಸಬಹುದು.

ಕಾಲೇಜಿನ ಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗದ ವಿಭಾಗ ಮುಖ್ಯಸ್ಥ ಡಾ. ವರುಣ್ ಕುಮಾರ್ ಹಾಗೂ ಪ್ರೊ. ಅಕ್ಷತಾ ನಾಯ್ಕ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿನಿಯರಾದ ಫಾತಿಮಾ ತಹಸಿರ್, ಸಿಂಚನಾ ದೇವಾಡಿಗ ಮತ್ತು ವಿನಿತಾ ನಾಯ್ಕ್ ಅವರು ಈ ನೂತನ ಸಂಶೋಧನೆ ಮಾಡಿದ್ದು, ಇವರು ಸಿದ್ಧಪಡಿಸಿದ ಸಂಶೋಧನಾ ಪ್ರಬಂಧವು ಜಾಗತಿಕ ಮಟ್ಟದ ಪ್ರತಿಷ್ಠಿತ ಸ್ಕೋಪಸ್ ಇಂಡೆಕ್ಸ್ ಮಾನ್ಯತೆ ಹೊಂದಿರುವ 'ದಿ ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಇನ್ಫರ್ಮ್ಯಾಟಿಕ್ಸ್ ಅಂಡ್ ಕಮ್ಯುನಿಕೇಶನ್ ಟೆಕ್ನಾಲಜಿ'ಯಲ್ಲಿ ಪ್ರಕಟಗೊಂಡಿದೆ.

ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಬೋಧಕರು ವಿದ್ಯಾರ್ಥಿನಿಯರ ಸಾಧನೆಯನ್ನು ಶ್ಲಾಘಿಸಿದ್ದು, ಈ ಸಂಶೋಧನೆಯು ಭವಿಷ್ಯದ ಸುಸ್ಥಿರ ಕೃಷಿಗೆ ದೊಡ್ಡ ಕೊಡುಗೆಯಾಗಲಿದೆ ಎಂದು ಹಾರೈಸಿದ್ದಾರೆ.

ಎಂ.ಆರ್.ಪಿ.ಎಲ್. ಸಂಸ್ಥೆಯ ಸಿ.ಎಸ್.ಆರ್. ಅನುದಾನದಿಂದ ನಿರ್ಮಾಣ

ಅತ್ತಾವರ ಸರ್ಕಾರೀ ಶಾಲೆಗೆ ನೂತನ ಕೊಠಡಿ

ಮಂಗಳೂರು: ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಎಂ.ಆರ್.ಪಿ.ಎಲ್ ಸಂಸ್ಥೆ ನಿರಂತರವಾಗಿ ಸಿ.ಎಸ್. ಆರ್ ನಿಧಿಯ ಮೂಲಕ ಹೆಚ್ಚಿನ ಕೊಡುಗೆಗಳನ್ನು ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ಮಂಗಳೂರು ದಕ್ಷಿಣ ವಲಯದ ಅತ್ತಾವರ ಸರಕಾರಿ ಪ್ರೌಢಶಾಲೆಗೆ ಎಂ.ಆರ್.ಪಿ.ಎಲ್ ಸಂಸ್ಥೆಯ ಸಿ.ಎಸ್. ಆರ್. ಅನುದಾನದಿಂದ ನಿರ್ಮಾಣಗೊಂಡಿರುವ ನೂತನ ಶಾಲಾ ಕೊಠಡಿ ಮತ್ತು ಶೌಚಾಲಯ ಸಂಕೀರ್ಣವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.



ಶಾಸಕ ಡಿ.ವೇದವ್ಯಾಸ ಕಾಮತ್ ಮಾತನಾಡಿ, ನೂರು ವರ್ಷ ಇತಿಹಾಸ ಇರುವ ಈ ಶಾಲೆಯ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ತಯಾರಿಸಲಾಗಿದ್ದು, ಇನ್ನಷ್ಟು ವಿದ್ಯಾರ್ಥಿಗಳಿಗೆ ನೆರವಾಗಲಿದೆ ಎಂದರು.

ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷ ಶಾಂತಾರಾಮ ಶೆಟ್ಟಿ, ಎಂಆರ್‌ಪಿಎಲ್ ಸಿಎಸ್‌ಆರ್ ಫಂಡ್‌ನ ಚೀಫ್ ಮ್ಯಾನೇಜರ್ ಎಂ.ಕೆ ರಾವ್, ಇಂಟರ್ಯಾಕ್ಟ್ ಕ್ಲಬ್‌ನ ಕೋಆರ್ಡಿನೇಟರ್ ಸದಾಶಿವ ಶೆಟ್ಟಿ, ಪ್ರೌಢಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಫಕೀರ ನಾಯ್ಕ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕಿ ಶಕುಂತಲ,

ಪ್ರೌಢಶಾಲಾ ಎಸ್‌ಡಿಎಂಸಿ ಉಪಾಧ್ಯಕ್ಷೆ ಲಕ್ಷ್ಮೀ, ಎಸ್‌ಡಿಎಂಸಿ ಸದಸ್ಯ ಮಂಜ್ಯ ನಾಯ್ಕ, ಉಪಸ್ಥಿತರಿದ್ದರು. ಪ್ರೌಢಶಾಲಾ ಮುಖ್ಯಶಿಕ್ಷಕ ರಾಘವೇಂದ್ರ ರಾವ್ ಸ್ವಾಗತಿಸಿದರು. ಲಿಲ್ಲಿ ಪಾಯ್ಸ್ ಪ್ರಾಸ್ತಾವಿಕವಾಗಿ ಮಾತಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕಿ ಮಾಯ ವಂದಿಸಿದರು. ಕನ್ನಡ ಶಿಕ್ಷಕಿ ವೀಣಾ ಕಾರ್ಯಕ್ರಮ ನಿರ್ವಹಿಸಿದರು.

ಹಿಂದೂಸ್ತಾನಿ ಗಾಯಕಿಗೆ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ

ಮಹಾಲಕ್ಷ್ಮಿ ಶೆಣೈಗೆ ರಾಷ್ಟ್ರೀಯ ಗೌರವ

ಕಾರ್ಕಳ: ಹಿಂದೂಸ್ತಾನಿ ಗಾಯನ ಸಂಗೀತ ಕ್ಷೇತ್ರದಲ್ಲಿ ವಿದುಷಿ ಮಹಾಲಕ್ಷ್ಮಿ ಶೆಣೈ ಅವರನ್ನು 2024 ರ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ – 2024 ಕ್ಕೆ ಆಯ್ಕೆ ಮಾಡುವ ಮೂಲಕ ಕರ್ನಾಟಕದ ರೋಮಾಂಚಕ ಶಾಸ್ತ್ರೀಯ ಸಂಗೀತ ಸಂಪ್ರದಾಯವು ಮತ್ತೊಂದು ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದೆ. ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಸಂಗೀತ, ನೃತ್ಯ ಮತ್ತು ನಾಟಕಕ್ಕಾಗಿ ಭಾರತದ ಅತ್ಯುನ್ನತ ಸಂಸ್ಥೆಯಾದ ನವದೆಹಲಿಯ ಸಂಗೀತ ನಾಟಕ ಅಕಾಡೆಮಿ ಈ ಪ್ರತಿಷ್ಠಿತ ಗೌರವವನ್ನು ನೀಡಿದೆ.

ಅಕಾಡೆಮಿ ಫೆಲೋಶಿಪ್ (ಅಕಾಡೆಮಿ ರತ್ನ), 2024 ಮತ್ತು 2025 ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳು ಮತ್ತು ಅನುಗುಣವಾದ ವರ್ಷಗಳಿಗೆ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ ಘೋಷಣೆಯ ಭಾಗವಾಗಿ ಸಂಗೀತ ನಾಟಕ ಅಕಾಡೆಮಿ ಈ ಪ್ರಶಸ್ತಿಯನ್ನು ಘೋಷಿಸಿದೆ.

ಕಾರ್ಕಳದ ಅತ್ಯಂತ ಸಾಧನೆಗೈದ ಗಾಯಕಿ ಮಹಾಲಕ್ಷ್ಮಿ ಶೆಣೈ ಕರ್ನಾಟಕದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ವಿಶಿಷ್ಟ ಯುವ ರಾಯಭಾರಿಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ತಮ್ಮ ಸಂಸ್ಕರಿಸಿದ ಸಂಗೀತ ಪ್ರತಿಭೆ, ಭಾವನಾತ್ಮಕ ಅಭಿವ್ಯಕ್ತಿ ಮತ್ತು ಶಾಸ್ತ್ರೀಯ ಸಂಪ್ರದಾಯಕ್ಕೆ ಅಚಲ ಬದ್ಧತೆಗೆ ಹೆಸರುವಾಸಿಯಾದ ಅವರು ಭಾರತದಾದ್ಯಂತ ತಮ್ಮ ಪ್ರದರ್ಶನಗಳ ಮೂಲಕ ಪ್ರೇಕ್ಷಕರು ಮತ್ತು ರಸಿಕರ ಮೆಚ್ಚುಗೆಯನ್ನು ಗಳಿಸಿದ್ದಾರೆ.

ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತ ಮಾಂತ್ರಿಕ ಪಂಡಿತ್ ವಿಶ್ವಮೋಹನ್ ಭಟ್ ಅವರ ಅಗ್ರಗಣ್ಯ ಶಿಷ್ಯೆ ಮಹಾಲಕ್ಷ್ಮಿ ಶೆಣೈ ಶ್ರೀಮಂತ ಗುರು-ಶಿಷ್ಯ ಪರಂಪರೆಯನ್ನು ಪ್ರತಿನಿಧಿಸುತ್ತಾರೆ, ಕಠಿಣ ಶಾಸ್ತ್ರೀಯ ತರಬೇತಿಯನ್ನು ಕಲಾತ್ಮಕ ಪರಿಪಕ್ವತೆಯೊಂದಿಗೆ ಸಂಯೋಜಿಸುತ್ತಾರೆ. ಅವರ ಸಂಗೀತ ಪ್ರಯಾಣವು ಸಮರ್ಪಣೆ, ಪಾಂಡಿತ್ಯ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಆಳವಾದ ಗೌರವದಿಂದ ಗುರುತಿಸಲ್ಪಟ್ಟಿದೆ.



ರಾಷ್ಟ್ರಪತಿಗಳು ಪ್ರಶಸ್ತಿ ಪ್ರದಾನಿಸಲಿದ್ದಾರೆ

ರಾಷ್ಟ್ರವು ಈ ಸಾಧನೆಯನ್ನು ಆಚರಿಸುತ್ತಿರುವಾಗ, ವಿದುಷಿ ಮಹಾಲಕ್ಷ್ಮಿ ಶೆಣೈ ಅವರು ಭಾರತದ ಸಾಂಸ್ಕೃತಿಕ ಭೂದೃಶ್ಯವನ್ನು ಶ್ರೀಮಂತಗೊಳಿಸಲು ಮತ್ತು ಭಾರತೀಯ ಶಾಸ್ತ್ರೀಯ ಸಂಗೀತದ ಕಾಲಾತೀತ ಪರಂಪರೆಯನ್ನು ಮುಂದಕ್ಕೆ ಕೊಂಡೊಯ್ಯಲು ತಮ್ಮ ಪ್ರತಿಭೆ ಮತ್ತು ಸಮರ್ಪಣೆಯನ್ನು ಮುಂದುವರಿಸಿರುವ ಯುವ ಕಲಾವಿದರ ವಿಶಿಷ್ಟ ಗುಂಪನ್ನು ಸೇರುತ್ತಾರೆ. ಸಂಗೀತ ನಾಟಕ ಅಕಾಡೆಮಿ ಆಯೋಜಿಸಿರುವ ವಿಶೇಷ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳು ಈ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರವು ದೇಶದ ಯುವ ಪ್ರದರ್ಶನ ಕಲಾವಿದರಿಗೆ ನೀಡುವ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾಗಿದೆ ಮತ್ತು ಆಯಾ ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ಮತ್ತು ಭರವಸೆಯನ್ನು ಪ್ರದರ್ಶಿಸಿದ ಅಸಾಧಾರಣ ಪ್ರತಿಭೆಗಳಿಗೆ ನೀಡಲಾಗುತ್ತದೆ. ಈ ಗೌರವವು ದಂತಕಥೆಯ ಶೆಹನಾಯಿ ಮಾಂತ್ರಿಕ ಭಾರತ ರತ್ನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರನ್ನು ಸ್ಮರಿಸುತ್ತದೆ ಮತ್ತು ಭಾರತದ ಮುಂದಿನ ಪೀಳಿಗೆಯ ಸಾಂಸ್ಕೃತಿಕ ದೀಕ್ಷಾಧಾರಿಗಳನ್ನು ಪ್ರೋತ್ಸಾಹಿಸಲು ಪ್ರಯತ್ನಿಸುತ್ತದೆ.

ಅಪಾರ ಹೆಮ್ಮೆಯ ವಿಷಯ

ಮಹಾಲಕ್ಷ್ಮಿ ಶೆಣೈ ಅವರನ್ನು ಈ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಕರ್ನಾಟಕಕ್ಕೆ ಮತ್ತು ವಿಶೇಷವಾಗಿ ಕರಾವಳಿ ಕರ್ನಾಟಕದ ಸಾಂಸ್ಕೃತಿಕ ವಲಯಗಳಿಗೆ ಅಪಾರ ಹೆಮ್ಮೆಯ ವಿಷಯವಾಗಿದೆ, ಅಲ್ಲಿ ಅವರ ಸಾಧನೆಗಳನ್ನು ದೀರ್ಘಕಾಲದಿಂದ ಆಚರಿಸಲಾಗುತ್ತದೆ. ಅವರ ಗೌರವವು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಚಾರ ಮತ್ತು ಸಂರಕ್ಷಣೆಗೆ ಈ ಪ್ರದೇಶದ ಹೆಚ್ಚುತ್ತಿರುವ ಕೊಡುಗೆಯನ್ನು ಮತ್ತಷ್ಟು ಎತ್ತಿ ತೋರಿಸುತ್ತದೆ.

ಈ ಘೋಷಣೆಯನ್ನು ದೇಶಾದ್ಯಂತ ಸಂಗೀತಗಾರರು, ಸಾಂಸ್ಕೃತಿಕ ಸಂಸ್ಥೆಗಳು, ಸಂಗೀತ ವಿದ್ಯಾರ್ಥಿಗಳು ಮತ್ತು ರಸಿಕರು ವ್ಯಾಪಕ ಸಂತೋಷದಿಂದ ಸ್ವಾಗತಿಸಿದ್ದಾರೆ. ಈ ಗೌರವವನ್ನು ಮಹಾಲಕ್ಷ್ಮಿ ಶೆಣೈ ಅವರ ಪ್ರಸಿದ್ಧ ಸಂಗೀತ ಪ್ರಯಾಣದಲ್ಲಿ ವೈಯಕ್ತಿಕ ಮೈಲಿಗಲ್ಲು ಮಾತ್ರವಲ್ಲದೆ ಭಾರತದ ಶಾಸ್ತ್ರೀಯ ಸಂಗೀತ ಸಂಪ್ರದಾಯಗಳ ನಿರಂತರ ಶಕ್ತಿಗೆ ಗೌರವವಾಗಿಯೂ ನೋಡಲಾಗುತ್ತದೆ.

100 ದಿನಗಳ ಗುರಿ

ಪುಟ 0 ➔ ಗುಣಮಟ್ಟದ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತೆಗೆ ರಾಜ್ಯಗಳು ಆದ್ಯತೆ ನೀಡಬೇಕು ಎಂದರು. ಮಹಿಳಾ ಅಭಿವೃದ್ಧಿಗೆ ಒತ್ತು ನೀಡುತ್ತಾ, ಲಕ್ಷಪತಿ ದೀದಿಯರ ಸಂಖ್ಯೆಯನ್ನು 3 ಕೋಟಿಯಿಂದ 6 ಕೋಟಿಗೆ ಹೆಚ್ಚಿಸುವ ಗುರಿ ಹೊಂದಬೇಕು ಎಂದು ಸೂಚಿಸಿದರು.

ಒಡಿಒಪಿ, ಎಐ, ಕೃಷಿಯಲ್ಲಿ ಹೊಸ ಯೋಜನೆ: ಒಂದು ಜಿಲ್ಲೆ ಒಂದು ಉತ್ಪನ್ನ (ಒಡಿಒಪಿ), ರಕ್ಷಣಾ ಉತ್ಪಾದನೆ, ಕೃತಕ ಬುದ್ಧಿಮತ್ತೆ (ಎಐ) ಹಾಗೂ ಡೇಟಾ ಸೆಂಟರ್ ಕ್ಷೇತ್ರಗಳಲ್ಲಿ ಹೂಡಿಕೆ ಆಕರ್ಷಿಸಲು ರಾಜ್ಯಗಳಿಗೆ ಕರೆ ನೀಡಲಾಯಿತು. ಜತೆಗೆ ನೀರಿನ ಸಂರಕ್ಷಣೆ, ಸಾವಯವ ಕೃಷಿ ಮತ್ತು ಕೃಷಿ ಕ್ಷೇತ್ರದಲ್ಲಿ 100 ಜಿಲ್ಲೆಗಳ ಗುರಿ ಆಧಾರಿತ ಅಭಿವೃದ್ಧಿ ಮಾದರಿಯನ್ನೂ ಪ್ರಸ್ತಾಪಿಸಲಾಯಿತು.

ಅಪರೂಪದ ಪೂರ್ಣ ಹಾಜರಾತಿ

ಪುಟ 0 ➔ ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಜಮ್ಮು-ಕಾಶ್ಮೀರ ಸೇರಿದಂತೆ ವಿರೋಧ ಪಕ್ಷ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳೂ ಸಭೆಯಲ್ಲಿ ಉಪಸ್ಥಿತರಿದ್ದರು. ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಸಹ ಸಭೆಯಲ್ಲಿ ಪಾಲ್ಗೊಂಡರು. ಕೇಂದ್ರ-ರಾಜ್ಯಗಳ ಸಹಭಾಗಿತ್ವದ ಮೂಲಕ ದೇಶದ ಅಭಿವೃದ್ಧಿ ಕಾರ್ಯತಂತ್ರ ರೂಪಿಸುವ ಉದ್ದೇಶದಿಂದ ನಡೆದ ಈ ಸಭೆಯಲ್ಲಿ ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಹಾಗೂ ಕೇಂದ್ರ ಸಚಿವರೂ ಭಾಗವಹಿಸಿದ್ದರು. ಸಭೆಯ ಬಳಿಕ ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು ಪ್ರಧಾನಿಯನ್ನು ಪ್ರತ್ಯೇಕವಾಗಿ ಭೇಟಿಯಾದರು. ಸಭೆಯ ಚಿತ್ರಗಳನ್ನು ಹಂಚಿಕೊಂಡ ಪ್ರಧಾನಿ ಮೋದಿ, ಸಹಕಾರಾತ್ಮಕ ಒಕ್ಕೂಟ ವ್ಯವಸ್ಥೆಯ ಮನೋಭಾವದಿಂದ ಕೇಂದ್ರ ಮತ್ತು ರಾಜ್ಯಗಳು ಸೇರಿ ಏಕಸಿತ ಭಾರತ ಗುರಿಯತ್ತ ಸಾಗುತ್ತಿವೆ ಎಂದು ಹೇಳಿದರು.



2024ರಲ್ಲಿ ದಾಖಲೆಯ 2.36 ಕೋಟಿ ಪ್ರವಾಸಿಗರು ಜಮ್ಮು-ಕಾಶ್ಮೀರಕ್ಕೆ ಭೇಟಿ ನೀಡಿದ್ದಾರೆ. 6.5 ಲಕ್ಷಕ್ಕೂ ಅಧಿಕ ರೈತರು 5,000 ಕೋಟಿ ರೂ. ಕೃಷಿ ಅಭಿವೃದ್ಧಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಶಾಂತಿ, ಪ್ರಜಾಪ್ರಭುತ್ವ ಮತ್ತು ಪ್ರಗತಿ ಸಾರ್ವಜನಿಕರ ಆದ್ಯತೆ.
■ **ಒಮರ್ ಅಬ್ದುಲ್ಲಾ, ಜಮ್ಮು ಕಾಶ್ಮೀರ ಮುಖ್ಯಮಂತ್ರಿ**




ಸಂಪರ್ಕ ವ್ಯವಸ್ಥೆಯು ಸಿಕ್ಕಿಂ ರಾಜ್ಯ ಎದುರಿಸುತ್ತಿರುವ ಅತಿ ದೊಡ್ಡ ಸವಾಲಾಗಿ ಉಳಿದುಕೊಂಡಿದೆ. ಸಿಕ್ಕಿಂನಲ್ಲಿ ಇನ್ನಷ್ಟು ರಸ್ತೆ, ರೈಲು, ವಿಮಾನ ಮತ್ತು ಡಿಜಿಟಲ್ ಮೂಲಸೌಕರ್ಯಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಆದ್ಯತೆ ನೀಡಬೇಕು. ಮಾನವ ಸಂಪನ್ಮೂಲ ಸೂಚ್ಯಂಕದ ಅಗ್ರ-10 ರಾಜ್ಯಗಳಲ್ಲಿ ಸಿಕ್ಕಿಂ ಸ್ಥಾನ ಪಡೆದಿದೆ.
■ **ಪ್ರೇಮ್ ಸಿಂಗ್ ತಮಾಂಗ್, ಸಿಕ್ಕಿಂ ಮುಖ್ಯಮಂತ್ರಿ**

ಪ್ರಮುಖ ಬೇಡಿಕೆಗಳು

ಪುಟ 0 ➔ 6. ಹೆಬ್ಬುವರಿ ವಲಸೆಯಿಂದ ಬೆಂಗಳೂರಿಗೆ ಮೂಲಸೌಕರ್ಯ ಅನುದಾನ ಹಾಗೂ ಉಪನಗರ-ನಗರ ಸಂಪರ್ಕಕ್ಕೆ ಅನುಮೋದನೆ ನೀಡಬೇಕು. ಮಧ್ಯ ಬೆಂಗಳೂರನ್ನು ನೆರೆಯ ಉಪನಗರಗಳು ಮತ್ತು ಕೋಲಾರ, ಮೈಸೂರು, ತುಮಕೂರು ಮತ್ತು ಚಿಕ್ಕಬಳ್ಳಾಪುರ ನಗರಗಳೊಂದಿಗೆ ಸಂಪರ್ಕ ಮಂಜೂರಾತಿಗೆ ವಿನಂತಿಸಿಕೊಂಡಿದ್ದಾರೆ.

ರಾಮಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜೆ

◈ ಪ್ರಧಾನಿಯಾಗಿ ಮೋದಿ ದೀರ್ಘಾವಧಿ
– **ಪತ್ರಿಕೆಗಳಲ್ಲಿ ಶೀರ್ಷಿಕೆ**
– **ಸಾಧನೆಯೂ ಅನರ್ಘ್ಯ, ಅಸಂಖ್ಯ, ಅವಿರತ. ಜಗತ್ತೇ ತಲೆ ಬಾಗುವಂತಾಗಿದೆ, ವಿರೋಧಿಗಳಿಗೆ ತಲೆ ನೋವಾಗಿದೆ!**

ದಿನ ಭವಿಷ್ಯ

ಮೇಷ
ಸುಲಭ ಕೆಲಸವೂ ಕಠಿಣವಾದೀತು. ಒತ್ತಡ ಹೆಚ್ಚಳ. ಮನೆಯವರ ಜತೆ ಸಹನೆಯಿಂದ ವರ್ತಿಸಿ. ಧನವ್ಯಯ ನಿಯಂತ್ರಣ. ಇದರಿಂದ ತುಸು ನಿರಾಳತೆ.

ವೃಷಭ
ನಿಮ್ಮ ನಿರೀಕ್ಷೆ ಇಂದು ಸಾಕಾರವಾಗದು. ನಿರಾಶೆ ಉಂಟಾದೀತು. ಅತಿ ಒತ್ತಡ ಆರೋಗ್ಯದ ಮೇಲೆ ಪರಿಣಾಮ. ಇತರರಿಗಾಗಿ ಹಣ ವ್ಯಯಿಸುವ ಪ್ರಸಂಗ.

ಮಿಥುನ
ಸಹನೆ ಕೆಡಿಸುವ ಬೆಳವಣಿಗೆ. ಆದರೂ ತಾಳ್ಮೆಯಿಂದ ವರ್ತಿಸಿ. ನಿಮ್ಮ ಕಾರ್ಯಕ್ಕೆ ಕೆಲವರ ಅಡ್ಡಿ. ಕೌಟುಂಬಿಕ ಬಿಕ್ಕಟ್ಟು ಬೆಳೆಸದಿರಿ. ಪರಿಹರಿಸಿ.

ಕಟಕ
ಎಲ್ಲರ ಗಮನ ಸೆಳೆಯುವ ನಿರ್ವಹಣೆ. ಆದರೂ ಮನದೊಳಗೆ ಅತೃಪ್ತಿ. ಇತರರ ಜತೆ ಹೋಲಿಕೆ ಮಾಡಿಕೊಳ್ಳಬೇಡಿ. ಬಂಧುಗಳ ಸಹಕಾರ.

ಸಿಂಹ
ಕುಟುಂಬ ಸದಸ್ಯರ ಕಾಳಜಿಗೆ ಗಮನ ಕೊಡಿ. ವೃತ್ತಿ ಒತ್ತಡದಲ್ಲಿ ಅದನ್ನು ಮರೆಯಬೇಡಿ. ಟೀಕೆ ಕೇಳಿಬಂದರೂ ಅದರತ್ತ ಗಮನ ಕೊಡಬೇಡಿ.

ಕನ್ಯಾ
ನಿಮ್ಮ ಯೋಜನೆಗೆ ಸೂಕ್ತ ಬೆಂಬಲ ಸಿಗಲಿದೆ. ವೃತ್ತಿಯಲ್ಲಿ ತೃಪ್ತಿಕರ ಬೆಳವಣಿಗೆ. ಹಣದ ಪರಿಸ್ಥಿತಿ ಸಮಾಧಾನಕರ. ಅಲರ್ಜಿ ಸಂಬಂಧಿ ಸಮಸ್ಯೆ ಸಂಭವ.

ತುಲಾ
ಸಣ್ಣಪುಟ್ಟ ವಾಗ್ವಾದ ನಡೆಯುವುದು ಸಹಜ. ಆದರೆ ದ್ವೇಷ ಬೇಡ. ಸಹೋದ್ಯೋಗಿಗಳ ಜತೆ ಸಹಕಾರದಿಂದ ವರ್ತಿಸಿ. ಕೌಟುಂಬಿಕ ಸಮಾಧಾನ.

ವೃಶ್ಚಿಕ
ವೃತ್ತಿಯಲ್ಲಿ ಉತ್ತೇಜನಕಾರಿ ಪರಿಸ್ಥಿತಿ. ಬಂಧುಗಳ ಜತೆ ವಿನಯದಿಂದ ವರ್ತಿಸಿ. ಶೇರು ಹೂಡಿಕೆ ಇಂದು ಬೇಡ, ಕಾದು ನೋಡಿ.

ಧನು
ಇತರರ ಜತೆ ವ್ಯವಹಾರದಲ್ಲಿ ನಿಮ್ಮ ನಿಲುವನ್ನು ಸ್ಪಷ್ಟಪಡಿಸಿ. ನಿಮ್ಮ ಬಗ್ಗೆ ತಪ್ಪಭಿಪ್ರಾಯ ಮೂಡದಂತೆ ಎಚ್ಚರ ವಹಿಸಿ. ಧನಪ್ರಾಪ್ತಿ.

ಮಕರ
ಮಾನಸಿಕ ಮತ್ತು ಭಾವನಾತ್ಮಕ ದೃಢತೆ ಕಾಯ್ದುಕೊಳ್ಳಿ. ಏಕೆಂದರೆ ಅಂತಹ ಪರಿಸ್ಥಿತಿ ಇಂದು ನಿರ್ಮಾಣವಾದೀತು. ವೃತ್ತಿಯಲ್ಲಿ ಉನ್ನತಿ.

ಕುಂಭ
ವ್ಯವಹಾರ ಸುಗಮ. ಅಡ್ಡಿಗಳ ನಿವಾರಣೆ. ಮನೆಯ ಕಷ್ಟವೊಂದು ಪರಿಹಾರ ಕಾಣಲಿದೆ. ಆತ್ಮೀಯರು ನೆರವಿಗೆ ಬರುವರು.ಧನಪ್ರಾಪ್ತಿ.

ಮೀನ
ವೃತ್ತಿಯಲ್ಲಿ ಏರುಪೇರಿನ ಪರಿಸ್ಥಿತಿ. ಪ್ರಯತ್ನ ವಿಫಲವಾದರೂ ಕೈಬಿಡಬೇಡಿ. ಕುಟುಂಬ ದಲ್ಲಿ ಆರೋಗ್ಯ ಸಮಸ್ಯೆ. ಖರ್ಚು ಹೆಚ್ಚಳ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 2,8,3,7

ರಾಜ್ಯಸಭೆಗೆ ಖರ್ಗೆ ಸೇರಿ ನಾಲ್ವರ ಅವಿರೋಧ ಆಯ್ಕೆ

ಪುಟ 0 ➔ ಗುರುವಾರ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿತ್ತು, ರಾಜ್ಯದಿಂದ ಖಾಲಿ ಇರುವ ನಾಲ್ಕು ಸ್ಥಾನಗಳಿಗೆ ಕಾಂಗ್ರೆಸ್ ಮೂರು ಮತ್ತು ಬಿಜೆಪಿ ಒಂದು ಸ್ಥಾನ ಜಯಿಸಲು ಅವಕಾಶ ಇತ್ತು, ಇದರಂತೆ ಎರಡು ಪಕ್ಷಗಳಿಂದ ನಿಗದಿತ ಅಭ್ಯರ್ಥಿಗಳು ಮಾತ್ರ ಸ್ಪರ್ಧಿಸಿದ್ದರಿಂದ ಜೂ.18ರ ಮತದಾನಕ್ಕಿಂತ ಮುಂಚೆಯೇ ಫಲಿತಾಂಶ ಘೋಷಣೆಯಾಗಿದೆ. ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ, ಎಚ್.ಡಿ. ದೇವೇಗೌಡ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರ ರಾಜ್ಯಸಭೆಯ ಅವಧಿ ಈ ತಿಂಗಳ 25ಕ್ಕೆ ಕೊನೆಗೊಳ್ಳಲಿದೆ. ಕರ್ನಾಟಕದಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದ ಕಾಂಗ್ರೆಸ್ ಅಭ್ಯರ್ಥಿಗಳಾದ ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರಾ ಹಾಗೂ ಮನ್ಸೂರ್ ಅಲಿ ಖಾನ್ ಅವರಿಗೆ ಸಿಎಂ ಡಿ.ಕೆ. ಶಿವಕುಮಾರ್ ಅಭಿನಂದನೆ ಸಲ್ಲಿಸಿದರು.

ಪಿಒಕೆಯಲ್ಲಿ ಪಾಕ್ ಸೇನೆ ನರಮೇಧ

ಪುಟ 0 ➔ ಪ್ರಕಾರ, ರಾವಲಕೋಟ್‌ನ ಈದ್ಗಾ ಮೈದಾನದಲ್ಲಿ ದೊಡ್ಡ ಪ್ರಮಾಣದ ಜನಸಮೂಹ ಸೇರಿದ್ದ ವೇಳೆ ಭದ್ರತಾ ಪಡೆಗಳು ಗುಂಡಿನ ದಾಳಿ ನಡೆಸಿದವು. ಜೂ.5ರಿಂದ ಆರಂಭವಾದ ಪ್ರತಿಭಟನೆಗಳಲ್ಲಿ ಇದುವರೆಗೆ ಒಟ್ಟು 53 ನಾಗರಿಕರು ಮೃತಪಟ್ಟಿದ್ದಾರೆ ಎನ್ನಲಾಗಿದೆ. ಸರ್ಕಾರವು ಕೆಲವು ಪ್ರದೇಶಗಳಲ್ಲಿ ಇಂಟರ್ನೆಟ್ ಸೇವೆಯನ್ನು ಸ್ಥಗಿತಗೊಳಿಸಿದ್ದು, ಪ್ರತಿಭಟನಾ ಸಂಘಟಕರ ಬಂಧನ ಹಾಗೂ ಸಂಚಾರ ನಿರ್ಬಂಧಗಳನ್ನು ವಿಧಿಸಿದೆ. ಪ್ರತಿಭಟನಾಕಾರರು ಅಗ್ಗದ ವಿದ್ಯುತ್, ಆಹಾರ ಸಬ್ಸಿಡಿ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಟ ಮುಂದುವರಿಸುವುದಾಗಿ ಘೋಷಿಸಿದ್ದಾರೆ.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಸಿಎಂ ಶಿವಕುಮಾರ್ ಮನವಿ

ನೀರು ಹಂಚಿಕೆಗೆ ಬೆಂಬಲಿಸಿ

• **ಹೊಸದಿಲ್ಲಿ:** ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿದ್ದು, ಈ ವೇಳೆ ರಾಜ್ಯದ ಪ್ರಮುಖ ಯೋಜನೆಗಳಿಗೆ ಬೆಂಬಲ ಮತ್ತು ಹಣಕಾಸು ಅನುದಾನ ಒದಗಿಸುವ ಕುರಿತು ಮನವಿ ಮಾಡಿದ್ದಾರೆ.

ಮೇಕೆದಾಟು ಯೋಜನೆ ಕುರಿತು ತಮಿಳುನಾಡು ಸಲ್ಲಿಸಿದ್ದ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಜಾ ಆಗಿದ್ದು, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕೇಂದ್ರ ನೀರು ಆಯೋಗವು ಯೋಜನೆ ಕುರಿತು ಚರ್ಚೆ ನಡೆಸಿದ್ದು, ಈ ಬಗ್ಗೆ ನಿರಾಪೇಕ್ಷಣೆ ನೀಡುವಂತೆ ಮನವಿ ಮಾಡಿದ್ದಾರೆ.

ಕೃಷ್ಣಾ ನೀರು ಹಂಚಿಕೆಯಲ್ಲಿ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ ತೀರ್ಪು ನೀಡಿದ್ದು, ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಷನ್ ಹೊರಡಿಸಿಲ್ಲ, ಕೃಷ್ಣಾ 3ನೇ ಹಂತದ ಯೋಜನೆಗೆ ರಾಜ್ಯ ಸರ್ಕಾರ ದೊಡ್ಡ ಮಟ್ಟದ ಹಣ ವಿನಿಯೋಗಿಸಿದ್ದು, ನೀರು ಹಂಚಿಕೆಯಲ್ಲಿ ನಮಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ 53,000 ಕೋಟಿ ರೂ. ಅನುದಾನ ಘೋಷಿಸಿದೆ, ಆದರೆ ಬಿಡುಗಡೆಯಾಗಿಲ್ಲ. ಇದನ್ನು ಬಿಡುಗಡೆಗೊಳಿಸಬೇಕು ಮತ್ತು ಪ್ರಧಾನ ಮಂತ್ರಿ ಕೃಷಿ ಸಂಚಾರಿ ಯೋಜನಾ ಅಡಿ ಲಕ್ಷಾಂತರ ರೈತರಿಗೆ ನೆರವಾಗಬೇಕು ಎಂದು ಮನವಿ ಮಾಡಿದ್ದಾರೆ.



ಕಳಸಾ ಬಂಡೂರಿ ಯೋಜನೆಯ ಕಾಮಗಾರಿಗೆ ಅವಕಾಶ ನೀಡುವುದು, ಗೋದಾವರಿ-ಕಾವೇರಿ ಮತ್ತು ಬೇಡ್ತಿ-ವರದಾ ನದಿಗಳ ಜೋಡಣೆ ಯೋಜನೆಗಳ ಅಡಿಯಲ್ಲಿ ರಾಜ್ಯಕ್ಕೆ ಕನಿಷ್ಠ 40 ರಿಂದ 45 ಟಿಎಂಸಿ ನೀರಿನ ಸಮಾನ ಹಂಚಿಕೆಯನ್ನು ಖಚಿತಪಡಿಸಿಸಬೇಕೆಂದಿದ್ದಾರೆ. ಬೆಂಗಳೂರಿನ ಮೂಲಸೌಕರ್ಯ ಬಲಪಡಿಸಲು ಮತ್ತು ಅದರ ಜಾಗತಿಕ ಸ್ಪರ್ಧಾತ್ಮಕತೆಯನ್ನು ಉಳಿಸಿಕೊಳ್ಳಲು ರೂ.26,000 ಕೋಟಿ ರೂ. ಸಹಾಯವನ್ನು ಒದಗಿಸುವಂತೆ ಕೋರಿದ್ದಾರೆ.

ಮೆಟ್ರೋ ಯೋಜನೆಗೆ ಅನುಮತಿ: ಮೆಟ್ರೋ ಮೂರನೇ ಹಂತ ಯೋಜನೆಯಲ್ಲಿ 44.65 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣದಲ್ಲಿ ಬಿಎಂಆರ್‌ಸಿಎಲ್ ಸಣ್ಣ ಬದಲಾವಣೆ ಪ್ರಸ್ತಾಪ ಮಾಡಿದ್ದು, ಕೇಂದ್ರ ಈ ಯೋಜನೆಯನ್ನು ಆರಂಭಿಸಲು ಬಿಎಂಆರ್ ಸಿಎಲ್‌ಗೆ ಅನುಮತಿ ನೀಡಬೇಕು.

ಮೆಟ್ರೋ ಎರಡನೇ ಹಂತದ ಪರಿಷ್ಕೃತ ಯೋಜನೆಗೆ ಕೇಂದ್ರ ಸರ್ಕಾರ 26,405.14 ಕೋಟಿ ರೂ. ಅಂದಾಜು ವೆಚ್ಚಕ್ಕೆ ಅನುಮತಿ ನೀಡಿತ್ತು. ಈ ಯೋಜನೆ ಅಂದಾಜು ವೆಚ್ಚ ಈಗ ಏರಿಕೆ ಮಾಡಲಾಗಿದ್ದು, ಆದಷ್ಟು ಬೇಗ ಈ ಪರಿಷ್ಕೃತ ಯೋಜನಾ ವೆಚ್ಚಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕೆಂದು ಮನವಿ ಮಾಡಿದ್ದಾರೆ. ಸರ್ಜಾಪುರದಿಂದ ಹೆಬ್ಬಾಳದವರೆಗೆ ಒಟ್ಟು 37.804 ಕಿ.ಮೀ (14.28 ಕಿ.ಮೀ ಸುರಂಗ ಹಾಗೂ 23.524 ಕಿ.ಮೀ ಮೇಲ್ಸೇತುವೆ) ಉದ್ದದ ಮೆಟ್ರೋ ಮೂರನೇ ಎ ಹಂತದ ಯೋಜನೆಗೆ ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕೆಲವು ಮಾರ್ಪಾಡು ಮಾಡಲಾಗಿದ್ದು, ಆದಷ್ಟು ಬೇಗ ಇದಕ್ಕೆ ಅನುಮತಿ ನೀಡಬೇಕು.

ರಾಯಚೂರಿಗೆ ಏಮ್ಸ್, ಕಲ್ಯಾಣ ಕರ್ನಾಟಕಕ್ಕೆ ಹಣಕಾಸಿನ ನೆರವು, ಶರಾವತಿ ಪಂಪ್ಡ್ ಸ್ಟೋರೇಜ್, ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ಪ್ರಾದೇಶಿಕ ಕ್ಷಿಪ್ರ ರೈಲು ಸಾರಿಗೆ ವ್ಯವಸ್ಥೆ ಜಾರಿಗೆ ಅನುಮತಿ ನೀಡಬೇಕು.
■ **ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ**

ನಾಲ್ಕು ಯೋಜನೆಗಳಿಗೆ ಸರ್ಕಾರ ಅನುಮೋದನೆ

• **ಬೆಂಗಳೂರು:** ರಾಜ್ಯದಲ್ಲಿ ನಾವೀನ್ಯತೆ, ಜೈವಿಕ ತಂತ್ರಜ್ಞಾನ ಸಂಶೋಧನೆ, ಕೈಗಾರಿಕೆ-ಶೈಕ್ಷಣಿಕ ಸಹಯೋಗ ಹಾಗೂ ಡೀಪ್ ಟೆಕ್ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ 27.19 ಕೋಟಿ ರೂ. ಮೊತ್ತದ ನಾಲ್ಕು ಮಹತ್ವದ ಯೋಜನೆಗಳಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.



ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ, ತಂತ್ರಜ್ಞಾನ ಇಲಾಖೆ, ಕರ್ನಾಟಕ ನಾವೀನ್ಯತೆ, ತಂತ್ರಜ್ಞಾನ ಸೊಸೈಟಿ, ಕರ್ನಾಟಕ ಡಿಜಿಟಲ್ ಆರ್ಥಿಕತೆ ಮಿಷನ್, ಪ್ರಮುಖ ಶೈಕ್ಷಣಿಕ ಸಂಸ್ಥೆಗಳು ಮತ್ತು ಇತರ ಪಾಲುದಾರ ಸಹಯೋಗದಲ್ಲಿ ಈ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಈ ಕುರಿತು ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಹೊಸ ನವೋದ್ಯಮ ವೇಗವರ್ಧಕ ಕಾರ್ಯಕ್ರಮ, ಕೈಗಾರಿಕೆ-ಶೈಕ್ಷಣಿಕ ವಲಯದ ಸೂಪರ್ 100 ದತ್ತು ಯೋಜನೆ, ಸುಧಾರಿತ ಶಸ್ತ್ರಚಿಕಿತ್ಸಾ ಸಹಾಯಕ ರೋಬೋಟ್ ಅಭಿವೃದ್ಧಿ ಹಾಗೂ ಜಿನೋಮ್ ಎಡಿಟಿಂಗ್ ಸಂಶೋಧನೆಗೆ ಅಗತ್ಯವಾದ ಮೂಲ ಸೌಕರ್ಯ ವಿಸ್ತರಣೆಗೆ ಈ ಅನುದಾನವನ್ನು ಬಳಸಲಾಗುತ್ತದೆ ಎಂದರು.

ಸ್ಥಳೀಯ ಆರ್ಥಿಕತೆಯ ವೇಗವರ್ಧಕ ಕಾರ್ಯಕ್ರಮ ಅಡಿಯಲ್ಲಿ ಮಂಗಳೂರಿನಲ್ಲಿ ನವೋದ್ಯಮಗಳಿಗೆ ಉತ್ತೇಜನ ನೀಡಲು 9.26 ಕೋಟಿ ರೂ.ವೆಚ್ಚದ ಯೋಜನೆಗೆ ಅನುಮೋದನೆ ನೀಡಲಾಗಿದೆ. ಸೂಪರ್ 100 ಕಾರ್ಯಕ್ರಮಕ್ಕೆ 7.47 ಕೋಟಿ ರೂ. ಮೀಸಲಿಡಲಾಗಿದೆ. ಈ ಯೋಜನೆಯನ್ನು ಕರ್ನಾಟಕ ಡಿಜಿಟಲ್ ಆರ್ಥಿಕತೆ ಮಿಷನ್ ಸಹಭಾಗಿತ್ವದಲ್ಲಿ ಜಾರಿಗೊಳಿಸಲಾಗುತ್ತದೆ ಎಂದರು.

ಸ್ಥಳೀಯ ವೈದ್ಯಕೀಯ ರೋಬೋಟಿಕ್ ಅಭಿವೃದ್ಧಿಗೆ 3.66 ಕೋಟಿ ರೂ. ಅನುದಾನ ನೀಡಲಾಗಿದ್ದು, ಸುಧಾರಿತ ಶಸ್ತ್ರಚಿಕಿತ್ಸಾ ಸಹಾಯಕ ರೋಬೋಟ್‌ಗಳ ಅಭಿವೃದ್ಧಿಗೆ ಈ ಮೊತ್ತವನ್ನು ಬಳಸಲಾಗುತ್ತದೆ. ಜತೆಗೆ, ಜೀನೋಮ್ ಎಡಿಟಿಂಗ್ ಮತ್ತು ಮಾನವ ತಳಿಶಾಸ್ತ್ರ ಸಂಶೋಧನೆಗೆ ಅಗತ್ಯವಾದ ಮೂಲಸೌಕರ್ಯ ವಿಸ್ತರಣೆಗಾಗಿ 6.80 ಕೋಟಿ ರೂ. ನೆರವು ಒದಗಿಸಲಾಗುತ್ತಿದೆ ಎಂದು ತಿಳಿಸಿದರು.

ದಾಳಿ ತಕ್ಷಣ ನಿಲ್ಲಿಸಿ, ಅಮೆರಿಕಕ್ಕೆ ಸೂಚನೆ

ಪುಟ 0 ➔ ಜೂ.10ರಂದು ಸೆಟ್ಟಿಬೆಲ್ಲೊ ಹಡಗಿನ ಮೇಲೆ ನಡೆದ ದಾಳಿಯಲ್ಲಿ 24 ಭಾರತೀಯ ಸಿಬ್ಬಂದಿಯಲ್ಲಿ ಮೂವರು ಮೃತಪಟ್ಟಿದ್ದಾರೆ. ಉಳಿದ 25 ಸಿಬ್ಬಂದಿಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಮೃತರ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಲು ಸೀಮೆನ್ ವೆಲ್ಫೇರ್ ಫಂಡ್ ಸೊಸೈಟಿಗೆ ಸೂಚನೆ ನೀಡಲಾಗಿದೆ. ಪ್ರಸ್ತುತ ಗಲ್ಫ್ ಪ್ರದೇಶದಲ್ಲಿ 18 ಸಾವಿರಕ್ಕೂ ಹೆಚ್ಚು ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದು, 13 ಭಾರತೀಯ ಧ್ವಜದ ಹಡಗುಗಳಲ್ಲಿ 562 ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ.

ಖಾರ್ಗ್ ದ್ವೀಪ ವಶಕ್ಕೆ: ಟ್ರಂಪ್ ಬೆದರಿಕೆ

ಪುಟ 0 ➔ ಸಾಮಾಜಿಕ ಜಾಲತಾಣದ ಮೂಲಕ ಟ್ರಂಪ್, ಇಂದು ರಾತ್ರಿ ಇರಾನ್ ಮೇಲೆ ತೀವ್ರ ಕ್ರಮ ಕೈಗೊಳ್ಳಬಹುದು ಎಂದು ಎಚ್ಚರಿಸಿದರು. ಅಮೆರಿಕ ಮತ್ತು ಇರಾನ್ ನಡುವೆ ಯುದ್ಧ ಅಂತ್ಯಗೊಳಿಸುವ ಮಾತುಕತೆಗಳು ಸ್ಥಗಿತಗೊಂಡಿರುವ ಹಿನ್ನೆಲೆ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಹಾರ್ಮುಜ್ ಜಲಸಂಧಿಯಲ್ಲಿ ಇರಾನ್‌ನ ನಿಯಂತ್ರಣದಿಂದ ಜಾಗತಿಕ ಇಂಧನ ಪೂರೈಕೆ ಅಸ್ತವ್ಯಸ್ತಗೊಂಡಿದ್ದು, ಇಂಧನ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಕಳೆದ ತಿಂಗಳ ಕದನ ವಿರಾಮದ ನಂತರವೂ ಎರಡೂ ದೇಶಗಳು ಪರಸ್ಪರ ದಾಳಿಗಳನ್ನು ಮುಂದುವರಿಸಿವೆ. ಖಾರ್ಗ್ ದ್ವೀಪವು ಇರಾನ್ ತೈಲ ರಫ್ತಿನ ಪ್ರಮುಖ ಕೇಂದ್ರವಾಗಿದ್ದು, ಸುಮಾರು ಶೇ.90ರಷ್ಟು ರಫ್ತು ಇದೇ ಮಾರ್ಗದಿಂದ ಸಾಗುತ್ತದೆ. ಆದರೆ, ದ್ವೀಪವು ಇರಾನ್ ಭೂಭಾಗಕ್ಕೆ ಸಮೀಪ ಇರುವುದರಿಂದ ಅಮೆರಿಕದ ಸೈನಿಕ ಕಾರ್ಯಾಚರಣೆ ಅಪಾಯಕಾರಿಯಾಗಿದೆ ಎಂದು ವಿಶ್ಲೇಷಿಸಲಾಗಿದೆ.

ದಾಳಿ, ಪ್ರತಿದಾಳಿ: ಇದರ ನಡುವೆ ಅಮೆರಿಕ ತನ್ನ ವೈಮಾನಿಕ ದಾಳಿಗಳನ್ನು ಮುಂದುವರಿಸಿದ್ದು, ಅಮೆರಿಕ ನೆಲೆಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಪರಮಾಣು ಕಾರ್ಯಕ್ರಮ, ಲೆಬನಾನ್ ಸಂಘರ್ಷ ಹಾಗೂ ಹಾರ್ಮುಜ್ ಜಲಸಂಧಿ ವಿವಾದಗಳು ಇನ್ನೂ ಬಗೆಹರಿಯದೆ ಉಳಿದಿವೆ.

1.12 ಲಕ್ಷ ಗೃಹಲಕ್ಷ್ಮಿಯರಿಗೆ ಕೊಕ್

ಪುಟ 0 ➔ ಗೃಹಜ್ಯೋತಿ ಯೋಜನೆಯ ಕೆಲವು ಫಲಾನುಭವಿಗಳು ಬೇರೆಯವರ ದೂರವಾಣಿ ಸಂಖ್ಯೆ ನೀಡಿದ್ದಾರೆ. ಹೀಗಾಗಿ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಯೋಜನೆ ಫಲಾನುಭವಿಗಳನ್ನು ಕಡಿತಗೊಳಿಸುವ ಯಾವ ಉದ್ದೇಶವೂ ಇಲ್ಲ. ಅರ್ಹರಿಗೆ ಯೋಜನೆ ತಲುಪಬೇಕು ಎಂಬುದು ನಮ್ಮ ಉದ್ದೇಶ ಎಂದು ಸಿಎಂ ತಿಳಿಸಿದ್ದಾರೆ.

ಅನರ್ಹರನ್ನು ಪತ್ತೆ ಹಚ್ಚುವ ಕಾರ್ಯ

ಪುಟ 0 ➔ ಇಲ್ಲಿಯವರೆಗೆ ಫಲಾನುಭವಿಗಳ ಪೈಕಿ ಅನೇಕರು ಮೃತಪಟ್ಟಿದ್ದು, ಅವರ ಖಾತೆಗೂ ಹಣ ಸಂದಾಯವಾಗುತ್ತಿತ್ತು. ಜತೆಗೆ, ಆದಾಯ ತೆರಿಗೆ ಮತ್ತು ಜಿಎಸ್‌ಟಿ ಪಾವತಿಸುತ್ತಿರುವ ಮಹಿಳೆಯರು ಯೋಜನೆ ಹಣ ಪಡೆಯುತ್ತಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಅನರ್ಹರನ್ನು ಪತ್ತೆ ಹುಚ್ಚುವ ಕಾರ್ಯ ರಾಜ್ಯಾದ್ಯಂತ ನಡೆದಿದೆ. ಕೆಲವರು ಗೃಹಜ್ಯೋತಿ ಯೋಜನೆಯಲ್ಲಿ 200 ಯುನಿಟ್‌ವರೆಗೂ ಉಚಿತ ವಿದ್ಯುತ್ ಪಡೆಯುತ್ತಿದ್ದು, ಅಂಗಡಿಗೆ ಬಳಸುತ್ತಿದ್ದಾರೆ. ಒಬ್ಬರ ಹೆಸರಿನಲ್ಲಿ ಆರು ಮೀಟರ್‌ಗಳಿವೆ. ವಾಸದ ಮನೆಗಳಿಗೆ ಈ ಯೋಜನೆ ಪಡೆದರೆ ಅಭ್ಯಂತರವಿಲ್ಲ. ಬಾಡಿಗೆ ಮನೆಯಲ್ಲಿ ಇರುವವರು ಒಂದು ಅಫಿಡವಿಟ್ ಸಲ್ಲಿಸಲಿ. ನಾವು ಈ ಯೋಜನೆ ಜಾರಿಗೆ ತಂದಿರುವುದು ಕರ್ನಾಟಕ ರಾಜ್ಯದ ಮತದಾರರಿಗೆ ಎಂದಿದ್ದಾರೆ.

ಗೃಹಲಕ್ಷ್ಮಿಗೆ ಷರತ್ತು ಯಾಕೆ?

ಗೃಹಲಕ್ಷ್ಮಿ ಯೋಜನೆ ಪರಿಷ್ಕರಣೆಗೆ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅಸಮಾಧಾನ ವ್ಯಕ್ತಪಡಿಸಿದ್ದು, ಕಳೆದ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಗ್ಯಾರಂಟಿಗಳಿಗೆ ಹಾಕದ ಷರತ್ತು, ಈಗ ಏಕೆ ವಿಧಿಸಲಾಗುತ್ತಿದೆ. ಯಾಕಾಗಿ ನಿಮ್ಮ ಷರತ್ತು, ಖಜಾನೆ ಖಾಲಿ ಎಂಬುದು ಜನರಿಗೆ ಗೊತ್ತಿದೆ. ಫಲಾನುಭವಿಗಳನ್ನು ಕಡಿಮೆ ಮಾಡಲು ಷರತ್ತು ಹಾಕುತ್ತೀರಿ. ನಿಮ್ಮ ಹಳೆ ಭಾಷಣವನ್ನು ಜನರು ಕೇಳಿಸಿಕೊಳ್ಳುತ್ತಾರೆ. ಇದಕ್ಕೆ ಸೂಕ್ತ ಸಮಯದಲ್ಲಿ ಉತ್ತರ ಕೊಡುತ್ತಾರೆ ಎಂದಿದ್ದಾರೆ. ಗೃಹಲಕ್ಷ್ಮಿ ಹಣ ಕೊಡಬೇಕಾಗುತ್ತದೆ ಎಂದು ಹೊಸ ಬಿಪಿಎಲ್ ಕಾರ್ಡ್ ಕೊಡುವುದನ್ನೂ ನಿಲ್ಲಿಸಿದ್ದಾರೆ. ಇದರಿಂದಾಗಿ ಅರ್ಹ ಫಲಾನುಭವಿಗಳು ಬಿಪಿಎಲ್ ಕಾರ್ಡ್‌ನಿಂದಲೂ ವಂಚಿತರಾಗಿದ್ದಾರೆ. ಇದು ಸರಿಯಲ್ಲ, ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ ಎಂಬ ನೀತಿಯೇ ಜಾತ್ಯತೀತತೆಯೇ ಎಂದು ಅವರು ಸಚಿವ ಸ್ಥಾನ ಹಂಚಿಕೆ ಕುರಿತ ಪ್ರಶ್ನೆಗೆ ಉತ್ತರ ಕೊಟ್ಟರು. ಅಹಿಂದದೊಳಗೆ ಒಂದು ಜಾತಿ ಮಾತ್ರ ಇದೆಯೇ? ಎಲ್ಲ ಜಾತಿಯವರಿಗೂ ಸಮಾನ ಅವಕಾಶ ಎಂಬುದು ಜಾತ್ಯತೀತತೆ ಎಂದು ಭಾವಿಸಿದ್ದೇನೆ ಎಂದರು.



ವೆನಿಲ್ಲಾ ಕೊಲೆ ಪ್ರಕರಣ: ಆರೋಪಿಗಳು ಕಸ್ಟಡಿಗೆ

• **ಬೆಂಗಳೂರು:** ನಗರದ ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ನಡೆದ 6 ವರ್ಷದ ಬಾಲಕಿ ವೆನಿಲ್ಲಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ಆರೋಪಿಯಾಗಿರುವ ಬಾಲಕಿಯ ತಾಯಿ ಪ್ರಿಯಾಂಕಾಳನ್ನು ಪೊಲೀಸರು ಬಂಧಿಸಿ, ಒಂದನೇ ಎಸಿಜೆಎಂ ಕೋರ್ಟ್‌ಗೆ ಹಾಜರುಪಡಿಸಿದ್ದಾರೆ. ನ್ಯಾಯಾಲಯವು ಆರೋಪಿಯನ್ನು ಐದು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದೆ.



ಪ್ರಕರಣದ ತನಿಖೆ ವೇಳೆ ಬಾಲಕಿಯ ತಾಯಿ ಪ್ರಿಯಾಂಕಾ ಹಾಗೂ ಆಕೆಯ ಪ್ರಿಯಕರ ಮೋಹನ್ ವಿರುದ್ಧ ಗಂಭೀರ ಆರೋಪಗಳು ಕೇಳಿಬಂದಿವೆ. ಅಕ್ರಮ ಸಂಬಂಧಕ್ಕೆ ಮಗಳು ಅಡ್ಡಿಯಾಗಿದ್ದಾಳೆ ಎಂಬ ಕಾರಣಕ್ಕೆ ಇಬ್ಬರೂ ಸೇರಿ ಬಾಲಕಿಯನ್ನು ಹತ್ಯೆ ಮಾಡಿದ್ದರು.

ಘಟನೆ ಬೆಳಕಿಗೆ ಬಂದ ಬಳಿಕ ಪ್ರಿಯಕರ ಮೋಹನ್‌ನನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದರು. ಈ ನಡುವೆ ತಾಯಿ ಪ್ರಿಯಾಂಕಾ ಹಾಸನದಲ್ಲಿ ತಲೆಮರೆಸಿಕೊಂಡಿದ್ದಳು. ಬಳಿಕ ಆಕೆಯನ್ನು ಪತ್ತೆ ಹಚ್ಚಿದ ಪೊಲೀಸರು ಬೆಂಗಳೂರಿಗೆ ಕರೆತಂದು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.

ಬಾಲಕಿಯ ಮರಣೋತ್ತರ ಪರೀಕ್ಷೆ ವರದಿ ಹಾಗೂ ಎಫ್‌ಎಸ್‌ಎಲ್ ಪರೀಕ್ಷೆಯ ವರದಿಯಲ್ಲಿ ಬಾಲಕಿಯ ಹೊಟ್ಟೆ ಭಾಗದ ಮೇಲೆ ತೀವ್ರ ಹಲ್ಲೆ ನಡೆದಿರುವುದು ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ವರದಿಗಳ ಆಧಾರದ ಮೇಲೆ ಕೊಲೆ, ಸಾಕ್ಷ್ಯ ನಾಶ ಹಾಗೂ ಪೊಲೀಸರಿಗೆ ಸುಳ್ಳು ಮಾಹಿತಿ ನೀಡಿದ ಆರೋಪಗಳ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ.

ಬಿಜೆಪಿ ಸಂಘಟನೆ ಬಲಪಡಿಸಲು ಮುಖಂಡರ ತೀರ್ಮಾನ

• **ಬೆಂಗಳೂರು:** ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ರಾಜ್ಯಕ್ಕೆ ಭೇಟಿ ನೀಡಿ ಸಂಘಟನೆ ಬಲಪಡಿಸಲು ಮಾರ್ಗದರ್ಶನ ಮಾಡಿದ ಬಳಿಕ ರಾಜ್ಯ ಬಿಜೆಪಿಯಲ್ಲಿ ಉತ್ಸಾಹ ಹೆಚ್ಚಿದೆ. ಕಳೆದೆರಡು ದಿನಗಳಿಂದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸರಣಿ ಸಭೆಗಳು ನಡೆಯುತ್ತಿವೆ.

ಕರ್ನಾಟಕದಲ್ಲಿ ಈ ತಿಂಗಳಾಂತ್ಯಕ್ಕೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪ್ರಾರಂಭವಾಗಲಿದೆ. ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಸದ್ಯಕ್ಕಿರುವ ಸವಾಲು. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಉಸ್ತುವಾರಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ರಾಧಾ ಮೋಹನ್ ದಾಸ್ ಅಗ್ರವಾಲ್ ಅವರ ನೇತೃತ್ವದಲ್ಲಿ ಸರಣಿ ಸಭೆಗಳು ಜರುಗುತ್ತಿವೆ. ಸಂಘಟನೆಯನ್ನು ಬಲಪಡಿಸುವ ಜೊತೆಗೆ ಮುಂಬರುವ ಸಾಂಸ್ಥಿಕ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಪಕ್ಷದ ಕಾರ್ಯಾಲಯದಲ್ಲಿ ಸಮಾಲೋಚನಾ ಸಭೆ ನಡೆಸಲಾಗುತ್ತಿದೆ.

ಸಭೆಯಲ್ಲಿ ಬೂತ್ ವಿಜಯದ ಮೂಲಕ, ಚುನಾವಣಾ ವಿಜಯ ಎಂಬ ಮಂತ್ರದೊಂದಿಗೆ, ಸಂಘಟನೆಯ ಬೂತ್ ಮಟ್ಟದ ರಚನೆಯನ್ನು ತಳಮಟ್ಟದಿಂದ ಮತದಾರರ ಪಟ್ಟಿಯ ಪರಿಷ್ಕರಣಾ ಪ್ರಕ್ರಿಯೆಯನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಲು ಸಮಾಲೋಚನೆ ನಡೆಸಲಾಗಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೀತಂ ಗೌಡ, ಪಿ.ರಾಜೀವ್, ಎಸ್‌ಐಆರ್ ರಾಜ್ಯ ಸಂಚಾಲಕ ದತ್ತಾತ್ರಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಪಾಲ್ಗೊಂಡಿದ್ದರು.

ಕೆಪಿಎಸ್‌ನಲ್ಲಿ ಕಂಪ್ಯೂಟರ್,ಎಐ ಶಿಕ್ಷಣ

ಪುಟ 0 ➔ ಒಂದು ಕಾಲದಲ್ಲಿ ಕಂಪ್ಯೂಟರ್ ಶಿಕ್ಷಣವು ಪ್ರೌಢಶಾಲೆ ಅಥವಾ ಕಾಲೇಜು ಹಂತಕ್ಕೆ ಸೀಮಿತವಾಗಿತ್ತು. ಆದರೆ, ಈಗ ಡಿಜಿಟಲ್ ಜಗತ್ತಿನಲ್ಲಿ ಬದುಕುತ್ತಿರುವ ಮಕ್ಕಳಿಗೆ ತಂತ್ರಜ್ಞಾನದ ಮೂಲಭೂತ ಜ್ಞಾನ ಬಾಲ್ಯದಲ್ಲೇ ಅಗತ್ಯವಾಗಿದೆ ಎಂಬ ಅರಿವಿನ ಹಿನ್ನೆಲೆಯಲ್ಲಿ ಕೆಪಿಎಸ್ ಶಾಲೆಗಳಲ್ಲಿ ಮೊದಲ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದೆ. ಕೆಪಿಎಸ್ ಶಾಲೆಗಳಲ್ಲಿ ಮೂರನೇ ತರಗತಿಯಿಂದಲೇ ಎಐ ಸರಳ ಪರಿಚಯ ನೀಡಲಾಗುತ್ತಿದ್ದು, ಸರಳ ಚಾಟ್‌ಬಾಟ್‌ಗಳ ಪರಿಚಯ, ಧ್ವನಿ ಆಧಾರಿತ ಸಹಾಯಕರು, ಚಿತ್ರ ಗುರುತಿಸುವ ಸರಳ ಕಾರ್ಯಕ್ರಮಗಳು ಹಾಗೂ ಸ್ಮಾರ್ಟ್ ಸಾಧನಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಮಕ್ಕಳಿಗೆ ಅವರ ಗ್ರಹಿಕೆಗೆ ತಕ್ಕಂತೆ ವಿವರಿಸಲಾಗುತ್ತದೆ. ಇದರ ಉದ್ದೇಶ ಮಕ್ಕಳನ್ನು ತಂತ್ರಜ್ಞಾನದ ಬಳಕೆದಾರರನ್ನಾಗಿಸುವುದಷ್ಟೇ ಅಲ್ಲ. ಭವಿಷ್ಯದಲ್ಲಿ ತಂತ್ರಜ್ಞಾನ ಸೃಷ್ಟಿಕರ್ತರನ್ನಾಗಿಸುವುದಾಗಿದೆ.

ಏಕೆ ಬದಲಾವಣೆ ?: ಜಾಗತಿಕ ಮಟ್ಟದಲ್ಲಿ ಉದ್ಯೋಗ ಕ್ಷೇತ್ರಗಳು ವೇಗವಾಗಿ ಬದಲಾಗುತ್ತಿವೆ. ವಿಶ್ವ ಆರ್ಥಿಕ ವೇದಿಕೆ ಸೇರಿದಂತೆ ಅನೇಕ ಸಂಸ್ಥೆಗಳ ವರದಿಗಳ ಪ್ರಕಾರ, ಮುಂದಿನ ದಶಕದಲ್ಲಿ ಡಿಜಿಟಲ್ ಕೌಶಲ, ಡೇಟಾ ವಿಶ್ಲೇಷಣೆ, ಎಐ ಮತ್ತು ತಂತ್ರಜ್ಞಾನ ಆಧಾರಿತ ಜ್ಞಾನವು ಉದ್ಯೋಗಗಳಿಗೆ ಅತ್ಯಂತ ಪ್ರಮುಖವಾಗಲಿದೆ. ಆದ್ದರಿಂದ ಮಕ್ಕಳಲ್ಲಿ ಬಾಲ್ಯದಿಂದಲೇ ತಾರ್ಕಿಕ ಚಿಂತನೆ, ಸಮಸ್ಯೆ ಪರಿಹಾರ ಸಾಮರ್ಥ್ಯ, ಸೃಜನಶೀಲತೆ ಮತ್ತು ನವೋದ್ಯಮ ಮನೋಭಾವವನ್ನು ಬೆಳೆಸುವುದು ಶಾಲಾ ಶಿಕ್ಷಣ ಇಲಾಖೆಯ ಪ್ರಮುಖ ಗುರಿಯಾಗಿದೆ.

ಡಿಜಿಟಲ್ ಶಿಕ್ಷಣ ಪರಿಣಾಮಕಾರಿ ಜಾರಿ

ಪುಟ 0 ➔ ವಿಶೇಷವಾಗಿ ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳು ಕಂಪ್ಯೂಟರ್ ಮತ್ತು ಎಐ ಶಿಕ್ಷಣದ ಮೂಲಕ ಜಾಗತಿಕ ಮಟ್ಟದ ಜ್ಞಾನವನ್ನು ಪಡೆಯುವ ಅವಕಾಶವನ್ನು ಸರ್ಕಾರ ಕಲ್ಪಿಸುತ್ತಿದೆ. ಇದರಿಂದ ಡಿಜಿಟಲ್ ಅಂತರ ಕಡಿಮೆಯಾಗುವ ನಿರೀಕ್ಷೆಯಿದೆ. ಈ ಡಿಜಿಟಲ್ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೆಪಿಎಸ್ ಶಾಲೆಗಳಿಗೆ 2,500 ಕಂಪ್ಯೂಟರ್ ಸೈನ್ಸ್ ಶಿಕ್ಷಕರ ಹೊಸ ವೃಂದಗಳನ್ನು ರಚಿಸಿ, ತಂತ್ರಜ್ಞಾನ ಶಿಕ್ಷಣಕ್ಕೆ ವಿಶೇಷ ತರಬೇತಿ ಪಡೆದ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಗುರಿ ಹೊಂದಿದೆ.

ವಿದ್ಯಾರ್ಥಿಗಳ ಕಲಿಕೆ, ಮೌಲ್ಯಮಾಪನ ಪರಿಣಾಮಕಾರಿಯಾಗಿ ರೂಪಿಸುವ ಗುರಿ ಹೊಂದಲಾಗಿದೆ. ಕಳೆದ ಏಪ್ರಿಲ್‌ನಲ್ಲಿ ಉಡುಪಿ ಜಿಲ್ಲೆಯಲ್ಲಿ 10 ಶಿಕ್ಷಕರಿಗೆ ಎಐ ಬಳಕೆ ಕುರಿತು ಎನ್‌ಜಿಒ ಸಂಸ್ಥೆ ವತಿಯಿಂದ ವಿಶೇಷ ತರಬೇತಿ ನೀಡಿದ್ದು, ಶಿಕ್ಷಣದಲ್ಲಿ ಎಐ ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂಬುದರ ಬಗ್ಗೆ ಅವರಿಗೆ ಮಾರ್ಗದರ್ಶನ ನೀಡಲಾಗಿದೆ.
■ **ಡಾ. ಅಶೋಕ್ ಕಾಮತ್ , ಉಪನಿರ್ದೇಶಕ (ಹೆಚ್ಚುವರಿ), ಶಾಲಾ ಶಿಕ್ಷಣ ಇಲಾಖೆ, ಉಡುಪಿ**

ಎನ್‌ಡಿಎ ಸ್ವಚ್ಛ ಆಡಳಿತ: ಬಿವೈವಿ

ಪುಟ 0 ➔ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯಿತ್ತು. ಹತ್ತು ವರ್ಷದ ಯುಪಿಎ ಸರ್ಕಾರದ ಆಡಳಿತದಿಂದ ದೇಶದ ಜನ ಬೇಸತ್ತಿದ್ದರು. ಯುಪಿಎ ಆಡಳಿತದಲ್ಲಿ ಯಾವುದೇ ಅಭಿವೃದ್ಧಿ ಇಲ್ಲದೆ 2ಜಿ ಹಗರಣ, ಬೋಫೋರ್ಸ್, ಕಾಮನ್ ವೆಲ್ತ್ ಹಗರಣ ಸೇರಿ 12 ಲಕ್ಷ ಕೋಟಿ ರೂ.ಗೂ ಹೆಚ್ಚು ಮೊತ್ತದ ಹಗರಣ ನಡೆದಿತ್ತು. ಇದಕ್ಕೆಲ್ಲ ಪರಿಹಾರವೆಂಬಂತೆ ನರೇಂದ್ರ ಮೋದಿ ಅವರು ದೇಶದ ಚುಕ್ಕಾಣಿ ಹಿಡಿದು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಅವರ ಆಡಳಿತದಲ್ಲಿ ಒಂದೇ ಒಂದು ಹಗರಣ ನಡೆದಿಲ್ಲ. ಇದೂ ದಾಖಲೆಯಾಗಿದೆ ಎಂದು ವಿವರಿಸಿದರು.

ಮೋದಿ ಸರ್ಕಾರ ಬಂದ ಮೇಲೆ ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ವಿಮಾನ ನಿಲ್ದಾಣಕ್ಕೆ ಸಾಕಷ್ಟು ಹಣ ನೀಡಲಾಗಿದೆ. ಮೆಟ್ರೊ ವ್ಯಾಪ್ತಿ ವಿಸ್ತಾರವಾಗಿದೆ. ಬಂದರುಗಳ ಸಾಮರ್ಥ್ಯ ವೃದ್ಧಿಯಾಗಿದೆ. ಎಲ್‌ಪಿಜಿ ಸಂಪರ್ಕ ಶೇ.100 ದಾಟಿದೆ. ಸೋಲಾರ್ ಸಾಮರ್ಥ್ಯ ಹೆಚ್ಚಳವಾಗಿದೆ. ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಹೆಚ್ಚಿದೆ. ಶುದ್ಧ ಕುಡಿಯುವ ನೀರು, ಶೌಚಾಲಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಮಾಡಲಾಗಿದೆ. ಕರ್ನಾಟಕಕ್ಕೆ ತೆರಿಗೆ ಹಂಚಿಕೆಯೂ ಹೆಚ್ಚಳವಾಗಿದೆ. ರೈಲ್ವೆ ಯೋಜನೆಗಳಿಗೆ ಕರ್ನಾಟಕಕ್ಕೆ ಹಣ ನೀಡಲಾಗುತ್ತಿದೆ. ಗ್ರಾಮೀಣ ಭಾಗದ ಬಡವರಿಗೆ ಮನೆ ನಿರ್ಮಿಸಲು ಕೇಂದ್ರ ಅನುದಾನ ನೀಡುತ್ತಿದೆ ಎಂದರು.

ರಕ್ಷಣಾ ಕ್ಷೇತ್ರಕ್ಕೆ ಒತ್ತು, ನಕ್ಸಲರ ನಿರ್ಮೂಲನೆ

ಮೋದಿ ಅವರು ರಕ್ಷಣಾ ಕ್ಷೇತ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಈ ಹಿಂದೆ ರಕ್ಷಣಾ ಆಮದಿಗೆ ಒತ್ತು ನೀಡಲಾಗಿತ್ತು. ಈಗ ರಕ್ಷಣಾ ಕ್ಷೇತ್ರಕ್ಕೆ ಬಜೆಟ್ ಹಂಚಿಕೆ ಶೇ.165 ಹೆಚ್ಚಳವಾಗಿದೆ. ರಕ್ಷಣಾ ಉಪಕರಣಗಳನ್ನು ಭಾರತದಲ್ಲೇ ಉತ್ಪಾದನೆ ಮಾಡಲಾಗುತ್ತಿದೆ. ಈ ಕ್ಷೇತ್ರದಲ್ಲಿ ಆತ್ಮನಿರ್ಭರತೆ ಸಾಧಿಸಲಾಗುತ್ತಿದೆ. ಈಶಾನ್ಯ ರಾಜ್ಯಗಳತ್ತ ಗಮನಕೊಟ್ಟಿದ್ದರಿಂದ ರೈಲ್ವೆ ಸಂಪರ್ಕ, ಹೆದ್ದಾರಿ, ವಿಮಾನ ನಿಲ್ದಾಣ ಸೌಲಭ್ಯ ಉತ್ತಮಗೊಂಡಿದೆ. ಮೋದಿ ಹಾಗೂ ಅಮಿತ್ ಶಾ ಅವರ ನಾಯಕತ್ವದಲ್ಲಿ ನಕ್ಸಲ್ ಪಿಡುಗನ್ನು ನಿರ್ಮೂಲನೆ ಮಾಡಲಾಗಿದೆ. ನಕ್ಸಲ್ ಬಾಧಿತ ಜಿಲ್ಲೆಗಳಲ್ಲಿ ಐಟಿಐಗಳ ಸ್ಥಾಪನೆ, ಕೌಶಲಾಭಿವೃದ್ಧಿ ಯೋಜನೆ ಜಾರಿ ಮಾಡಿದೆ. ಯುವಕರು ಉದ್ಯೋಗ ಪಡೆಯುತ್ತಿದ್ದಾರೆ. ಕಾಶ್ಮೀರ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಪ್ರವಾಸೋದ್ಯಮ ಉತ್ತಮಗೊಂಡಿದೆ ಎಂದು ವಿಜಯೇಂದ್ರ ತಿಳಿಸಿದರು.

ಕನ್ನಡಿಗರ ಹಕ್ಕಿಗಾಗಿ ಧ್ವನಿ: ಅಶೋಕ



• ಬೆಂಗಳೂರು: ನಾನು ಏಜೆಂಟ್ ಆಗಿಯೇ ಮಾತನಾಡುತ್ತಿದ್ದೇನೆ! ಆದರೆ ನಿಮ್ಮಂತಹ ಯಾವುದೋ ಮಾಫಿಯಾ ಹಿತಾಸಕ್ತಿ ಕಾಯುವ ಕಮಿಷನ್ ಏಜೆಂಟ್ ಆಗಿ ಅಲ್ಲ. ಕರ್ನಾಟಕದ ಏಳುವರೆ ಕೋಟಿ ಕನ್ನಡಿಗರ ಹಕ್ಕಿಗಾಗಿ, ಬೆಂಗಳೂರಿನ ಒಂದುವರೆ ಕೋಟಿ ನಾಗರಿಕರ ಧ್ವನಿಯಾಗಿ ನಿಂತಿರುವ ಜನತಾ ಏಜೆಂಟ್ ನಾನು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಸ ಮಾಫಿಯಾ ಗ್ಯಾಂಗಿನ ಏಜೆಂಟ್ ಎನ್ನುವ ಹೇಳಿಕೆಗೆ ಅಶೋಕ ಸಾಮಾಜಿಕ ಜಾಲತಾಣದಲ್ಲಿ ತಿರುಗೇಟು ನೀಡಿದ್ದಾರೆ.

ಪ್ರತಿಪಕ್ಷ ನಾಯಕನಾಗಿ ನಿಮ್ಮ ಲೂಟಿ-ದಂಧೆಯನ್ನು ಪ್ರಶ್ನಿಸುವುದು ನನ್ನ ಸಂವಿಧಾನಬದ್ಧ ಕರ್ತವ್ಯ, ಅದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ. ಹೈಕಮಾಂಡ್ ಬಾಗಿಲಲ್ಲಿ ಕಾಡಿ-ಬೇಡಿ, ಅತ್ತು-ಕರೆದು, ಕೊನೆಗೂ ಮುಖ್ಯಮಂತ್ರಿ ಸ್ಥಾನ ಗಿಟ್ಟಿಸಿಕೊಂಡಿರುವ ತಮಗೆ ಪ್ರತಿಪಕ್ಷಗಳು ಕನಿಷ್ಠ ಹನಿಮೂನ್ ಪೀರಿಯಡ್ ಕೂಡ ಕೊಡ್ತಿಲ್ಲವಲ್ಲ ಎನ್ನುವ ತಮ್ಮ ಹತಾಶೆ, ಭಯ, ಆತಂಕ ನನಗೆ ಅರ್ಥವಾಗುತ್ತದೆ. ಆದರೆ, ನಿಮ್ಮ ಸ್ವಪಕ್ಷೀಯ ಶಾಸಕರೇ ದಿನಬೆಳಗಾದರೆ ಮಾಧ್ಯಮಗಳ ಮುಂದೆ ನಿಮ್ಮ ವಿರುದ್ಧ ಅಸಮಾಧಾನದ ಬಾಗಟೆ ಬಾರಿಸುತ್ತಾ, ದಿಲ್ಲಿಗೆ ದಂಡೆತ್ತಿ ಹೋಗುತ್ತಿರುವಾಗ ನಿಮಗೆ ಹನಿಮೂನ್ ಪೀರಿಯಡ್ ಎಲ್ಲಿಂದ ಸಿಗಬೇಕು ಡಿ.ಕೆ. ಶಿವಕುಮಾರ್ ಅವರೇ? ನಿಮ್ಮ ಮನೆಯಲ್ಲೇ ಬೆಂಕಿ ಉರಿಯುತ್ತಿರುವಾಗ ನನ್ನ ಮೇಲೆ ರಾಜಕೀಯ ಗೂಬೆ ಕೂರಿಸಬೇಡಿ ಎಂದಿದ್ದಾರೆ.

ಟೆಂಡರ್ ನಿಯಮಗಳ ಅಕ್ರಮವನ್ನು ಮುಚ್ಚಿಹಾಕಲು ನೀವೇ ಸ್ವತಃ ಉನ್ನತ ಮಟ್ಟದ ಸಮಿತಿ ರಚಿಸಿ, ವರದಿ ನೀಡಲು ಕೊಟ್ಟಿದ್ದ ಒಂದು ವಾರದ ಗಡುವು ಇಂದಿಗೆ ಮುಕ್ತಾಯವಾಗಿದೆ. ತಾಕತ್ತಿದ್ದರೆ, ನಿಮ್ಮಲ್ಲಿ ಕಿಂಚಿತ್ತಾದರೂ ಪಾರದರ್ಶಕತೆ ಉಳಿದಿದ್ದರೆ, ಆ ವರದಿಯನ್ನು ಅಡಗಿಸಿಡದೆ ತಕ್ಷಣ ಬಹಿರಂಗಪಡಿಸಿ! ವರದಿಯನ್ನು ಇಡೀ ರಾಜ್ಯದ ಜನರ ಮುಂದಿಡಿ. ನಿಮ್ಮ ಅಸಲಿ ಮುಖವಾಡ ಕಳಚಿ ಬೀಳಲಿ, ಯಾರ ಕಾರ್ಯವೈಖರಿ ಎಂಥದ್ದು ಅಂತ ಜನರೇ ತೀರ್ಮಾನಿಸಲಿ ಎಂದು ಅಶೋಕ ಸವಾಲು ಹಾಕಿದ್ದಾರೆ.



ಕೇಂದ್ರ ಸಚಿವರ ಭೇಟಿ

ನೀತಿ ಆಯೋಗ ಸಭೆಯಲ್ಲಿ ಪಾಲ್ಗೊಳ್ಳಲು ಹೊಸದಿಲ್ಲಿಗೆ ತೆರಳಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗುರುವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದರು. ಈ ವೇಳೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಇದ್ದರು.

ಬೆಂಗಳೂರು-ಶಿವಮೊಗ್ಗ ವಿಮಾನ ಮಾರ್ಗ ಪುನರಾರಂಭಿಸಲು ಮನವಿ



• ಬೆಂಗಳೂರು: ನಷ್ಟದ ಕಾರಣಕ್ಕಾಗಿ ಸದ್ಯಕ್ಕೆ ಸ್ಥಗಿತಗೊಂಡಿರುವ ಬೆಂಗಳೂರು-ಶಿವಮೊಗ್ಗ ವಿಮಾನ ಸೇವೆಯನ್ನು ಸದ್ಯದಲ್ಲೇ ನಡೆಯಲಿರುವ ಉಡಾನ್ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಸೇರಿಸಬೇಕು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ ಅವರು ಕೇಂದ್ರ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಶಿವಮೊಗ್ಗ ವಿಮಾನ ನಿಲ್ದಾಣವು 2023ರ ಫೆಬ್ರವರಿಯಲ್ಲಿ ಕಾರ್ಯಾರಂಭ ಮಾಡಿತು. ಇದಾದ ಮೇಲೆ ಇಂಡಿಗೋ ಸಂಸ್ಥೆಯು ಶಿವಮೊಗ್ಗ ಬೆಂಗಳೂರು ನಡುವೆ ವಿಮಾನ ಕಾರ್ಯಾಚರಣೆ ನಡೆಸುತ್ತಿತ್ತು. ಆದರೆ ಕೆಲ ತಿಂಗಳಿನಿಂದ ಇದು ಸ್ಥಗಿತಗೊಂಡಿದ್ದು, ತೊಂದರೆಯಾಗಿದೆ. ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳ ಆರ್ಥಿಕ, ಕೃಷಿ, ಪ್ರವಾಸೋದ್ಯಮ ಮತ್ತು ಕೈಗಾರಿಕಾ ಬೆಳವಣಿಗೆಗೆ ಇದರಿಂದ ಹಾನಿಯಾಗಿದೆ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ವಿಮಾನಸೇವೆಯ ಪುನಾರಂಭವು ಮಲೆನಾಡು ಮತ್ತು ಮಧ್ಯ ಕರ್ನಾಟಕದ ಪ್ರಗತಿಗೆ ನಿರ್ಣಾಯಕವಾಗಿದೆ. ಶಿವಮೊಗ್ಗದಿಂದ ಬೆಂಗಳೂರು ನಗರಕ್ಕೆ ನೇರ ವಿಮಾನ ಇಲ್ಲದೆ ಇರುವುದರಿಂದ ದೇಶದ ಬೇರೆ ಬೇರೆ ಭಾಗಗಳು ಮತ್ತು ವಿದೇಶಗಳಿಗೆ ಹೋಗುವವರಿಗೂ ತೊಂದರೆಯಾಗಿದೆ. ಆದ್ದರಿಂದ ವಿಜಿಟಿ ಫಂಡ್ ನೆರವಿನ ಮೂಲಕ ಉಡಾನ್ ಯೋಜನೆಯ ಉದ್ದೇಶಿತ ಬಿಡ್‌ನಲ್ಲಿ ಈ ಮಾರ್ಗದ ಸೇರ್ಪಡೆ ಮಾಡಲು ತಾವು ಮಧ್ಯೆ ಪ್ರವೇಶಿಸಬೇಕು ಎಂದು ಅವರು ವಿವರಿಸಿದ್ದಾರೆ.

ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ನೈಟ್ ಲ್ಯಾಂಡಿಂಗ್ ಸೌಲಭ್ಯ ಒದಗಿಸುವ ಕಾಮಗಾರಿ ಭರದಿಂದ ಸಾಗಿದೆ. ಇದಲ್ಲದೆ, ಉಳಿದ ಎಲ್ಲಾ ಸೌಲಭ್ಯಗಳೂ ಇಲ್ಲಿ ಈಗಾಗಲೇ ಇವೆ. ಆದ್ದರಿಂದ ಈ ಮನವಿಯನ್ನು ಗಂಭೀರವಾಗಿ ಪರಿಗಣಿಸಿ, ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಪಾಟೀಲ ಕೋರಿದ್ದಾರೆ.

2,500 ಕೋಟಿ ರೂ. ವೆಚ್ಚದಲ್ಲಿ 2,000 ಕೆಪಿಎಸ್ ಶಾಲೆಗಳ ಅಭಿವೃದ್ಧಿ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಅಭಿವೃದ್ಧಿಗೆ 1,750 ಕೋಟಿ ರೂ. ಸಾಲ

• ಹೊಸದಿಲ್ಲಿ/ಬೆಂಗಳೂರು: ಬಡವರಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ನಮ್ಮ ಸರ್ಕಾರವು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ)ನಿಂದ 1,750 ಕೋಟಿ ರೂ.ಸಾಲವನ್ನು ಒಳಗೊಂಡಂತೆ, ಒಟ್ಟು 2,500 ಕೋಟಿ ರೂ. ವೆಚ್ಚದಲ್ಲಿ 2028ರ ವೇಳೆಗೆ 2,000 ಕೆಪಿಎಸ್ ಶಾಲೆಗಳನ್ನು ಹೊಂದುವ ಗುರಿಯನ್ನು ಹೊಂದಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.





ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನಡೆದ ನೀತಿ ಆಯೋಗದ 11ನೇ ಸರ್ವ ಸಾಧಾರಣ ಸಭೆಯಲ್ಲಿ ರಾಜ್ಯದ ಅಭಿಪ್ರಾಯವನ್ನು ಮಂಡಿಸಿದ ಅವರು, ನಮ್ಮ ಸರ್ಕಾರವು ಕರ್ನಾಟಕ ಪಬ್ಲಿಕ್ ಸ್ಕೂಲ್ (KPS) ಮಾದರಿಯು ಗುಣಾತ್ಮಕ ಶಿಕ್ಷಣ, ಆಧುನಿಕ ಮೂಲಸೌಕರ್ಯ, ಡಿಜಿಟಲ್ ಕಲಿಕಾ ಸೌಲಭ್ಯಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು ಮತ್ತು ಕ್ರೀಡಾ ಮೂಲಸೌಕರ್ಯಗಳೊಂದಿಗೆ ಎಲ್‌ಕೆಜಿಯಿಂದ 12ನೇ ತರಗತಿಯವರೆಗೆ ವಿಶಿಷ್ಟ ಶಾಲೆಗಳನ್ನು ಕಲ್ಪಿಸುತ್ತದೆ ಇದೊಂದು ಮಾದರಿ ಯೋಜನೆ ಎಂದು ತಿಳಿಸಿದರು.

ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ನಿಯೋಜನೆಗಳು: ಶಿಕ್ಷಣವು ಯುವಜನರನ್ನು ಜ್ಞಾನದೊಂದಿಗೆ ಸಜ್ಜುಗೊಳಿಸುತ್ತದೆ. ಕೌಶಲ್ಯಗಳು ಆ ಜ್ಞಾನವನ್ನು ಆರ್ಥಿಕ ಅವಕಾಶವನ್ನಾಗಿ ಪರಿವರ್ತಿಸುತ್ತವೆ. ಕಾಲೇಜುಗಳಲ್ಲಿನ ನಮ್ಮ ಕ್ಯಾಂಪಸ್-ಟು-ಕರಿಯರ್ ಉಪಕ್ರಮಗಳು ಶಿಕ್ಷಣವನ್ನು ಉದ್ಯಮದ ಆಗತ್ಯತೆಗಳಿಗನುಸಾರವಾಗಿ ಜೋಡಿಸುತ್ತಿವೆ ಮತ್ತು ಭವಿಷ್ಯಕ್ಕೆ ಸನ್ನದ್ಧ ಕಾರ್ಯಪಡೆ ಯನ್ನು ಸಜ್ಜುಗೊಳಿಸುತ್ತಿವೆ ಎಂದರು.

ಕರ್ನಾಟಕದ ನಾವೀನ್ಯತೆಯ ದೃಷ್ಟಿಕೋನ: ಮಾನವ ಅಭಿವೃದ್ಧಿಯು ಅಂತಿಮವಾಗಿ ಉತ್ಪಾದಕ ಉದ್ಯೋಗಕ್ಕೆ ದಾರಿಗಳನ್ನು ಸೃಷ್ಟಿಸಬೇಕು. ಕರ್ನಾಟಕದ ಜ್ಞಾನದ ಆರ್ಥಿಕತೆಯು ಬೆಂಗಳೂರನ್ನು ದಕ್ಷಿಣ ಏಷ್ಯಾದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರವನ್ನಾಗಿ ಮತ್ತು ನಾವೀನ್ಯತೆ ಮತ್ತು ತಂತ್ರಜ್ಞಾನಕ್ಕಾಗಿ ಗುರುತಿಸಲ್ಪಟ್ಟ ಜಾಗತಿಕ ತಾಣವನ್ನಾಗಿ ಮಾಡಿದೆ.

ಕರ್ನಾಟಕದ ಯುವಜನತೆಯು ನಮ್ಮ ದೊಡ್ಡ ಆಸ್ತಿ: ನಾನು ಇತ್ತೀಚೆಗೆ ಶಾಲಾ-ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯವನ್ನು ನೀಡಿದ್ದೇನೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ 10,000 ಭಾರತ್ ಜೋಡೋ ಯುವ ಸಂಘಗಳನ್ನು ರಚಿಸುವ ಮೂಲಕ ಅವರಿಗೆ ಕಾರ್ಪಸ್ ನಿಧಿಯನ್ನು ಒದಗಿಸುವ ಮೂಲಕ ನಾವು ಸಮಗ್ರ ಯುವ ಸಬಲೀಕರಣವನ್ನು ಪ್ರಾರಂಭಿಸುತ್ತಿದ್ದೇವೆ. ಇದು ರಚನಾತ್ಮಕ ಸಾಮಾಜಿಕ, ಮತ್ತು ಆರ್ಥಿಕ ಬೆಳವಣಿಗೆ ಗಾಗಿ ಯುವ ಶಕ್ತಿಯನ್ನು ಸಂಘಟಿಸುತ್ತದೆ.

ರಾಜ್ಯದ ಯಶೋಗಾಥೆಗಳನ್ನು ವಿವರಿಸಿದ ಸಿಎಂ: ಮಾನವ ಬಂಡವಾಳ ಅಭಿವೃದ್ಧಿಯ ಜೀವನಚಕ್ರ ದೃಷ್ಟಿಕೋನಕ್ಕೆಸಂಬಂಧಿಸಿದಂತೆ,ಗ್ರಾಮಪಂಚಾಯಗಳಿಂದ ನರೇಗಾ (NREGA) ಮಹಿಳಾ ಕಾರ್ಮಿಕರ 2 ವರ್ಷದೊಳಗಿನ ಮಕ್ಕಳಿಗಾಗಿ ಗ್ರಾಮೀಣ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಕರ್ನಾಟಕದ ಕೂಸಿನಮನೆ (ಮಕ್ಕಳ ಮನೆ) ಮಾದರಿಯನ್ನು ನೀತಿ ಆಯೋಗವು ಒಂದು ಅನುಕರಿಸಬಹುದಾದ ಮಾದರಿಯೆಂದು ಗುರುತಿಸಿದೆ. ಏಕೆಂದರೆ ಇದು ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಬಲವಾದ ಅಡಿಪಾಯವನ್ನು ನಿರ್ಮಿಸುತ್ತದೆ.

ಕೇಂದ್ರದ ನೆರವಿಗೆ ಮುಖ್ಯಮಂತ್ರಿ ಮನವಿ

ಬೆಂಗಳೂರಿನ ಶೇ. 40ರಷ್ಟು ನಿವಾಸಿಗಳು ಇತರ ರಾಜ್ಯಗಳಿಂದ ಬಂದವರಾಗಿರುತ್ತಾರೆ. ಅಂತಹವರಿಗೆ ಮೂಲಸೌಕರ್ಯ ಉಪಕರಣಗಳನ್ನು ನಿಭಾಯಿಸಲು ಕೇಂದ್ರದ ಹೆಚ್ಚಿನ ನೆರವಿನ ಅಗತ್ಯವಿದ್ದು, ಕೇಂದ್ರ ಈ ನಿಟ್ಟಿನಲ್ಲಿ ಸಹಕರಿಸಬೇಕೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೇಂದ್ರಕ್ಕೆ ಮನವಿ ಮಾಡಿದ್ದಾರೆ. ಅಲ್ಲದೇ, ಬೆಂಗಳೂರು ಜಾಗತಿಕ ನಗರವಾಗಿ ತನ್ನ ಸ್ಥಾನಮಾನವನ್ನು ಉಳಿಸಿಕೊಂಡಿರುವುದರಿಂದ ಈ ಕಾರ್ಯಕ್ರಮಗಳನ್ನು ಬೆಂಬಲಿಸಲು ಅರ್ಬನ್ ಚಾಲೆಂಜ್ ಫಂಡ್ ಅಡಿಯಲ್ಲಿ ಅಥವಾ ಇತರ ರೀತಿಯಲ್ಲಿ ಕೇಂದ್ರದ ಹೆಚ್ಚಿನ ಬೆಂಬಲವನ್ನು ನಾವು ಕೋರುತ್ತೇವೆ.

> ರಾಷ್ಟ್ರನಿರ್ಮಾಣದಲ್ಲಿ ಕರ್ನಾಟಕದ ಪಾತ್ರವನ್ನು ಕೇಂದ್ರೀಕರಿಸಿ ಸಮಗ್ರ ಮಾನವ ಅಭಿವೃದ್ಧಿ ಕುರಿತು ನನ್ನ ಚಿಂತನೆಗಳನ್ನು ಹಂಚಿಕೊಳ್ಳುವುದು ನನಗೆ ದೊರೆತ ಸೌಭಾಗ್ಯವಾಗಿದೆ. ಶಿಕ್ಷಣ ಭದ್ರ ಬುನಾದಿಯಿಂದಾಗಿ ಕರ್ನಾಟಕವು ಭಾರತದ ಬೆಳವಣಿಗೆಗೆ ಕಥೆಯ ಪ್ರಬಲ ಚಾಲಕಶಕ್ತಿಗಳಲ್ಲಿ ಒಂದಾಗಿದೆ.
>
> ■ **ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ**

ಕೇಂದ್ರದೊಂದಿಗೆ ಸಮನ್ವಯಕ್ಕೆ ಬದ್ಧ: ಸಿಎಂ

ರಾಜ್ಯಗಳು ಕೇವಲ ಅನುಷ್ಠಾನಗೊಳಿಸುವ ಸಂಸ್ಥೆಗಳಾಗಿರದೇ ನಾವೀನ್ಯತೆ ಮತ್ತು ಸಂಚಿತ ಬೆಳವಣಿಗೆಯ ಕೇಂದ್ರಗಳಾಗಿವೆ ಎಂಬುದನ್ನು ಕೇಂದ್ರ ಸರ್ಕಾರ ಮರೆಯಬಾರದು. ವೈವಿಧ್ಯಮಯ ಪ್ರಾದೇಶಿಕ ನೈಜತೆಗಳಿಗೆ ಅನುಗುಣವಾಗಿ ಪರಿಹಾರಗಳನ್ನು ವಿನ್ಯಾಸಗೊಳಿಸುವಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯಗಳು ಸಮಾನ ಪಾಲುದಾರರಾಗಿ ಕೆಲಸ ಮಾಡಬೇಕು ಎಂದು ನಾವು ನಂಬುತ್ತೇವೆ. ಬೆಳವಣಿಗೆಯು ಸಮಗ್ರ ಮತ್ತು ಸುಸ್ಥಿರವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ಇತರ ಎಲ್ಲ ರಾಜ್ಯಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲು ಕರ್ನಾಟಕವು ಸಂಪೂರ್ಣವಾಗಿ ಬದ್ಧವಾಗಿದೆ.

ಕಮಿಟಿಗೆ ಅಧ್ಯಕ್ಷರ ಆಯ್ಕೆಗೆ ವಿರೋಧ



• ಶಿವಮೊಗ್ಗ: ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಕ್ಕೆ ಉಪಕುಲಪತಿ ನೇಮಕ ಸಂಬಂಧ ರಚಿಸಲಾಗಿರುವ ಸರ್ಚ್ ಕಮಿಟಿಯನ್ನು ರದ್ದುಪಡಿಸಿ, ರಾಷ್ಟ್ರೀಯ ಖ್ಯಾತಿಯ ಶಿಕ್ಷಣ ತಜ್ಞ ಅಥವಾ ವಿಜ್ಞಾನಿಯನ್ನು ಅಧ್ಯಕ್ಷರನ್ನಾಗಿ ನೇಮಿಸಿ ಅರ್ಹರನ್ನು ಉಪಕುಲಪತಿ ಹುದ್ದೆಗೆ ನೇಮಕ ಮಾಡುವಂತೆ ಬೆಂಗಳೂರು ಕೃಷಿ ವಿವಿ ನಿವೃತ್ತ ಪ್ರಾಧ್ಯಾಪಕ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಆಗ್ರಹಿಸಿದರು.

ಉದ್ಯೋಗ ಖಾತ್ರಿ 60 ದಿನ ರಜೆ ಪ್ರಸ್ತಾಪ ಕೈಬಿಡಿ: ಖಂಡ್ರೆ



• ಬೆಂಗಳೂರು: ಮನ್‌ರೇಗಾ ಯೋಜನೆ ಅಡಿಯಲ್ಲಿ ವರ್ಷದಲ್ಲಿ 60 ದಿನಗಳ ಕಾಲ ಉದ್ಯೋಗ ನೀಡುವುದಿಲ್ಲ ಎಂಬ ಕೇಂದ್ರ ಸರ್ಕಾರದ ನಿಲುವು ಸರಿಯೂ ಅಲ್ಲ, ಸಮರ್ಥನೀಯವೂ ಅಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಆಧುನಿಕ ಯುಗದಲ್ಲಿ ಕೃಷಿ ಕಾರ್ಯಕ್ಕೆ ಯಂತ್ರೋಪಕರಣಗಳು ಬಂದಿದ್ದು, ಬಹುತೇಕ ಗ್ರಾಮೀಣ ಭೂರಹಿತ ಕೂಲಿ ಕಾರ್ಮಿಕರಿಗೆ ಉದ್ಯೋಗ ಸಿಗುತ್ತಿಲ್ಲ, ಹೀಗಾಗಿ ಅವರಿಗೆ ಆಸರೆಯಾಗಿರುವ ಉದ್ಯೋಗ ಖಾತ್ರಿಗೆ ರಜೆ ನೀಡುವ ಪ್ರಸ್ತಾಪ ಕೈಬಿಡಬೇಕು ಎಂದು ಒತ್ತಾಯಿಸಿದರು.

ಮನ್ರೇಗಾದ ನೂತನ ಸ್ವರೂಪವಾದ ವಿಬಿ ಜಿ ರಾಮ್ ಜಿ ಅಡಿಯಲ್ಲಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ಇಂತಹ ಕೆಲಸ ಮಾತ್ರ ಮಾಡಬೇಕು ಎಂದು ನಿರ್ಬಂಧ ವಿಧಿಸುವುದು ಸರಿಯಲ್ಲ. ರಾಜ್ಯಗಳಿಗೆ ಉದ್ಯೋಗ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇರಬೇಕು ಎಂದು ಪ್ರತಿಪಾದಿಸಿದರು. ಜೂ.28 ಮತ್ತು 29 ರಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆ ನಡೆಯಲಿದೆ. ಜೂ.9ರಂದು ಕೇಂದ್ರ ಸಚಿವರೊಂದಿಗೆ ನಡೆದ ವರ್ಚುವಲ್ ಸಭೆಯಲ್ಲಿ ತಾವು ರಾಜ್ಯ ಸರ್ಕಾರ ಕನಿಷ್ಠ ವೇತನ ಹೆಚ್ಚಳ ಮಾಡುತ್ತಿದ್ದು, ಇದಕ್ಕೆ ಅನುಗುಣವಾಗಿ ವಿಬಿ ಜೀ ರಾಮ್ ಜೀ ವೇತನ ಪರಿಷ್ಕರಣೆ ಮಾಡುವಂತೆ ಆಗ್ರಹಿಸಿದ್ದು, ಕೇಂದ್ರ ಸಚಿವರು ಇದಕ್ಕಾಗಿಯೇ ಒಂದು ವೇತನ ಆಯೋಗ ರಚಿಸಲಾಗಿದ್ದು, ಶೀಘ್ರ ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು.

80:20 ರಂತೆ ಅನುದಾನ ನೀಡಲಿ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜುಲೈ 1ರಿಂದ ಜಾರಿ ಮಾಡುತ್ತಿರುವ ವಿಬಿ ಜಿ ರಾಮ್ ಜಿಯಲ್ಲಿ ಕೇಂದ್ರ ಸರ್ಕಾರ 60:40 ಅನುಪಾತದಡಿ ಹಣ ಒದಗಿಸುವುದಾಗಿ ಹೇಳಿದ್ದು, ಇದು ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಹೊರೆಯಾಗುತ್ತದೆ. ಹೀಗಾಗಿ ಈ ಅನುಪಾತವನ್ನು ಹಿಂದೆ ಇದ್ದಂತೆ 90:10ಕ್ಕೆ ಮುಂದುವರಿಸಬೇಕು ಇಲ್ಲವೆ ಕನಿಷ್ಠ 80:20ಕ್ಕೆ ಆದರೂ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹಣ ದುರ್ಬಳಕೆ: ಬಿವೈವಿ



• ಬೆಂಗಳೂರು: ರಾಜ್ಯ ಸರ್ಕಾರವು ತನ್ನ ವೈಫಲ್ಯ ಮುಚ್ಚಿ ಹಾಕುವ ಸಲುವಾಗಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ ಎಂದು ಪದೇಪದೇ ಪ್ರಸ್ತಾಪಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ಷೇಪಿಸಿದರು. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಾಸ್ತವಿಕ ಸತ್ಯ ಏನೆಂದರೆ, ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ.

ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹಣವನ್ನೂ ತೆಲಂಗಾಣಕ್ಕೆ ತೆಗೆದುಕೊಂಡು ಹೋಗಿ ದುರ್ಬಳಕೆ ಮಾಡಿದ್ದು ರಾಜ್ಯದ ಜನರ ಮುಂದಿದೆ. ಅಭಿವೃದ್ಧಿ ಶೂನ್ಯ ಕಾಂಗ್ರೆಸ್ ಸರ್ಕಾರವಿದ್ದು, ಇವರ ವೈಫಲ್ಯ ಮುಚ್ಚಿ ಹಾಕಲು ಕೇಂದ್ರ ಸರಕಾರ ದೂರುವ ಕೆಲಸ ಮಾಡುತ್ತಾರೆ ಎಂದು ಆರೋಪಿಸಿದರು.

ಗ್ಯಾರಂಟಿಗಳಿಗೆ ಹಣ ಸಂಗ್ರಹಿಸಲು ತೆರಿಗೆ ಹೆಚ್ಚಳ: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾದ ಮೇಲೆ ನಾಲ್ಕು ಬಾರಿ ತೈಲದ ಮೇಲೆ ತೆರಿಗೆ ಹೆಚ್ಚಳ ಮಾಡಿದ್ದಾರೆ. ಆಗ ಜಾಗತಿಕ ಸಮಸ್ಯೆ ಇರಲಿಲ್ಲ ಎಂದರು.

ಸಚಿವರಿಂದ ವಿದ್ಯಾರ್ಥಿಗಳಿಗೆ ಬಸ್ ಪಾಸ್

• ಬೆಂಗಳೂರು: ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆ ಮಾಡುವ ಐತಿಹಾಸಿಕ ಗ್ಯಾರಂಟಿ ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ನೀಡಿದ್ದು, ಈಗಾಗಲೇ ಹಣ ಪಾವತಿ ಮಾಡಿ ಬಸ್ ಖರೀದಿಸಿರುವ ವಿದ್ಯಾರ್ಥಿಗಳಿಗೆ ಹಣವನ್ನು ವಾಪಸ್ ನೀಡಲಾಗುವುದು ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.

ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇದುವರೆಗೆ ವಿದ್ಯಾರ್ಥಿನಿಯರಿಗೆ ಮಾತ್ರ ಉಚಿತ ಬಸ್‌ಪಾಸ್ ವಿತರಣೆ ಮಾಡಲಾಗುತ್ತಿತ್ತು. ಇದೀಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಗಂಡುಮಕ್ಕಳಿಗೂ ಈ ಸೌಲಭ್ಯವನ್ನು ಕಲ್ಪಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ. ಉಚಿತ ಬಸ್ ಪಾಸ್ ವಿತರಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದ್ದು, ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಎಲ್ಲಾ ಮಕ್ಕಳಿಗೂ ಸೌಲಭ್ಯ: ಬಡವ, ಶ್ರೀಮಂತ ಎನ್ನದೇ ಪ್ರತಿಯೊಬ್ಬ ಮಕ್ಕಳೂ ಆರ್ಥಿಕ ಹೊರೆ ಇಲ್ಲದೇ ತಮ್ಮ ವಿದ್ಯಾಭ್ಯಾಸ ಮಾಡಬೇಕೆಂಬುದು ನಮ್ಮ ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ದಿನವೇ ಈ ಉಚಿತ ಬಸ್ ಪಾಸ್ ಯೋಜನೆಯನ್ನು ಘೋಷಣೆ ಮಾಡಿದ್ದರು.

ಶಾಸಕ ಕೆ.ಷಡಕ್ಷರಿ ಆರೋಗ್ಯದಲ್ಲಿ ಏರುಪೇರು

• ತುಮಕೂರು: ಸಚಿವ ಸ್ಥಾನಕ್ಕಾಗಿ ಹೈಕಮಾಂಡ್ ಭೇಟಿಯಾಗಲು ಹೊಸದಿಲ್ಲಿಗೆ ತೆರಳಿದ್ದ ತಿಪಟೂರು ಶಾಸಕ ಕೆ.ಷಡಕ್ಷರಿ ಅವರು ಕರ್ನಾಟಕ ಭವನದಲ್ಲಿ ಗುರುವಾರ ತೀವ್ರ ಅಸ್ವಸ್ಥಗೊಂಡ ಹಿನ್ನಲೆಯಲ್ಲಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಅವರ ಆರೋಗ್ಯದಲ್ಲಿ ಚೇತರಿಕೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಅಸ್ವಸ್ಥಗೊಂಡ ಷಡಕ್ಷರಿ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ ಅಗತ್ಯ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಮಧ್ಯಾಹ್ನ ಕೂಡ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯವನ್ನು ವಿಚಾರಿಸಿದರು.

15 ವಿದ್ಯಾರ್ಥಿಗಳು ಅಸ್ವಸ್ಥ

• ಹಾಸನ: ಹಲ್ಲಿ ಬಿದ್ದ ಸಾಂಬಾರ್ ಊಟ ಸೇವನೆ ಮಾಡಿದ 15 ವಿದ್ಯಾರ್ಥಿನಿಯರು ಅಸ್ವಸ್ಥಗೊಂಡಿರುವ ಘಟನೆ ಹಾಸನ ತಾಲೂಕಿನ ಸಾರಾಪುರದಲ್ಲಿರುವ ಕೃಷಿ ವಿಜ್ಞಾನ ಕಾಲೇಜಿನಲ್ಲಿ ನಡೆದಿದೆ. ಬುಧವಾರ ರಾತ್ರಿ ಊಟ ಮಾಡುವಾಗ ಸಾಂಬಾರ್‌ನಲ್ಲಿ ಹಲ್ಲಿ ಪತ್ತೆಯಾಗಿದೆ. ತೀವ್ರವಾಗಿ ಅಸ್ವಸ್ಥಗೊಂಡ 6 ವಿದ್ಯಾರ್ಥಿಗಳಿಗೆ ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸಿಲಿಂಡರ್ ಕೊರತೆಯಿಂದ ಸೌಧೆಒಲೆಯಲ್ಲಿ ಅಡುಗೆ ಮಾಡುತ್ತಿರುವುದರಿಂದ ಅಚಾತುರ್ಯ ನಡೆದಿದೆ ಎನ್ನಲಾಗಿದೆ. ಇದೇ ಕಾರಣದಿಂದ ಅಡುಗೆ ಮನೆಯಲ್ಲಿ ಶುಚಿತ್ವ ಇಲ್ಲದೇ ಹಲ್ಲಿ ಬಿದ್ದ ಆಹಾರ ಸೇವನೆ ಮಾಡಿ ವಿದ್ಯಾರ್ಥಿನಿಯರು ಅಸ್ವಸ್ಥರಾಗಿದ್ದಾರೆ. ಸ್ಥಳಕ್ಕೆ ಡಿಎಚ್‌ಒ ಅನಿಲ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಣ್ಣಿನ ಫಲವತ್ತತೆ ಹೆಚ್ಚಳ, ಇಳುವರಿಗೆ ಸಾವಯವ ಗೊಬ್ಬರ ಸಹಕಾರಿ | ಎಲ್ಲೆಡೆ ಉತ್ತಮ ಬೇಡಿಕೆ

ಶಿವಮೊಗ್ಗ ಹಾಪ್‌ಕಾಮ್ಸ್‌ನಲ್ಲಿ ಸಾವಯವ ಗೊಬ್ಬರ ತಯಾರು

▸ ಸುಬ್ರಹ್ಮಣ್ಯ ಸಿ ಹೊರಬೈಲು

• ಶಿವಮೊಗ್ಗ: ಕೇವಲ ತರಕಾರಿ, ಹಣ್ಣು ಮಾರಾಟಕ್ಕೆ ಸೀಮಿತವಾಗಿದ್ದ ಹಾಪ್‌ಕಾಮ್ಸ್ ವಿನೂತನ ಪ್ರಯತ್ನವೊಂದನ್ನು ನಡೆಸಿದೆ. ರಾಜ್ಯದಲ್ಲಿಯೇ ಮೊದಲ ಬಾರಿಗೆ ಶಿವಮೊಗ್ಗ ಹಾಪ್‌ಕಾಮ್ಸ್ ಮಣ್ಣಿನ ಫಲವತ್ತತೆ ಮತ್ತು ಬೆಳೆಗಳ ಉತ್ತಮ ಗುಣಮಟ್ಟದ ಇಳುವರಿಗಾಗಿ ಸಾವಯವ ಗೊಬ್ಬರವನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಮಾರುಕಟ್ಟೆಗೆ ಬಿಡುಗಡೆಯಾದ ಶಿವಮೊಗ್ಗ ಹಾಪ್ ಕಾಮ್ಸ್‌ನ ಸಾವಯವ ಗೊಬ್ಬರ ಭರ್ಜರಿ ಬೇಡಿಕೆಯನ್ನೂ ಪಡೆದುಕೊಂಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಸ್ಥಿತಿಗಳಿಂದಾಗಿ ರಾಸಾಯನಿಕ ಗೊಬ್ಬರ ಕಡಿಮೆ ಪ್ರಮಾಣದಲ್ಲಿ ಸಿಗಲಿದೆ ಎನ್ನುವ ವರದಿಗಳ ಹಿನ್ನೆಲೆಯಲ್ಲಿ ಈ ಸಾವಯವ ಗೊಬ್ಬರ ರೈತರಿಗೆ ವರದಾನವಾಗಲಿದೆ. ಸಾವಯವ ಗೊಬ್ಬರಕ್ಕೆ ಶಿವಮೊಗ್ಗ ಹಾಪ್‌ಕಾಮ್ಸ್ ಸಹಕಾರಿ ರೈತ ಮಿತ್ರ ಹಾಗೂ ರೈತ ಸ್ನೇಹಿ ಎಂದು ಹೆಸರಿಸಲಾಗಿದೆ. 40 ಕೆಜಿ ತೂಕದ ಚೀಲಗಳಲ್ಲಿ ಗೊಬ್ಬರ ಲಭ್ಯವಾಗುತ್ತಿದೆ. ಪ್ರತಿ ಚೀಲಕ್ಕೆ 370 ರೂ. ದರ ನಿಗದಿ ಮಾಡಲಾಗಿದೆ. ಹೆಚ್ಚಿನ ಗೊಬ್ಬರಕ್ಕೆ ಬೇಡಿಕೆ ಸಲ್ಲಿಸಿದರೆ ಸಾಗಣೆ ವೆಚ್ಚ ಸೇರಿ ಹಾಪ್ ಕಾಮ್ಸ್ ವತಿಯಿಂದಲೇ ರೈತರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಕೂಡ ಮಾಡಲಾಗುತ್ತಿದೆ. ಗೊಬ್ಬರ ತಯಾರಿಕೆಗೆ ಹೊಳಲ್ಕೆರೆ ಬಳಿಯ ಖಾಸಗಿ ಸಂಸ್ಥೆ ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಆದರೆ ಹಲವು ಪೋಷಕಾಂಶಗಳನ್ನು ಹಾಪ್‌ಕಾಮ್ಸ್ ವತಿಯಿಂದಲೇ ಪೂರೈಕೆ ಮಾಡಲಾಗುತ್ತಿದೆ. ಹಾಪ್‌ಕಾಮ್ಸ್ ಸಹಕಾರಿ ರೈತ ಮಿತ್ರ ಸಾವಯವ ಗೊಬ್ಬರ ಬೇಕಾದವರು ಮಾಹಿತಿಗೆ ಸತೀಶ್-9060369611ರಲ್ಲಿ ಸಂಪರ್ಕಿಸಬಹುದು.



> ವಿವಿಧ ಬೆಳೆಗಳಿಗೆ ಹಾಪ್‌ಕಾಮ್ಸ್‌ನ ಸಾವಯವ ಗೊಬ್ಬರ ಬಳಸಬಹುದಾಗಿದೆ. ಈಗಾಗಲೇ ಬಳಸಿದವರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ಗೊಬ್ಬರದಲ್ಲಿ ಏನೆಲ್ಲಾ ಅಂಶಗಳು ಇವೆ ಎಂಬ ಬಗ್ಗೆ ಪ್ರತಿ ತಿಂಗಳೂ ಬೆಂಗಳೂರಿನ ಐಐಎಚ್‌ಆರ್, ಶಿವಮೊಗ್ಗದ ಬಯೋ ಸೆಂಟರ್ ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸಿ ವರದಿ ಪಡೆಯುತ್ತಿದ್ದೇವೆ.
>
> ■ **ಅಕ್ಷಯ್, ವ್ಯವಸ್ಥಾಪಕ ನಿರ್ದೇಶಕರು, ಹಾಪ್‌ಕಾಮ್ಸ್**

> ರೈತರು ಖಾಸಗಿ ಸಂಸ್ಥೆಗಳಿಂದ ಸಾವಯವ ಗೊಬ್ಬರ, ಕುರಿ ಗೊಬ್ಬರ, ಕೋಳಿ ಗೊಬ್ಬರ ಖರೀದಿ ಮಾಡುತ್ತಿದ್ದಾರೆ. ಅವುಗಳ ಬಗ್ಗೆ ಸಾಕಷ್ಟು ದೂರುಗಳೂ ಇವೆ. ಹಾಗಾಗಿ ಹಾಪ್‌ಕಾಮ್ಸ್‌ನಿಂದಲೇ ಸಮೃದ್ಧ ಸಾವಯವ ಗೊಬ್ಬರ ತಯಾರಿಸಿ ಮಾರಾಟ ಮಾಡುತ್ತಿದ್ದೇವೆ. ಪ್ರಯೋಗಾತ್ಮಕವಾಗಿ ನಡೆಸಿದ ಮಾರಾಟಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ಲಭಿಸಿದೆ. ಎಲ್ಲಾ ರೈತರು ಇದನ್ನು ಉಪಯೋಗಿಸಿದರೆ ರಾಸಾಯನಿಕ ಗೊಬ್ಬರ ಬಳಕೆಯನ್ನು ಕಡಿಮೆ ಮಾಡಬಹುದಾಗಿದೆ.
>
> ■ **ಜಿ.ವಿಜಯ್ ಕುಮಾರ್(ದನಿ), ಅಧ್ಯಕ್ಷರು, ಹಾಪ್‌ಕಾಮ್ಸ್ ಶಿವಮೊಗ್ಗ**

ಸಂಪಾದಕೀಯ

ನೀತಿ ಆಯೋಗದ ಸಭೆಯಲ್ಲಿ ಡಿಕೆಶಿ ಭಾಗಿ ಸ್ವಾಗತಾರ್ಹ

ಆಡಳಿತದಲ್ಲಿ ರಾಜಕೀಯ ಬೆರೆಸದೇ ಪರಸ್ಪರ ಸಹಕಾರ, ನಂಬಿಕೆ, ವಿಶ್ವಾಸದಿಂದ ಮುಂದೆ ಹೆಜ್ಜೆ ಇಟ್ಟರೆ ರಾಜ್ಯ ಮತ್ತು ದೇಶ ಎರಡೂ ಮುಂದುವರಿಯುತ್ತವೆ. ಭಾರತದಂಥ ಒಕ್ಕೂಟ ದೇಶದಲ್ಲಿ ಈ ಪರಸ್ಪರ ಅರ್ಥ ಮಾಡಿಕೊಂಡು ನಡೆಯುವುದು ತೀರಾ ಅನಿವಾರ್ಯ. ಇಲ್ಲಿ ಯಾರೂ ಮೇಲಲ್ಲ, ಯಾರೂ ಕೆಳಗಿಲ್ಲ ಎಂಬ ಮನೋಭಾವದಿಂದ ಮುಂದಡಿ ಇಡಬೇಕಷ್ಟೇ. ಚುನಾವಣಾ ಕಾಲದಲ್ಲಷ್ಟೇ ರಾಜಕೀಯ ಮಾಡಿಕೊಂಡು, ಉಳಿದ ಕಾಲದಲ್ಲಿ ಜನರಿಗಾಗಿ ರಾಜಕೀಯ ಮರೆತು ಪರಸ್ಪರ ಸಹಕಾರದಿಂದ ಹೋದರೆ ಒಳಿತು. ಇತ್ತೀಚಿನ ಕೆಲವು ವರ್ಷಗಳಲ್ಲಿ ಈ ಪರಸ್ಪರ ವಿಶ್ವಾಸ ಎಂಬುದು ಎಲ್ಲೋ ಒಂದು ಕಡೆ ಮರೆಯಾಗಿ, ಎಲ್ಲೆಡೆ ರಾಜಕೀಯವೇ ಹೆಚ್ಚು



ಮೇಳೈಸುತ್ತಿದ್ದುದು ಕಂಡು ಬಂದಿತ್ತು. ಆದರಲ್ಲೂ ಪ್ರಧಾನಿ ಮತ್ತು ರಾಜ್ಯಗಳ ಸಿಎಂ ನಡುವಿನ ರಾಜಕೀಯ ಜಗಳ ಅಭಿವೃದ್ಧಿಗೂ ಕೊಂಚ ಮಟ್ಟಿಗೆ ಪೆಟ್ಟು ನೀಡಿತ್ತು ಎಂಬುದನ್ನು ಯಾರೂ ಅಲ್ಲಗೆಳೆಯಲಾರರು.

ಈ ವಿಚಾರ ಪ್ರಸ್ತಾಪಿಸಲು ಇಲ್ಲಿ ಕಾರಣಗಳೂ ಇವೆ. ತುಂಬಾ ವರ್ಷಗಳಾದ ಮೇಲೆ ಕರ್ನಾಟಕದ ಮುಖ್ಯಮಂತ್ರಿಯೊಬ್ಬರು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ನೀತಿ ಆಯೋಗದ ಸಭೆಯಲ್ಲಿ ಭಾಗಿಯಾಗಿದ್ದಾರೆ. ಈ ಹಿಂದೆ ಯಾಕೆ ಹೋಗಲಿಲ್ಲ ಎಂಬುದರ ಮೇಲೆ ಹೆಚ್ಚು ಚರ್ಚೆ ನಡೆಸುವುದು ಈಗ ಅನವಶ್ಯಕ. ಆದರೆ, ಈಗಿನ ಸಿಎಂ ಡಿ.ಕೆ.ಶಿವಕುಮಾರ್ ಅವರು ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಂಡು, ರಾಜ್ಯದ ಸಾಧನೆಗಳು ಮತ್ತು ಬೇಡಿಕೆಗಳನ್ನು ಇಟ್ಟು ಬಂದಿದ್ದಾರೆ. ಇದು ಒಂದು ರೀತಿಯಲ್ಲಿ ಉತ್ತಮ ನಡೆ. ಎಂದಿಗೂ ಕೇಂದ್ರ ಮತ್ತು ರಾಜ್ಯಗಳು ಒಟ್ಟಿಗೆ ಹೆಜ್ಜೆ ಇಟ್ಟಾಗ ಎಲ್ಲೆಡೆ ಅಭಿವೃದ್ಧಿ ಕಾಣಸಿಗುತ್ತದೆ. ಇದು ಕೇವಲ ಕರ್ನಾಟಕದ ಕಥೆಯಾಗಿರಲಿಲ್ಲ. ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ, ಸೇರಿದಂತೆ ಬಿಜೆಪಿಯೇತರ ಮುಖ್ಯಮಂತ್ರಿಗಳು ಗೈರಾಗುವ ತಂತ್ರಗಾರಿಕೆ ಅನುಸರಿಸುತ್ತಿದ್ದರು. ಗೈರಾಗುತ್ತಿದ್ದುದರಿಂದ ಆಗುತ್ತಿದ್ದ ಲಾಭವಾದರೂ ಏನು ಎಂಬುದು ಯಾರಿಗೂ ತಿಳಿದಿಲ್ಲ. ಅಷ್ಟೇ ಅಲ್ಲ, ಪ್ರಧಾನಿಗಳು ರಾಜ್ಯಗಳಿಗೆ ಬಂದಾಗ ಅವರನ್ನು ಸ್ವಾಗತಿಸಲು ಹೋಗದೆ ರಾಜಕೀಯ ಮಾಡಿದ ಸಂಗತಿಗಳೂ ಇವೆ. ಈಗ ನೋಡಿ, ಬಿಜೆಪಿಯೇತರ ರಾಜ್ಯಗಳ ಬಹುತೇಕ ಎಲ್ಲ ಮುಖ್ಯಮಂತ್ರಿಗಳೂ ಈ ಸಭೆಯಲ್ಲಿ ಭಾಗಿಯಾಗಿದ್ದಾರೆ. ಎಲ್ಲರೂ ತಮ್ಮ ರಾಜ್ಯಗಳ ಬೇಡಿಕೆಗಳನ್ನು ಮಂಡಿಸಿದ್ದಾರೆ. ತಮಗೆ ಬರಬೇಕಾದ ತೆರಿಗೆ ಬಾಕಿ ಬಗ್ಗೆಯೂ ವಿನಂತಿಸಿದ್ದಾರೆ. ಅಷ್ಟೇ ಅಲ್ಲ, ನೀತಿ ಆಯೋಗದ ಸಭೆ ಮುಗಿದ ಮೇಲೆ ವೈಯಕ್ತಿಕವಾಗಿಯೂ ಪ್ರಧಾನಿ, ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿದ್ದಾರೆ. ಅಂದರೆ, ಈ ಸಭೆ ಇಡೀ ದೇಶದ ಬಹುತೇಕ ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚಿಸಿದಂತೆ ಆಗಿದೆ. ಹಾಗೆಯೇ, ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧದಲ್ಲಿ ಹೊಸ ದಿಕ್ಕೂ ತೆರೆದಂತಾಗಿದೆ. ಮುಂದೆಯೂ ಇಂಥ ಸಭೆಗಳಲ್ಲಿ ಭಾಗಿಯಾಗಬೇಕು. ಈ ಮೂಲಕ ದೇಶದ ಅಭಿವೃದ್ಧಿಗೆ ಒಟ್ಟಾರೆಯಾಗಿ ಹೆಜ್ಜೆ ಇಡಬೇಕು.

ಪರಬ್ರಹ್ಮನಿಗೆ ರೂಪ ಕಲ್ಪನೆ

ನ ದೇವಃ ಪುಂಡರೀಕಾಕ್ಷಃ ನ ದೇವಸ್ತು ತ್ರಿಲೋಚನಃ ।
ಉಪಾಸಕಾನಾಂ ಕಾರ್ಯಾರ್ಥಂ ಬ್ರಹ್ಮಣೋ ರೂಪಕಲ್ಪನಾ ॥
-ಶ್ರೀರಾಮತಾಪಿನ್ಯೋಪನಿಷತ್

ಪುಂಡರೀಕಾಕ್ಷನು ದೇವನಲ್ಲ. ಮುಕ್ಕಣ್ಣನೂ ದೇವನಲ್ಲ. ಉಪಾಸಕರ ಕಾರ್ಯಸಿದ್ಧಿಗಾಗಿ ಪರಬ್ರಹ್ಮನಿಗೆ ರೂಪವನ್ನು ಕಲ್ಪಿಸಲಾಗಿದೆ – ಎಂಬುದು ಶ್ಲೋಕಾರ್ಥ.

'ಅನಂತಾ ವೈ ಉಪನಿಷದಃ' ಎಂಬ ಮಾತಿದೆ. ಅನಂತ (ಬಹಳಷ್ಟು) ಉಪನಿಷತ್ತುಗಳಿವೆ ಎಂಬುದು ಇದರ ಅರ್ಥ. ಇವುಗಳಲ್ಲಿ ನೂರೆಂಟು ಉಪನಿಷತ್ತುಗಳು ಸುಲಭದಲ್ಲಿ ಎಲ್ಲೆಡೆಯೂ ಲಭ್ಯ. ಅವುಗಳಲ್ಲಿ ಒಂದು ಶ್ರೀರಾಮತಾಪಿನ್ಯುಪನಿಷತ್. ಇದು ರಾಮನ, ರಾಮಮಂತ್ರದ ಮಹತ್ವವನ್ನು ನಿರೂಪಿಸುತ್ತದೆ. ಶ್ರೀರಾಮ ತತ್ತ್ವದ ಸರ್ವಜ್ಞತೆಯನ್ನು ಇಲ್ಲಿ ಹೇಳಲಾಗಿದೆ. ಭಾರತೀಯ ಸನಾತನ ಪರಂಪರೆ ಸರ್ವಶಕ್ತನಾದ ಭಗವಂತನನ್ನು ಒಪ್ಪುತ್ತದೆ. ಇದನ್ನೇ ಆರಾಧಿಸುತ್ತದೆ. ಅನುಕೂಲಕ್ಕಾಗಿ ಬೇರೆ ಬೇರೆ ದೇವ, ದೈವಗಳನ್ನು ಕಲ್ಪಿಸಿ ಕೊಂಡು ಪೂಜಿಸಿದರೂ ಅದೆಲ್ಲದರ ಗುರಿ ಪರತತ್ತ್ವವನ್ನು ಹೊಂದುವುದು. ಪರತತ್ತ್ವವೆಂದರೆ ಗುರುತಿಸಲ್ಲದವ ಪರಬ್ರಹ್ಮನೇ. ಈ ಚರಾಚರ ಜಗತ್ತನ್ನು ಸೃಷ್ಟಿಸಿರುವುದು. ಸನಾತನ ಪರಂಪರೆ ದೇವನೊಬ್ಬನೆಂದು ಹೇಳುತ್ತದೆ. ಲೋಕದ ಜನರ ಆಕಾಂಕ್ಷೆ, ಅಪೇಕ್ಷೆ ಪ್ರಯೋಜನವನ್ನು ಅವಲಂಬಿಸಿ ಅನೇಕ ರೂಪದಲ್ಲಿ ಆರಾಧಿಸುತ್ತದೆ. ಹೀಗಿರುವಾಗ ಏಕತ್ವ ಕಲ್ಪನೆ, ಬಹುತ್ವದಲ್ಲಿ ಆರಾಧನೆ- ಈ ವೈರುಧ್ಯ ಏಕೆ? ಎಂಬ ಪ್ರಶ್ನೆಗೆ ಉತ್ತರರೂಪದಲ್ಲಿ ಈ ಶ್ಲೋಕ ಮೂಡಿಬಂದಿದೆ. ಮೂವತ್ತೂರು ಕೋಟಿ ದೇವತೆಗಳನ್ನು ಎನ್ನುತ್ತೇವೆ. ಅನೇಕ ಬಗೆಯ ದೇವರುಗಳನ್ನೂ, ದೈವಗಳನ್ನೂ ಪೂಜಿಸುತ್ತೇವೆ. ಅವತಾರಗಳನ್ನೂ ಪೂಜಿಸುತ್ತೇವೆ. ಮಹಾತ್ಮರನ್ನೂ ಆರಾಧಿಸುತ್ತೇವೆ. ಏಕದೇವತ್ವ ಎನ್ನುವಾಗ ಇವೆಲ್ಲ ಏಕೆ ಎಂದು ಪ್ರಶ್ನಿಸಿದರೆ ಉತ್ತರವೇ 'ಉಪಾಸಕಾನಾಂ ಕಾರ್ಯಾರ್ಥಂ' ಎಂಬುದಾಗಿ. ಉಪಾಸಕ, ಭಕ್ತರ ಮನೋಭೀಷ್ಟಸಿದ್ಧಿಗಾಗಿ ಪರಬ್ರಹ್ಮನಿಗೆ ವಿವಿಧ ರೂಪಾತಿಶಯವನ್ನು ಕೊಟ್ಟು ಆರಾಧಿಸುವ ಪದ್ಧತಿ ರೂಢಿಯಲ್ಲಿ ಬಂದಿದೆ. ದೇವರು ಮರದಲ್ಲಾಗಲಿ, ಮನಸಿನಲ್ಲಾಗಲಿ, ಕಲ್ಲಿನಲ್ಲಾಗಲಿ, ಲೋಹದಲ್ಲಾಗಲಿ ಇಲ್ಲ. ನಮ್ಮ ಭಾವನೆಯಲ್ಲಿ ದೇವನಿದ್ದಾನೆ. ಆದದ್ದು ವಿಗ್ರಹಾದಿಗಳಲ್ಲಿ ಆರೋಪಿಸಿ ನಮ್ಮಿಂದ ಪಡುತ್ತೇವೆ. ಧನ್ಯತೆಯನ್ನು ಕಂಡುಕೊಳ್ಳುತ್ತೇವೆ. ವಸ್ತುತಃ ಪುಂಡರೀಕಾಕ್ಷನೂ ದೇವನಲ್ಲ. ಮುಕ್ಕಣ್ಣನೂ ದೇವನಲ್ಲ. ಇದನ್ನೇ ಬಲವಾಗಿ ಒಪ್ಪಿಕೊಂಡರೆ ಸರ್ವಜ್ಞನ, ಸರ್ವಸಮರ್ಥನ ಸರ್ವರೂಪಿಯ ಆದ ಪರಬ್ರಹ್ಮನನ್ನು ನಿರ್ದಿಷ್ಟ ಚೌಕಟ್ಟಿಗೆ ತಂದು ಸಂಕೋಚಗೊಳಿಸಿದಂತಾಗುತ್ತದೆ. ಆದರೂ ಹಂತಹಂತವಾಗಿ ಮೇಲೇರಲು ಈ ಕಲ್ಪನೆ. ಇಲ್ಲಿಂದ ಮತ್ತೂ ಮೇಲಕ್ಕೆ ಏರಬೇಕು.



ಅವಧೂತ ಗೀತೆಯಲ್ಲೂ ಇದೇ ಶ್ಲೋಕ ಬಂದಿದೆ. ಆದರೆ ಕೊನೆಯ ಎರಡು ಪಾದಗಳು ಮಾತ್ರ ವ್ಯತ್ಯಾಸವಾಗಿದೆ. ಅದು ಇಂತಿದೆ-

'ನ ದೇವಃ ಪುಂಡರೀಕಾಕ್ಷಃ ನ ದೇವಃ ತ್ರಿಲೋಚನಃ।
ಆತ್ಮತಿಮಮ್ ಅನಾದ್ಯಂತಃ ದೇವನಾಂ ದೇವ ಉಚ್ಯತೇ॥'


ಕೃತ್ರಿಮತೆಯ ಲೇಶವೂ ಇಲ್ಲದ, ಆದ್ಯಂತರಹಿತನಾದ ದೇವತ್ವದ ಗುಣದಿಂದ ಸಂಪನ್ನವಾದ ಶಕ್ತಿಯನ್ನು ದೇವ ಎನ್ನಲಾಗುತ್ತದೆ.

ನಮ್ಮ ದಿನನಿತ್ಯದ ಪೂಜಾಪದ್ಧತಿ, ಪಠಣಗಳು..... ಇವೆಲ್ಲವೂ ಉನ್ನತ ತತ್ತ್ವದತ್ತ ಸಾಗಲು ಅನುಕೂಲವಾದ ಮೊದಲ ಸೋಪಾನಗಳು. ನಾವು ತಲುಪಬೇಕಾದದ್ದು ಪರಂಧಾಮದತ್ತ, ಪರಬ್ರಹ್ಮತ್ತ. ಇದನ್ನು ಗಮನಿಸಿ ಸಾಧನೆ ಮಾಡುತ್ತಾ ಮೇಲೇರುತ್ತಾ, ಪೂರ್ವಾಪೂರ್ವದ್ದನ್ನು ಮರೆತು ಮುಂದುವರಿಯಬೇಕು. ಮನುಕುಲದ ಪರಮಗುರಿ ಹಂತಹಂತವಾಗಿ ಮೇಲೇರುವುದು.

ದೀರ್ಘಾವಧಿ ಪ್ರವಾಸ; ನೆಹರು ದಾಖಲೆ ಅಬಾಧಿತ!

ಉಫೇ ವೀರಭೂಮಿಗೆ
• ಸಂತೋಷ್ ತಮ್ಮಯ್ಯ
santoshthammaiah@gmail.com





ಇಬ್ಬರ ಕಾಲಘಟ್ಟ, ಪರಿಸ್ಥಿತಿ, ಸವಾಲುಗಳು ಬೇರೆ. ಹಾಗಾಗಿ ದೀರ್ಘಾವಧಿಯವರೆಗೆ ಪ್ರಧಾನಮಂತ್ರಿಗಳಾಗಿದ್ದ ಇಬ್ಬರ ತುಲನೆ ಸಲ್ಲದು ಎಂಬ ಅಭಿಪ್ರಾಯ ಕೆಲವರದ್ದು. ಯಾರೇನೇ ಅಂದರೂ ಜನರಂತೂ ತುಲನೆ ಮಾಡಿಯೇ ಇರುತ್ತಾರೆ. ಆದ್ದರಿಂದ ಪ್ರಸ್ತುತ ದೀರ್ಘಾವಧಿಯ ಆಡಳಿತದ ಚರ್ಚೆ ನೆಹರು vs ಮೋದಿ ಆಗಿರುವುದು ಸತ್ಯ. ಅಸಲಿಗೆ ಹೇಳಬೇಕೆಂದರೆ ಅದಕ್ಕೆ ಮುಖ್ಯ ಕಾರಣ ನೆಹರು ಕಾಲದ ಎಡವಟ್ಟುಗಳೇ! ಏಕೆಂದರೆ ಗಾಂಧಿ ಕಂಡ ಭಾರತದ ಕನಸನ್ನು ಮೋದಿಯವರು ಒಂದೊಂದಾಗಿ ನನಸು ಮಾಡಿದ್ದಾರೆ. ವಾಸ್ತವವಾಗಿ ಅದನ್ನು ಮಾಡಬೇಕಿದ್ದಿದ್ದು ನೆಹರು! ಮೋದಿಯವರ ದೀರ್ಘಾವಧಿ ಆಡಳಿತದ ಸಂಗತಿ ಕಾಂಗ್ರೆಸಿಗೆ ಬೇಸರ ತರಿಸಿರಬಹುದು. ಆದರೆ ನೆಹರು ದಾಖಲೆಯೊಂದು ಇಂದಿಗೂ ಜೀವಂತವಾಗಿದೆ ಎಂದು ಕಾಂಗ್ರೆಸಿಗರು ಖುಷಿ ಪಡುವ ಸಂಗತಿಯೊಂದಿದೆ. ನೆಹರು ತಮ್ಮ ಕಾಲದಲ್ಲಿ ಮಾಡಿದ ವಿದೇಶ ಪ್ರವಾಸ ಇಂದಿಗೂ ಒಂದು ದಾಖಲೆಯೇ! ಅದನ್ನು ಮೋದಿಯವರಿಗೆ ಮುರಿಯಲು ಸಾಧ್ಯವಾಗಿಲ್ಲ ಎಂದು ಕಾಂಗ್ರೆಸ್ ಹೆಮ್ಮೆ ಪಟ್ಟುಕೊಳ್ಳಬಹುದು! ನೆಹರು ಅವರ 'ದೀರ್ಘಾವಧಿ' ವಿದೇಶ ಪ್ರವಾಸದ ದಾಖಲೆ ಏನೆಂಬುದಕ್ಕೆ ಇತಿಹಾಸ ಸ್ಪಷ್ಟ ಸಾಕ್ಷಿಗಳನ್ನು ಕೊಡುತ್ತದೆ.

ಸ್ವಾತಂತ್ರ್ಯ ಲಭಿಸಿದ ಕೆಲವೇ ತಿಂಗಳಲ್ಲಿ ನೆಹರು ವಿದೇಶಿ ಪ್ರವಾಸವನ್ನು ಆರಂಭಿಸಿದ್ದರು. 1949ರಲ್ಲಿ ಅಮೆರಿಕ, ಕೆನಡಾ ಮತ್ತು ಐರ್ಲೆಂಡ್ ಪ್ರವಾಸಗೈದ ನೆಹರು 1950ರಲ್ಲಿ ಇಂಡೋನೇಷ್ಯಾಕ್ಕೆ ತೆರಳಿದರು. ವಿದೇಶಕ್ಕೆ ಹಾರುತ್ತಿದ್ದ ನೆಹರು ಮೇಲೆ ಆದಾಗಲೇ ವಿರೋಧಪಕ್ಷಗಳು ಟೀಕೆಗಳನ್ನು ಮಾಡಲಾರಂಭಿಸಿದ್ದವು. ಲೋಹಿಯಾರಂಥವರೇ, "ದೇಶದ ಶೇ.95ರಷ್ಟು ಜನರು ದಿನಕ್ಕೆ ಮೂರು ಆಣಾ ಆದಾಯದಲ್ಲಿ ಬದುಕುತ್ತಿರುವಾಗ, ನೆಹರೂ ತನ್ನ ಮೇಲೆ ಪ್ರತಿದಿನ 25,000 ರೂಪಾಯಿ ಖರ್ಚು ಮಾಡುತ್ತಿದ್ದಾರೆ" ಎಂದಿದ್ದರು. ಆದ್ದರಿಂದ 1951ರಲ್ಲಿ ನೇಪಾಳದ ಹೊರತಾಗಿ ಪ್ರಧಾನಮಂತ್ರಿಗಳು ಇನ್ನೆಲ್ಲೂ ತೆರಳಲಿಲ್ಲ. 1953ರಲ್ಲಿ ಇಂಗ್ಲೆಂಡ್‌ನಲ್ಲಿ ಎರಡನೆಯ ಎಲಿಜಬೆತ್ ರಾಣಿಯ ಪಟ್ಟಾಭಿಷೇಕಕ್ಕೆ ತೆರಳಿದ ನೆಹರು ಅಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಹೊಗಳಿ ಬಂದಿದ್ದರು. ಅದೇ ವರ್ಷ ಈಜಿಪ್ಟ್, ಪಾಕಿಸ್ತಾನ, ಇಟಲಿ ಮತ್ತು ಸ್ವಿಜರ್‌ಲ್ಯಾಂಡ್‌ಗಳಿಗೂ ತೆರಳಿದರು. ಇವಾವುವೂ ಅಧಿಕೃತ ರಾಜ್ಯ ಪ್ರವಾಸ (State visit)ಗಳಾಗಿರಲಿಲ್ಲ! ಪಾಕಿಸ್ತಾನದ ಭೇಟಿಗೂ ಮಹತ್ವದ ಕಾರಣಗಳಿರಲಿಲ್ಲ. 1954ರಲ್ಲಿ ಶ್ರೀಲಂಕಾ ಮತ್ತು ಇಂಡೋನೇಷ್ಯಾದಲ್ಲಿ ಸಮ್ಮೇಳನಕ್ಕಾಗಿ ಪ್ರವಾಸ ಮಾಡಿದ್ದು ಬಿಟ್ಟರೆ ಉತ್ತರ ವಿಯೆಟ್ನಾಂ, ದಕ್ಷಿಣ ವಿಯೆಟ್ನಾಂ, ಲಾವೋಸ್, ಕಾಂಬೋಡಿಯಾ, ಚೀನಾ, ಹಾಂಗ್‌ಕಾಂಗ್, ಬರ್ಮಾ, ಥಾಯ್ಲೆಂಡ್, ಮಲೇಷ್ಯಾ ಭೇಟಿಗೆ ಅಧಿಕೃತ ಕಾರಣಗಳಿರಲಿಲ್ಲ. ಇಂಥ ವಿನಾ ಕಾರಣ ಪ್ರವಾಸಗಳಿಗೆ ನೆಹರು ನಾನಾ ಹೆಸರುಗಳನ್ನು ಕೊಟ್ಟುಕೊಳ್ಳುತ್ತಿದ್ದರು. ಮುಖ್ಯವಾಗಿ 'ಅಧ್ಯಯನ ಪ್ರವಾಸ'ದ ಹೆಸರಲ್ಲಿ ದೇಶ ಸುತ್ತುತ್ತಿದ್ದರು. 1955ರಲ್ಲಿ ಈಜಿಪ್ಟ್, ಫ್ರಾನ್ಸ್. ಪೋಲ್ಯಾಂಡ್, ಯುಗೋಸ್ಲಾವಿಯಾ, ಆಸ್ಟ್ರಿಯಾ, ಇಟಲಿಗಳ ಭೇಟಿಗೆ ಕೂಡ ನಿಖರ ಕಾರಣಗಳಿರಲಿಲ್ಲ. ಆ ವರ್ಷದ ಸೌದಿ ಅರೇಬಿಯಾ ಮತ್ತು ರಷ್ಯಾ ಪ್ರವಾಸಗಳು ಮಾತ್ರ ಸ್ಟೇಟ್ ವಿಸಿಟ್ ಆಗಿದ್ದವು. ಆಶ್ಚರ್ಯವೆಂದರೆ ಅದೊಂದೇ ವರ್ಷ ನೆಹರು ಈಜಿಪ್ಟಿಗೆ ಎರಡೆರಡು ಬಾರಿ ಪ್ರವಾಸ ಮಾಡಿದ್ದರು. 1956ರಲ್ಲಿ ಅಮೆರಿಕ ಪ್ರವಾಸ ಮಾತ್ರ ಸ್ಟೇಟ್ ವಿಸಿಟ್ ಆಗಿದ್ದರೆ, ಉಳಿದಂತೆ ಐರ್ಲೆಂಡ್, ಫ್ರಾನ್ಸ್, ಯುಗೋಸ್ಲಾವಿಯಾ, ಗ್ರೀಸ್, ಈಜಿಪ್ಟ್, ಲೆಬನಾನ್, ಸಿರಿಯಾ, ಪಶ್ಚಿಮ ಜರ್ಮನಿಯ ಪ್ರವಾಸಗಳು 'ಅಧ್ಯಯನ ಪ್ರವಾಸ'ಗಳಾಗಿದ್ದವು. ಸುಯೆಜ್ ಯುದ್ಧದಿಂದ ನಲುಗಿ ಅಸ್ಥಿರಗೊಂಡಿದ್ದ ಸಿರಿಯಾದಲ್ಲಿ ಅಧ್ಯಯನ ನಡೆಸಬೇಕಾದ ಯಾವ ಸಂಗತಿ ನೆಹರುಗಿತ್ತೋ!?

1957ರಲ್ಲಿ ನೆಹರು 12 ದೇಶಗಳನ್ನು ಸುತ್ತಿದರು. ಆಗಲೂ ಗಲಭೆಗ್ರಸ್ತ ಸಿರಿಯಾಕ್ಕೆ ತೆರಳಿದ್ದರು. ಅದಕ್ಕೆ 'ಸೌಹಾರ್ಧ ಭೇಟಿ' ಎಂಬ ಹೆಸರು ಕೊಟ್ಟುಕೊಂಡರು. 1959ರಲ್ಲಿ ನೇಪಾಳ ಮತ್ತು ಇರಾನಿಗೆ ತೆರಳಿದರೆ, 1960ರಲ್ಲಿ ಟರ್ಕಿ, ಲೆಬನಾನ್, ಈಜಿಪ್ಟ್, ಪಾಕಿಸ್ತಾನ ಮತ್ತು ಅಮೆರಿಕಾದಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ತೆರಳಿದ್ದರು.

1961ರಲ್ಲಿ ನಾಲ್ಕು ದೇಶಗಳು, 1962ರಲ್ಲಿ ಎರಡು ದೇಶಗಳಿಗೆ ತೆರಳಿದ್ದರು. 1962ರ ಭಾರತದ ಪರಿಸ್ಥಿತಿ ಹೇಗಿತ್ತು ಎಂಬುದನ್ನೊಮ್ಮೆ ನೆನಪು ಮಾಡಿಕೊಳ್ಳಬೇಕು. ನೆಹರು ಪ್ರವಾಸದ ಅಚ್ಚರಿಗಳು ಇವಿಷ್ಟೇ ಅಲ್ಲ. 1949ರ ಅಕ್ಟೋಬರ್ 10ರಂದು ಮೊಟ್ಟಮೊದಲ ಅಮೆರಿಕ ಪ್ರವಾಸದ ವಿವರಗಳು ಮಜವಾಗಿವೆ. ಆ ಸಮಯದಲ್ಲಿ ಭಾರತದಿಂದ ನೇರವಾಗಿ ಅಮೆರಿಕಾಕ್ಕೆ ಹೋಗಬಲ್ಲ ವಿಮಾನಗಳು ಭಾರತದಲ್ಲಿರಲಿಲ್ಲ. ದೆಹಲಿಯಿಂದ ಲಂಡನಿಗೆ ತೆರಳಿದ ನೆಹರು ಅಲ್ಲಿ ಅಮೆರಿಕಾ ಅಧ್ಯಕ್ಷ ಹ್ಯಾರಿ ಟ್ರೂಮನ್ ಅವರ ವಿಮಾನವನ್ನು ಬಾಡಿಗೆಗೆ ಪಡೆದು ವಾಷಿಂಗ್ಟನ್‌ಗೆ ಹಾರಿದರು. ಅಕ್ಟೋಬರ್ 11ರಂದು ಅಮೆರಿಕಾ ತಲುಪಿದ ಪ್ರಧಾನಮಂತ್ರಿಯವರು ವಿಮಾನ ನಿಲ್ದಾಣದಿಂದ ತೆರೆದ ಐಶಾರಾಮಿ ಬಾಡಿಗೆ ಕಾರಿನಲ್ಲಿ ಟ್ರೂಮನ್ ಅವರನ್ನು ಭೇಟಿಯಾಗಲು ಹೋದರು. ಅಂದರೆ ತಮ್ಮ ಭೇಟಿಗೆ ಬಂದ ನೆಹರುರನ್ನು ಟ್ರೂಮನ್ ಕ್ಯಾರೇ ಅನ್ನಲಿಲ್ಲ. ಅಧ್ಯಕ್ಷರ ಜೊತೆ 45 ನಿಮಿಷಗಳ ಕಾಲ ಮಾತುಕತೆ ನಡೆಸಿ ಹೊರಬಂದ ನೆಹರು ಅವರನ್ನು ಮಾಧ್ಯಮ ಪ್ರತಿನಿಧಿಗಳು ಟ್ರೂಮನ್-ನೆಹರು ಮಾತುಕತೆಯ ವಿಷಯಗಳೇನಿದ್ದವು ಎಂದು ಪ್ರಶ್ನಿಸಿದಾಗ ನೆಹರು, I only talked about the general things, the rest of the important subjects, GS Bajpai (principal foreign affairs adviser) will see. ಎಂದು ನಿರ್ಲಜ್ಜವಾಗಿ ಉತ್ತರಿಸಿದರು! ಅಧ್ಯಕ್ಷರ ಭೇಟಿಯ ನಂತರ ನೆಹರು ಅಮೆರಿಕಾ ಪ್ರವಾಸ ಮುಗಿಯಲಿಲ್ಲ.

ಅವರೊಂದರೆ ಮಗಳು, ಕುಟುಂಬ ಸದಸ್ಯರು ಮತ್ತು ಸ್ನೇಹಿತರ ದೊಡ್ಡ ಹಿಂಡೇ ಇತ್ತು. ಬರೋಬ್ಬರಿ 6 ದಿನಗಳ ಕಾಲ ಅಮೆರಿಕ ಸುತ್ತಿ ಅಕ್ಟೋಬರ್ 16ರಂದು ಬಾಡಿಗೆ ಕಾರು ಹತ್ತಿ, ಬಾಡಿಗೆ ವಿಮಾನ ಏರಿ ಲಂಡನ್ ಮೂಲಕ ಭಾರತಕ್ಕೆ ಬಂದರು. ಅಮೆರಿಕದಿಂದ ಮರಳಿದ ನೆಹರು ಭಾರತದಲ್ಲಿ ನಾಲ್ಕು ದಿನ ಮಾತ್ರ ಇದ್ದರು. ಬಳಿಕ ಅದೇ ಹಿಂಡಿನೊಂದಿಗೆ ಕೆನಡಾಕ್ಕೆ ಹಾರಿದರು. ಕೆನಡಾದಲ್ಲಿ ಘನಕಾರ್ಯಗಳೇನೂ ಇರಲಿಲ್ಲ. 1954ರಲ್ಲಿ ತಮ್ಮ ಪಟಾಲಂನೊಡನೆ ಮಾಡಿದ 10 ದಿನಗಳ ಚೀನಾ ಪ್ರವಾಸವನ್ನು ಅವರು 'ಇಂಡೋ-ಚೀನಾ ಫಿಲಾಸಫಿಕಲ್ ಟೂರ್' ಎಂದು ಕರೆದುಕೊಂಡರು. 1955ರ ಜೂನ್ 7ರಂದು ರಷ್ಯಾಕ್ಕೆ ತೆರಳಿದ ಅವರು ಭರ್ಜರಿ 17 ದಿನಗಳ ಕಾಲ ತಿರುಗಾಡಿದರು. ಬಹುಶ ಈ 'ದೀರ್ಘಾವಧಿ'ಯ ದಾಖಲೆಯನ್ನು ಭಾರತದ ಯಾವ ಪ್ರಧಾನಮಂತ್ರಿಯೂ ಮುರಿಯಲಾರರು! ಈ ಪ್ರವಾಸದ ನಂತರ ನೆಹರು, "ನಮ್ಮ ಯುವ ರಾಜತಾಂತ್ರಿಕ ಸೇವೆಯ ಸದಸ್ಯರು ಸಾಮಾನ್ಯವಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂಬ ಅನುಭವ ನನಗಾಯಿತು" ಎಂದು ಬರೆದರು. ಅಂದರೆ ಅವರು ಮಾಡಿದ ಅಧ್ಯಯನ ಇಷ್ಟು!

ಅಧ್ಯಯನಕ್ಕೆ ಹೊರತಾಗಿ ನೆಹರು ಭೇಟಿಯ ಮೂಲಕ ಸ್ನೇಹ ಸೌಹಾರ್ದಗಳು ನೆಲೆಸಿತೇ ಎಂದರೆ ಅಲ್ಲೂ ವೈಫಲ್ಯಗಳೇ ಕಾಣಸುತ್ತವೆ. 1961ರ ಅಮೆರಿಕಾ ಪ್ರವಾಸದಲ್ಲಿ ಕೆನಡಿಯವರನ್ನು ಭೇಟಿಯಾದ ನೆಹರು ಆರ್ಥಿಕ ನೆರವು ಬೇಡಿದರು. ಶೀಲತ ಯುದ್ಧದ ಒತ್ತಡದಿಂದ ಕೆನಡಿ ಅದಕ್ಕೆ ತಾತ್ವಿಕ ಒಪ್ಪಿಗೆಯನ್ನು ಕೂಡ ನೀಡಿದ್ದರು. ಆದರೆ ನೆಹರು ಅಮೆರಿಕಾದಲ್ಲಿದ್ದಾಗಲೇ ಲಂಡನಿನಿಂದ ಕೃಷ್ಣ ಮೆನನ್, "ಅಮೆರಿಕಾದ ಅಪಾಯವನ್ನರಿತ ರಷ್ಯಾ ಹೊಸ ಪರಮಾಣು ಕಾರ್ಯಕ್ರಮವನ್ನು ಆಯೋಜಿಸಿದೆ" ಎಂದು ಹೇಳಿಕೆಯನ್ನು ಕೊಟ್ಟರು. ಅದೊಂದು ಹೇಳಿಕೆಯಿಂದ ಕೆನಡಿ ಭಾರತಕ್ಕೆ ಆರ್ಥಿಕ ನೆರವು ನೀಡಲಾರೆ ಎಂದು ಘೋಷಿಸಿದರು. ಅದೇ ಭೇಟಿಯಲ್ಲಿ ನೆಹರು, ಬೋಸ್ಟನ್ ಎಂಐಟಿಯ ವೀಕ್ಷಣೆಗೆಂದು ತೆರಳಿದರು. ಎಂಐಟಿಯಲ್ಲಿ 35 ಭಾರತೀಯ ಮೂಲದ ವಿದ್ಯಾರ್ಥಿಗಳಿದ್ದುದರಿಂದ ಕಾಲೇಜಿನ ಆಡಳಿತಾಧಿಕಾರಿ ಪುಟ್ಟ ಕಾರ್ಯಕ್ರಮವೊಂದನ್ನು ಏರ್ಪಡಿಸಿ ನೆಹರು ಅವರಿಂದ ಭಾಷಣ ಮಾಡಿಸಿದರು. ವಿದ್ಯಾರ್ಥಿಗಳ ಪರಿಚಯ ಮಾಡಿಕೊಂಡ ನೆಹರು ಭಾಷಣ ಮಾಡಿ ಎದ್ದು ಬಂದರು. ಸಭೆಯಲ್ಲಿ ಆದಾಗಲೇ ಹೆಸರುವಾಸಿಯಾಗಿದ್ದ ಬೋಸ್ ಕಂಪನಿಯ ಅಮರ್ ಬೋಸ್ ಮತ್ತು ಉದ್ಯಮಿ ಲಾರ್ಡ್ ಸ್ವರಾಜ್ ಪಾಲ್ ಇದ್ದರು. ಅವರೆಡೆಗೆ ಕಣ್ಣೆತ್ತಿಯೂ ನೋಡದ ನೆಹರು ಅವರನ್ನೆಂದೂ ಭಾರತದತ್ತ ಬರದಂತೆ ಮಾಡಿಬಿಟ್ಟರು! ಈ ಸನ್ನಿವೇಶ ಮತ್ತು ಮೋದಿಯವರ ವಿದೇಶಿ ಪ್ರವಾಸದಲ್ಲಿ ಭಾರತೀಯ ಸಂಜಾತರೊಡನೆ ಬೆರೆಯುವ, ಅವರನ್ನು ಭಾರತಕ್ಕೆ ಕರೆತರುವ ಪ್ರಯತ್ನವನ್ನೊಮ್ಮೆ ತುಲನೆ ಮಾಡಿಕೊಳ್ಳಬೇಕು.

ನೆಹರು ಕಾಲದಲ್ಲಿ ಸವಾಲುಗಳಿದ್ದವು. ಎಲ್ಲವನ್ನೂ ಹೊಸದಾಗಿ ಆರಂಭಿಸಬೇಕಾದ ಸಂದಿಗ್ಧತೆಯಿತ್ತು ಎನ್ನುವ ವಾದವನ್ನು ಹಲವರು ಮುಂದಿಡುತ್ತಾರೆ. ಏನಿರಲಿಲ್ಲ? ಕೇವಲ ಐದಾರು ಜಿಲ್ಲೆಗಳನ್ನು ಹೊಂದಿದ್ದ ಮೈಸೂರು ಸಂಸ್ಥಾನವೊಂದರಲ್ಲೇ ಎಲ್ಲವೂ ಇತ್ತು. ಅಂಥ ಅದೆಷ್ಟೋ ಪ್ರದೇಶಗಳು ದೇಶದಲ್ಲಿದ್ದವು. ಒಂದು ವೇಳೆ ಏನೇನೂ ಇರಲಿಲ್ಲ ಎಂದರೂ ನೆಹರು ನಂತರವಾದರೂ ಮಾಡಬೇಕಿತ್ತು. ಮೋದಿಯವರು ಅಧಿಕಾರಕ್ಕೆ ಬಂದ ಹೊತ್ತಲ್ಲೇನಿತ್ತು? ಯುಪಿಎ ಹಗರಣಗಳ ಸರಮಾಲೆಗಳನ್ನೇ ನಡೆಸಿ ದೇಶವನ್ನು ಬರಿದು ಮಾಡಿತ್ತು. ಪ್ರಾದೇಶಿಕತೆ, ನಕ್ಸಲಿಸಂ, ಭಯೋತ್ಪಾದನೆಗಳು ವಿವಿಧ ರೂಪಗಳನ್ನು ತಳೆದು ದೇಶವನ್ನು ಬಿಕ್ಕಟ್ಟಿಗೆ ಸಿಲುಕಿಸಿದ್ದವು. ಸಮಾನತೆಯ ಘೋಷಣೆಗಳು ಅರ್ಥ ಕಳೆದುಕೊಂಡಿದ್ದವು. ವಸಾಹತುಪ್ರಜ್ಞೆಯ ಕುಳಿಗೆ ಬಿದ್ದ ದೇಶ ಜಡಗೊಂಡಿತ್ತು. ಬಹುಶಃ ಯಾವ ಪ್ರಧಾನಮಂತ್ರಿಯ ಎದುರು ಕೂಡ ಅಂಥ ಸವಾಲುಗಳಿರಲಿಲ್ಲ. ನೆಹರು ಕಾಲದಲ್ಲಂತೂ ಇರಲೇ ಇಲ್ಲ. ಹಾಗಾಗಿ ನೆಹರು ಮುಂದೆ ಮೋದಿ ಸಾಧನೆಯನ್ನು ಮುಂದಿಟ್ಟರೆ ಪ್ರಮಾದವೇನೂ ಇಲ್ಲ. ಅದು ಭಾರತವನ್ನು ಅಳೆಯುವ ಸರಿಯಾದ ಕ್ರಮ. ಗಳಿಸಿದ ಸ್ವಾತಂತ್ರ್ಯವನ್ನು ಅನುಭವಿಸುವೆಡೆಗೆ ತಂದ ಮಹಾಕಥನ. ಇನ್ನುಳಿದಂತೆ ವಿದೇಶ ಪ್ರವಾಸದಲ್ಲಿ ನೆಹರು ಏನೇನು ಮಾಡಿದರೆಂಬುದಕ್ಕೆ ದಂತಕತೆಗಳು ಹಲವಿದೆ. ಏನೇ ಆದರೂ ನೆಹರು ವಿದೇಶ ಪ್ರವಾಸ ಮೋದಿಯವರ ವಿದೇಶ ಪ್ರವಾಸದಂತೆ ಇರಲಿಲ್ಲ, ಮಲೋನಿಗೆ ಮೆಲೋಡಿ ಕೊಟ್ಟಂತೆ ಖುಲ್ಲಂಖುಲ್ಲಾ ಇರಲಿಲ್ಲವೆಂಬುದು ಮಾತ್ರ ಸತ್ಯ. ಏಕೆಂದರೆ ಪ್ರವಾಸದಲ್ಲಿ ರಾಜತಾಂತ್ರಿಕತೆ ಇಲ್ಲದ ಮೇಲೆ ಬೇರೇನೊ ಒಂದು ಇರಲೇಬೇಕಲ್ಲ!

ಕನ್ನಡ ನಾಡನ್ನು ಆಳಲಿದೆ ಗುಲಾಮಿ ಭಾಷೆ

▸ **ರಾಜೇಶ್ವರಿ, ಮಂಡ್ಯ**

ಪ್ರಸ್ತುತ ವರ್ಷದಲ್ಲಿ ಕರ್ನಾಟಕ ಸರ್ಕಾರವು 15 ಜಿಲ್ಲೆಗಳ 4,134 ಕ್ಕಿಂತ ಹೆಚ್ಚು ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮದಲ್ಲಿ ಕಲಿಕೆಯನ್ನು ಪ್ರಾರಂಭಿಸಲು ನಿರ್ಧರಿಸಿ ಅದಕ್ಕೆ ಬೇಕಾದ ತಯಾರಿಯನ್ನು ಮಾಡಿಕೊಂಡಿದೆ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಕನ್ನಡ ಮಾಧ್ಯಮ ಶಾಲೆಗಳಲ್ಲಿ ಬೋಧಿಸಲು ನಿಯುಕ್ತಿಗೊಂಡ ಶಿಕ್ಷಕರಿಗೆ ಐದು ದಿನಗಳ ತರಬೇತಿ ಕೊಟ್ಟು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲು ನಿರ್ದೇಶನ ನೀಡಿದೆ. ದ್ವಿಭಾಷಾ ಮಾಧ್ಯಮ ಬೋಧನೆ ಎಂದಾಗ ಕನ್ನಡದಲ್ಲಿ ಬೋಧನೆ ಮಾಡುತ್ತಾರಲ್ಲವೇ, ಮಕ್ಕಳು ಕನ್ನಡವನ್ನೂ ಕಲಿಯುತ್ತಾರಲ್ಲವೇ ಎಂಬ ಪ್ರಶ್ನೆ ಸಹಜವಾಗಿ ಬರುವುದು. ಆದರೆ ಅದು ಹಾಗಿಲ್ಲ. ಮಕ್ಕಳ ಅನುಕೂಲಕ್ಕಾಗಿ ಇಂಗ್ಲಿಷ್ ಪಾಠವನ್ನು ಕನ್ನಡದಲ್ಲಿ ಅನುವಾದದ ರೀತಿ ಕೊಟ್ಟಿದ್ದಾರೆಯೇ ಹೊರತು ಮಕ್ಕಳ ಅಭಿವ್ಯಕ್ತಿ ಪೂರ್ಣವಾಗಿ ಇಂಗ್ಲೀಷ್‌ನಲ್ಲಿಯೇ ಆಗಬೇಕು! ಪ್ರಸ್ತುತ ವರ್ಷದಲ್ಲಿ ಸರ್ಕಾರಿ ಶಾಲೆಗಳಲ್ಲಿ ಆರಂಭವಾಗಿರುವ ಎಲ್‌ಕೆಜಿ, ಯುಕೆಜಿ ಮತ್ತು ಒಂದರಿಂದ ಐದನೇ ತರಗತಿ ಮಕ್ಕಳೆಲ್ಲರೂ ಓದು ಮತ್ತೆ ಬರವಣಿಗೆ ಇಂಗ್ಲಿಷ್ ಮಾಧ್ಯಮದಲ್ಲಿಯೇ ಆಗಬೇಕೆಂಬುದು ಸರ್ಕಾರದ ನಿರ್ಧಾರವಾಗಿದೆ. ಅದಕ್ಕೆ ಒಂದು ಉದಾಹರಣೆ ಎಂಬಂತೆ 4 ಮತ್ತು 5 ನೇ ತರಗತಿಯ ಪೂರ್ವ ಪರೀಕ್ಷೆ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿದ್ದರೂ ಉತ್ತರ ಇಂಗ್ಲಿಷಿನಲ್ಲಿ ಬರೆದರೆ 'ಎ' (ಅಚೀವ್ಡ್ / ಸಾಧಿಸಿದ) ಅಂತಲೂ ಕನ್ನಡದಲ್ಲಿ ಅಥವಾ ತಪ್ಪಾದ ಉತ್ತರಕ್ಕೆ 'ಬಿ' (ಸಾಧಿಸದ) ಎಂದು ಗ್ರೇಡ್ ನೀಡಲು ತರಬೇತಿಯಲ್ಲಿ ಮಾರ್ಗದರ್ಶನ ನೀಡಲಾಗಿದೆ. ಕಳೆದ ವರ್ಷ ಮೂರನೇ ತರಗತಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ಮಗು ನಾಲ್ಕನೇ ತರಗತಿಯ ಪೂರ್ವ ಪರೀಕ್ಷೆಯಲ್ಲಿ ಉತ್ತರವನ್ನು ಕನ್ನಡದಲ್ಲಿ ಬರೆದರೆ 'ಸಾಧಿಸದ ಮಗು' ಎಂದು ಎಸ್‌ಟಿಎಸ್‌ನಲ್ಲಿ ಮಗುವಿನ ಫಲಿತಾಂಶ ದಾಖಲಾಗುತ್ತದೆ.

ಉದಾ: 145– write in words. 145 ಅನ್ನು ಪದಗಳಲ್ಲಿ ಬರೆಯಿರಿ.

ಮಗು ಅದನ್ನು 'ಒಂದು ನೂರ ನಲವತ್ತೈದು' ಎಂದು ಸರಿಯಾದ ಉತ್ತರವನ್ನು ಕನ್ನಡದಲ್ಲಿ ಬರೆದರೆ ಉತ್ತರ ತಪ್ಪೆಂದು 'ಸಾಧಿಸದಿರುವ' ಗ್ರೇಡನ್ನು ಪಡೆಯುತ್ತದೆ. ಅಂದರೆ ಆ ಮಗು ಕಳೆದ ವರ್ಷ ಕನ್ನಡ ಮಾಧ್ಯಮದಲ್ಲಿ ಕಲಿತಿದ್ದೆಲ್ಲವೂ ತಪ್ಪು ಎಂದು ತೋರಿಸಿಕೊಟ್ಟಂತಾಗುತ್ತದೆ! ಕನ್ನಡದಲ್ಲಿ ಕಲಿಯುವುದು ತಪ್ಪು ಎಂದು ಮಗು ತಿಳಿಯುವಂತಾಗುತ್ತದೆ.

ದ್ವಿಭಾಷಾ ಮಾಧ್ಯಮದಿಂದಾಗುವ ದುಷ್ಪರಿಣಾಮಗಳು

ಮಗುವಿನ ಮೇಲಿನ ಪರಿಣಾಮ: ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ಕೊಡಬೇಕು ಎಂಬುದು ಎಲ್ಲಾ ಶಿಕ್ಷಣತಜ್ಞರ ಮತ್ತು ಮನೋವಿಜ್ಞಾನಿಗಳ ಅಭಿಪ್ರಾಯ. ಇಲ್ಲಿಯವರೆಗೂ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿಯೇ ಬೋಧಿಸುತ್ತಿದ್ದರು. ಆದರೆ ಈ ವರ್ಷ ಬೋಧನಾ ಮತ್ತು ಕಲಿಕಾ ಮಾಧ್ಯಮ ಬದಲಾಗುತ್ತಿದೆ. ಮಕ್ಕಳು ತಾವು ಕಲಿತಿರುವ ವಿಷಯಗಳನ್ನು ಅಭಿವ್ಯಕ್ತಿಸಲು ಇಂಗ್ಲಿಷ್ ಮಾಧ್ಯಮವನ್ನೇ ಬಳಸುವ ಅನಿವಾರ್ಯತೆ ಸೃಷ್ಟಿಸಲಾಗುತ್ತಿದೆ. ಇದರಿಂದ ಮಾತೃಭಾಷಾ ಅಭಿವ್ಯಕ್ತಿಯು ಕಮರಿ ಹೋಗುತ್ತದೆ. ಕಥೆ, ಕವಿತೆ, ಪ್ರಬಂಧಗಳ ರಚನೆಯಂತಹ ಸೃಜನಾತ್ಮಕತೆಯ ಬೆಳವಣಿಗೆ ನಿಂತುಹೋಗುತ್ತದೆ. ಕಲಿಕೆಯ ಆರಂಭದಲ್ಲೇ ಮಕ್ಕಳು ಪರಕೀಯ ಭಾಷೆ ಬಳಸಬೇಕಾಗಿರುವುದರಿಂದ ಸಹಜವಾಗಿಯೇ ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತವೆ. ಗಾಂಧೀಜಿಯವರಿಂದ ಹಿಡಿದು ಎಲ್ಲಾ ಶಿಕ್ಷಣ ತಜ್ಞರು ಮಾತೃಭಾಷೆಯ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಹೊತ್ತು ಕೊಟ್ಟಿದ್ದು ಇದೇ ದೃಷ್ಟಿಯಿಂದ. ನೈಜವಾಗಿ ತನ್ನ ಭಾಷೆಯಲ್ಲಿ ಕಲಿತು ಅರಳಬೇಕಾದ ಮಗುವನ್ನು ಯಾವುದೋ ಪರಭಾಷೆಯನ್ನು ತಂದು ಅದು ಕಮರುವಂತೆ ಮಾಡುವುದು ಎಷ್ಟು ಸರಿ? ಮಗುವಿಗೆ ಪ್ರಾಥಮಿಕ ಹಂತದಲ್ಲಿಯೇ ಇಂಗ್ಲೀಷ್‌ನಲ್ಲಿ ಓದಿ ಅದರಲ್ಲೇ ಅಭಿವ್ಯಕ್ತ ಮಾಡಬೇಕು ಎಂದು ಹೇಳಿದರೆ, ಅದು ಇಂಗ್ಲಿಷನ್ನೇ ಒಪ್ಪಿಕೊಂಡು ಅಪ್ಪಿಕೊಂಡರೆ ಕನ್ನಡ ಭಾಷೆ ಮೇಲೆ ಅದಕ್ಕೆ ಖಂಡಿತವಾಗಿಯೂ ಅಸಡ್ಡೆ ಬರುವುದು. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಶಿಕ್ಷಕರಿಗೆ 5 ದಿನಗಳ ತರಬೇತಿ ಕೊಟ್ಟು ಇಂಗ್ಲಿಷ್ ಮಾಧ್ಯಮ ಬೋಧನೆಗೆ ನಿರ್ದೇಶಿಸಿರುವುದರಿಂದ ಬೋಧನೆ ಮತ್ತು ಕಲಿಕೆ ಎರಡೂ ಪರಿಣಾಮಕಾರಿಯಾಗದೆ ಮಕ್ಕಳು ಕನ್ನಡವನ್ನು ಸರಿಯಾಗಿ ಕಲಿಯದೇ ಇಂಗ್ಲಿಷನ್ನು ಕಲಿಯದೇ ಎಡಬಿಡಂಗಿಗಳಾಗುವರು. ದ್ವಿಭಾಷಾ ಬೋಧನ ಮಾಧ್ಯಮದ ಯಾವುದೇ ತರಬೇತಿ ಪಡೆದಿಲ್ಲದ ಅತಿಥಿ ಶಿಕ್ಷಕರಿಂದ ಈ ಹೊಸ ಪ್ರಯೋಗ ಪರಿಣಾಮಕಾರಿಯಾಗಿ ಮಾಡಲು ಹೇಗೆ ಸಾಧ್ಯ? ಮಕ್ಕಳ ಮನಸ್ಸನ್ನು ಅರಳಿಸುವ ಶಿಕ್ಷಣವೇ ನಿಜವಾದ ಶಿಕ್ಷಣ ಎಂಬುದು ಕಾರಂತರ ಅಭಿಪ್ರಾಯ. ಆದರೆ ಇಲ್ಲಿ ಕನಸು ಮನಸು ಎರಡೂ ಕದಡುವುದು.

ಪ್ರತಿ ಬಾರಿಯೂ ಎಲ್ಲಾ ರೀತಿಯ ಯೋಜನೆಗಳನ್ನು ಸರ್ಕಾರಿ ಶಾಲೆಗಳ ಮಕ್ಕಳ ಮೇಲೆ ಪ್ರಯೋಗಿಸುವುದು ಯಾಕೆ? ಬಡ ಮಕ್ಕಳ ಹೆತ್ತವರು ಹೆಚ್ಚು ಶಿಕ್ಷಿತರಲ್ಲವೆಂದು ಮತ್ತು ಸರ್ಕಾರ ಏನೇ ಯೋಜನೆ ತಂದರೂ ಪ್ರಶ್ನಿಸುವುದಿಲ್ಲವೆಂದು ಈ ಧೋರಣೆಯೆ? ಆದ್ದರಿಂದಲೇ ನಲಿ ಕಲಿ, ಕಲಿ ನಲಿ, ಓದು ಕರ್ನಾಟಕ, ಓದುವೆ ನಾನು, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಗಣನೆ, ವಿದ್ಯಾಂಜಲಿ, ಗಣಿತ ಗಣಕ, ಪರಿಹಾರ ಬೋಧನೆ, ಈ ರೀತಿ ಬೇರೆ ಬೇರೆ ಹೆಸರಿನಲ್ಲಿ ಹೊಸ ಹೊಸ ಯೋಜನೆಗಳನ್ನು ತರಲಾಗುವುದು. ಒಂದು ಯೋಜನೆಗೆ ಶಿಕ್ಷಕರು ಮತ್ತು ಮಕ್ಕಳು ಹೊಂದಿಕೆಯಾಗುವ ಮೊದಲೇ ಮತ್ತೊಂದು ಯೋಜನೆ ಬರುವುದು. ಮಗುವಿಗೆ ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯಲಾಗುತ್ತಿಲ್ಲ. ಜೊತೆಗೆ ಶಿಕ್ಷಕರಿಗೂ ಯಾವುದನ್ನು ಬೋಧಿಸಬೇಕು, ಯಾವುದನ್ನು ಬಿಡಬೇಕು ಎಂಬ ಯೋಚನೆಯಲ್ಲಿಯೇ ವರ್ಷ ತುಂಬಿರುತ್ತೆ. ಈ ರೀತಿಯಾದಾಗ ಮಗುವಿನ ಕಲಿಕಾ ಮಟ್ಟ ಸಹಜವಾಗಿಯೇ ಕುಂಠಿತವಾಗುತ್ತದೆ. ಇಡೀ ಶಿಕ್ಷಣ ವ್ಯವಸ್ಥೆಯೇ ವಿಫಲಗೊಳ್ಳುವ ಸಾಧ್ಯತೆ ಇದೆ.

ಸಮಾಜದ ಮೇಲಾಗುವ ದುಷ್ಪರಿಣಾಮ: ದ್ವಿಭಾಷಾ ಮಾಧ್ಯಮ ಬೋಧನೆಯು ಹಳ್ಳಿಗಳಲ್ಲಿನ ಕಡಿಮೆ ವಿದ್ಯಾರ್ಥಿಗಳಿರುವ ಬಹುವರ್ಗ ಬೋಧನೆಯ ಶಾಲೆಗಳಿಗೆ ಅನ್ವಯ ಮಾಡಿಕೊಳ್ಳಲು ಕಷ್ಟ. ಕರ್ನಾಟಕ ಪಬ್ಲಿಕ್ ಶಾಲೆಯಂತಹ ಸಂಕೀರ್ಣ ಶಾಲೆಗಳಿಗೆ ಮಾತ್ರ ಹೇಳಿ ಮಾಡಿಸಿದಂಥದ್ದು. ಇದರಿಂದಾಗಿ ಅಲ್ಲಿನ ಮಕ್ಕಳು ಕೆಪಿಎಸ್‌ನಂತಹ ಶಾಲೆಗಳಿಗೆ ಹೋಗಲು ಇಷ್ಟಪಡುವರು. ಇಂತಹ 1000 ಕೆಪಿಎಸ್ ಶಾಲೆಗಳನ್ನು ಮುಂದಿನ ವರ್ಷಕ್ಕೆ ತೆರೆಯಬೇಕೆಂದು ಸರ್ಕಾರವಾಗಲೇ ಯೋಜಿಸಿ ಕಾರ್ಯಗತಗೊಳಿಸಿದೆ. ಹೀಗಾದಾಗ ಹಳ್ಳಿಯಲ್ಲಿನ ಒಂದೊಂದೇ ಶಾಲೆಗಳು ಮುಚ್ಚುತ್ತವೆ. ಶಾಲೆಗಳು ಮುಚ್ಚಿದರೆ ಆ ಹಳ್ಳಿಯಲ್ಲಿನ ಸಾಂಸ್ಕೃತಿಕ ಪರಂಪರೆಯೇ ನಶಿಸುತ್ತದೆ. ಕೆಪಿಎಸ್‌ನಂತಹ ಏಳೆಂಟು ಕಿಲೋಮೀಟರ್ ದೂರವಿರುವ ಶಾಲೆಗಳಿಗೆ ಪೋಷಕರು ಹೋಗುವುದಿಲ್ಲ. ಇಡೀ ಹಳ್ಳಿ ರಾಷ್ಟ್ರೀಯ ಹಬ್ಬಗಳಿಂದ, ಹಿರಿಯರ ನೆನಪುಗಳಿಂದ, ಜಾಗೃತಿ ಕಾರ್ಯಕ್ರಮಗಳಿಂದ ವಂಚಿತವಾಗುತ್ತದೆ. ಶಾಲೆಯಲ್ಲಿ ಕನ್ನಡಕ್ಕಿಂತ ಇಂಗ್ಲಿಷೇ ಶ್ರೇಷ್ಠ ಎಂದು ಮಕ್ಕಳಿಗೆ ಅನಿಸಿ ಕನ್ನಡ ಮಾತನಾಡುವ ಸಮಾಜವನ್ನು ನಿಕೃಷ್ಟವಾಗಿ ನೋಡುವ ಕಾಲ ಖಂಡಿತವಾಗಿಯೂ ಶುರುವಾಗುತ್ತದೆ.

ನಾಡು ನುಡಿಯ ಮೇಲಿನ ದುಷ್ಪರಿಣಾಮ: ಒಂದರಿಂದ ಐದನೇ ತರಗತಿಯವರೆಗೆ ದ್ವಿಭಾಷಾ ಮಾಧ್ಯಮದಲ್ಲಿ ಓದಿದರೂ 6ನೇ ತರಗತಿಯಿಂದ ಪೂರ್ಣವಾಗಿ ಇಂಗ್ಲಿಷ್ ಮಾಧ್ಯಮದಲ್ಲೇ ಬೋಧಿಸಲಾಗುತ್ತದೆ. ಪ್ರೌಢಶಾಲೆ, ಪದವಿಪೂರ್ವ, ಪದವಿ, ಸ್ನಾತಕೋತ್ತರ ಪದವಿಯನ್ನು ಇಂಗ್ಲಿಷಿನಲ್ಲೇ ಮುಂದುವರಿಸಲು ಮಗು ಇಚ್ಛಿಸುತ್ತದೆ. ಹೀಗಿರುವಾಗ ಗಣಿತ, ಸಮಾಜ, ವಿಜ್ಞಾನದಲ್ಲಿ ಬರುವಂತಹ ಕನ್ನಡದ ಪಾರಿಭಾಷಿಕ ಪದಗಳು ತಂತಾನೆ ಮಾಯವಾಗುತ್ತವೆ. ಮತ್ತು ಉನ್ನತ ಶಿಕ್ಷಣದಲ್ಲಿ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಳ್ಳುವವರು ಶೂನ್ಯವಾಗಿ ಬಿಡುವರು. ಹೀಗೆ ಮುಂದುವರೆದರೆ ಇನ್ನು ಹತ್ತು ಹನ್ನೆರಡು ವರ್ಷಗಳಲ್ಲಿ ಎಲ್ಲಾ ಕನ್ನಡ ವಿವಿಗಳನ್ನು, ಕನ್ನಡ ಅಧ್ಯಯನ ಸಂಸ್ಥೆಗಳನ್ನು ಮುಚ್ಚಬೇಕಾಗುತ್ತದೆ. ಕನ್ನಡ ಅಧ್ಯಯನ ಕೇಂದ್ರಗಳು ಯಾವುದೇ ವಿದ್ಯಾರ್ಥಿಗಳಿಲ್ಲದೆ ಖಾಲಿ ಹೊಡೆದು ಅಲ್ಲಿರುವ ಸಿಬ್ಬಂದಿಗಳನ್ನು ಬೇರೆ ಬೇರೆ ಕೆಲಸಕ್ಕೆ ಸರ್ಕಾರ ನಿಯೋಜಿಸಿದರೆ ಆಶ್ಚರ್ಯ ಪಡಬೇಕಿಲ್ಲ. ಕನ್ನಡದ ಬಳಕೆ ದಿನದಿನಕ್ಕೂ ಕಡಿಮೆಯಾಗುತ್ತಾ ಹೋಗುತ್ತದೆ. ಕ್ರಮೇಣ ಕನ್ನಡ ಮಾಧ್ಯಮ ಶಾಲೆಗಳು ಕರ್ನಾಟಕದಲ್ಲಿ ಮಾಯವಾಗಿ ಬಿಡುತ್ತವೆ. ಈಗಾಗಲೇ ಸರ್ಕಾರ ನಡೆಸುವ ವಸತಿ ಶಾಲೆಗಳು, ಮೊರಾರ್ಜಿ ದೇಸಾಯಿ, ಕಿತ್ತೂರಾಣಿ ಚೆನ್ನಮ್ಮ, ಆದರ್ಶ ಶಾಲೆಗಳಲ್ಲಿ ಪೂರ್ಣವಾಗಿ ಇಂಗ್ಲಿಷ್ ಮಾಧ್ಯಮ ಇದೆ. ಇರುವ ಸರ್ಕಾರಿ ಶಾಲೆಗಳಲ್ಲಿ ಈ ರೀತಿ ದ್ವಿಭಾಷಾ ಬೋಧನಾ ಮಾಧ್ಯಮದ ಹೆಸರಿನಲ್ಲಿ ಇಂಗ್ಲೀಷ್ ಬೋಧನಾ ಮಾಧ್ಯಮವನ್ನಾಗಿ ಮಾಡುವ ಅಗತ್ಯವೇನಿತ್ತೆ? ಇಂಗ್ಲೀಷ್ ಕಲಿಯದ ಜಪಾನ್, ಜರ್ಮನಿ, ಚೀನಾದಂತಹ ದೇಶಗಳು ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಹೊಂದಿಲ್ಲವೇ?

ಕಲೆಯ ಹೆಸರಿನಲ್ಲಿ ಅಶ್ಲೀಲತೆ! ಮನರಂಜನಾ ಕ್ಷೇತ್ರದ ಮೇಲಿದೆ ಹೊಣೆಗಾರಿಕೆ

▸ **ನಂದಿನಿ ಎನ್.**



> ಮಹಿಳೆ ಎಂದರೆ ಕೇವಲ ದೇಹವಲ್ಲ. ಆಕೆ ಒಬ್ಬ ಸಂಪೂರ್ಣ ವ್ಯಕ್ತಿತ್ವ ಎಂಬುದನ್ನು ಮನರಂಜನಾ ಕ್ಷೇತ್ರ ಸದಾ ನೆನಪಿಡಬೇಕು.

ಇತ್ತೀಚಿನ ದಿನಗಳಲ್ಲಿ ಹಲವು ಸಿನಿಮಾಗಳು, ವೆಬ್ ಸರಣಿಗಳು ಮತ್ತು ದೃಶ್ಯ ಮಾಧ್ಯಮಗಳು ತಮ್ಮ ಕಥಾವಸ್ತುವಿಗಿಂತಲೂ ಕೆಲವು ವಿವಾದಾತ್ಮಕ ದೃಶ್ಯಗಳು ಮತ್ತು ಪಾತ್ರಗಳ ನಿರೂಪಣೆಯ ಕಾರಣದಿಂದ ಹೆಚ್ಚು ಚರ್ಚೆಗೆ ಒಳಗಾಗುತ್ತಿವೆ. ಅದರಲ್ಲೂ ಒಟಿಟಿ ಫ್ಲಾಟ್‌ಫಾರ್ಮ್ ಬಂದ ನಂತರ ಮಹಿಳೆಯರನ್ನು ಹೇಗೆ ತೋರಿಸಲಾಗುತ್ತಿದೆ ಎಂಬ ಪ್ರಶ್ನೆ ಸಮಾಜದಲ್ಲಿ ಗಂಭೀರ ಚರ್ಚೆಗಳಿಗೆ ಕಾರಣವಾಗಿದೆ. ಇತ್ತೀಚೆಗೆ ನಿರ್ದೇಶಕ ಬುಚ್ಚಿ ಬಾಬು ಅವರ ಪೆದ್ದಿ ಚಿತ್ರದ ಪ್ರಚಾರ ಮತ್ತು ಸಿನಿಮಾದ ಕೆಲವು ದೃಶ್ಯಗಳಲ್ಲಿ ನಾಯಕಿ ಜಾಹ್ನವಿ ಕಪೂರ್ ಅವರ ಪಾತ್ರದ ಚಿತ್ರಣದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದೆ.

ಸಿನಿಮಾ ಕೇವಲ ಮನರಂಜನೆಯ ಮಾಧ್ಯಮವಲ್ಲ. ಅದು ಸಮಾಜದ ಮನಸ್ಥಿತಿಯನ್ನು ಪ್ರತಿಬಿಂಬಿಸುವುದರ ಜತೆಗೆ ಸಮಾಜದ ಆಲೋಚನೆಗಳನ್ನು ರೂಪಿಸುವ ಶಕ್ತಿಯನ್ನೂ ಹೊಂದಿದೆ. ಒಂದು ಸಿನಿಮಾ ಅಥವಾ ವೆಬ್ ಸರಣಿ ಲಕ್ಷಾಂತರ ಜನರನ್ನು ತಲುಪುತ್ತದೆ. ಅದರಲ್ಲೂ ಯುವ ಜನತೆ ಮತ್ತು ಮಕ್ಕಳ ಮೇಲೆ ಅದು ಬೀರುವ ಪ್ರಭಾವವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಚಿತ್ರರಂಗದಲ್ಲಿ ಕಾಣಿಸಿಕೊಳ್ಳುತ್ತಿರುವ ಕೆಲವು ವಿವಾದಿತ ದೃಶ್ಯಗಳು, ಮಹಿಳೆಯರ ಚಿತ್ರಣ ಮತ್ತು ದೇಹಪ್ರದರ್ಶನದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ಹೆಚ್ಚಾಗುತ್ತಿರುವುದು. ಕಥೆಗೆ ಇಂತಹ ದೃಶ್ಯಗಳು ನಿಜವಾಗಿಯೂ ಅಗತ್ಯವಿತ್ತೇ? ಮಹಿಳೆಯರನ್ನು ಹೇಗೆ ಬೇಕಾದರೂ ಚಿತ್ರಿಸುವ ಹಕ್ಕು ಚಿತ್ರರಂಗಕ್ಕಿದೆಯೇ? ಎಂಬ ಪ್ರಶ್ನೆಗಳು ಸಮಾಜದ ವಿವಿಧ ವಲಯಗಳಿಂದ ಕೇಳಿಬರುತ್ತಿವೆ.

ಚಿತ್ರರಂಗವು ಸಮಾಜದ ಪ್ರತಿಬಿಂಬವೆನ್ನುವುದೇನೋ ಸರಿ. ಆದರೆ ಕೆಲವೊಮ್ಮೆ ಸಮಾಜದಲ್ಲಿರುವ ಪೂರ್ವಗ್ರಹಗಳನ್ನು ಪ್ರಶ್ನಿಸುವ ಬದಲು ಅವನ್ನೇ ಮತ್ತಷ್ಟು ಬಲಪಡಿಸುವ ಕೆಲಸವನ್ನು ಚಿತ್ರಗಳು ಮಾಡುತ್ತವೆ ಎಂಬ ಆರೋಪವೂ ಕೇಳಿ ಬರುತ್ತದೆ. ವಿಶೇಷವಾಗಿ ಮಹಿಳಾ ಪಾತ್ರಗಳನ್ನು ಕೇವಲ ಆಕರ್ಷಣೆಯ ವಸ್ತುವಾಗಿ ಅಥವಾ ವಾಣಿಜ್ಯ ಯಶಸ್ಸಿಗಾಗಿ ಬಳಸಲಾಗುತ್ತಿದೆ ಎಂಬ ಟೀಕೆ ಹೊಸದೇನಲ್ಲ. ಪೆದ್ದಿ ಚಿತ್ರದ ಕುರಿತು ನಡೆಯುತ್ತಿರುವ ಚರ್ಚೆಯ ಕೇಂದ್ರಬಿಂದು ಕಥೆ ಅಥವಾ ಅಭಿನಯವಲ್ಲ. ಬದಲಾಗಿ ಕೆಲವು ದೃಶ್ಯಗಳಲ್ಲಿ ಬಳಸಿರುವ ಕ್ಯಾಮೆರಾ ಕೋನಗಳು ಮತ್ತು ನಾಯಕಿಯ ದೇಹದ ಭಾಗಗಳಿಗೆ ಹೆಚ್ಚು ಒತ್ತು ನೀಡಿ ಚಿತ್ರಿಸಿರುವ ರೀತಿ. ಹಲವರು ಇದನ್ನು 'ಪುರುಷ ದೃಷ್ಟಿಕೋನ'ಕ್ಕೆ (ಮೇಲ್ ಗೇಜ್) ಉದಾಹರಣೆಯಾಗಿ ನೋಡುತ್ತಿದ್ದಾರೆ. ಅಂದರೆ, ಮಹಿಳೆಯನ್ನು ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ಅಲ್ಲದೇ, ಪುರುಷ ಪ್ರೇಕ್ಷಕರ ದೃಷ್ಟಿಯಿಂದ ನೋಡಲಾಗುತ್ತಿದೆ. ಮಹಿಳೆಯನ್ನು ಆಕರ್ಷಕ ವಸ್ತುವಾಗಿ ನಿರೂಪಿಸುವ ಪ್ರವೃತ್ತಿ ಹಿಂದಿನಿಂದಲೂ ಇದೆಯಾದರೂ ಅದಕ್ಕೊಂದು ಮಿತಿ ಇದ್ದೇ ಇದೆ. ಇನ್ನು ಚಿತ್ರರಂಗದ ಪರವಾಗಿ ಮಾತನಾಡುವವರು, ಇದು ನಿರ್ದೇಶಕರ ಸೃಜನಾತ್ಮಕ ಸ್ವಾತಂತ್ರ್ಯದ ಭಾಗ ಎಂದು ವಾದಿಸುತ್ತಾರೆ. ಕಥೆಯ ಬೇಡಿಕೆ, ಪಾತ್ರದ ಸ್ವಭಾವ ಮತ್ತು ದೃಶ್ಯದ ಸನ್ನಿವೇಶಕ್ಕೆ ಅನುಗುಣವಾಗಿ ಚಿತ್ರೀಕರಣ ಮಾಡಲಾಗಿದೆ ಎಂದು ಸಮರ್ಥಿಸಿಕೊಳ್ಳುವ ಗುಂಪು ಯಾವಾಗಲೂ ಇರುತ್ತದೆ. ಕಲಾತ್ಮಕ ಅಭಿವ್ಯಕ್ತಿಯ ಮೇಲೆ ಅನಗತ್ಯ ನಿರ್ಬಂಧ ಹೇರಬಾರದು ಎಂಬ ಅಭಿಪ್ರಾಯವೂ ಇದೆ. ಆದರೆ ಪ್ರಶ್ನೆ ಉದ್ಭವಿಸುವುದು ಇಲ್ಲೇ. ಕಥೆಗೆ ಅಗತ್ಯವಿಲ್ಲದಿದ್ದರೂ ಮಹಿಳೆಯ ದೇಹವನ್ನು ನಿರ್ದಿಷ್ಟ ಕೋನಗಳಿಂದ ಕೇಂದ್ರೀಕರಿಸಿ ಪ್ರದರ್ಶಿಸುವುದು ಕಲಾತ್ಮಕತೆಯ ಭಾಗವೇ? ಅಥವಾ ಪ್ರೇಕ್ಷಕರ ಗಮನ ಸೆಳೆಯುವ ವಾಣಿಜ್ಯ ತಂತ್ರವೇ? ಒಂದು ಪಾತ್ರದ ವ್ಯಕ್ತಿತ್ವ, ಆಕೆಯ ಆಲೋಚನೆಗಳು ಮತ್ತು ಜೀವನ ಹೋರಾಟಗಳಿಗಿಂತ ದೈಹಿಕ ಸೌಂದರ್ಯಕ್ಕೆ ಹೆಚ್ಚು ಒತ್ತು ನೀಡಿದಾಗ ಅದು ಕಲಾತ್ಮಕತೆ ಎನಿಸಿಕೊಳ್ಳುವುದಿಲ್ಲ. ಕಲಾಭಿವ್ಯಕ್ತಿಯಲ್ಲಿ ಸೌಂದರ್ಯಕ್ಕೆ ಸ್ಥಾನವಿದೆಯೇ ಹೊರತು ಅಶ್ಲೀಲತೆಗೆ ಇಲ್ಲ. ಅಶ್ಲೀಲತೆ ಇದ್ದಲ್ಲಿ ಕಲಾತ್ಮತೆಗೆ ಜಾಗವಿಲ್ಲ. ಜೊತೆಗೆ ಅಶ್ಲೀಲತೆಗೆ ಕಲಾತ್ಮಕತೆಯ ಸಮರ್ಥನೆಯನ್ನು ಮಾಡುವುದು ಸಮಾಜದಲ್ಲಿ ಮಹಿಳೆಯರ ಬಗ್ಗೆ ಇರುವ ದೃಷ್ಟಿಕೋನದ ಮೇಲೆ ಮೋಸ ಮಾಡಿದಂತೆ.

ವಿಶೇಷವಾಗಿ ಯುವಜನರು ಮತ್ತು ವಯಸ್ಕರು ಚಿತ್ರಗಳನ್ನು ಕೇವಲ ಮನೋರಂಜನೆಗಾಗಿ ಅಷ್ಟೇ ನೋಡು ವುದಿಲ್ಲ. ಬದಲಾಗಿ ಸಾಮಾಜಿಕ ಕಲಿಕೆಯ ಮಾಧ್ಯಮವನ್ನಾಗಿಯೂ ಕಾಣುತ್ತಾರೆ. ಸಿನಿಮಾಗಳಲ್ಲಿ ಮಹಿಳೆಯರನ್ನು ಹೇಗೆ ತೋರಿಸಲಾಗುತ್ತದೆ ಎಂಬುದು ಅವರ ಮನಸ್ಸಿನಲ್ಲಿ ಮಹಿಳೆಯರ ಕುರಿತು ಒಂದು ಚಿತ್ರಣ ರೂಪಿಸಬಹುದು. ಆದ್ದರಿಂದ ಚಿತ್ರರಂಗದ ಸಾಮಾಜಿಕ ಹೊಣೆಗಾರಿಕೆಯ ಪ್ರಶ್ನೆ ಇಲ್ಲಿ ಮಹತ್ವ ಪಡೆಯುತ್ತದೆ. ಇದರ ಅರ್ಥ ಚಿತ್ರಗಳಲ್ಲಿ ಮಹಿಳೆಯರ ಸೌಂದರ್ಯವನ್ನು ತೋರಿಸಬಾರದು ಅಥವಾ ಪ್ರೇಮಕಥೆಗಳಿಗೆ ಅವಕಾಶ ಇರಬಾರದು ಎಂಬುದಲ್ಲ.

ಆದರೆ ಮಹಿಳೆಯರನ್ನು ಕೇವಲ ದೇಹದ ಅಂಗಾಂಗಗಳ ಮಟ್ಟಕ್ಕೆ ಸೀಮಿತಗೊಳಿಸದೆ, ಅವರ ವ್ಯಕ್ತಿತ್ವ, ಸಾಮರ್ಥ್ಯ ಹಾಗೂ ಕಥೆಯಲ್ಲಿನ ಮಹತ್ವವನ್ನು ಸಮರ್ಥವಾಗಿ ಪ್ರತಿಬಿಂಬಿಸಬಹುದು. ಕಳೆದ ಕೆಲವು ವರ್ಷಗಳಿಂದ ಭಾರತೀಯ ಚಿತ್ರರಂಗದಲ್ಲಿ ಬಲಿಷ್ಠ ಮಹಿಳಾ ಪಾತ್ರಗಳನ್ನು ನೀಡುವ ಪ್ರಯತ್ನಗಳು ಹೆಚ್ಚಾಗಿವೆ. ಆದಾಗ್ಯೂ ಕೆಲವು ವಾಣಿಜ್ಯ ಚಿತ್ರಗಳಲ್ಲಿ ಇನ್ನೂ ಹಳೆಯ ಮಾದರಿಯ ನಿರೂಪಣೆ ಮುಂದುವರೆದಿವೆ. ಇದೇ ಕಾರಣಕ್ಕೆ ಪೆದ್ದಿ ಚಿತ್ರದಂತಹ ವಿವಾದಗಳು ಕೇವಲ ಒಂದು ಚಿತ್ರದ ಕುರಿತ ಚರ್ಚೆಯಾಗದೆ, ಚಿತ್ರರಂಗದಲ್ಲಿ ಮಹಿಳೆಯರ ಸ್ಥಾನಮಾನ ಮತ್ತು ನಿರೂಪಣೆಯ ಕುರಿತ ದೊಡ್ಡ ಸಂವಾದಕ್ಕೆ ಕಾರಣವಾಗುತ್ತದೆ. ಒಬ್ಬ ಮಹಿಳೆ ಕಲಾವಿದೆಯಾಗಿ ಗೌರವ ಪಡೆಯಬೇಕೆ? ಅಥವಾ ಕೇವಲ ಆಕರ್ಷಣೆಯ ವಸ್ತುವಾಗಿ ಬಳಸಲ್ಪಡಬೇಕೆ? ಎಂಬುದರ ಕುರಿತು ಸಮಾಜ ಮತ್ತು ಚಿತ್ರರಂಗ ಎರಡೂ ಆತ್ಮಾವಲೋಕನ ಮಾಡಬೇಕಿದೆ.

ಕಲೆಗೆ ಸ್ವಾತಂತ್ರ್ಯ ಇರಬೇಕು. ಆದರೆ, ಆ ಸ್ವಾತಂತ್ರ್ಯದ ಜತೆಗೆ ಸಾಮಾಜಿಕ ಜವಾಬ್ದಾರಿಯೂ ಇರಬೇಕು. ಮಹಿಳೆಯರನ್ನು ಅವರ ಪ್ರತಿಭೆ, ಪರಿಶ್ರಮ ಮತ್ತು ವ್ಯಕ್ತಿತ್ವದ ಆಧಾರದ ಮೇಲೆ ಗೌರವಿಸುವ ಚಿತ್ರರಂಗವೇ ಆರೋಗ್ಯಕರ ಸಮಾಜದ ಪ್ರತಿಬಿಂಬವಾಗುತ್ತದೆ.

ಮಹಿಳೆ ಎಂದರೆ ಕೇವಲ ದೇಹವಲ್ಲ. ಆಕೆ ಒಬ್ಬ ಸಂಪೂರ್ಣ ವ್ಯಕ್ತಿತ್ವ, ಸೃಜನಶೀಲತೆ ಮತ್ತು ಸಾಮರ್ಥ್ಯದ ಪ್ರತೀಕ ಎಂಬುದನ್ನು ಮನರಂಜನಾ ಕ್ಷೇತ್ರ ಸದಾ ನೆನಪಿಡಬೇಕು. ಸೃಜನಾತ್ಮಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಹೊಣೆಗಾರಿಕೆ ಎರಡೂ ಪ್ರಜಾಪ್ರಭುತ್ವ ಸಮಾಜದಲ್ಲಿ ಸಮಾನವಾಗಿ ಮುಖ್ಯ. ಚಿತ್ರರಂಗಕ್ಕೆ ಮನರಂಜನೆಯ ಜತೆಗೆ ಸಮಾಜದ ಮೌಲ್ಯಗಳನ್ನು ರೂಪಿಸುವ ಹೊಣೆಗಾರಿಕೆಯೂ ಇದೆ.

ಆದ್ದರಿಂದ ಮಹಿಳೆಯರನ್ನು ಗೌರವಯುತವಾಗಿ, ಸಮಗ್ರ ವ್ಯಕ್ತಿತ್ವ ಹೊಂದಿದ ಪಾತ್ರಗಳಾಗಿ ಚಿತ್ರಿಸುವ ಪ್ರಯತ್ನಗಳು ಹೆಚ್ಚಾದರೆ ಮಾತ್ರ ಕಲಾತ್ಮಕತೆಯೂ ಉಳಿಯುತ್ತದೆ. ಸಾಮಾಜಿಕ ಜವಾಬ್ದಾರಿಯೂ ನೆರವೇರುತ್ತದೆ. ಪೆದ್ದಿ ಚಿತ್ರದ ಸುತ್ತಲಿನ ಚರ್ಚೆಯು ಇದೇ ಪ್ರಶ್ನೆಯನ್ನು ಮತ್ತೊಮ್ಮೆ ನಮ್ಮ ಮುಂದಿಟ್ಟಿದೆ.

ಸುದೀರ್ಘ ಸೇವೆ | ಜಾಗತಿಕ ನಾಯಕರ ಶುಭಾಶಯ

ನನ್ನ ಆತ್ಮೀಯ ಗೆಳೆಯ ಶ್ರೇಷ್ಠ ಪ್ರಧಾನಮಂತ್ರಿ

ಹೊಸದಿಲ್ಲಿ: ಸ್ವತಂತ್ರ ಭಾರತದಲ್ಲಿ ಅತ್ಯಂತ ಸುದೀರ್ಘ ಅವಧಿಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ದಾಖಲೆ ಬರೆದ ನರೇಂದ್ರ ಮೋದಿ ಅವರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಅಭಿನಂದನೆ ಸಲ್ಲಿಸಿದ್ದಾರೆ. ಪ್ರಧಾನಿ ಹುದ್ದೆಯಲ್ಲಿ 4,399 ದಿನಗಳನ್ನು ಪೂರೈಸಿರುವ ಮೋದಿಗೆ ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆ 'ಟ್ರುತ್ ಸೋಷಿಯಲ್' ಮೂಲಕ ಶುಭ ಹಾರೈಸಿರುವ ಟ್ರಂಪ್, ಮೋದಿಯವರನ್ನು ತಮ್ಮ ಆತ್ಮೀಯ ಗೆಳೆಯ ಹಾಗೂ ಶ್ರೇಷ್ಠ ಪ್ರಧಾನಿ ಎಂದು ಬಣ್ಣಿಸಿದ್ದಾರೆ. ಮೋದಿ ಸದೃಢ, ಆರೋಗ್ಯವಂತ ಮತ್ತು ಬುದ್ಧಿವಂತ ನಾಯಕರಾಗಿದ್ದು, ಅವರ ಮುಂದಿನ ದಿನಗಳು ಮತ್ತಷ್ಟು ಯಶಸ್ವಿಯಾಗಲಿ ಎಂದು ಹಾರೈಸಿದ್ದಾರೆ.

ಟ್ರಂಪ್ ಅವರ ಶುಭ ಹಾರೈಕೆಗೆ ಧನ್ಯವಾದ ಅರ್ಪಿಸಿರುವ ಮೋದಿ, ಭಾರತ-ಅಮೆರಿಕ ನಡುವಿನ ಸಮಗ್ರ ಜಾಗತಿಕ ಕಾರ್ಯತಂತ್ರದ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸಲು ಎದುರು ನೋಡುತ್ತಿರುವುದಾಗಿ ತಿಳಿಸಿದ್ದಾರೆ.

ನೆತನ್ಯಾಹು ಶ್ಲಾಘನೆ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಮೋದಿಯನ್ನು ಶ್ಲಾಘಿಸಿದ್ದು, ತಮ್ಮ ಅಧಿಕಾರಾವಧಿಯಲ್ಲಿ ಮೋದಿ ಭಾರತವನ್ನು ಪರಿವರ್ತಿಸಿದ್ದಾರೆ ಮತ್ತು ಉಭಯ ದೇಶಗಳ ಬಾಂಧವ್ಯ ಹಿಂದೆಂದೂ ಇಷ್ಟೊಂದು ಗಟ್ಟಿಯಾಗಿರಲಿಲ್ಲ ಎಂದು ಹೇಳಿದ್ದಾರೆ. ಮೋದಿ ಅವಧಿಯಲ್ಲಿ 25 ಕೋಟಿ ಭಾರತೀಯರು ಬಡತನದಿಂದ ಹೊರಬಂದಿದ್ದಾರೆ, ಎಂದು ನೆತನ್ಯಾಹು ಉಲ್ಲೇಖಿಸಿದ್ದಾರೆ.

ಕ್ರಿಸ್ಟೋಫರ್ ಲಕ್ಸನ್ ಶುಭಾಶಯ : ಪ್ರಧಾನಿ ಮೋದಿ ಅವರಿಗೆ ಶುಭ ಹಾರೈಸಿದ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್, ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್‌ಟಿಎ) ತಲುಪಿಸಲು ಪ್ರಧಾನಿ ಮೋದಿಯವರೊಂದಿಗೆ ಕೆಲಸ ಮಾಡುವುದು ಅವರಿಗೆ ಬಹಳ ಸಂತೋಷವಾಗಿದೆ ಎಂದು ಹೇಳಿದರು. ಭಾರತದ ಅತಿ ದೀರ್ಘಾವಧಿಯ ಚುನಾಯಿತ ಪ್ರಧಾನಿಯಾಗಿ ಆಯ್ಕೆಯಾದ ನರೇಂದ್ರ ಅವರಿಗೆ ಅಭಿನಂದನೆಗಳು. ನ್ಯೂಜಿಲೆಂಡ್-ಭಾರತ ಮುಕ್ತ ವ್ಯಾಪಾರ ಒಪ್ಪಂದವನ್ನು ತಲುಪಿಸಲು ನಿಮ್ಮೊಂದಿಗೆ ಕೆಲಸ ಮಾಡುವುದು ಬಹಳ ಸಂತೋಷವಾಗಿದೆ, ಮತ್ತು ಮುಂದಿನ ವರ್ಷಗಳಲ್ಲಿ ನಮ್ಮ ಎರಡೂ ದೇಶಗಳು ಒಟ್ಟಾಗಿ ಕೆಲಸ ಮಾಡಬಹುದೆಂದು ನಾನು ಎದುರು ನೋಡುತ್ತಿದ್ದೇನೆ ಎಂದು ಲಕ್ಸನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ: ಪ್ರಜಾಪ್ರಭುತ್ವದ ಆದೇಶ ಮತ್ತು ಭಾರತದ ಬೆಳೆಯುತ್ತಿರುವ ಜಾಗತಿಕ ಪಾತ್ರವನ್ನು ಗಮನಿಸಿದ ಮಾರ್ಕ್ ಕಾರ್ನಿ ಭಾರತದ ದೀರ್ಘಕಾಲೀನ ಚುನಾಯಿತ ಪ್ರಧಾನಿಯಾದ ಮೋದಿ ಅವರನ್ನು ಅಭಿನಂದಿಸಿದ್ದಾರೆ. ಭಾರತ-ಕೆನಡಾ ಸಂಬಂಧಗಳನ್ನು ಮುನ್ನಡೆಸುವ ಮತ್ತು ಹಂಚಿಕೆಯ ಹಿತಾಸಕ್ತಿಗಳ ಮೇಲೆ ಒಟ್ಟಾಗಿ ಕೆಲಸ ಮಾಡುವ ಬಯಕೆಯನ್ನು ವ್ಯಕ್ತಪಡಿಸಿದರು.



ರಷ್ಯಾದಿಂದ ಅಭಿನಂದನೆಗಳು

ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು ಈ ಸಾಧನೆಗಾಗಿ ಮೋದಿ ಅವರನ್ನು ಅಭಿನಂದಿಸಿದರು, ಅವರ ಅಧಿಕಾರಾವಧಿಯಲ್ಲಿ ಲಕ್ಷಾಂತರ ಜನರನ್ನು ಬಡತನದಿಂದ ಹೊರತರಲಾಗಿದೆ ಮತ್ತು ಭಾರತವು ವಿಶ್ವದ ಪ್ರಮುಖ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ ಎಂದು ಹೇಳಿದರು. ಭಾರತ-ರಷ್ಯಾ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಭರವಸೆಯನ್ನು ರಷ್ಯಾ ವ್ಯಕ್ತಪಡಿಸಿತು.

ರಾಜ್ಯಸಭೆ: ಮಧ್ಯಪ್ರದೇಶದಲ್ಲಿ ಬಿಜೆಪಿಗೆ ಕ್ಲೀನ್‌ಸ್ವೀಪ್ ಗೆಲುವು

ಭೋಪಾಲ್: ಮಧ್ಯಪ್ರದೇಶದ ಎಲ್ಲಾ ಮೂರು ರಾಜ್ಯಸಭಾ ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಒಟ್ಟಾರೆ 23 ಅಭ್ಯರ್ಥಿಗಳು ಗುರುವಾರ ರಾಜ್ಯಸಭೆಗೆ ಆಯ್ಕೆಯಾಗಿದ್ದು, ಇದರಲ್ಲಿ 12 ಬಿಜೆಪಿ ಸಹಿತ ಒಟ್ಟು 20 ಎನ್‌ಡಿಎ ಅಭ್ಯರ್ಥಿಗಳಿದ್ದಾರೆ.

ಮಧ್ಯಪ್ರದೇಶದಲ್ಲಿ ಎಲ್ಲಾ ಮೂರು ರಾಜ್ಯಸಭಾ ಸ್ಥಾನಗಳಿಗೆ ಬಿಜೆಪಿಯ ರಜನೀಶ್ ಅಗರವಾಲ್, ತರುಣ್ ಚೌಗ್ ಮತ್ತು ಮಹೇಶ್ ಕೇವತ್ ಅವಿರೋಧ ಆಯ್ಕೆಯಾಗಿ ಕ್ಲೀನ್‌ಸ್ವೀಪ್ ಗೆಲುವು ಸಾಧಿಸಿದ್ದಾರೆ. ಗೆದ್ದಿರುವ ಬಿಜೆಪಿ ಅಭ್ಯರ್ಥಿಗಳಿಗೆ ಚುನಾವಣಾ ಆಯೋಗ(ಇಸಿಐ) ಗೆಲುವಿನ ಪ್ರಮಾಣಪತ್ರಗಳನ್ನು ವಿತರಿಸಿದೆ.

ಗುಜರಾತ್‌ನ ಎಲ್ಲಾ ನಾಲ್ವರು ಆಡಳಿತಾರೂಢ ಬಿಜೆಪಿಯ ರಾಜುಭಾಯ್ ಶುಕ್ಲಾ, ಮಾನ್‌ಸಿಂಗ್ ಪರ್ಮಾರ್, ಮುಕೇಶ್‌ಭಾಯ್ ರಾಥ್ವಾ ಮತ್ತು ಜಿತೇಂದ್ರ ಕಂಜಾರಿಯಾ ಅವಿರೋಧ ಆಯ್ಕೆಯಾಗಿದ್ದಾರೆ. ಗುಜರಾತ್‌ನಲ್ಲಿ ವಿರೋಧ ಪಕ್ಷ ಕಾಂಗ್ರೆಸ್ ಯಾವುದೇ ಅಭ್ಯರ್ಥಿಗಳ ನಾಮನಿರ್ದೇಶನ ಮಾಡಿರಲಿಲ್ಲ.

ರಾಜಸ್ಥಾನದ ಮೂರು ರಾಜ್ಯಸಭಾ ಅಭ್ಯರ್ಥಿಗಳೂ ಅವಿರೋಧ ಆಯ್ಕೆಯಾಗಿದ್ದು, ಇವರಲ್ಲಿ ಸತೀಶ್ ಪೂನಿಯಾ ಮತ್ತು ಅಲ್ಕಾ ಗುರ್ಜಾರ್ ಬಿಜೆಪಿಯವರಾಗಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ನೀರಜ್ ಡಾಂಗಿ ಅವರೂ ಅವಿರೋಧ ಆಯ್ಕೆಯಾಗಿದ್ದಾರೆ. ಆಂಧ್ರಪ್ರದೇಶದ ಎಲ್ಲಾ ನಾಲ್ವರು ಎನ್‌ಡಿಎ ಅಭ್ಯರ್ಥಿಗಳೂ, ಮೇಘಾಲಯದಲ್ಲಿ ಮುಖ್ಯಮಂತ್ರಿ ಕೊನರಾಡ್ ಸಂಗ್ಮಾ ಸಹೋದರ ಎನ್‌ಡಿಎ ಅಭ್ಯರ್ಥಿ ಜೇಮ್ಸ್ ಸಂಗ್ಮಾ ಮತ್ತು ಅರುಣಾಚಲ ಪ್ರದೇಶ ಬಿಜೆಪಿ ಅಭ್ಯರ್ಥಿ ಟಾಯಿ ಟಗಕ್ ಅವಿರೋಧ ಆಯ್ಕೆಯಾಗಿದ್ದಾರೆ. ಮಹಾರಾಷ್ಟ್ರ, ಮಣಿಪುರ, ತಮಿಳುನಾಡು ಮತ್ತು ಒಡಿಶಾ ರಾಜ್ಯಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.



ಎಥನಾಲ್ ಮಿಶ್ರಣದತ್ತ ನೀತಿ

ಕೇಂದ್ರ ಸರ್ಕಾರ ಶೇ.22ರಿಂದ ಶೇ.30ರಷ್ಟು ಎಥನಾಲ್ ಹೊಂದಿರುವ ಪೆಟ್ರೋಲ್ ಮಿಶ್ರಣಗಳ ಮೇಲಿನ ಅಬಕಾರಿ ಸುಂಕವನ್ನು ಸಂಪೂರ್ಣವಾಗಿ ತೆಗೆದುಹಾಕಿದೆ. ಇತ್ತೀಚೆಗಷ್ಟೇ ಇ22, ಇ25, ಇ27 ಮತ್ತು ಇ30 ಇಂಧನಗಳ ಗುಣಮಟ್ಟಕ್ಕೆ ಸರ್ಕಾರ ಅಧಿಕೃತ ಒಪ್ಪಿಗೆ ನೀಡಿತ್ತು ಹಾಗೂ ಆಯ್ದ ಮಾರುಕಟ್ಟೆಗಳಲ್ಲಿ ಇ85 ಪೆಟ್ರೋಲ್ ಬಿಡುಗಡೆ ಮಾಡಿತ್ತು. ಇದರ ಬೆನ್ನಲ್ಲೇ ಈ ಪ್ರಮುಖ ತೀರ್ಮಾನ ಹೊರಬಿದ್ದಿದೆ. ಹೆಚ್ಚಿನ ಎಥನಾಲ್ ಮಿಶ್ರಿತ ಇಂಧನಗಳನ್ನು ಉತ್ಪಾದಿಸಲು ಮತ್ತು ಮಾರಾಟ ಮಾಡಲು ತೈಲ ಕಂಪನಿಗಳನ್ನು ಪ್ರೋತ್ಸಾಹಿಸುವುದು ಈ ಹೊಸ ನಿಯಮದ ಮುಖ್ಯ ಉದ್ದೇಶ.

ಸುದ್ದಿ ಸಮಗ್ರ

ಪರ್ಯಾಯ ತೈಲಕ್ಕೆ ಭಾರತ ಉತ್ತೇಜನ

ಎಥನಾಲ್ ಮೇಲಿನ ಸುಂಕ ಮನ್ನಾ: ಇಂಧನ ತಂತ್ರಜ್ಞಾನದ ಮುಂದಿನ ಹಂತಕ್ಕೆ ಮುನ್ನುಡಿ

ಭಾರತ ಸರ್ಕಾರ ಶೇ.22ರಿಂದ 30ರಷ್ಟು ಎಥನಾಲ್ ಮಿಶ್ರಿತ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ರದ್ದುಗೊಳಿಸಿದೆ. ದೇಶದ ಜೈವಿಕ ಇಂಧನ ಯೋಜನೆಯನ್ನು ಉತ್ತೇಜಿಸಲು, ಕಚ್ಚಾ ತೈಲದ ಮೇಲಿನ ಅವಲಂಬನೆಯನ್ನು ತಗ್ಗಿಸಲು ಮತ್ತು ಹೆಚ್ಚಿನ ಪ್ರಮಾಣದ ಎಥನಾಲ್ ಬಳಕೆಯನ್ನು ಉತ್ತೇಜಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ಸುಂಕ ರದ್ದತಿಗೆ ಕಾರಣಗಳು

ಭಾರತ ತಾನು ಬಳಸುವ ಒಟ್ಟು ಕಚ್ಚಾ ತೈಲದಲ್ಲಿ ಸುಮಾರು ಶೇ.85ರಷ್ಟನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಈ ಭಾರಿ ಅವಲಂಬನೆಯಿಂದಾಗಿ, ಜಾಗತಿಕ ತೈಲ ಮಾರುಕಟ್ಟೆಯ ಏರಿಳಿತಗಳು ದೇಶದ ಆರ್ಥಿಕತೆಯ ಮೇಲೆ ನೇರ ಪರಿಣಾಮ ಬೀರುತ್ತಿವೆ. ಈ ಅಪಾಯವನ್ನು ತಗ್ಗಿಸುವ ಸಲುವಾಗಿ, ಕಳೆದ ದಶಕದಿಂದ ಸರ್ಕಾರ ಪೆಟ್ರೋಲ್‌ನಲ್ಲಿ ಎಥನಾಲ್ ಮಿಶ್ರಣದ ಪ್ರಮಾಣವನ್ನು ನಿರಂತರವಾಗಿ ಹೆಚ್ಚಿಸುತ್ತಾ ಬಂದಿದೆ. 2014ರಲ್ಲಿ ಎಥನಾಲ್ ಮಿಶ್ರಣದ ಪ್ರಮಾಣ ಕೇವಲ ಶೇ.1.5 ರಷ್ಟಿತ್ತು. ಆದರೆ ಇಂದು ದೇಶದ ಹಲವು ವಲಯಗಳಲ್ಲಿ ಈಗಾಗಲೇ ಸುಮಾರು ಶೇ.20ರಷ್ಟು ಮಿಶ್ರಣದ ಗುರಿಯನ್ನು ಅವಧಿಗಿಂತ ಮುಂಚಿತವಾಗಿಯೇ ಸಾಧಿಸಲಾಗಿದೆ. ಈಗ ಇ20 ಮಟ್ಟದಿಂದ ಇ22, ಇ25, ಇ27 ಮತ್ತು ಇ30 ಇಂಧನಗಳತ್ತ ಪರಿವರ್ತನೆಯನ್ನು ವೇಗಗೊಳಿಸಲು ಈ ಅಬಕಾರಿ ಸುಂಕ ವಿನಾಯಿತಿ ನೆರವಾಗಲಿದೆ. ಇದು ಇಂಧನ ಉತ್ಪಾದನಾ ವೆಚ್ಚವನ್ನು ತಗ್ಗಿಸಿ, ತೈಲ ಮಾರಾಟ ಕಂಪನಿಗಳಿಗೆ ಹೆಚ್ಚಿನ ಎಥನಾಲ್ ಬಳಸಲು ಪ್ರೋತ್ಸಾಹ ನೀಡುತ್ತದೆ.

ಪೆಟ್ರೋಲ್ ದರ ಏರಿಕೆ ಬೆನ್ನಲ್ಲೆ ಕ್ರಮ

ಪ್ರಸ್ತುತ ದೇಶದ ಬಹುತೇಕ ಪ್ರಮುಖ ನಗರಗಳಲ್ಲಿ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ 100 ರೂ.ಗಳಿಗಿಂತ ಮೇಲೆಯೇ ಮುಂದುವರಿದಿದೆ. ತಿಂಗಳಿಗೆ ಸುಮಾರು 50 ಲೀಟರ್ ಪೆಟ್ರೋಲ್ ಬಳಸುವ ಮಧ್ಯಮ ವರ್ಗದ ವಾಹನ ಸವಾರರೊಬ್ಬರ ಮಾಸಿಕ ಇಂಧನ ವೆಚ್ಚ 5,000 ರೂ. ದಾಟುತ್ತದೆ ಹಾಗೂ ಇದು ವಾರ್ಷಿಕವಾಗಿ 60,000 ರೂ.ಗಳಿಗಿಂತ ಅಧಿಕ.

ಗ್ರಾಹಕರಿಗೆ ತಕ್ಷಣದ ಉಳಿತಾಯ ಸಾಧ್ಯವೇ?

ಈ ಅಬಕಾರಿ ಸುಂಕ ವಿನಾಯಿತಿಯನ್ನು ನೇರವಾಗಿ ಗ್ರಾಹಕರಿಗೆ ನೀಡುವ ಬದಲಾಗಿ ಇಂಧನ ಉತ್ಪಾದಕರು ಮತ್ತು ತೈಲ ಕಂಪನಿಗಳಿಗೆ ನೀಡಲಾಗಿದೆ. ಈ ಕಾರಣದಿಂದಾಗಿ, ಸದ್ಯಕ್ಕೆ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಪೆಟ್ರೋಲ್ ಬೆಲೆಯಲ್ಲಿ ಯಾವುದೇ ತಕ್ಷಣದ ಕಡಿತ ಕಂಡುಬರುವುದಿಲ್ಲ. ಆದರೆ, ಸಂಪೂರ್ಣವಾಗಿ ಕಚ್ಚಾ ತೈಲದಿಂದ ತಯಾರಾಗುವ ಇಂಧನಕ್ಕೆ ಹೋಲಿಸಿದರೆ ಹೆಚ್ಚಿನ ಎಥನಾಲ್ ಹೊಂದಿರುವ ಇಂಧನಗಳ ಉತ್ಪಾದನಾ ವೆಚ್ಚ ಗಮನಾರ್ಹವಾಗಿ ಕಡಿಮೆ ಎನ್ನುವುದು ಸರ್ಕಾರದ ದೀರ್ಘಕಾಲದ ಲೆಕ್ಕಾಚಾರ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ದಿಲ್ಲಿಯಲ್ಲಿ ಪ್ರತಿ ಲೀಟರ್‌ಗೆ ಸುಮಾರು 82 ರೂ. ದರದಲ್ಲಿ ಇ85 ಇಂಧನವನ್ನು ಬಿಡುಗಡೆ ಮಾಡಿರುವುದು. ರಾಜಧಾನಿಯಲ್ಲಿ ಪ್ರಸ್ತುತ ಸಾಮಾನ್ಯ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ ಸುಮಾರು 102 ರೂ. ಇದ್ದು, ಇವೆರಡರ ನಡುವೆ ಲೀಟರ್‌ಗೆ ಸರಿಸುಮಾರು 20 ರೂ.ಗಳ ವ್ಯತ್ಯಾಸವಿದೆ. ಆದರೆ, ಪ್ರಸ್ತುತ ಭಾರತದ ರಸ್ತೆಗಳಲ್ಲಿ ಚಲಿಸುವ ಬಹುತೇಕ ವಾಹನಗಳು ಇ85 ಇಂಧನ ಬಳಕೆಗೆ ಪೂರಕವಾದ ತಾಂತ್ರಿಕ ಸಾಮರ್ಥ್ಯ ಹೊಂದಿಲ್ಲದ ಕಾರಣ, ಈ ಕಡಿಮೆ ಬೆಲೆಯ ಇ85 ಇಂಧನದ ಲಾಭ ತಕ್ಷಣವೇ ಹೆಚ್ಚಿನ ಸವಾರರಿಗೆ ಸಿಗುವುದಿಲ್ಲ.

ಎಥನಾಲ್ ಉತ್ಪಾದನೆಯಲ್ಲಿ ಪ್ರಗತಿ

ಕಳೆದ ಒಂದು ದಶಕದಲ್ಲಿ ಭಾರತದ ಎಥನಾಲ್ ಉದ್ಯಮ ಅತ್ಯಂತ ವೇಗವಾಗಿ ವಿಸ್ತರಣೆಗೊಂಡಿದೆ. ಸರ್ಕಾರದ ಅಂದಾಜಿನ ಪ್ರಕಾರ, ದೇಶದ ವಾರ್ಷಿಕ ಎಥನಾಲ್ ಉತ್ಪಾದನಾ ಸಾಮರ್ಥ್ಯ ಪ್ರಸ್ತುತ 1,700 ಕೋಟಿ ಲೀಟರ್‌ಗಳನ್ನು ದಾಟಿದೆ. ಪೆಟ್ರೋಲ್‌ನಲ್ಲಿ ಸದ್ಯದ ಶೇ.20ರಷ್ಟು ಎಥನಾಲ್ ಮಿಶ್ರಣವನ್ನು ಕಾಯ್ದುಕೊಳ್ಳಲು ಪ್ರತಿ ವರ್ಷ ಸುಮಾರು 1,016 ಕೋಟಿ ಲೀಟರ್ ಎಥನಾಲ್ ಅಗತ್ಯವಿರುತ್ತದೆ. ಕೈಗಾರಿಕಾ ಅಗತ್ಯಗಳನ್ನೂ ಒಳಗೊಂಡಂತೆ ದೇಶದ ಒಟ್ಟು ವಾರ್ಷಿಕ ಎಥನಾಲ್ ಬೇಡಿಕೆ ಸುಮಾರು 1,350 ಕೋಟಿ ಲೀಟರ್‌ಗಳನ್ನು ತಲುಪುವ ನಿರೀಕ್ಷೆಯಿದೆ. ಈ ವಲಯದ ಬೆಳವಣಿಗೆ, ಸಕ್ಕರೆ ಕಾರ್ಖಾನೆಗಳಿಗೆ ಮತ್ತು ದೇಶದ ರೈತರಿಗೆ ಹೆಚ್ಚುವರಿ ಆದಾಯದ ಮೂಲವನ್ನು ಸೃಷ್ಟಿಸಿದೆ, ಇದರಿಂದಾಗಿ ಎಥನಾಲ್ ಉದ್ಯಮದ ವಿಸ್ತರಣೆ ದೇಶೀಯ ಕೃಷಿ ಉತ್ಪಾದನೆಯೊಂದಿಗೆ ನೇರವಾಗಿ ಬೆಸೆದುಕೊಂಡಿದೆ.



ಯಶಸ್ಸು ಸಾಧ್ಯವೇ?

ಈ ಸುಂಕ ಮನ್ನಾ, ಆಮದು ಕಚ್ಚಾತೈಲದ ಮೇಲಿನ ಅವಲಂಬನೆ ಯಿಂದ ಮುಕ್ತವಾಗುವ ಮತ್ತು ದೇಶೀಯ ಇಂಧನ ಘಟಕಗಳ ಬಳಕೆಯನ್ನು ವಿಸ್ತರಿಸುವ ದೀರ್ಘಾವಧಿಯ ಕಾರ್ಯತಂತ್ರದಲ್ಲಿ ಇದು ಪ್ರಮುಖ ಹೆಜ್ಜೆ. ದೇಶಾದ್ಯಂತ ಎಥನಾಲ್ ಮಿಶ್ರಣಗಳು ಎಷ್ಟು ಲಭ್ಯವಾಗುತ್ತವೆ, ಫ್ಲೆಕ್ಸ್-ಫ್ಯುಯೆಲ್ ವಾಹನಗಳು ಎಷ್ಟು ಬೇಗ ಮಾರುಕಟ್ಟೆಗೆ ಪ್ರವೇಶಿಸುತ್ತವೆ ಎಂಬುದರ ಮೇಲೆ ಇದರ ಯಶಸ್ಸು ನಿರ್ಧರಿತವಾಗಿದೆ.

ದೇಶೀಯ ಇಂಧನ ವರ್ಸಸ್ ಆಮದು ಕಚ್ಚಾ ತೈಲ

ಆಮದಾಗುವ ಪೆಟ್ರೋಲ್‌ಗಿಂತ ಭಿನ್ನವಾಗಿ, ಎಥನಾಲ್ ಅನ್ನು ಭಾರತದ ಒಳಗಡೆಯೇ ಉತ್ಪಾದಿಸಲಾಗುತ್ತದೆ. ಕಚ್ಚಾ ತೈಲದ ಬೆಲೆಗಳು ಯಾವುದೇ ಕ್ಷಣದಲ್ಲಿ ತೀವ್ರವಾಗಿ ಏರಿಳಿಕೆಯಾಗಬಹುದು. ಆದರೆ ಎಥನಾಲ್ ಅನ್ನು ದೇಶೀಯ ಕೃಷಿ ಉತ್ಪನ್ನಗಳಿಂದ ತಯಾರಿಸಲಾಗುತ್ತದೆ. ಹೀಗಾಗಿ, ಹೆಚ್ಚಿನ ಪ್ರಮಾಣದ ಎಥನಾಲ್ ಮಿಶ್ರಣ ಮಾಡುವುದರಿಂದ ಪ್ರತಿ ಲೀಟರ್ ಇಂಧನಕ್ಕೆ ಬೇಕಾಗುವ ಆಮದು ಕಚ್ಚಾ ತೈಲದ ಪ್ರಮಾಣ ಕಡಿಮೆಯಾಗುತ್ತದೆ. ಈಗಾಗಲೇ ಶೇ.20 ರಷ್ಟು ಎಥನಾಲ್ ಮಿಶ್ರಣದಿಂದ ಇಂಧನದ ಐದನೇ ಒಂದು ಭಾಗ ಆಮದು ತೈಲದ ಬದಲಾಗಿ ದೇಶೀಯ ಮೂಲಗಳಿಂದಲೇ ಲಭ್ಯವಾಗುತ್ತಿದೆ.

ಕಿರುಸುದ್ದಿ

ಮೀನಾಕ್ಷಿ ನಾಮಪತ್ರ ತಿರಸ್ಕೃತ: ಇಂದು ವಿಚಾರಣೆ

ಹೊಸದಿಲ್ಲಿ: ಮಧ್ಯಪ್ರದೇಶದಿಂದ ರಾಜ್ಯಸಭೆಗೆ ತಮ್ಮ ನಾಮಪತ್ರ ತಿರಸ್ಕೃತವಾಗಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ನಡೆಸಲಿದೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಅತುಲ್ ಎಸ್. ಚಂದುರ್‌ಕರ್ ಅವರನ್ನೊಳಗೊಂಡ ಪೀಠವು, ನಡೆಯುತ್ತಿರುವ ಚುನಾವಣಾ ಪ್ರಕ್ರಿಯೆ ಮಧ್ಯೆ ಅರ್ಜಿ ವಿಚಾರಣೆ ಹೇಗೆ ನಡೆಸಲಾಗುತ್ತದೆ ಎಂದು ಪ್ರಶ್ನಿಸಿದೆ. ನಟರಾಜನ್ ಪರ ಹಾಜರಾದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಜನರ ಪ್ರಾತಿನಿಧ್ಯ ಕಾಯ್ದೆಯಲ್ಲಿ ಕ್ರಿಮಿನಲ್ ಪ್ರಕರಣವೊಂದನ್ನು ಬಹಿರಂಗಪಡಿಸಿಲ್ಲ ಎಂಬ ಆರೋಪವನ್ನು ಉಲ್ಲೇಖಿಸಿ ಚುನಾವಣಾ ಅಧಿಕಾರಿಯು ನಾಮಪತ್ರವನ್ನು ತಪ್ಪಾಗಿ ತಿರಸ್ಕರಿಸಿದ್ದಾರೆ ಎಂಬ ಆಧಾರದ ಮೇಲೆ ಅವರ ಅರ್ಜಿಯನ್ನು ಪಟ್ಟಿ ಮಾಡದ ಉಲ್ಲೇಖವನ್ನು ಪರಿಗಣಿಸುವಂತೆ ನ್ಯಾಯಪೀಠವನ್ನು ಒತ್ತಾಯಿಸಿದ್ದಾರೆ. ಮಧ್ಯಪ್ರದೇಶದ ಮೂರು ರಾಜ್ಯಸಭಾ ಸ್ಥಾನಗಳಿಗೆ ಜೂನ್ 18ರಂದು ಚುನಾವಣೆ ನಡೆಯಲಿದೆ.



ಶಾಲೆಯಿಂದ ಕೋಟಿ ನಗದು, ಆಕ್ಷೇಪಾರ್ಹ ವಸ್ತುಗಳ ವಶ

ಕಾಂಚ್ರಾಪಾರ: ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಇಂಗ್ಲಿಷ್ ಮಾಧ್ಯಮ ಶಾಲೆಯ ಮೇಲೆ ದಾಳಿ ನಡೆಸಿದ ಪೊಲೀಸರು, 1.77 ಕೋಟಿ ರೂಪಾಯಿ ಅಕ್ರಮ ನಗದು ಮತ್ತು ಆಕ್ಷೇಪಾರ್ಹ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಹಾರ್ನೆಟ್ ಇಂಗ್ಲಿಷ್ ಮೀಡಿಯಂ ಶಾಲೆಯ ಪ್ರಭಾರ ಪ್ರಾಂಶುಪಾಲ ಬಿಕಾಶ್ ಚಂದ್ರ ಪಾಲ್ ನೀಡಿದ ಆರ್ಥಿಕ ಅಕ್ರಮ, ದುರುಪಯೋಗ ಮತ್ತು ವಂಚನೆಯ ದೂರಿನ ಮೇರೆಗೆ ಈ ಕಾರ್ಯಾಚರಣೆ ನಡೆದಿದೆ. ಶಾಲೆಯ ಲಾಕರ್‌ನಲ್ಲಿ ಪತ್ತೆಯಾದ 500, 200 ಮತ್ತು 100 ರೂ.ಮುಖಬೆಲೆಯ ನೋಟುಗಳ ಕಟ್ಟುಗಳನ್ನು ಎಣಿಸಲು ತನಿಖಾಧಿಕಾರಿಗಳು ರಾತ್ರೋರಾತ್ರಿ ನಗದು ಎಣಿಕೆ ಯಂತ್ರಗಳನ್ನು ಬಳಸಿದ್ದಾರೆ. ಇದಾದ ನಂತರ ಶಾಲೆಯ 'ಸಿಕ್ ರೂಮ್' (ಅಸ್ವಸ್ಥರ ಕೊಠಡಿ) ಅನ್ನು ಪರಿಶೀಲಿಸಿದಾಗ, ಅದನ್ನು ಸಂಪೂರ್ಣ ಸುಸಜ್ಜಿತ ಮಲಗುವ ಕೋಣೆಯಾಗಿ ಪರಿವರ್ತಿಸಿರುವುದು ಬೆಳಕಿಗೆ ಬಂದಿದೆ. ಅಧಿಕಾರಿಗಳು ಅಲ್ಲಿನ ಅಲ್ಮಿರಾದಲ್ಲಿದ್ದ ಮದ್ಯದ ಬಾಟಲಿಗಳು ಮತ್ತು ಕಾಂಡೋಮ್ ಪ್ಯಾಕೆಟ್‌ಗಳನ್ನು ವಶಪಡಿಸಿಕೊಂಡಿದ್ದು, ಇದು ಪೋಷಕರು ಮತ್ತು ಸ್ಥಳೀಯ ರಾಜಕೀಯ ಮುಖಂಡರಲ್ಲಿ ಸುರಕ್ಷತೆಯ ಆತಂಕ ಮೂಡಿಸಿದೆ. ಪೊಲೀಸರು ನಗದು, ಶಾಲೆಯ ದಾಖಲೆಗಳು ಮತ್ತು ಕಂಪ್ಯೂಟರ್ ಹಾರ್ಡ್ ಡ್ರೈವ್‌ಗಳನ್ನು ವಿಧಿವಿಜ್ಞಾನ ವಿಶ್ಲೇಷಣೆಗಾಗಿ ವಶಪಡಿಸಿಕೊಂಡಿದ್ದಾರೆ. ಈ ಹಣದ ಮೂಲದ ಕುರಿತು ವಿಚಾರಣೆ ನಡೆಸಲು ಶಾಲೆಯ ಮುಖ್ಯ ಅಕೌಂಟೆಂಟ್ ಮತ್ತು ಸಹಾಯಕ ಅಕೌಂಟೆಂಟ್ ಅನ್ನು ವಶಕ್ಕೆ ಪಡೆಯಲಾಗಿದೆ.



ಭಾರತ-ನೇಪಾಳ ನಡುವೆ ವ್ಯವಹಾರವಿನ್ನು ಸುಲಭ

ಹೊಸದಿಲ್ಲಿ: ಭಾರತ ಮತ್ತು ನೇಪಾಳ ಎರಡೂ ದೇಶಗಳಾದ್ಯಂತ ಪ್ರಯಾಣಿಕರು ಮತ್ತು ವ್ಯವಹಾರಗಳಿಗೆ ಅನುಕೂಲತೆಯನ್ನು ಹೆಚ್ಚಿಸಲು ಪೀರ್-ಟು-ಪೀರ್ (ಪಿ2ಪಿ) ಗಡಿಯಾಚೆಗಿನ ರವಾನೆ ಕಾರ್ಯವಿಧಾನವನ್ನು ಪ್ರಾರಂಭಿಸಿವೆ ಎಂದು ಹಣಕಾಸು ಸಚಿವಾಲಯ ಗುರುವಾರ ತಿಳಿಸಿದೆ. ಹೊಸದಾಗಿ ಕಾರ್ಯರೂಪಕ್ಕೆ ಬಂದ ಈ ವ್ಯವಸ್ಥೆಯು ಭಾರತದ ಏಕೀಕೃತ ಪಾವತಿ ಇಂಟರ್‌ಫೇಸ್ (ಯುಪಿಐ) ಮತ್ತು ನೇಪಾಳದ ರಾಷ್ಟ್ರೀಯ ಪಾವತಿ ಇಂಟರ್‌ಫೇಸ್ (ಎನ್‌ಪಿಐ) ನಡುವೆ ನೇರ ಸಂಪರ್ಕವನ್ನು ಸ್ಥಾಪಿಸುತ್ತದೆ. ಎರಡೂ ರಾಷ್ಟ್ರಗಳ ನಾಗರಿಕರಿಗೆ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್‌ಗಳು ಮತ್ತು ಡಿಜಿಟಲ್ ವ್ಯಾಲೆಟ್‌ಗಳ ಮೂಲಕ ನೇರವಾಗಿ ನೈಜ-ಸಮಯದ ಹಣ ವರ್ಗಾವಣೆಯನ್ನು ಮಾಡಲು ಅನುವು ಮಾಡಿಕೊಡುತ್ತದೆ. ಯುಪಿಐ-ಎನ್‌ಪಿಐ ಸಂಪರ್ಕವು ಭಾರತ ಮತ್ತು ನೇಪಾಳದ ನಡುವೆ ಬಲವಾದ ಆರ್ಥಿಕ ಮತ್ತು ಡಿಜಿಟಲ್ ಸಂಬಂಧಗಳನ್ನು ಬೆಳೆಸುವ ಮೂಲಕ ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಪ್ರಮುಖ ಪ್ರಗತಿಯನ್ನು ಪ್ರತಿನಿಧಿಸುತ್ತದೆ. ಇದು ಪ್ರವೇಶಿಸಬಹುದಾದ, ಸುರಕ್ಷಿತ ಮತ್ತು ಕೈಗೆಟುಕುವ ಗಡಿಯಾಚೆಗಿನ ಪಾವತಿಗಳಿಗಾಗಿ ಪ್ರಾದೇಶಿಕ ಗುರಿಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಇದು ದೀರ್ಘಕಾಲದ ಸಾಮಾಜಿಕ ಮತ್ತು ಆರ್ಥಿಕ ಬಂಧಗಳನ್ನು ಬಲಪಡಿಸುತ್ತದೆ ಎಂದು ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ. ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾದ ಅಂತಾರಾಷ್ಟ್ರೀಯ ಅಂಗವಾದ ಎನ್‌ಪಿಸಿಐ ಇಂಟರ್‌ನ್ಯಾಷನಲ್ ಪೇಮೆಂಟ್ಸ್ ಲಿಮಿಟೆಡ್ ಮತ್ತು ನೇಪಾಳ ಕ್ಲಿಯರಿಂಗ್ ಹೌಸ್ ಲಿಮಿಟೆಡ್ ನಡುವಿನ ಸಹಯೋಗದ ಮೂಲಕ ತಾಂತ್ರಿಕ ಏಕೀಕರಣವನ್ನು ಕಾರ್ಯಗತಗೊಳಿಸಲಾಗಿದೆ.

ಟಿಎಂಸಿ ಬಿಕ್ಕಟ್ಟು: 3ನೇ ಸಂಸದ ರಾಜೀನಾಮೆ

ಕೋಲ್ಕತ್ತಾ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ರಾಜ್ಯಸಭಾ ಸದಸ್ಯ ಪ್ರಕಾಶ್ ಚಿಕ್ ಬರಾಯಿಕ್ ಗುರುವಾರ ರಾಜ್ಯಸಭೆ ಹಾಗೂ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಈ ವಾರ ಪಕ್ಷ ತೊರೆದ ಮೂರನೇ ಟಿಎಂಸಿ ಸಂಸದರೆನಿಸಿದ್ದಾರೆ. ಬರಾಯಿಕ್ ಅವರಿಗಿಂತ ಮೊದಲೇ, ರಾಜ್ಯಸಭಾ ಸದಸ್ಯರಾದ ಸುಖೇಂದು ಶೇಖರ್ ರಾಯ್ ಮತ್ತು ಸುಷ್ಮಿತಾ ದೇವ್ ಪಕ್ಷ ಹಾಗೂ ರಾಜ್ಯಸಭೆಗೆ ರಾಜೀನಾಮೆ ನೀಡಿದ್ದರು. ಪಶ್ಚಿಮ ಬಂಗಾಳದ ಜನಾಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ತೆಗೆದುಕೊಂಡಿದ್ದೇನೆ. ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಕಾರದಿಂದ ಕಾರ್ಯನಿರ್ವಹಿಸಬೇಕು ಎಂದೂ ಹೇಳಿದರು. ಟಿಎಂಸಿಯ ಹಲವು ನಾಯಕರು ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರಿಗೆ ಸಾರ್ವಜನಿಕವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಅಸನ್ಸೋಲ್ ಲೋಕಸಭಾ ಸದಸ್ಯ ಶತ್ರುಘ್ನ ಸಿನ್ಹಾ, ತಾವು ಟಿಎಂಸಿ ಮತ್ತು ಮಮತಾ ಬ್ಯಾನರ್ಜಿ ಅವರೊಂದಿಗೆ ಮುಂದುವರಿಯುವುದಾಗಿ ಹೇಳಿದ್ದಾರೆ. ರಾಜ್ಯಸಭಾ ಸದಸ್ಯ ಬಾಬುಲ್ ಸುಪ್ರಿಯೊ ತಾವು ಯಾವುದೇ ಬಣ ಅಥವಾ ಬೇರೆ ಪಕ್ಷ ಸೇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಲೋಕಸಭಾ ಸದಸ್ಯೆ ಪ್ರತಿಮಾ ಮಂಡಲ್, ಸಂಸದ ಸೌಗತ ರಾಯ್ ಕೂಡ ತಾವು ಪಕ್ಷದಲ್ಲೇ ಮುಂದುವರಿಯುವುದಾಗಿ ಹೇಳಿದ್ದಾರೆ.

ಅಭಿಷೇಕ್ ವಿರುದ್ಧ ಕಲ್ಯಾಣ್ ವಾಗ್ದಾಳಿ: ಹಿರಿಯ ನಾಯಕ ಹಾಗೂ ಲೋಕಸಭಾ ಸದಸ್ಯ ಕಲ್ಯಾಣ್ ಬ್ಯಾನರ್ಜಿ, ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರನ್ನು ಟೀಕಿಸಿದ್ದಾರೆ.

ಗ್ಯಾಂಗ್‌ಸ್ಟರ್ ಗರ್ಗ್ ಗಡಿಪಾರು ಪ್ರಕ್ರಿಯೆ ಪೂರ್ಣ

ಚಂಡೀಗಢ: ಜಾರ್ಜಿಯಾದಲ್ಲಿ ತಲೆಮರೆಸಿಕೊಂಡಿದ್ದ 34 ಕ್ರಿಮಿನಲ್ ಪ್ರಕರಣಗಳ ಆರೋಪಿ ಗ್ಯಾಂಗ್‌ಸ್ಟರ್ ವೆಂಕಟ್ ಗರ್ಗ್‌ನ ಗಡಿಪಾರು ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಹರ್ಯಾಣ ವಿಶೇಷ ಟಾಸ್ಕ್ ಫೋರ್ಸ್(ಎಸ್‌ಟಿಎಫ್) ನೀಡಿದ ಸಹಕಾರದಿಂದ ಕೇಂದ್ರ ತನಿಖಾ ಸಂಸ್ಥೆ(ಸಿಬಿಐ) ಮತ್ತು ಇನ್ನಿತರ ತನಿಖಾ ಸಂಸ್ಥೆಗಳು ಗ್ಯಾಂಗ್‌ಸ್ಟರ್ ವೆಂಕಟ್ ಗರ್ಗ್‌ನ ಗಡಿಪಾರು ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ಪೂರ್ವ ಯುರೋಪ್ ರಾಷ್ಟ್ರದಿಂದ ನಡೆಸಿದ ಮೊದಲ ಗಡಿಪಾರು ಇದಾಗಿದೆ. ಗರ್ಗ್ ಹರ್ಯಾಣದ ಅಂಬಾಲ ಜಿಲ್ಲೆಯ ಕುಖ್ಯಾತ ಗ್ಯಾಂಗ್‌ಸ್ಟರ್ ಆಗಿದ್ದಾನೆ. ಈತನ ಗಡಿಪಾರಿಗಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ), ಕೇಂದ್ರ ಗೃಹ ಸಚಿವಾಲಯ(ಎಂಎಚ್‌ಎ), ಹರ್ಯಾಣ ಪೊಲೀಸ್, ಇಂಟರ್‌ಪೋಲ್ ಮತ್ತು ಜಾರ್ಜಿಯಾ ಪ್ರಾಧಿಕಾರಗಳು ಪರಿಶ್ರಮ ವಹಿಸಿವೆ. 2026ರಲ್ಲಿ ಹರ್ಯಾಣ ವಿಶೇಷ ಟಾಸ್ಕ್ ಫೋರ್ಸ್ ಒಟ್ಟು 10 ಗಡಿಪಾರು ಪ್ರಕ್ರಿಯೆ ಪೂರ್ಣಗೊಳಿಸುವಲ್ಲಿ ಯಶಸ್ಸು ಸಾಧಿಸಿದೆ.

ಈಗಿನ ಆಧಾರದಲ್ಲೇ ವಿಂಗಡಣೆ | ಲೋಕಸಭೆ ಕ್ಷೇತ್ರ ವಿಂಗಡನೆಗೆ ಹೊಸ ಸೂತ್ರ

824 ಸ್ಥಾನಗಳಿಗೆ ಏರಿಕೆಗೆ ಇಎಸಿ-ಪಿಎಂ ಶಿಫಾರಸು

ಹೊಸದಿಲ್ಲಿ: ದೇಶದಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್‌ವಿಂಗಡನೆ ಕುರಿತು ಚರ್ಚೆಗಳು ತೀವ್ರವಾಗಿರುವ ನಡುವೆಯೇ ಪ್ರಧಾನಿ ಆರ್ಥಿಕ ಸಲಹಾ ಮಂಡಳಿ(ಇಎಸಿ-ಪಿಎಂ) ಪ್ರಕಟಿಸಿರುವ ಕಾರ್ಯ ವರದಿಯು ಲೋಕಸಭೆಯ ಸದಸ್ಯರ ಸಂಖ್ಯೆಯನ್ನು ಈಗಿನ 543ರಿಂದ 824ಕ್ಕೆ ಹೆಚ್ಚಿಸುವ ಮಹತ್ವದ ಪ್ರಸ್ತಾವವನ್ನು ಮುಂದಿಟ್ಟಿದೆ.

2009-2024ರ ಅವಧಿಯ ಲೋಕಸಭಾ ಕ್ಷೇತ್ರಗಳ ಗಾತ್ರ, ರಚನೆ ಹಾಗೂ ಪುನರ್‌ವಿಂಗಡನೆಯ ಅಗತ್ಯ ಎಂಬ ಶೀರ್ಷಿಕೆಯ ಈ ವರದಿಯಲ್ಲಿ ದೇಶದ 543 ಕ್ಷೇತ್ರಗಳಲ್ಲಿ 170 ಕ್ಷೇತ್ರಗಳನ್ನು ವಿಭಜಿಸಿ ಒಟ್ಟು 824 ಕ್ಷೇತ್ರಗಳನ್ನಾಗಿ ರೂಪಿಸುವ ಉದ್ದೇಶಿತ ಪುನರ್‌ವಿಂಗಡನೆ ಮಾದರಿಯನ್ನು ಶಿಫಾರಸು ಮಾಡಲಾಗಿದೆ. ಇದರಿಂದ ಮತದಾರರ ಪ್ರತಿನಿಧಿತ್ವ ಸುಧಾರಿಸುವುದರ ಜೊತೆಗೆ ಮತದಾನದ ಪ್ರಮಾಣವೂ ಹೆಚ್ಚಲಿದೆ ಎಂದು ವರದಿ ಹೇಳಿದೆ.

ಇಎಸಿ-ಪಿಎಂ ಸದಸ್ಯೆ ಡಾ. ಶಮಿಕಾ ರವಿ ಹಾಗೂ ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯ ಅರ್ಥಶಾಸ್ತ್ರ ಮತ್ತು ಯೋಜನಾ ಘಟಕದ ಮುದಿತ್ ಕಪೂರ್ ಅವರು ಸಿದ್ಧಪಡಿಸಿರುವ ಈ ಅಧ್ಯಯನದ ಪ್ರಕಾರ, 59 ಕ್ಷೇತ್ರಗಳನ್ನು ಎರಡು ಭಾಗಗಳಾಗಿ ಹಾಗೂ 111 ಕ್ಷೇತ್ರಗಳನ್ನು ಮೂರು ಭಾಗಗಳಾಗಿ ವಿಭಜಿಸಿದರೆ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದ ಪ್ರಮಾಣವು ಶೇ.0.3ರಿಂದ ಶೇ.2.3 ಅಂಕಗಳಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಇದರಿಂದ ಹೆಚ್ಚುವರಿಯಾಗಿ 90 ಲಕ್ಷದಿಂದ 2.3 ಕೋಟಿ ಮತದಾರರು ಮತ ಚಲಾಯಿಸಬಹುದು ಎಂದು ಅಂದಾಜಿಸಲಾಗಿದೆ.

ದಕ್ಷಿಣ-ಉತ್ತರ ರಾಜ್ಯಗಳ ಪಾಲು ಬಹುತೇಕ ಯಥಾಸ್ಥಿತಿ: ಪ್ರಸ್ತಾವಿತ ಮಾದರಿಯಲ್ಲಿ ದಕ್ಷಿಣ ಭಾರತದ ರಾಜ್ಯಗಳ ಹಾಗೂ ಹೆಚ್ಚು ಜನಸಂಖ್ಯೆಯ ಉತ್ತರ ಮತ್ತು ಪಶ್ಚಿಮ ರಾಜ್ಯಗಳ ಲೋಕಸಭಾ ಸ್ಥಾನಗಳ ಪಾಲು ಬಹುತೇಕ ಬದಲಾಗುವುದಿಲ್ಲ ಎಂದು ವರದಿ ಸ್ಪಷ್ಟಪಡಿಸಿದೆ. ದಕ್ಷಿಣ ರಾಜ್ಯಗಳ ಪಾಲು ಶೇ.23.6ರಿಂದ ಶೇ.23.7ಗೆ, ಉತ್ತರ-ಪಶ್ಚಿಮ ರಾಜ್ಯಗಳ ಪಾಲು ಶೇ.45.2ರಿಂದ ಶೇ.45.6ಕ್ಕೆ ಏರಿಕೆಯಾಗಲಿದೆ.

ಈ ಸೂತ್ರದ ಪ್ರಕಾರ ಕರ್ನಾಟಕದ ಲೋಕಸಭಾ ಸ್ಥಾನಗಳು 28ರಿಂದ 42ಕ್ಕೆ, ತಮಿಳುನಾಡು 39ರಿಂದ 59ಕ್ಕೆ, ಕೇರಳ 20ರಿಂದ 30ಕ್ಕೆ, ಆಂಧ್ರಪ್ರದೇಶ 25ರಿಂದ 38ಕ್ಕೆ ಹಾಗೂ ತೆಲಂಗಾಣ 17ರಿಂದ 26ಕ್ಕೆ ಏರಿಕೆಯಾಗಲಿವೆ.


ಉತ್ತರ ಭಾರತದ ರಾಜ್ಯಗಳಲ್ಲಿ ಉತ್ತರ ಪ್ರದೇಶದ ಸ್ಥಾನಗಳು 80ರಿಂದ 120ಕ್ಕೆ, ಬಿಹಾರ 40ರಿಂದ 60ಕ್ಕೆ, ಮಹಾರಾಷ್ಟ್ರ 48ರಿಂದ 72ಕ್ಕೆ, ಮಧ್ಯಪ್ರದೇಶ 29ರಿಂದ 44ಕ್ಕೆ, ಗುಜರಾತ್ 26ರಿಂದ 39ಕ್ಕೆ ಹಾಗೂ ರಾಜಸ್ಥಾನ 25ರಿಂದ 38ಕ್ಕೆ ಹೆಚ್ಚಳವಾಗಲಿವೆ.

1) ಭರ್ತಿಮಾಡಿದ KPPP ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 24–06–2026 ಸಂಜೆ 5:00 ಗಂಟೆವರೆಗೆ. 2) KPPP ಟೆಂಡರ್‌ಗಳ ಬಿಡ್ಡ ತೆರೆಯುವ ದಿನಾಂಕ: 25–06–2026 ಸಂಜೆ 5.00 ಗಂಟೆ ನಂತರ. ಟೆಂಡರ್ ಪ್ರಕಟಣೆ ಷರತ್ತು ಹಾಗೂ ಕಾಮಗಾರಿಗಳ ವಿವರಗಳನ್ನು ವಿಭಾಗ ಕಛೇರಿಯಲ್ಲಿ ಅಥವಾ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್(www.kppp.karnataka.gov.in) ನಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜು ಇಂ.ವಿಭಾಗ, ಮಡಿಕೇರಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು–560001
ದೂರವಾಣಿ : 080–25581383, ಫ್ಯಾಕ್ಸ್ : 080–25586321

ಸಂಖ್ಯೆ: ಮಾನಿಮಂ/86/ಕ/2025/2026–27/623 ದಿನಾಂಕ: 21/05/2026

ಟೆಂಡರ್‌ಗಾಗಿ ಆಹ್ವಾನ – ಕರೆ–1

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **www.kppp.karnataka.gov.in** ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕೆಲಸದ ಹೆಸರು: ರಾಯಚೂರಿನ ಪ್ರಾದೇಶಿಕ ಕಛೇರಿ ಕಟ್ಟಡ / ಪ್ರಯೋಗಾಲಯದಲ್ಲಿ ವಿದ್ಯುತ್ ಸ್ಥಾಪನೆಗಾಗಿ ವಾರ್ಷಿಕ ನಿರ್ವಹಣೆ ಗುತ್ತಿಗೆ (ಎಎಂಸಿ) (1 ವರ್ಷ). ಕೆಲಸದ ಅಂದಾಜು ಮೌಲ್ಯ: **ರೂ8.39 ಲಕ್ಷಗಳು.** ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳಿಗೆ, ದಯುವಿಟ್ಟು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ವೀಕ್ಷಿಸುವುದು.

ಸಹಿ/–
ಮುಖ್ಯ ಪರಿಸರ ಅಧಿಕಾರಿ–2
ವಾ.ಸಾ.ಸಂ.ಇ/ವಾಪ್ರ/1111/ಆಕಾರ್/2026–27

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕರ್ನಾಟಕ ಸರ್ಕಾರ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ

Tel. No.:08338-275101 E-Mail:ee.rdws.ckd@gmail.com

ಸಂಖ್ಯೆ:ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು4:ಟೆಂಡರ್–5:2026–27/337 ದಿನಾಂಕ:10–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3&4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No:- 10138 & 10124

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (http://kppp.karnataka.Gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

01)ಟೆಂಡರ ಪೂರ್ವಬಾವಿ ಸಭೆ:16–06–2026 ರ ಬೆಳಿಗ್ಗೆ 11–00 ಗಂಟೆಗೆ, ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ. 02)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:18–06–2026 ಸಾಯಂಕಾಲ 17.00 ಘಂಟೆ ವರೆಗೆ. 03)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:19–06–2026 ಸಾಯಂಕಾಲ 5.30 ಘಂಟೆ ನಂತರ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.
DIPR/BGM/RO-NO-415/KSMCA/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-627) ಡ್ರಾ ಜೂನ್ 11ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PG 995427 (KASARAGOD)

Consolation Prize Rs.5,000/-
PA 995427 PB 995427 PC 995427 PD 995427
PE 995427 PF 995427 PH 995427 PJ 995427
PK 995427 PL 995427 PM 995427

2nd Prize Rs.30,00,000/- [30 Lakhs]
PE 188956 (KANNUR)

3rd Prize Rs.5,00,000/- [5 Lakhs]
PE 930847 (CHITTUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0616 0777 1818 2488 2905 3034 3704 4724 5105 5273
5926 6024 6939 7634 7933 8249 9267 9604 9647

5th Prize Rs.2,000/-
0540 0816 1160 3927 5980 8729

6th Prize Rs.1,000/-
1164 1253 1423 1510 2089 3252 3653 3998 4749 4875
4890 5020 5107 5918 6341 6468 7323 7745 7904 8323
8685 8978 9238 9828 9938

7th Prize Rs.500/-
0024 0082 0128 0204 0516 0691 0732 0810 1117 1141
1486 1599 1641 1648 1700 1712 1786 1867 1898 2015
2227 2290 2504 2522 2533 2570 2710 3190 3196 3206
3272 3296 3375 3529 3537 3544 3583 3731 4313 4379
4453 4480 4526 4591 4596 4891 5544 5636 5668 5855
5908 6597 6848 7120 7149 7194 7310 7638 7880 7926
8310 8456 8617 8623 8861 9103 9204 9227 9392 9431
9469 9548 9867 9913 9921 9989

8th Prize Rs.200/-
0195 0197 0249 0324 0389 0392 0458 0593 0884 1004
1132 1263 1376 1396 1469 1515 1813 2014 2053 2235
2250 2272 2564 2616 2624 2881 3049 3102 3170 3248
3485 3628 3782 3798 4036 4241 4257 4288 4378 4495
4712 4822 4888 5408 5453 5482 5494 5655 5992 6099
6243 6492 6524 6776 6910 6913 7085 7100 7289 7478
7503 7675 7690 7783 7860 7955 7996 8390 8467 8524
8542 8614 8917 8944 9018 9060 9184 9230 9335 9421
9423 9569 9758 9915

9th Prize Rs.100/-
0003 0151 0240 0330 0432 0835 0861 1000 1033 1055
1069 1082 1130 1144 1166 1178 1424 1654 1746 1812
1814 1831 1858 1963 2093 2133 2134 2174 2321 2455
2494 2507 2650 2695 2729 2854 2868 3053 3142 3172
3376 3399 3405 3441 3442 3458 3481 3644 3735 3781
3952 3962 4009 4075 4090 4107 4271 4280 4290 4396
4409 4456 4473 4492 4557 4628 4670 4839 4866 4914
4933 5040 5048 5119 5172 5340 5377 5417 5454 5461
5711 5724 5774 5831 5900 5946 5951 5973 6184 6230
6257 6291 6300 6324 6400 6405 6413 6452 6466 6550
6671 6711 6718 6871 6907 6917 6978 7123 7136 7146
7188 7193 7216 7286 7298 7360 7488 7531 7555 7629
7633 7637 7710 7770 7842 8041 8066 8121 8147 8264
8309 8475 8548 8556 8602 8701 8716 8737 8936 8948
8974 9049 9212 9381 9493 9497 9557 9584 9614 9658
9712 9778 9819 9830 9958 9981

ಫಿಫಾ!



48 ತಂಡಗಳಿಗೆ ಈ ಸಲ ಕಪ್ ನಮ್ದೇ ಎಂಬ ಕನಸು

ಜಗತ್ತಿನ ಪ್ರತಿಯೊಬ್ಬ ಕ್ರೀಡಾಭಿಮಾನಿಗೂ ಈಗ ಹಬ್ಬ. ಫಿಫಾ ವಿಶ್ವಕಪ್ ಅಬ್ಬರದ ಆಡಂಬರ. ಒಂದು ತಿಂಗಳ ಕಾಲ ಅಂತಾರಾಷ್ಟ್ರೀಯ ಗಡಿರೇಖೆಗಳು ಮಸುಕಾಗಲಿವೆ. ಭಾಷೆಗಳು, ಜಾತಿ–ಧರ್ಮ, ಬಣ್ಣ ಬೇಧಗಳೆಲ್ಲವೂ ಅರ್ಥ ಕಳೆದುಕೊಳ್ಳುತ್ತವೆ. ಕಾಲಮಾನಗಳ ವ್ಯತ್ಯಾಸವೂ ಅಪ್ರಸ್ತುತ ಎನಿಸಲಿದೆ. ಜಗತ್ತಿನ ಮೂಲೆಮೂಲೆಯ ನಗರಗಳೆಲ್ಲೆಡೆ ದೊಡ್ಡ ಟಿವಿ ಪರದೆಗಳಲ್ಲಿ ನೇರಪ್ರಸಾರವಾಗಲಿವೆ. ಜಗತ್ತಿನ ಫೇವರಿಟ್ ಕೂಟ ಫಿಫಾ ವಿಶ್ವಕಪ್ ಪಂದ್ಯಾವಳಿ ಗುರುವಾರ ತಡರಾತ್ರಿಯೇ ಶುರುವಾಗಿದ್ದು ವಿಶ್ವವನ್ನು ಮನರಂಜಿಸಲು ಸಜ್ಜಾಗಿದೆ. ಅಮೆರಿಕ, ಕೆನಡಾ, ಮೆಕ್ಸಿಕೋ ಈ ಬಾರಿ ಆತಿಥ್ಯ ವಹಿಸಲಿವೆ. ಉತ್ತರ ಅಮೆರಿಕದ ಭವ್ಯ ಕ್ರೀಡಾಂಗಣಗಳಿಂದ ಹಿಡಿದು ಮಧ್ಯರಾತ್ರಿಯ ಬೆಳದಿಂಗಳಲ್ಲಿ ಮಿನುಗುವ ಬೆಂಗಳೂರು, ಮಂಗಳೂರಿನ ಮನೆಗಳವರೆಗೆ, ಕೋಟ್ಯಂತರ ಹೃದಯಗಳು ಒಂದೇ ಲಯದಲ್ಲಿ ಮಿಡಿಯಲಿವೆ. ಗುರುವಾರ ತಡರಾತ್ರಿಯೇ ಫಿಫಾ ಪಂದ್ಯಾವಳಿಯ ಉದ್ಘಾಟನಾ ಸಮಾರಂಭ ಅದ್ದೂರಿಯಾಗಿ ನಡೆಯಿತು. ಮೊದಲ ಪಂದ್ಯದಲ್ಲಿ ಆಫ್ರಿಕಾ ಮತ್ತು ಆತಿಥ್ಯ ಮಾಕ್ಸಿಕೋ ತಂಡಗಳು ಎದುರಾದವು. ಸ್ಟಾರ್ ಆಟಗಾರರು, ಫುಟ್‌ಬಾಲ್ ದಿಗ್ಗಜರ ಸಮಾಗಮ ಒಂದುಕಡೆಯಾದರೆ ಒಂದು ಕಡೆ ತಾರೆಯರ ನೃತ್ಯ, ಪಟಾಕಿಗಳ ಸದ್ದು ಕ್ರೀಡಾಂಗಣದಲ್ಲಿ ಕಹಳೆ ಮೂಡಿಸಿತ್ತು. 2026ರಲ್ಲಿ ಈ ಮಹಾನ್ ಸಂಭ್ರಮವು ಇನ್ನಷ್ಟು ವೈಭವದೊಂದಿಗೆ ಮರಳಿದೆ. ಬಹುಶಃ ಹಳೆಯ ನಾಯಕರು ಮರೆಯಾಗುವ ಹೊಸ ನಾಯಕರು ಉದಯಿಸುವ ವಿಶ್ವಕಪ್ ಇದಾಗುವ ಸಾಧ್ಯತೆಯಿದೆ. ದಂತಕತೆಗಳು ತಮ್ಮ ಅಂತಿಮ ಅಧ್ಯಾಯ ಬರೆಯಲಿವೆ. ಇದು ಕೇವಲ ಕ್ಷಣಗಣನೆಯಲ್ಲ, ಕಾಲ್ಚೆಂಡಿನ ಮಹಾನ್ ಕಥನದ ಹೊಸ ಅಧ್ಯಾಯದ ಮೇಲಿನ ನಿರೀಕ್ಷೆ. ಈ ಬಾರಿ ಮಿಸ್ ಮಾಡ್ಕೋಬೇಡಿ.

ಮ್ಯಾಚ್ ಬಾಲ್ ಬಗ್ಗೆ



ಸ್ಪ್ಯಾನಿಷ್ ಭಾಷೆಯಲ್ಲಿ ಮೂರು ಅಲೆಗಳು ಎಂಬರ್ಥ. ಆತಿಥೇಯ ರಾಷ್ಟ್ರಗಳಾದ ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ರಾಷ್ಟ್ರಗಳಿಗೆ ಗೌರವ ಸಲ್ಲಿಸಲು ಈ ಬಾರಿಯ ವಿಶ್ವಕಪ್ ಚೆಂಡಿಗೆ ಟ್ರಿಯೊಂಡಾ ಹೆಸರನ್ನಿಡಲಾಗಿದೆ. ಇದು ಕೆಂಪು, ಹಸಿರು ಮತ್ತು ನೀಲಿ ಬಣ್ಣ ಅಲೆಗಳಂತೆ ಕಾಣುವ ವಿನ್ಯಾಸದಲ್ಲಿ ಇರಲಿದೆ. ಕೆನಡಾದ ಮೇಪಲ್ ಎಲೆ, ಮೆಕ್ಸಿಕೊವನ್ನು ಪ್ರತಿನಿಧಿಸುವ ಹದ್ದು ಮತ್ತು ಅಮೆರಿಕದ ನಕ್ಷತ್ರವನ್ನು ಚೆಂಡಿನ ಮೇಲ್ಭಾಗ ಕಾಣಬಹುದು. ಚಿನ್ನದ ಬಣ್ಣದಲ್ಲಿ ಫಿಫಾ ಚಿನ್ನದ ಟ್ರೋಫಿಗೆ ಗೌರವವನ್ನು ಸಲ್ಲಿಸಲಾಗಿದೆ. ಚೆಂಡಿನಲ್ಲಿ ಅತ್ಯಾಧುನಿಕ ಕನೆಕ್ಟೆಡ್ ಬಾಲ್ ಟೆಕ್ನಾಲಜಿ ಬಳಸಲಾಗಿದೆ. ಇದರಲ್ಲಿ 500ಹರ್ಟ್ಸ್ ಚಲನಾ ಸಂವೇದಕ ಚಿಪ್ ಅಳವಡಿಸಿದ್ದು, ಚೆಂಡಿನ ಚಲನೆಯ ನಿಖರ ಮಾಹಿತಿ ನೇರ ವಿಡಿಯೊ ಅಸಿಸ್ಟೆಂಟ್ ರೆಫರಿ ವ್ಯವಸ್ಥೆಗೆ ರವಾನಿಸುತ್ತದೆ. ಇದು ಆಫ್‌ಸೈಡ್ ಸೇರಿ ವಿವಾದಾತ್ಮಕ ಸಂದರ್ಭ ನೆರವಾಗಲಿದೆ. ಚೆಂಡಿನ ನಾಲ್ಕು ಪ್ಯಾನೆಲ್‌ಗಳ ವಿನ್ಯಾಸವು ಆಟಗಾರರಿಗೆ ಸ್ಥಿರತೆ ಮತ್ತು ಚೆಂಡಿನ ಮೇಲೆ ಹೆಚ್ಚಿನ ನಿಯಂತ್ರಣ ನೀಡಲಿದೆ.

23 ನೇ ವಿಶ್ವಕಪ್

3 ರಾಷ್ಟ್ರಗಳ ಆತಿಥ್ಯ

48 ರಾಷ್ಟ್ರಗಳ ಸ್ಪರ್ಧೆ

39 ದಿನಗಳ ಟೂರ್ನಿ

16 ನಗರಗಳ ಆತಿಥ್ಯ

16 ಕ್ರೀಡಾಂಗಣಗಳು

104 ಪಂದ್ಯಗಳು

1248 ಆಟಗಾರರು

12 ಗುಂಪುಗಳು (ತಲಾ 4 ತಂಡಗಳು)

32 ನಾಕೌಟ್ ಹಂತಕ್ಕೇರುವ ತಂಡಗಳು

1 ಚಿನ್ನದ ಟ್ರೋಫಿ

ಮೊದಲ ವಿಶ್ವಕಪ್ **1930**

ಮೊದಲ ಚಾಂಪಿಯನ್
ಉರುಗ್ವೆ

ಅತಿ ಹೆಚ್ಚು ಪ್ರಶಸ್ತಿ
ಬ್ರೆಜಿಲ್ (5)

ಅತಿ ಹೆಚ್ಚು ಗೋಲು
ಮಿರೋಸ್ಲಾವ್ ಕ್ಲೋಸ್ (16)

ಒಂದೇ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ಗೋಲು
ಜಸ್ಟ್ ಫೊಂಟೈನ್ (13)

ಕಿರಿಯ ವಯಸ್ಸಿನ ಚಾಂಪಿಯನ್
ಪೀಲೆ (17 ವರ್ಷ)

ಅತಿ ಹೆಚ್ಚು ಪಂದ್ಯಗಳು
ಲೋಥರ್ ಮಾಥೆಯೋಸ್ (25)

ವಿಶ್ವಕಪ್ ಆಡಿದ ಎಲ್ಲ ಟೂರ್ನಿಗಳಲ್ಲೂ ಭಾಗವಹಿಸಿದ ಏಕೈಕ ದೇಶ
ಬ್ರೆಜಿಲ್

ವಿಶ್ವಕಪ್ ಗೆದ್ದ ರಾಷ್ಟ್ರಗಳು



ಬ್ರೆಜಿಲ್	ಜರ್ಮನಿ	ಇಟಲಿ
5	4	4
ಅರ್ಜೆಂಟಿನಾ	ಫ್ರಾನ್ಸ್	ಉರುಗ್ವೆ
5	2	2
ಇಂಗ್ಲೆಂಡ್	ಸ್ಪೇನ್	
1	1	

8 ಇಲ್ಲಿಯವರೆಗೆ ಕೇವಲ 8 ರಾಷ್ಟ್ರಗಳು ಮಾತ್ರ ವಿಶ್ವಕಪ್ ಗೆದ್ದಿವೆ.



ಮೂರು ವಿಶ್ವಕಪ್ ಗೆದ್ದ ಏಕೈಕ ಆಟಗಾರ ಪೀಲೆ

ಅತಿ ಹೆಚ್ಚು ಪೆನಾಲ್ಟಿ ಶೂಟೌಟ್ ಜಯಗಳು: ಅರ್ಜೆಂಟೀನಾ 7

ವಿಶ್ವಕಪ್ ಫೈನಲ್ ಅನ್ನು 2022ರಲ್ಲಿ ಸುಮಾರು **1.5** ಬಿಲಿಯನ್ ಜನರು ವೀಕ್ಷಿಸಿದ್ದರು.

FIFA WORLD CUP Qatar2022

ಕ್ರೀಡಾಂಗಣಗಳು



ಅಮೆರಿಕ
- ಅಟ್ಲಾಂಟ ಸ್ಟೇಡಿಯಂ
- ಬೋಸ್ಟನ್ ಸ್ಟೇಡಿಯಂ
- ಡಲ್ಲಾಸ್ ಸ್ಟೇಡಿಯಂ
- ಹ್ಯೂಸ್ಟನ್ ಸ್ಟೇಡಿಯಂ
- ಕನ್ಸಾಸ್ ಸಿಟಿ ಸ್ಟೇಡಿಯಂ
- ಲಾಸ್ ಏಂಜಲೀಸ್ ಸ್ಟೇಡಿಯಂ
- ಮಯಾಮಿ ಸ್ಟೇಡಿಯಂ
- ನ್ಯೂಯಾರ್ಕ್ ನ್ಯೂ ಜೆರ್ಸಿ ಸ್ಟೇಡಿಯಂ
- ಫಿಲಡೆಲ್ಫಿಯಾ ಸ್ಟೇಡಿಯಂ
- ಸ್ಯಾನ್ ಫ್ರಾನ್ಸಿಸ್ಕೊ ಸ್ಟೇಡಿಯಂ
- ಸಿಯಾಟಲ್ ಸ್ಟೇಡಿಯಂ

ಕೆನಡಾ
- ಟೊರಾಂಟೊ ಸ್ಟೇಡಿಯಂ
- ವಾಂಕೊವರ್ ಸ್ಟೇಡಿಯಂ

ಮೆಕ್ಸಿಕೊ
- ಗ್ವಾಡಾಲಾಜಾರ ಸ್ಟೇಡಿಯಂ
- ಮೆಕ್ಸಿಕೊ ಸಿಟಿ ಸ್ಟೇಡಿಯಂ
- ಮೊಂಟೆರೆ ಸ್ಟೇಡಿಯಂ



1950 ರ ವಿಶ್ವಕಪ್‌ನಲ್ಲಿ ನೇರ ಫೈನಲ್ ಪಂದ್ಯ ಇರಲಿಲ್ಲ; ಅಂತಿಮ ಗುಂಪು ಹಂತದ ಮೂಲಕ ಚಾಂಪಿಯನ್ ನಿರ್ಧಾರವಾಯಿತು.



ಆತಿಥೇಯ ರಾಷ್ಟ್ರಗಳು ಕೇವಲ 6 ಬಾರಿ ಮಾತ್ರ ವಿಶ್ವಕಪ್ ಗೆದ್ದಿವೆ.

ಮಾಸ್ಕೊಟ್‌ಗಳು



- ಮೇಪಲ್, ದಿ ಮೂಸ್ (ಕೆನಡಾ) ಗೋಲ್ ಕೀಪರ್
- ಜಾಯು, ದಿ ಜಾಗ್ವಾರ್ (ಮೆಕ್ಸಿಕೊ) ಡಿಫೆಂಡರ್
- ಕ್ಲಚ್, ದಿ ಬಾಲ್ಡ್ ಈಗಲ್ (ಅಮೆರಿಕ) ಮಿಡ್‌ಫೀಲ್ಡರ್



ಅತ್ಯಧಿಕ ವಿಶ್ವಕಪ್ ಗೋಲ್ಸ್

ಲಿಯೊನೆಲ್ ಮೆಸ್ಸಿ, ಅರ್ಜೆಂಟೀನಾ	13
ಕಿಲಿಯನ್ ಎಂಬಾಪ್ಪೆ, ಫ್ರಾನ್ಸ್	12
ಥಾಮಸ್ ಮುಲ್ಲರ್, ಜರ್ಮನಿ	10
ಕ್ರಿಸ್ಟಿಯಾನೋ ರೊನಾಲ್ಡೊ, ಪೋರ್ಚುಗಲ್	8
ಹ್ಯಾರಿ ಕೇನ್, ಇಂಗ್ಲೆಂಡ್	8
ನೆಯ್ಮಾರ್, ಬ್ರೆಜಿಲ್	8
ಲೂಯಿಸ್ ಸ್ವಾರೆಜ್, ಉರಗ್ವೆ	7
ಜೇಮ್ಸ್ ರಾಡ್ರಿಗ್ಸ್, ಕೊಲಂಬಿಯಾ	6
ಇವಾನ್ ಪೆರಿಸಿಕ್, ಕ್ರೊವೇಶಿಯಾ	6
ಆಂಟೊನಿ ಗ್ರೀಜ್ಮನ್, ಫ್ರಾನ್ಸ್	4



ಇವರಿಗೆ ದಾಖಲೆ 6ನೇ ವಿಶ್ವಕಪ್!

- ಲಿಯೊನೆಲ್ ಮೆಸ್ಸಿ (2006, 2010, 2014, 2018, 2022, 2026)
- ಕ್ರಿಸ್ಟಿಯಾನೋ ರೊನಾಲ್ಡೊ (2006, 2010, 2014, 2018, 2022, 2026)
- ಗುಲೆರ್ಮೊ ಒಕಾವೊ (2006, 2010, 2014, 2018, 2022, 2026)



ಫಿಫಾ ಹಣಕಾಸಿನ ಲೆಕ್ಕಾಚಾರ (ರೂ.ಗಳಲ್ಲಿ)

FIFA

1.13 ಲಕ್ಷ ಕೋಟಿ 2023ರಿಂದ 2026ರವರೆಗೆ ಫಿಫಾ ಒಟ್ಟು ಆದಾಯ

76,600 ಕೋಟಿ 2026ರಲ್ಲಿ ಫಿಫಾ ಒಟ್ಟು ಆದಾಯ

- 33,755 ಕೋಟಿ - ಟಿವಿ ಪ್ರಸರಣ ಹಕ್ಕು ವಿತರಣೆ
- 25,800 ಕೋಟಿ - ಟಿಕೆಟ್ ಮತ್ತು ಆತಿಥ್ಯ
- 24,080 ಕೋಟಿ - ಪ್ರಾಯೋಜಕತ್ವ ಮತ್ತು ಮಾರ್ಕೆಟಿಂಗ್
- 6,252 ಕೋಟಿ - ಒಟ್ಟಾರೆ ಪ್ರಶಸ್ತಿ ಮೊತ್ತ
- 3,053 ಕೋಟಿ - ಕ್ಲಬ್‌ಗಳಿಗೆ ಹಣಕಾಸಿನ ನೆರವು

ಪ್ರಶಸ್ತಿ ಮೊತ್ತಗಳು (ರೂ.ಗಳಲ್ಲಿ)
- 430 ಕೋಟಿ - ಚಾಂಪಿಯನ್ಸ್
- 284 ಕೋಟಿ - ರನ್ನರ್‌ಅಪ್ಸ್
- 249 ಕೋಟಿ - ತೃತೀಯ ಸ್ಥಾನ
- 232 ಕೋಟಿ - ನಾಲ್ಕನೇ ಸ್ಥಾನ
- 163 ಕೋಟಿ - ಕ್ವಾರ್ಟರ್ ಫೈನಲ್ಸ್ (5-8)
- 129 ಕೋಟಿ - ಪ್ರಿ-ಕ್ವಾರ್ಟರ್/16ರ ಸುತ್ತು (9-16)
- 95 ಕೋಟಿ - 17ರಿಂದ 32ನೇ ಸ್ಥಾನ
- 77 ಕೋಟಿ - 33ರಿಂದ 48ನೇ ಸ್ಥಾನ
- 21.5 ಕೋಟಿ - ತಂಡವೊಂದರ ವಿಶ್ವಕಪ್ ತಯಾರಿಗೆ ನೀಡುವ ನೆರವು

ಪ್ರೇಕ್ಷಕರು ಮತ್ತು ವೀಕ್ಷಕರ ಅಂದಾಜು
- ಸ್ಟೇಡಿಯಂ ಹಾಜರಾತಿ - 55ರಿಂದ 65 ಲಕ್ಷ ಪ್ರೇಕ್ಷಕರು
- ಜಾಗತಿಕ ಟಿವಿ/ಡಿಜಿಟಲ್ ವೀಕ್ಷಣೆ - 50 ಕೋಟಿ ಜನ
- ಒಟ್ಟಾರೆ ವೀಕ್ಷಣೆ - 60 ಕೋಟಿ

ಫಿಫಾ ಟ್ರೋಫಿ ಫ್ಯಾಕ್ಟ್!

ಜೂಲ್ಸ್ ರಿಮೆ ಟ್ರೋಫಿ (1930-1970)
- 1930ರಿಂದ 1970ರವರೆಗೆ ವಿಶ್ವಕಪ್ ವಿಜೇತರಿಗೆ ಜೂಲ್ಸ್ ರಿಮೆ ಟ್ರೋಫಿ ನೀಡಲಾಗುತ್ತಿತ್ತು.
- ಇದರ ಹೆಸರು ಜೂಲ್ಸ್ ರಿಮೆತ್ ಅವರ ಹೆಸರಿನಲ್ಲಿತ್ತು.
- 1970ರಲ್ಲಿ ಬ್ರೆಜಿಲ್ ಮೂರನೇ ಬಾರಿ ವಿಶ್ವಕಪ್ ಗೆದ್ದ ಕಾರಣ ಟ್ರೋಫಿಯನ್ನು ಶಾಶ್ವತವಾಗಿ ಪಡೆದಿತು.



ಪ್ರಸ್ತುತ ಫಿಫಾ ವಿಶ್ವಕಪ್ ಟ್ರೋಫಿ (1974ರಿಂದ)
- 1974ರಲ್ಲಿ ಹೊಸ ಟ್ರೋಫಿಯನ್ನು ಪರಿಚಯಿಸಲಾಯಿತು.
- ಇಟಲಿಯ ಶಿಲ್ಪಿ ಸಿಲ್ವಿಯೊ ಗಾಝಾನಿಗಾ ಇದನ್ನು ವಿನ್ಯಾಸಗೊಳಿಸಿದರು.
- ಮೊದಲ ಬಾರಿಗೆ 1974ರ ವಿಶ್ವಕಪ್ ವಿಜೇತ ವೆಸ್ಟ್ ಜರ್ಮನಿ ಈ ಟ್ರೋಫಿಯನ್ನು ಎತ್ತಿಹಿಡಿಯಿತು.

ಟ್ರೋಫಿಯ ವಿಶೇಷತೆಗಳು

ಎತ್ತರ	ತೂಕ	
36.8 ಸೆಂ.ಮೀ.	6.175 ಕೆ.ಜಿ.	18 ಕ್ಯಾರೆಟ್ ಶುದ್ಧ ಚಿನ್ನ

ತಳಭಾಗದಲ್ಲಿ 2 ಪದರದ ಮಲಾಕೈಟ್ ಕಲ್ಲು

ವಿನ್ಯಾಸ ಇಬ್ಬರು ಆಟಗಾರರು ಭೂಗೋಳವನ್ನು ಮೇಲಕ್ಕೆತ್ತಿರುವಂತೆ

ಟ್ರೋಫಿಯ ಮೌಲ್ಯ
ಟ್ರೋಫಿಯ ಅಂದಾಜು ಮೌಲ್ಯ
1,60,200 ಕೋಟಿ ರೂ. (ಚಿನ್ನದ ಮೌಲ್ಯದ ಆಧಾರದ ಮೇಲೆ ಇನ್ನಷ್ಟು ಹೆಚ್ಚಿರಬಹುದು)



ಇದು ವಿಶ್ವದ ಅತ್ಯಂತ ಅಮೂಲ್ಯ ಕ್ರೀಡಾ ಟ್ರೋಫಿಗಳಲ್ಲಿ ಒಂದಾಗಿದೆ

ವಿಜೇತ ತಂಡ ಟ್ರೋಫಿಯನ್ನು ಶಾಶ್ವತವಾಗಿ ಇಟ್ಟುಕೊಳ್ಳಬಹುದೇ?
- ಇಲ್ಲ, ಮೂಲ ಟ್ರೋಫಿ ಫಿಫಾದ ಆಸ್ತಿಯೇ ಆಗಿರುತ್ತದೆ.
- ವಿಜೇತ ತಂಡಕ್ಕೆ ಚಿನ್ನದ ಲೇಪಿತ ಪ್ರತಿಕೃತಿ ನೀಡಲಾಗುತ್ತದೆ.
- ಮೂಲ ಟ್ರೋಫಿಯನ್ನು ಶಾಶ್ವತವಾಗಿ ಇಟ್ಟುಕೊಳ್ಳಲು ಅವಕಾಶವಿಲ್ಲ.

ಟ್ರೋಫಿಯನ್ನು ಮುಟ್ಟಲು ಕೇವಲ ವಿಶ್ವಕಪ್ ವಿಜೇತ ಆಟಗಾರರು, ರಾಷ್ಟ್ರಾಧ್ಯಕ್ಷರು ಹಾಗೂ ಫಿಫಾ ಅಧಿಕಾರಿಗಳಿಗೆ ಮಾತ್ರ ಅವಕಾಶ.



ಅತಿ ಹಿರಿಯ ತಾರೆಯರು



- 43 - ಕ್ರೆಗ್ ಗೊರ್ಡಾನ್, ಸ್ಕಾಟ್ಲೆಂಡ್
- 41-ಕ್ರಿಸ್ಟಿಯಾನೋ ರೊನಾಲ್ಡೊ, ಪೋರ್ಚುಗಲ್
- 40 - ಗುಲೆರ್ಮೊ ಒಕಾವೊ, ಮೆಕ್ಸಿಕೊ
- 40 - ಲೂಕ ಮೊಡ್ರಿಕ್, ಕ್ರೊವೇಶಿಯಾ
- 40 - ಎಡಿನ್ ಜೆಕೊ, ಬೊಸ್ನಿಕ್ ಮತ್ತು ಹರ್ಜ್‌ಗೊವಿನಾ

ಅತಿ ಕಿರಿಯ ತಾರೆಯರು



- 18 ವರ್ಷ - ಲಮಿನ್ ಯಮಾಲ್, ಸ್ಪೇನ್
- 19 ವರ್ಷ - ಎಂಡ್ರಿಕ್, ಬ್ರೆಜಿಲ್
- 20 - ವಾರೆನ್ ಜೈರೋ ಎಮೆರಿ, ಫ್ರಾನ್ಸ್
- 21 - ಕೊಬಿ ಮೈನೋ, ಇಂಗ್ಲೆಂಡ್
- 21 - ಆರ್ಡ ಗುಲೇರ್, ಟರ್ಕಿ

ವಿಶ್ವಕಪ್ ವಿಜೇತರು

1930	ಉರಗ್ವೆ
1934	ಇಟಲಿ
1938	ಇಟಲಿ
1950	ಉರಗ್ವೆ
1954	ಪಶ್ಚಿಮ ಜರ್ಮನಿ
1958	ಬ್ರೆಜಿಲ್
1962	ಬ್ರೆಜಿಲ್
1966	ಇಂಗ್ಲೆಂಡ್
1970	ಬ್ರೆಜಿಲ್
1974	ಪಶ್ಚಿಮ ಜರ್ಮನಿ
1978	ಅರ್ಜೆಂಟೀನಾ
1982	ಇಟಲಿ
1986	ಅರ್ಜೆಂಟೀನಾ
1990	ಪಶ್ಚಿಮ ಜರ್ಮನಿ
1994	ಬ್ರೆಜಿಲ್
1998	ಫ್ರಾನ್ಸ್
2002	ಬ್ರೆಜಿಲ್
2006	ಇಟಲಿ
2010	ಸ್ಪೇನ್
2014	ಜರ್ಮನಿ
2018	ಫ್ರಾನ್ಸ್
2022	ಅರ್ಜೆಂಟೀನಾ



ವಿಶ್ವಕಪ್ ಇತಿಹಾಸದ ರೋಚಕ ಕ್ಷಣಗಳು

1930 ಮೊದಲ ವಿಶ್ವಕಪ್

ಮೊದಲ ಟೂರ್ನಿಯಲ್ಲಿ ಕೇವಲ 13 ತಂಡಗಳು ಭಾಗವಹಿಸಿದ್ದವು. ಫೈನಲ್‌ನಲ್ಲಿ ಉರುಗ್ವೆ ಅರ್ಜೆಂಟೀನಾವನ್ನು 4-2ರಿಂದ ಸೋಲಿಸಿತು.



1970ರ ಬ್ರೆಜಿಲ್ ಸಾರ್ವಕಾಲಿಕ ಶ್ರೇಷ್ಠ ತಂಡ

ಪೀಲೆ ನೇತೃತ್ವದ ಬ್ರೆಜಿಲ್ ಇಟಲಿಯನ್ನು 4-1ರಿಂದ ಸೋಲಿಸಿ ಮೂರನೇ ಪ್ರಶಸ್ತಿ ಗೆದ್ದಿತು. ಈ ತಂಡವನ್ನು ಅನೇಕ ತಜ್ಞರು ಇತಿಹಾಸದ ಶ್ರೇಷ್ಠ ರಾಷ್ಟ್ರೀಯ ತಂಡವೆಂದು ಪರಿಗಣಿಸುತ್ತಾರೆ.

ಮರಡೋನಾದ ಹ್ಯಾಂಡ್ ಆಫ್ ಗಾಡ್



ಡಿಯೇಗೊ ಮಾರಾಡೋನಾ ಇಂಗ್ಲೆಂಡ್ ವಿರುದ್ಧ ಕೈಯಿಂದ ಗೋಲು ಬಾರಿಸಿದರು. ಅದೇ ಪಂದ್ಯದಲ್ಲಿ ಅವರು ಅರ್ಧ ಮೈದಾನದಿಂದ ಓಡಿ ಬಾರಿಸಿದ ಗೋಲು ಶತಮಾನದ ಗೋಲು' ಎಂದು ಪ್ರಸಿದ್ಧವಾಯಿತು.

1998 ಫ್ರಾನ್ಸ್‌ನ ಮೊದಲ ಕಿರೀಟ

ಆತಿಥೇಯ ಫ್ರಾನ್ಸ್ ಬ್ರೆಜಿಲ್‌ನ್ನು 3-0ರಿಂದ ಮಣಿಸಿ ಮೊದಲ ವಿಶ್ವಕಪ್ ಜಯಿಸಿತು.



2006 ಜಿಡಾನ್ ಹೆಡ್‌ಬಟ್

ಫೈನಲ್ ಪಂದ್ಯದಲ್ಲಿ ಜಿಡಾನ್ ನೀಡಿದ ಹೆಡ್‌ಬಟ್ ವಿಶ್ವಕಪ್ ಇತಿಹಾಸದ ಅತ್ಯಂತ ಚರ್ಚಿತ ಘಟನೆಗಳಲ್ಲಿ ಒಂದಾಗಿದೆ.

2014 ಬ್ರೆಜಿಲ್‌ನ ಕನಸು ಭಗ್ನ

ಸೆಮಿಫೈನಲ್‌ನಲ್ಲಿ ಜರ್ಮನಿ ಬ್ರೆಜಿಲ್ ವಿರುದ್ಧ 7-1 ಗೋಲುಗಳ ಭಾರೀ ಜಯ ಸಾಧಿಸಿತು. ಫುಟ್‌ಬಾಲ್ ಲೋಕವನ್ನು ಬೆಚ್ಚಿಬೀಳಿಸಿದ ಪಂದ್ಯ.



2022 ಮೊರಾಕ್ಕೊ ಇತಿಹಾಸ

ಮೊರೊಕ್ಕೊ ವಿಶ್ವಕಪ್ ಸೆಮಿಫೈನಲ್ ತಲುಪಿದ ಮೊದಲ ಆಫ್ರಿಕನ್ ರಾಷ್ಟ್ರವಾಯಿತು.

2022 ಮೆಸ್ಸಿಯ ಕನಸು ನನಸು



ಲಿಯೊನಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ಫ್ರಾನ್ಸ್ ವಿರುದ್ಧದ ರೋಚಕ ಫೈನಲ್‌ನಲ್ಲಿ ಜಯಿಸಿ ವಿಶ್ವಕಪ್ ಎತ್ತಿಹಿಡಿದಿತು. ಅನೇಕರು ಇದನ್ನು ಇತಿಹಾಸದ ಶ್ರೇಷ್ಠ ಫೈನಲ್ ಎಂದು ಕರೆಯುತ್ತಾರೆ.



ಇಂದಿನ ಪಂದ್ಯಗಳು

ಮ್ಯಾಕ್ಸಿಕೋ-ದ. ಆಫ್ರಿಕಾ
ಎಲ್ಲಿ: ಮ್ಯಾಕ್ಸಿಕೋ ಸ್ಟೇಡಿಯಂ
ಸಮಯ: ರಾತ್ರಿ 12:30

ದ.ಕೊರಿಯಾ-ಜೆಕ್
ಎಲ್ಲಿ: ಸಪೋಪಾನ್
ಸಮಯ: ಬೆಳಗ್ಗೆ 7:30

ಶುಭವಾಗಲಿ ಭಾರತ

ಇಂದಿನಿಂದ ಮಹಿಳೆಯರ ಟಿ20 ವಿಶ್ವಕಪ್ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್–ಶ್ರೀಲಂಕಾ

ಕ್ರಿಕೆಟ್ ವಿಚಾರಕ್ಕೆ ಬಂದರೆ ಇತಿಹಾಸ ಪುಟಗಳಿಂದ ಹಿಡಿದು ಪ್ರಚಲಿತ ದಾಖಲೆಯ ಪುಟಗಳವರೆಗೆ ಭಾರತೀಯರದ್ದೇ ದೊಡ್ಡ ಅಧ್ಯಾಯವಿದೆ. ವಿಭಿನ್ನ ಮಾದರಿಯಲ್ಲಿ ವಿಭಿನ್ನ ಆಟಗಾರರು. ವಿಭಿನ್ನ ಯಶಸ್ಸು ಮತ್ತು ದೊಡ್ಡ ಪಾರುಪತ್ಯ. ಇದಾಗ್ಯೂ ಟಿ20 ಎಂಬ ಮಾದರಿಯಲ್ಲಿ ಭಾರತೀಯರೇ ಗ್ರೇಟ್. ಪುರುಷರ ವಿಶ್ವಕಪ್‌ನಲ್ಲಿ ಸತತ ಎರಡು ಬಾರಿ ಗೆದ್ದ ಏಕೈಕ ತಂಡ ಮತ್ತು ಮೂರು ಬಾರಿ ವಿಶ್ವಕಪ್ ಗೆದ್ದ ಏಕೈಕ ತಂಡ ಎಂಬ ದಾಖಲೆ ಭಾರತ ಈಗಾಗಲೇ ಮಾಡಿದೆ. ಇತ್ತ ಮಹಿಳೆಯರೂ ಕೂಡ ಕಳೆದ ಬಾರಿ ಏಕದಿನ ವಿಶ್ವಕಪ್‌ನಲ್ಲಿ ವಿಜಯ ಪತಾಕಿ ಸಿಡಿಸಿ ಜಗತ್ತಿನ ಮುಂದೆ ಹೆಮ್ಮೆಯಿಂದ ನಿಂತಿದ್ದಾರೆ. ಆದರೆ ಟಿ20 ವಿಚಾರಕ್ಕೆ ಬಂದರೆ ಮಹಿಳಾ ಕ್ರಿಕೆಟಿಗರು ಒಂದು ಹೆಜ್ಜೆ ಹಿಂದಿದ್ದಾರೆ ಎನ್ನಲಾಗುತ್ತಿದೆ. ಇದಕ್ಕೆ ಈ ವಿಶ್ವಕಪ್‌ನಲ್ಲೇ ಉತ್ತರಿಸಲು ಹರ್ಮನ್‌ಪ್ರೀತ್ ಕೌರ್ ಬಳಗ ಸಿದ್ಧವಾಗಿದೆ. ಶುಕ್ರವಾರದಿಂದ ಮಹಿಳೆಯರ ಟಿ20 ವಿಶ್ವಕಪ್ ಶುರುವಾಗಲಿದೆ. ಕಿಟ್‌ಬ್ಯಾಗಿನಲ್ಲಿ ಬ್ಯಾಟು–ಬಾಲಿನೊಂದಿಗೆ ಅಖಂಡ ಭಾರತೀಯರ ನಿರೀಕ್ಷೆಗಳನ್ನು ಹೊತ್ತೊಯ್ದ ಭಾರತೀಯ ತಂಡವು ಗೆದ್ದು ಬೀಗಲಿ. ಭಾರತದ ಧ್ವಜ ಎಲ್ಲೆಡೆ ಮತ್ತೊಮ್ಮೆ ಹಾರಾಡಲಿ ಎಂಬ ಹಾರೈಕೆ ನಮ್ಮದು. ಹಾಗಿದ್ದರೆ ಭಾರತ ಯಾವ ಸ್ಥಾನದಲ್ಲಿದೆ? ಇತಿಹಾಸದಲ್ಲಿ ಏನು ಮಾಡಿದೆ? ಈ ವಿಶ್ವಕಪ್‌ಗಾಗಿ ತಯಾರಿ ಮಾಡಿಕೊಂಡಿದ್ದು ಹೇಗೆ? ಯಾವೆಲ್ಲಾ ಆಟಗಾರರು ಭಾರತದ ನಿರೀಕ್ಷೆಯನ್ನು ಇನ್ನಷ್ಟು ಗಟ್ಟಿಗೊಳಿಸಿದ್ದಾರೆ?.





ಭಾರತದ ಬಲ
- ಅನುಭವಿ ನಾಯಕತ್ವ
- ಬಲಿಷ್ಠ ಬ್ಯಾಟಿಂಗ್ ಕ್ರಮಾಂಕ
- ಗುಣಮಟ್ಟದ ಆಲ್ ರೌಂಡರ್‌ಗಳು

ಸವಾಲುಗಳು
- ಒತ್ತಡದ ಪಂದ್ಯಗಳಲ್ಲಿ ಸ್ಥಿರತೆ
- ಫಿನಿಶಿಂಗ್ ಸಮಸ್ಯೆ
- ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ವಿರುದ್ಧ ದಾಖಲೆ ಸುಧಾರಿಸಬೇಕಿದೆ

ಬದಲಾವಣೆಯ ಘಟ್ಟ (2018)

2018ರ ವಿಶ್ವಕಪ್ ಭಾರತ ಮಹಿಳಾ ಕ್ರಿಕೆಟ್‌ನ ಹೊಸ ಯುಗಕ್ಕೆ ನಾಂದಿ ಹಾಡಿತು. ಭಾರತ ಲೀಗ್ ಹಂತದಲ್ಲಿ ಬಲಿಷ್ಠ ಆಸ್ಟ್ರೇಲಿಯಾವನ್ನೇ ಸೋಲಿಸಿತು. ಸೆಮಿಫೈನಲ್ ಪ್ರವೇಶಿಸಿ ವಿಶ್ವದ ಗಮನ ಸೆಳೆಯಿತು. ಯುವ ಆಟಗಾರ್ತಿಯರಾದ ಸ್ಮೃತಿ ಮಂಧಾನ ಮತ್ತು ಶೆಫಾಲಿ ವರ್ಮಾ ತಂಡದ ಭವಿಷ್ಯದ ತಾರೆಗಳಾಗಿ ಹೊರಹೊಮ್ಮಿದರು. ಈ ಟೂರ್ನಿಯ ಬಳಿಕ ಭಾರತವನ್ನು ಪ್ರಶಸ್ತಿ ಗೆಲ್ಲಬಲ್ಲ ತಂಡವೆಂದು ಪರಿಗಣಿಸಲು ಆರಂಭಿಸಲಾಯಿತು.

2020ರಲ್ಲಿ ಅಬ್ಬರ

2020ರ ಆಸ್ಟ್ರೇಲಿಯಾ ವಿಶ್ವಕಪ್ ಭಾರತ ಮಹಿಳಾ ಕ್ರಿಕೆಟ್ ಇತಿಹಾಸದ ಅತ್ಯಂತ ಮಹತ್ವದ ಅಧ್ಯಾಯವಾಗಿದೆ. ಆಸ್ಟ್ರೇಲಿಯಾವನ್ನು ಲೀಗ್ ಹಂತದಲ್ಲೇ ಸೋಲಿಸಿತು. ನಾಲ್ಕೂ ಲೀಗ್ ಪಂದ್ಯಗಳನ್ನು ಗೆದ್ದಿತು. ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯ ಮಳೆಯಿಂದ ರದ್ದಾದ ಕಾರಣ ಗುಂಪಿನ ಅಗ್ರಸ್ಥಾನದಿಂದ ಫೈನಲ್ ಪ್ರವೇಶಿಸಿತು. ಆದರೆ ಫೈನಲ್‌ನಲ್ಲಿ ಆಸ್ಟ್ರೇಲಿಯಾ 184/4 ಗಳಿಸಿತು. ಭಾರತ 99 ರನ್‌ಗಳಿಗೆ ಆಲೌಟ್ ಆಯಿತು. ಆಸ್ಟ್ರೇಲಿಯಾ 85 ರನ್‌ಗಳಿಂದ ಗೆದ್ದು ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಇಲ್ಲಿಯವರೆಗೆ ಭಾರತದ ಸಾಧನೆ
- 2009 ಗುಂಪು ಹಂತ
- 2010 ಗುಂಪು ಹಂತ
- 2012 ಗುಂಪು ಹಂತ
- 2014 ಗುಂಪು ಹಂತ
- 2016 ಗುಂಪು ಹಂತ
- 2018 ಸೆಮಿಫೈನಲ್
- 2020 ರನ್ನರ್–ಅಪ್
- 2023 ಸೆಮಿಫೈನಲ್

ಭಾರತದ ತಯಾರಿ

2025ರ ವಿಶ್ವಕಪ್ ಗೆದ್ದ ನಂತರ ಸಂಭ್ರಮದಲ್ಲಿ ತೇಲಾಡಿದ್ದ ಭಾರತೀಯ ಮಹಿಳಾ ತಂಡವು ಗೆದ್ದಿದ್ದಾಯಿತು, ನನ್ನ ಕೆಲಸ ಮುಗಿಯಿತೆಂದು ಕೂಡಲೇ ಇಲ್ಲ. ತಕ್ಷಣಕ್ಕೆ ಮೈದಾನಕ್ಕಿಳಿದು ಟಿ20 ಪಂದ್ಯಾವಳಿಯ ಸಮರಕ್ಕೆ ಸಿದ್ಧತೆ ಶುರು ಮಾಡಿತು. ಭಾರತದಲ್ಲಿ ಐಪಿಎಲ್ ಮಾದರಿ ಯಲ್ಲಿ ನಡೆಯುವ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ಆಟಗಾರ್ತಿಯರು ಅಲ್ಲಿಷ್ಟು ಪ್ರದರ್ಶನದೊಂದಿಗೆ ಮಿಂಚಿದ್ದುಂಟು. ಇಷ್ಟೇ ಅಲ್ಲದೆ ಪ್ರವಾಸಗಳನ್ನೂ ಮಾಡಿತು. ಇಷ್ಟಾದರೂ ವಿಧದ ರೀತಿಯೊಂದಿಗೆ ಅಭ್ಯಾಸ ನಡೆಸಿದೆ.

ತಂಡ

ಹರ್ಮನ್‌ಪ್ರೀತ್ ಕೌರ್(ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ),
ಬ್ಯಾಟರ್ಸ್: ಶೆಫಾಲಿ ವರ್ಮಾ, ಜೆಮಿಮಾ ರಾಡ್ರಿಗ್ಸ್, ಭಾರತಿ ಫುಲ್ಮಾಲಿ
ಆಲ್‌ರೌಂಡರ್‌ಗಳು: ದೀಪ್ತಿ ಶರ್ಮಾ, ಶ್ರೀ ಚರಣಿ, ಶ್ರೇಯಾಂಕಾ ಪಾಟೀಲ್, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ್
ವಿಕೆಟ್ ಕೀಪರ್ಸ್: ರಿಚಾ ಘೋಷ್, ಯಸ್ತಿಕಾ ಭಾಟಿಯಾ
ಬೌಲರ್ಸ್: ರಾಧಾ ಯಾದವ್, ನಂದನಿ ಶರ್ಮಾ, ರೇಣುಕಾ ಸಿಂಗ್



ಭಾರತ ಪಂದ್ಯಗಳ ವೇಳಾಪಟ್ಟಿ

ದಿನಾಂಕ	ಎದುರಾಳಿ	ಸ್ಥಳ	ಸಮಯ
ಜೂ.14	ಪಾಕಿಸ್ತಾನ	ಬರ್ಮಿಂಗ್‌ಹ್ಯಾಮ್	ಸಂಜೆ 7:00
ಜೂ.17	ನೆದರ್ಲೆಂಡ್ಸ್	ಲೀಡ್ಸ್	ಸಂಜೆ 7:00
ಜೂ.21	ದ.ಆಫ್ರಿಕಾ	ಮ್ಯಾಂಚೆಸ್ಟರ್	ಸಂಜೆ 7:00
ಜೂ.25	ಬಾಂಗ್ಲಾದೇಶ	ಮ್ಯಾಂಚೆಸ್ಟರ್	ಸಂಜೆ 7:00
ಜೂ.28	ಆಸ್ಟ್ರೇಲಿಯಾ	ಲಂಡನ್	ಸಂಜೆ 7:00

ರಾಷ್ಟ್ರೀಯ ಶಿಬಿರ
- ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್‌ಗೆ ವಿಶೇಷ ತರಬೇತಿ.
- ಪಿಚ್ ಪರಿಸ್ಥಿತಿಗೆ ಅನುಗುಣವಾಗಿ ಬ್ಯಾಟಿಂಗ್, ಬೌಲಿಂಗ್ ಸಿದ್ಧತೆ.

ಫಿಟ್ನೆಸ್, ಮಾನಸಿಕ ಸಿದ್ಧತೆ
- ಫಿಟ್ನೆಸ್ ತರಬೇತಿ
- ಒತ್ತಡ ನಿರ್ವಹಣೆ
- ಪಂದ್ಯ ಸನ್ನಿವೇಶಗಳ ಅಭ್ಯಾಸ

ಡಬ್ಲ್ಯುಪಿಎಲ್
- ಮಹಿಳಾ ಪ್ರೀಮಿಯರ್ ಲೀಗ್ ಭಾರತ ಮಹಿಳಾ ಕ್ರಿಕೆಟಿಗರಿಗೆ ದೊಡ್ಡ ವೇದಿಕೆಯಾಗಿದೆ. ವಿಶ್ವಮಟ್ಟದ ಆಟಗಾರರ ಜೊತೆ ಆಡುವ ಅನುಭವದಿಂದ ವಿಶ್ವಕಪ್‌ಗೆ ಉತ್ತಮ ಸಿದ್ಧತೆ ದೊರೆತಿದೆ.

ಇಂದು ಇಂಗ್ಲೆಂಡ್–ಶ್ರೀಲಂಕಾ ಪಂದ್ಯ

ಶುಕ್ರವಾರದಂದು ಪಂದ್ಯಾವಳಿ ಉದ್ಘಾಟನೆಗೊಳ್ಳಲಿದೆ. ವಿವಿಧ ಕಲಾವಿದರು ಪ್ರದರ್ಶನ ನೀಡಲಿದ್ದಾರೆ. ದಿಗ್ಗಜ ಮಹಿಳಾ ಕ್ರಿಕೆಟಿಗರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ನಂತರ ಮೊದಲ ಪಂದ್ಯದಲ್ಲಿ ಆತಿಥ್ಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ಮಹಿಳೆಯರ ತಂಡಗಳು ಮುಖಾಮುಖಿಯಾಗಲಿವೆ. ಭಾರತೀಯ ಕಾಲಮಾನ ಪ್ರಕಾರ ರಾತ್ರಿ 11ಗಂಟೆಗೆ ಈ ಪಂದ್ಯ ನಡೆಯಲಿದೆ.

ಸರಣಿ ಪಂದ್ಯಗಳು
- ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್‌ಗಳಂತಹ ಬಲಿಷ್ಠ ತಂಡಗಳ ವಿರುದ್ಧ ದ್ವಿಪಕ್ಷೀಯ ಸರಣಿಗಳು.

ಆರಂಭದ ಹೋರಾಟ (2009-2016)

ಮಹಿಳೆಯರ ಟಿ20 ವಿಶ್ವಕಪ್ ಆರಂಭವಾದಾಗ ಭಾರತವನ್ನು ಪ್ರಮುಖ ಫೇವರಿಟ್ ತಂಡವೆಂದು ಪರಿಗಣಿಸಲಾಗುತ್ತಿರಲಿಲ್ಲ. 2009, 2010, 2012, 2014 ಮತ್ತು 2016ರ ವಿಶ್ವಕಪ್‌ಗಳಲ್ಲಿ ಭಾರತ ಗುಂಪು ಹಂತವನ್ನೇ ದಾಟಲು ವಿಫಲವಾಯಿತು. ತಂಡದಲ್ಲಿ ಪ್ರತಿಭೆ ಇದ್ದರೂ ಸ್ಥಿರತೆ ಮತ್ತು ಅನುಭವದ ಕೊರತೆ ಕಾಣಿಸುತ್ತಿತ್ತು. ಆದರೆ ಇದೇ ಅವಧಿಯಲ್ಲಿ ಭಾರತದ ಮಹಿಳಾ ಕ್ರಿಕೆಟ್‌ಗೆ ಭದ್ರ ಅಡಿಪಾಯ ನಿರ್ಮಾಣವಾಯಿತು. ದೇಶೀಯ ಕ್ರಿಕೆಟ್‌ನಲ್ಲಿ ಹೆಚ್ಚು ಅವಕಾಶಗಳು ದೊರೆಯತೊಡಗಿದವು ಮತ್ತು ಹೊಸ ಪ್ರತಿಭೆಗಳು ಹೊರಹೊಮ್ಮಿದವು

ಇತಿಹಾಸ

ಭಾರತ ಮಹಿಳಾ ತಂಡವು 2009ರ ಮೊದಲ ಟಿ20 ವಿಶ್ವಕಪ್‌ನಿಂದಲೇ ಭಾಗವಹಿಸುತ್ತಿದೆ. ಆದರೆ ಆರಂಭಿಕ ಆವೃತ್ತಿಗಳಲ್ಲಿ ನಿರೀಕ್ಷಿತ ಯಶಸ್ಸು ಸಿಗದಿದ್ದರೂ, ಕಳೆದ ದಶಕದಲ್ಲಿ ಭಾರತ ವಿಶ್ವದ ಬಲಿಷ್ಠ ತಂಡಗಳಲ್ಲಿ ಒಂದಾಗಿ ಬೆಳೆದಿದೆ. ಮಿಥಾಲಿ ರಾಜ್, ಗೋಸ್ವಾಮಿ ಅಂಥ ಆಟಗಾರರು ವಿಶ್ವಕಪ್‌ನಲ್ಲಿ ಮಿಂಚಿದ್ದಾರೆ.

ಭಾರತದ ಪ್ರಮುಖ ಆಟಗಾರ್ತಿಯರು

ತಯಾರಿ ಒಂದು ಭಾಗವಾದರೆ ಭಾರತೀಯ ಕ್ರಿಕೆಟ್ ಅಭಿಮಾನಿಗಳಲ್ಲಿ ಮೂಡಿರುವ ನಿರೀಕ್ಷೆಯ ಹಿಂದಿದೆ ಕೆಲವರ ಹೆಸರು ಇದ್ದೇ ಇರುತ್ತದೆ. ವೈಯಕ್ತಿಕ ಫೇವರಿಟ್ ವಿಚಾರ ಬಿಟ್ಟರೂ ನನ್ನ ದೇಶವನ್ನು ಗೆಲ್ಲಿಸಬಹುದಾದ ಸಮರ್ಥ ಮತ್ತು ಪ್ರಮುಖ ಆಟಗಾರ್ತಿಯರಿವರು ಎಂಬ ಲೆಕ್ಕಾಚಾರ ಇರುತ್ತದೆ. ಅದರಂತೇ ಭಾರತ ಈ ಬಾರಿ ವಿವಿಧ ಆಟಗಾರ್ತಿಯರೊಂದಿಗೆ ಮೈದಾನಕ್ಕಿಳಿಯಲಿದೆ. ಅವರು ಯಾರೆಂದರೆ.





ಹರ್ಮನ್‌ಪ್ರೀತ್
- ತಂಡದ ನಾಯಕಿ
- ಸ್ಫೋಟಕ ಬ್ಯಾಟರ್
- ದೊಡ್ಡ ಪಂದ್ಯಗಳಲ್ಲಿ ನಿರ್ಣಾಯಕ ಪ್ರದರ್ಶನ ನೀಡುವ ಸಾಮರ್ಥ್ಯ

ಸ್ಮೃತಿ ಮಂಧಾನ
- ಎಡಗೈ ಆರಂಭಿಕ ಬ್ಯಾಟರ್
- ಭಾರತದ ಪ್ರಮುಖ ರನ್‌ಗಳ ಮೂಲ
- ರನ್ ಹೊಳೆ ಹರಿಸುವ ಸಾಮರ್ಥ್ಯ

ಜೆಮಿಮಾ
- ಮಧ್ಯಮ ಕ್ರಮಾಂಕದ ಆಕ್ರಮಣಕಾರಿ ಬ್ಯಾಟರ್
- ವೇಗವಾಗಿ ರನ್ ಗಳಿಸುವಲ್ಲಿ ಪರಿಣತಿ
- ಒತ್ತಡದಲ್ಲಿ ಸಾಥ್ ಕೊಡುವ ಸಾಮರ್ಥ್ಯ

ಶೆಫಾಲಿ ವರ್ಮಾ
- ಭಯವಿಲ್ಲದ ಬ್ಯಾಟಿಂಗ್ ಶೈಲಿ
- ಪವರ್‌ಪ್ಲೇನಲ್ಲಿ ಪಂದ್ಯವನ್ನು ತಿರುಗಿಸುವ ಸಾಮರ್ಥ್ಯ
- ಸ್ಫೋಟಕ ಬ್ಯಾಟಿಂಗ್‌ನ ಇಂಜಿನ್

ದೀಪ್ತಿ ಶರ್ಮ
- ವಿವಿಧ ಪಂದ್ಯಾವಳಿಯಲ್ಲಿ ಆಡಿದ ಅನುಭವ
- ಬ್ಯಾಟ್ ಬೌಲಿಂಗ್ ನಲ್ಲೂ ಪ್ರಮುಖ ಪಾತ್ರ
- ಒತ್ತಡದಲ್ಲಿ ಆಡಬಲ್ಲ ವಿಶ್ವಾಸ

ರಿಚಾ ಘೋಷ್
- ಸ್ಫೋಟಕ ಬ್ಯಾಟರ್
- ವಿಕೆಟ್ ಹಿಂದೆ ಪಂದ್ಯ ತಿರುಗಿಸುವ ಸಾಮರ್ಥ್ಯ
- ಸ್ಕೋರ್ ಹಿಗ್ಗಿಸಬಲ್ಲ ಶಕ್ತಿ

ರೇಣುಕಾ ಸಿಂಗ್
- ವೇಗದ ಬೌಲರ್
- ಹೊಸ ಚೆಂಡಿನಲ್ಲಿ ವಿಕೆಟ್ ಪಡೆಯುವ ಸಾಮರ್ಥ್ಯ
- ನಿರೀಕ್ಷೆ ಮೂಡಿಸಿರುವ ಯುವತಿಯರು

ಶ್ರೇಯಾಂಕಾ
- ಸ್ಪಿನ್ ಬೌಲರ್
- ವಿಕೆಟ್ ಕಿತ್ತುವ ಸಾಮರ್ಥ್ಯ

ಭಾರತಿ ಫುಲಾಲಿ
- ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಮಿಂಚಿನಾಟ
- ಸ್ಫೋಟಕ ಬ್ಯಾಟಿಂಗ್ ಮಾಡುವ ಸಾಮರ್ಥ್ಯ


ನಂದಿನಿ ಶರ್ಮ
- ಮಾರಕ ಬೌಲಿಂಗ್ ದಾಳಿ
- ದೊಡ್ಡ ಬ್ಯಾಟರ್‌ಗಳ ಕಟ್ಟಿಹಾಕುವ ಸಾಮರ್ಥ್ಯ


ಕ್ರಾಂತಿ ಗೌಡ
- ವಿಕೆಟ್ ಕಿತ್ತುವ ವಿಶ್ವಾಸ
- ಸ್ವಿಂಗ್‌ನ ಜಾದೂ

ಫಿಫಾ ವಿಶ್ವಕಪ್ ಉದ್ಘಾಟನೆ









ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಗೆ ಅದ್ದೂರಿ ಚಾಲನೆ ಸಿಕ್ಕಿತು. ಉದ್ಘಾಟನಾ ಸಮಾರಂಭದಲ್ಲಿ ಜಗತ್ತಿನ ಶ್ರೇಷ್ಠ ಕಲಾವಿದರು ಪ್ರದರ್ಶನ ನೀಡಿದರು. ದಿಗ್ಗಜರು ಹಾಜರಿದ್ದು ಕಾರ್ಯಕ್ರಮದ ಹಿರಿಮೆ ಹೆಚ್ಚಿಸಿದರು. ವಿವಿಧ ದೇಶದ ಸಂಸ್ಕೃತಿಗಳನ್ನು ಪ್ರತಿನಿಧಿಸುವ ಪ್ರದರ್ಶನಗಳೂ ನಡೆದವು. ಕ್ರೀಡಾಂಗಣದ ಸುತ್ತಲೂ ಕೋಟ್ಯಂತರ ಅಭಿಮಾನಿಗಳು ಸೇರಿ ಜಗತ್ತಿನ ಶ್ರೇಷ್ಠ ಪಂದ್ಯಾವಳಿಯಲ್ಲಿ ಒಂದಾದ ಫಿಫಾ ವಿಶ್ವಕಪ್ 2026ರ ಉದಯವನ್ನು ಆನಂದಿಸಿದರು.

ಅ.4 ರಿಂದ ನ.21ರವರೆಗೆ 2027ರ ಏಕದಿನ ವಿಶ್ವಕಪ್

ದುಬೈ: ಬಹು ನಿರೀಕ್ಷಿತ ಪುರುಷರ ಏಕದಿನ ವಿಶ್ವಕಪ್ ಪಂದ್ಯಾವಳಿಯು 2027ರ ಅಕ್ಟೋಬರ್ 4ರಿಂದ ನವೆಂಬರ್ 21ರವರೆಗೆ ನಡೆಯಲಿದೆ.

ದ.ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾದಲ್ಲಿ ನಡೆಯಲಿರುವ ವಿಶ್ವಕಪ್ ಪಂದ್ಯಾವಳಿಯು 54 ಪಂದ್ಯಗಳನ್ನು ಹೊಂದಿರಲಿದೆ ಎಂದು ವರದಿಯಾಗಿದೆ. ಇತ್ತೀಚೆಗೆ ಅಹಮದಾಬಾದ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ ಸಭೆಯಲ್ಲಿ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿದೆ. ದ. ಆಫ್ರಿಕಾದ ಎಂಟು ಕ್ರೀಡಾಂಗಣಗಳೇ ಸುಮಾರು



41 ಪಂದ್ಯಗಳನ್ನು ಆಯೋಜಿಸಲಿವೆ ಎನ್ನಲಾಗಿದ್ದು, ಜಿಂಬಾಬ್ವೆ 10, ನಮೀಬಿಯಾ ಕೇವಲ 3 ಪಂದ್ಯಗಳನ್ನು ಆಯೋಜಿಸಲಿವೆ. 2 ಕ್ರೀಡಾಂಗಣಗಳನ್ನು ಹೊಂದಿರುವ ಜಿಂಬಾಬ್ವೆಯಲ್ಲಿ ಮೂರನೇ ಕ್ರೀಡಾಂಗಣವೂ ಸೇರಿಕೊಂಡಿದೆ. ಇದೆ ಮೊದಲ ಬಾರಿಗೆ ವಿಕ್ಟೋರಿಯಾ ಫಾಲ್ಸ್‌ನಲ್ಲಿ ಪಂದ್ಯಗಳನ್ನು ನಡೆಸಲು ತೀರ್ಮಾನಿಸಲಾಗಿದೆ. 2003ರಲ್ಲಿ ಕೊನೆಯ ಬಾರಿಗೆ ದ.ಆಫ್ರಿಕಾ ಏಕದಿನ ವಿಶ್ವಕಪ್ ಪಂದ್ಯಾವಳಿಯನ್ನು ಆಯೋಜಿಸಿತ್ತು. ಜಿಂಬಾಬ್ವೆ ಮತ್ತು ನಮೀಬಿಯಾ ಅಂಡರ್–19 ವಿಶ್ವಕಪ್ ಅನ್ನು ಮಾತ್ರ ಆಯೋಜಿಸಿದೆ. ಮಹತ್ವದ ಬೆಳವಣಿಗಳಲ್ಲಿ ಈ ಬಾರಿ 14 ತಂಡಗಳು ಮುಖಾಮುಖಿಯಾಗಲಿವೆ. ಐಸಿಸಿ ರ್‍ಯಾಂಕಿಂಗ್ ಮೂಲಕ ತಂಡಗಳ ವಿಲಿನ ಮಾಡಲಾಗುವುದು. ದ.ಆಫ್ರಿಕಾ ಮತ್ತು ಜಿಂಬಾಬ್ವೆ ತಂಡಗಳು ಐಸಿಸಿಯ ಸಂಪೂರ್ಣ ಸದಸ್ಯತ್ವ ಹೊಂದಿರುವುದರಿಂದ ಆಯೋಜಕ ತಂಡಗಳಾಗಿ ಈಗಾಗಲೇ ಅರ್ಹತೆ ಪಡೆದುಕೊಂಡಿವೆ. ಆದರೆ ನಮೀಬಿಯಾ ಅರ್ಹತಾ ಸುತ್ತಿನಲ್ಲಿ ಭಾಗವಹಿಸಬೇಕಾಗಿದೆ.

ಕೂಟದಿಂದ ಯುವಕರಿಗೆ ಅವಕಾಶ: ದ್ರಾವಿಡ್
ಮಹಾರಾಜ ಟ್ರೋಫಿ ಅನಾವರಣ

ಬೆಂಗಳೂರು: ಮಹಾರಾಜ ಟ್ರೋಫಿ ಪಂದ್ಯಾವಳಿ ಒಂದು ಕ್ರಿಕೆಟ್ ಕೂಟವಾಗಿರದೆ ನೂರಾರು ಕನ್ನಡಿಗರಿಗೆ ವೇದಿಕೆ ಒದಗಿಸುತ್ತದೆ ಎಂದು ಮಾಜಿ ಕ್ರಿಕೆಟಿಗ, ದಿಗ್ಗಜ ರಾಹುಲ್ ದ್ರಾವಿಡ್ ತಿಳಿಸಿದರು.

ಜೂನ್ 20ರಿಂದ ಶುರುವಾಗಲಿರುವ ಮಹಾರಾಜ ಟ್ರೋಫಿ ಪಂದ್ಯಾವಳಿಯ ಟ್ರೋಫಿ ಅನಾವರಣ ಕಾರ್ಯಕ್ರಮ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಿತು. ದಿಗ್ಗಜ ರಾಹುಲ್ ದ್ರಾವಿಡ್, ವೆಂಕಟೇಶ್ ಪ್ರಸಾದ್, ಕೆಎಸ್‌ಸಿಎ ಆಡಳಿತಾಧಿಕಾರಿಗಳಾದ ಸಂತೋಷ್ ಮೆನನ್, ವಿನಯ್ ಮೃತ್ಯುಂಜಯ, ಎಮ್.ಎಸ್. ಕೇಶವ್ ಸೇರಿದಂತೆ ಗಣ್ಯರಿಂದ ಕಪ್ ಅನಾವರಣಗೊಂಡಿತು. ಈ ವೇಳೆ ಮಾತನಾಡಿರುವ ದ್ರಾವಿಡ್ ಮಹಾರಾಜ ಟ್ರೋಫಿ ಪಂದ್ಯಾವಳಿಯು ಕರ್ನಾಟಕದ ಮಹತ್ವದ ಕ್ರಿಕೆಟ್ ಪಂದ್ಯಾವಳಿ. ವೈಯಕ್ತಿಕವಾಗಿ ನಾನೇ ಐಪಿಎಲ್ ಆಡಿದ್ದೇನೆ. ಹೀಗಿರುವಾಗ ಮಹಾರಾಜ ಟ್ರೋಫಿ ಅಂಥ ಪಂದ್ಯಾವಳಿಯಿಂದ ಯುವಕರಿಗೆ ವೇದಿಕೆ ಸಿಗುತ್ತವೆ. ಐಪಿಎಲ್ ಆಡುವವರು ಮತ್ತು ಫ್ರಾಂಚೈಸಿಗಳು ಇಂಥದ್ದೇ ಕೂಟಗಳ ಮೇಲೆ ಗಮನವಿಡುತ್ತಾರೆ. ಪಂದ್ಯಗಳನ್ನು ನೋಡದಿದ್ದರೂ ಸ್ಟ್ಯಾಟ್ ಮತ್ತು ಸ್ಕೋರ್‌ಕಾರ್ಡ್‌ಗಳು ಆಟಗಾರರ ಆಯ್ಕೆ ವಿಚಾರದಲ್ಲಿ ದೊಡ್ಡ ಪಾತ್ರವನ್ನೇ ವಹಿಸುತ್ತವೆ ಎಂದರು.

ವೆಂಕಟೇಶ್ ಪ್ರಸಾದ್ ಮಾತನಾಡಿ, ಮಹಾರಾಜ ಟ್ರೋಫಿ ಪಂದ್ಯಾವಳಿಯು ಯುವಕರಿಗೆ ಕೌಶಲವನ್ನು ಪ್ರದರ್ಶಿಸಲು ದೊಡ್ಡ ಅವಕಾಶ ಮಾಡಿಕೊಡುತ್ತದೆ.



ಅನುಭವ ನೀಡುತ್ತದೆ. ಕ್ರಿಕೆಟ್ ಅನ್ನು ಕೆರಿಯರ್ ಆಗಿ ಆಯ್ಕೆ ಮಾಡುವ ಯುವಕರಿಗೆ ಮಹಾರಾಜ ಟ್ರೋಫಿ ದಾರಿ ಮಾಡಿಕೊಡುತ್ತದೆ. ಇದು ಮುಂದಿನ ಪೀಳಿಗೆ ಚಾಂಪಿಯನ್ನರ ಆಟ. ಕರ್ನಾಟ ಕ್ರಿಕೆಟ್ ಸಂಸ್ಥೆ ಕ್ರಿಕೆಟ್‌ಗೆ ಕೊಡುಗೆ ನೀಡುತ್ತಲೇ ಇರುತ್ತದೆ ಎಂದರು.

ರಗ್ಬಿ ಕೂಟಕ್ಕೆ ಬೆಂಗಳೂರು ತಂಡ ಸಿದ್ಧ

ಬೆಂಗಳೂರು: ಹೈದರಾಬಾದ್‌ನ ಗಚ್ಚಿಬೌಲಿ ಸ್ಟೇಡಿಯಂನಲ್ಲಿ ಜೂನ್ 16ರಿಂದ 28ರವರೆಗೆ ನಡೆಯುವ ಎಚ್‌ಎಸ್‌ಬಿಸಿ ರಗ್ಬಿ ಪ್ರೀಮಿಯಂ ಲೀಗ್‌ನಲ್ಲಿ ಭಾಗವಹಿಸಲಿರುವ ಬೆಂಗಳೂರಿನ ರಗ್ಬಿ ಬೆಂಗಳೂರು ಬ್ರೇವ್‌ಹಾರ್ಟ್ಸ್‌ಭಿ ತಂಡವನ್ನು ಗುರುವಾರ ಅನಾವರಣಗೊಳಿಸಲಾಯಿತು.

ತಂಡದ ಸಹ ಮಾಲೀಕರಾದ ಮಣಿಪಾಲ್ ಎಜುಕೇಷನ್ ಮತ್ತು ಮೆಡಿಕಲ್ ಗ್ರೂಪ್‌ನ ಅಧ್ಯಕ್ಷರಾದ ರಂಜನ್ ಪೈ ಮತ್ತು ಸೋಹಮ್ ಇನ್‌ಫ್ರಾಸ್ಟ್ರಕ್ಚರ್ ಅಧ್ಯಕ್ಷ ಹಾಗೂ ಮಿರರ್ ಸಿಇಒ ಸಂಜಿತ್ ಶೆಟ್ಟಿ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವನ್ನು ಪರಿಚಯಿಸಿದರು. ಹದಿಮೂರು ದಿನಗಳವರೆಗೆ ರಗ್ಬಿ ಸೆವೆನ್ಸ್ ಟೂರ್ನಿಯಲ್ಲಿ ಆರು ಫ್ರಾಂಚೈಸಿ ತಂಡಗಳು ಸ್ಪರ್ಧಿಸಲಿವೆ. ಭಾರತೀಯ ಫ್ರಾಂಚೈಸಿ ಬ್ಯಾನರ್‌ನಡಿ ಬೆಂಗಳೂರು ತಂಡ ನೆಚ್ಚಿನ ತಂಡಗಳಲ್ಲಿ ಒಂದೆನಿಸಿ ಕಣಕ್ಕೆ ಇಳಿಯುತ್ತಿದೆ. ಬ್ರೇವ್‌ಹಾರ್ಟ್ಸ್ ಸೀಸನ್ 2 ತಂಡವನ್ನು ಸಮತೋಲನದಿಂದ ರೂಪಿಸಲಾಗಿದ್ದು ವಿಶ್ವಕಪ್ ಮತ್ತು ಒಲಿಂಪಿಕ್ ಆಟಗಾರರನ್ನೊಳಗೊಂಡಿದೆ. ಆಸ್ಟ್ರೇಲಿಯದ ಅತಿಹೆಚ್ಚು ಬಾರಿ ಪುರುಷರ ಸೆವೆನ್ಸ್ ಪ್ಲೇಯರ್ ಪ್ರಶಸ್ತಿ ಗೌರವ ಪಡೆದಿರುವ ಹೆನ್ರಿ ಹಚಿಸನ್ ತಂಡವನ್ನು ಮುನ್ನಡೆಸುತ್ತಿದ್ದಾರೆ. 2018ರ ರಗ್ಬಿ ವರ್ಲ್ಡ್ ಕಪ್ ಸೆವೆನ್ಸ್ ವಿನ್ನರ್ ಅಕುಲಾ ರೊಕೊಲಿಸೊವಾ ತಂಡದಲ್ಲಿ ಮುಂಚೂಣಿಯಲ್ಲಿದ್ದಾರೆ. 2024ರ ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತ, ಸ್ಪ್ರಿಂಗ್‌ಬಾಕ್ ಸೆವೆನ್ಸ್ ವರ್ಷದ ಆಟಗಾರ ಶಿಲ್ಟನ್ ವ್ಯಾನ್ ವಿಕ್, ಮೂರು ಬಾರಿಯ ಒಲಿಂಪಿಯನ್ (ರಿಯೋ, ಟೋಕಿಯೋ ಮತ್ತು ಪ್ಯಾರಿಸ್) ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ನ ಬೆಳ್ಳಿ ಪದಕ ವಿಜೇತ ಹಾಗೂ 150ಕ್ಕೂ ಹೆಚ್ಚು ಅಂತರ್ ರಾಷ್ಟ್ರೀಯ ಪಂದ್ಯಗಳ ಅನುಭವಿ ನರೋಹಿ ಮೆಕ್‌ಗಾರ್ವಿ ಬ್ಲಾಕ್, ಎಚ್‌ಎಸ್‌ಬಿಸಿ ಎಸ್‌ವಿಎನ್ ಸರ್ಕ್ಯೂಟ್‌ನಲ್ಲಿ ಸ್ಫೋಟಕ ವಿಂಗರ್‌ಗಳಲ್ಲಿ ಒಬ್ಬರಾಗಿರುವ ರ್‍ಯಾನ್ ಅಪ್ಸ್, ಮತ್ತು ಪ್ಯಾರಿಸ್ ಗೇಮ್ಸ್‌ನಲ್ಲಿ ಚೊಚ್ಚಲ ಟೂರ್ನಿಯಲ್ಲಿ ಸ್ಫೋಟಕ ಆಟದ ಮೂಲಕ ಗಮನ ಸೆಳೆದಿರುವ ಮೋಟು ಒಪೆಟಾಯ್ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಭಾರತಕ್ಕೆ ಮಳೆಯಾಘಾತ

ಡಂಬುಲಾ: ಭಾರತ ಎ, ಶ್ರೀಲಂಕಾ ಎ ಮತ್ತು ಅಫ್ಘಾನ್ ಎ ತಂಡಗಳ ನಡುವೆ ನಡೆಯುತ್ತಿರುವ ತ್ರಿಕೋನ ಸರಣಿಯ ಎರಡನೇ ಪಂದ್ಯದಲ್ಲಿ ಭಾರತಕ್ಕೆ ಭಾರೀ ಆಘಾತ ಎದುರಾಗಿದೆ. ಗುರುವಾರ ನಡೆದ ಪಂದ್ಯದಲ್ಲಿ ಭಾರತವು ಅಫ್ಘಾನ್ ವಿರುದ್ಧ ಸೋಲನುಭವಿಸಿದೆ. ಮಳೆಯಿಂದಾಗಿ ತತ್ತರಿಸಿದ ಭಾರತ 349 ರನ್ ಬಾರಿಸಿದರೂ, 25.5 ಓವರ್‌ಗಳಲ್ಲಿ 174 ರನ್ ಬಿಟ್ಟುಕೊಟ್ಟ ಬೆನ್ನಲ್ಲೇ ಡಿಎಲ್‌ಎಸ್ ನಿಯಮಾಧಾರದ ಮೇಲೆ ಸೋಲನುಭವಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 349 ರನ್ ಗಳಿಸಿತು. ಪ್ರಭಸಿಮ್ರನ್ ಸಿಂಗ್ 69 ಬಾಲ್‌ಗಳಲ್ಲಿ 84 ರನ್ ಬಾರಿಸಿದರು. ವೈಭವ್ ಸೂರ್ಯವಂಶಿ 22 ಬಾಲ್‌ಗಳಲ್ಲಿ 44 ರನ್ ಗಳಿಸಿದರು. ಗಾಯಕ್ವಾಡ್ 66 ಮತ್ತು ತಿಲಕ್ ವರ್ಮಾ ಕೂಡ 66 ರನ್ ಗಳಿಸಿದರು. ಸೂರ್ಯಾಂಶ್ 40 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಅಫ್ಘಾನಿಸ್ತಾನ ಪರ ಅಬ್ದುಲ್ಲಾ 9 ಓವರ್‌ಗಳಲ್ಲಿ 68 ರನ್ ಕೊಟ್ಟು 5 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಅಫ್ಘಾನಿಸ್ತಾನ 25.5 ಓವರ್‌ಗಳಲ್ಲಿ 174 ರನ್ ಗಳಿಸಿತ್ತು. ನಾಯಕ ಇಮ್ರಾನ್ 75 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು. 2 ವಿಕೆಟ್ ಮಾತ್ರ ಉಳಿದಿದ್ದವು. ಮುಂದೆ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಪರಿಣಾಮ 4 ರನ್ ಮುಂದಿದ್ದ ಅಫ್ಘಾನ್ ಗೆದ್ದಿತೆಂದು ಘೋಷಣೆಯಾಯಿತು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6012

ಎಡದಿಂದ ಬಲಕ್ಕೆ
1.ಸ್ವಾತಂತ್ರ್ಯವಿಲ್ಲದೇ ಕೆಲಸ ಮಾಡುವುದು (2)
2.ಕಂದನ ಕಣ್ಣಿಗೆ ಬಿದ್ದ ಯುದ್ಧ (3)
4.ಕನ್ನಡದ ಅಗ್ರಗಣ್ಯ ಆದಿಕವಿ (2)
6.ಚಲಿಸುವಂತೆ ರಚಿಸಿದ ಮನೆ (4)
8.ಚಿನ್ನವನ್ನಳೆಯಲು ಬಳಸುತ್ತಿದ್ದ ಕಾಳು (4)
12.ಮತ್ತು ಇದರ ನಡುವೆ ತಿರುಗಣೆಯಿದೆ (4)
14.ಹತ–ನಸು ಸೇರಿ ಎಳೆಮೆಯಾಯ್ತು (4)
15.ಎತ್ತರಕ್ಕೆ ಹಾರುವಿಕೆ (2)
16.ಹಗುರವಾಗಿ ಕಂಡ ಜಲವಾಹನ (3)
17.ಇದು ಇಲಿಯ ಮನೆಯಂತೆ (2)

ಮೇಲಿನಿಂದ ಕೆಳಕ್ಕೆ
1.ಎಂದೆಂದೂ ಬತ್ತದ ಹೊಳೆ (4)
2.ಇದು ಮುಚ್ಚಳವಿರುವ ಸಣ್ಣಪಾತ್ರೆ (3)
3.ನಗುವಿನ ನಡುವೆ ಸುಕ್ಕುಸುಕ್ಕಾಗುವಿಕೆಯಿದೆ (3)
5.ರಾಜಿ ಮಾಡಿಕೊಳ್ಳದೆ ಸೋತುಹೋದವನು (4)
7.ವಿಷಯವನ್ನು ಬದಲಿಸಿ ಮಾತನಾಡು (5)
9.ಥಳಥಳಿಸು–ಮಿನುಗುವಿಕೆ (5)
10.ದಪ್ಪನೆಯ ನೂಲಿನ ನೆಲಹಾಸು (4)
11.ಉದ್ದ–ಅಗಲ–ಎತ್ತರ ಗುಣಿಸಿದರೆ ಬರುವ ಲಬ್ಧ (4)
13.ಎಲೆಗೆ ಹಸಿರು ಬಣ್ಣ ನೀಡುವಂಥಾದ್ದು ತಲೆಕೆಳಗಾಗಿದೆ (3)
14.ಹೊಲದಲ್ಲಿ ಕುಂಟೆ ಹೊಡೆಯುವಿಕೆ (3)

6011 ಉತ್ತರ

ಎಡದಿಂದ ಬಲಕ್ಕೆ:
1.ಧರತಿ 3.ಅಧ್ಯಾಪನ
5.ಕೋಲಾಹಲ 7.ದಶಾನನ
8.ನಡುಗಿಸು 10.ಸುಖಾಸನ
12.ಧನಾಗಮ 14.ಧರಣಿಜ
16.ಅಣಿಮುತ್ತು
17.ಮಾಳಿಗೆ

ಮೇಲಿನಿಂದ ಕೆಳಕ್ಕೆ :
1.ಧನ 2.ಕೋತಿ 4.ಪವನ
6.ಲಾಗೋಡು 7.ದಕ್ಕಿಸು
9.ಸುದಾಮ 11.ಸರಣಿ
13.ನಾಗಿಣಿ 15.ಜಮಾ
16.ಅಗೆ

ಕಿರುಸುದ್ದಿ

ಜೂ.14ರಂದು ರಾಮಕೃಷ್ಣ ಮಠದಲ್ಲಿ ಆಧ್ಯಾತ್ಮಿಕ ಶಿಬಿರ

ಮಂಗಳೂರು: ಮಂಗಳಾದೇವಿಯಲ್ಲಿರುವ ರಾಮಕೃಷ್ಣ ಮಠದಲ್ಲಿ ಜೂ.14ರಂದು ಅಂತರ್ಯೋಗ ಆಧ್ಯಾತ್ಮಿಕ ಶಿಬಿರ ನಡೆಯಲಿದೆ. ಕಾರ್ಯಕ್ರಮವು ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಜರುಗಲಿದ್ದು, ಆಸಕ್ತರಿಗೆ ಪ್ರವೇಶ ಮುಕ್ತವಾಗಿರುತ್ತದೆ. ಆಸಕ್ತರು ಮುಂಚಿತವಾಗಿ ತಮ್ಮ ಹೆಸರುಗಳನ್ನು ಆಶ್ರಮದ ಕಾರ್ಯಾಲಯದಲ್ಲಿ (ದೂ. 0824- 2414412) ನೋಂದಾಯಿಸಬಹುದು. ಕಾರ್ಯಕ್ರಮದಲ್ಲಿ ಅರ್ಚನೆ, ಭಜನೆ, ಧ್ಯಾನ, ಉಪನ್ಯಾಸ ಇರಲಿದೆ. ನಾಗ್ಪುರ ರಾಮಕೃಷ್ಣ ಮಠದ ಸ್ವಾಮಿ ರಾಘವೇಂದ್ರಾನಂದಜಿ ಅವರು 'ಶ್ರೀ ರಾಮಕೃಷ್ಣರ ಗೃಹಸ್ಥ ಭಕ್ತರು: ಆಧ್ಯಾತ್ಮಿಕತೆ ಮತ್ತು ಲೌಕಿಕ ಜೀವನವನ್ನು ಸಮತೋಲನಗೊಳಿಸುವುದು' ಎಂಬ ವಿಷಯವಾಗಿ, ಮತ್ತು ಬಳ್ಳಾರಿ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಮಂಗಲನಾಥಾನಂದಜಿ ಅವರು 'ಯೋಗ ಕ್ಷೇಮಮ್ ವಹಾಮ್ಯಹಮ್' ಎಂಬ ವಿಷಯವಾಗಿ, ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ ಅವರು 'ನಿತ್ಯಜೀವನದಲ್ಲಿ ಅಧ್ಯಾತ್ಮ' ಎಂಬ ವಿಷಯವಾಗಿ ಪ್ರವಚನ ನೀಡಲಿರುವರು. ಮಧ್ಯಾಹ್ನ 1ಕ್ಕೆ ಸ್ವಾತಿ ರೈ ಮತ್ತು ತಂಡದಿಂದ 'ಭಕ್ತಿ ಕುಸುಮಾಂಜಲಿ' ಸಂಗೀತ ಕಾರ್ಯಕ್ರಮ ನಡೆಯಲಿದೆ.

ಇಲಿವಿಷ ಸೇವಿಸಿ ಚಿಕಿತ್ಸೆಯಲ್ಲಿದ್ದ ವಿದ್ಯಾರ್ಥಿನಿ ಮೃತ್ಯು

ಕಾಸರಗೋಡು: ಇಲಿವಿಷ ಸೇವಿಸಿ ಚಿಕಿತ್ಸೆಯಲ್ಲಿದ್ದ ಚೆರುವತ್ತೂರು ಕೈದಕ್ಕಾಡ್ ಪಯ್ಯಂಗಿ ಬಿಸ್ಮಿಲ್ಲಾ ರಸ್ತೆ ಬಳಿಯ ನಿವಾಸಿ ಅಬ್ದುಲ್ ರಹಮಾನ್‌ರ ಪುತ್ರಿ ಮುಬಶಿರಾ (19) ಮೃತಪಟ್ಟ ಘಟನೆ ನಡೆದಿದೆ. ಅವರು ಕಾಲೇಜು ವಿದ್ಯಾರ್ಥಿನಿಯಾಗಿದ್ದರು. ಜೂ.2ರಂದು ಮನೆಯಲ್ಲಿ ಇಲಿವಿಷ ಸೇವಿಸಿದ್ದರು. ಬಳಿಕ ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರು ತಂದೆ, ತಾಯಿ, ಮೂರು ಮಂದಿ ಸಹೋದರ ಸಹೋದರಿಯನ್ನು ಅಗಲಿದ್ದಾರೆ.

ಎಂಡಿಎಂಎ ಸಹಿತ ಇಬ್ಬರ ಬಂಧನ

ಕಾಸರಗೋಡು: ಜಿಲ್ಲೆಯ ವಿವಿಧೆಡೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಎಂಡಿಎಂಎ ಸಹಿತ ಇಬ್ಬರನ್ನು ಬಂಧಿಸಿದ್ದಾರೆ. ಹೊಸದುರ್ಗ ಪೇಟೆಯಲ್ಲಿ ಹೊಸದುರ್ಗ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ 3.200 ಗ್ರಾಂ ಎಂಡಿಎಂಎ ಪತ್ತೆಹಚ್ಚಿ ಮಡಿಕ್ಕೈ ಚಾಳಿಕ್ಕಡವು ನಿಥಾ ಮಂಜಿಲ್‌ನ ಪಿ.ಪಿ.ಸಿರಾಜ್ (38) ಎಂಬಾತನನ್ನು ಬಂಧಿಸಲಾಗಿದೆ. ಅದೇ ರೀತಿ ಅಂಬಲತ್ತರ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ 2.12 ಗ್ರಾಂ ಎಂಡಿಎಂಎ ಸಹಿತ ಹೊಸದುರ್ಗ ಸಮೀಪದ ಬೇಳೂರು ಮೂರನೇ ಮೈಲು ಮುಂಡೋಟ್ ಹೌಸ್‌ನ ಉಣ್ಣಿಕೃಷ್ಣನ್ ಎನ್.ಕೆ. (33) ಎಂಬಾತನನ್ನು ಸೆರೆ ಹಿಡಿಯಲಾಗಿದೆ.

ಕೋಕಾ ಪ್ರಕರಣ: ಇಬ್ಬರ ಬಂಧನ

ಉಡುಪಿ: ಕೋಟ ಪೊಲೀಸ್ ಠಾಣೆಯ ಕೋಕಾ ಕಾಯ್ದೆ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿಗಳನ್ನು ಉಡುಪಿ ಪೊಲೀಸರು ಬಂಧಿಸಿದ್ದಾರೆ.




ಬಂಧಿತರನ್ನು ಮನೋಜ್ ಕುಲಾಲ್ ಅಲಿಯಾಸ್ ಮನೋಜ್ ಕೋಡಿಕೆರೆ ಮತ್ತು ಚೇತನ್ ಅಲಿಯಾಸ್ ಚೇತು ಪಡೀಲ್ ಎಂದು ಗುರುತಿಸಲಾಗಿದೆ. ಆರೋಪಿಗಳ ಪತ್ತೆಗೆ ಸುಳಿವು ನೀಡಿದವರಿಗೆ ಪೊಲೀಸ್ ಇಲಾಖೆಯು 50,000 ರೂ. ನಗದು ಬಹುಮಾನ ಘೋಷಿಸಿತ್ತು. ಸಾರ್ವಜನಿಕರು ನೀಡಿದ ಖಚಿತ ಮಾಹಿತಿ ಮೇರೆಗೆ ಚೇತನ್‌ನನ್ನು ಏ. 30ರಂದು ಹಾಗೂ ಮನೋಜ್ ಕೋಡಿಕೆರೆಯನ್ನು ಜೂನ್ 11ರಂದು ದಸ್ತಗಿರಿ ಮಾಡಲಾಗಿದ್ದು, ಬಾತ್ಮೀದಾರರಿಗೆ ಬಹುಮಾನದ ಹಣ ವಿತರಿಸಲಾಗಿದೆ.

ನೇತ್ರಾವತಿ ನದಿ ತೀರದಲ್ಲಿ ಅಕ್ರಮ ಮರಳು ದಂಧೆ

ಬಂಟ್ವಾಳ: ಪಾಣೆಮಂಗಳೂರು ನೇತ್ರಾವತಿ ನದಿ ತೀರದಿಂದ ಅವ್ಯಾಹತವಾಗಿ ಅಕ್ರಮ ಮರಳು ದಂಧೆ ನಡೆಯುತ್ತಿದೆ ಎಂಬ ಗಂಭೀರ ಆರೋಪ ವ್ಯಕ್ತವಾಗಿದ್ದು, ಈ ಬಗ್ಗೆ ಗಣೇಶ್ ನಾಯಕ್ ಎಂಬವರು ಪೊಲೀಸ್ ಇಲಾಖೆಗೆ ದೂರು ನೀಡಿದ್ದಾರೆ. ನೇತ್ರಾವತಿ ನದಿಯಲ್ಲಿ ಅಕ್ರಮವಾಗಿ ಮರಳು ತೆಗೆಯಲು ದೋಣಿಗಳು ನಿಲುಗಡೆಗೊಳಿಸಲಾಗಿದ್ದು, ಈಗಾಗಲೇ ಸಾಕಷ್ಟು ಮರಳನ್ನು ಅಕ್ರಮವಾಗಿ ಸಾಗಿಸಲಾಗಿದೆ. ಇನ್ನಷ್ಟು ಮರಳನ್ನು ದಾಸ್ತಾನಿರಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಪಾಣೆಮಂಗಳೂರು ಸೇತುವೆ ಹಾಗೂ ಇಲ್ಲೇ ಪಕ್ಕದ ರೈಲ್ವೆ ಸೇತುವೆಯ ಕೆಳಭಾಗದಲ್ಲಿ ಅಕ್ರಮವಾಗಿ ಮರಳುಗಾರಿಕೆ ನಡೆಯುತ್ತಿದೆಯಾದರೂ ಪೊಲೀಸ್ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿರುವ ಅವರು, ಸೂಕ್ತ ಕಾನೂನು ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಕಾಸರಗೋಡಿನಲ್ಲಿ ನಿಫಾ ಭೀತಿ | ದಕ್ಷಿಣ ಕನ್ನಡ, ಉಡುಪಿಯಲ್ಲಿ ಡೆಂಗ್ಯೂ, ಮಲೇರಿಯಾ ಆತಂಕ

ಮಳೆ ಜೊತೆ ಸಾಂಕ್ರಾಮಿಕ ರೋಗ ಭೀತಿ

ಮಂಗಳೂರು/ಕಾಸರಗೋಡು: ಮಳೆಗಾಲ ಆರಂಭವಾಗಿದ್ದು, ಕರಾವಳಿ ಜಿಲ್ಲೆಗಳು ಸೇರಿದಂತೆ ರಾಜ್ಯದ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗುತ್ತಿದೆ. ಇದೀಗ ಮಳೆಯ ಜೊತೆ ಜೊತೆಗೆ ಸಾಂಕ್ರಾಮಿಕ ರೋಗ ಭೀತಿಯೂ ಹೆಚ್ಚಾಗಿದೆ.

ಕಾಸರಗೋಡಿನಲ್ಲಿ ವ್ಯಕ್ತಿಯೊಬ್ಬರಿಗೆ ನಿಫಾ ವೈರಸ್ ದೃಢಪಟ್ಟಿರುವುದು ಆತಂಕ ಹೆಚ್ಚಿಸಿದೆ. ಈ ನಡುವೆ ದಕ್ಷಿಣ ಕನ್ನಡ, ಉಡುಪಿ ಭಾಗದಲ್ಲಿ ಡೆಂಗ್ಯೂ, ಮಲೇರಿಯಾ ಭೀತಿ ಹೆಚ್ಚಾಗಿದ್ದು, ಜನತೆ ಅಗತ್ಯ ಮುಂಜಾಗ್ರತಾ ಕ್ರಗಳನ್ನು ಕೈಗೊಳ್ಳುವಂತೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ.

ಕರಾವಳಿಯಲ್ಲಿ ಪ್ರತಿ ವರ್ಷ ಮಲೇರಿಯಾ ಮತ್ತು ಡೆಂಗ್ಯೂ ಇತ್ಯಾದಿ ಕಾಯಿಲೆಗಳು ಜನತೆಯನ್ನು ಬಹುವಾಗಿ ಕಾಡುತ್ತವೆ. ಮಳೆಗಾಲದಲ್ಲಿಯೇ ಹೆಚ್ಚಾಗಿ ಜನತೆ ಇಂತಗ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಿರುವುದರಿಂದ ಮುಂಜಾಗ್ರತಾ ಕ್ರಮ ಅತೀ ಅಗತ್ಯವಾಗಿದೆ.

ಬಿಸಿ ನೀರು ಕುಡಿಯಲು ಸೂಚನೆ

ಉತ್ತಮ ಆರೋಗ್ಯ ಕಾಯ್ದುಕೊಳ್ಳುವ ದೃಷ್ಟಿಯಿಂದ ಬಿಸಿ ನೀರನ್ನು ಕುಡಿಯುವುದು ಉತ್ತಮ. ಅಲ್ಲದೆ ಬಿಸಿ ಮಾಡಿದ ಆಹಾರ ಪದಾರ್ಥಗಳಿಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ಇಲಾಖೆಯು ತಿಳಿಸಿದೆ.

ಮಲಪ್ಪುರಂ ಮತ್ತು ತ್ರಿಶೂರು ಜಿಲ್ಲೆಗಳಲ್ಲಿ ಇಂತಹ ಅತೀ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಮಕ್ಕಳಿಗೆ ಹೆಚ್ಚಾಗಿ ಸಾಂಕ್ರಾಮಿಕ ಜ್ವರಗಳು ಹರಡುತ್ತಿವೆ. ವಿವಿಧ ವಿಭಾಗಗಳಿಗೆ ಸೇರಿರುವ ಇನ್‌ಫ್ಲುವೆನ್ಸ್ ವೈರಸ್‌ಗಳಿಂದಲೇ ಇಂತಹ ಸಾಂಕ್ರಾಮಿಕ ರೋಗಗಳು ವ್ಯಾಪಿಸುವುದಾಗಿದೆ. ಇವುಗಳು ಗಾಳಿಯ ಮೂಲಕ ಅತೀ ವೇಗವಾಗಿ ಹರಡುತ್ತಿವೆ.

ಅಡಿನೋ ವೈರಸ್ ಮತ್ತು ರೆಸ್ಪಿರೇಟರಿ ಸಿನ್ಸಿಯಲ್ ವೈರಸ್‌ಗಳಿಂದಲೂ ಇಂತಹ ಸಾಂಕ್ರಾಮಿಕರೋಗಗಳು ವ್ಯಾಪಕವಾಗಿ ಪಸರಿಸುತ್ತಿವೆ. ಸಾಮಾನ್ಯವಾಗಿ ವೈರಾಣು ಜ್ವರಗಳ ಹೊರತಾಗಿ ಡೆಂಗ್ಯೂ ಜ್ವರವೂ ರಾಜ್ಯದಲ್ಲಿ ಹರಡತೊಡಗಿದೆ. ಅದು ಭಾರೀ ಆತಂಕಾರಿ ಸನ್ನಿವೇಶವನ್ನು ಸೃಷ್ಟಿಸಿದೆ. ಇದು ಮಾತ್ರವಲ್ಲದೆ ಕ್ಯೂಲೆಕ್ಸ್ ಎಂಬ ಜಾತಿಯ ಸೊಳ್ಳೆಗಳಿಂದ ಹರಡುವ ವೆಸ್ಟ್ ನೈಲ್ ಜ್ವರವೂ ಎರ್ನಾಕುಳಂ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಪತ್ತೆಯಾದ ಬಗ್ಗೆ ವರದಿಯಾಗಿವೆ.

ಮಲಿನ ಜಲ ಮತ್ತು ಆಹಾರದ ಮೂಲಕ ಹರಡುವ ಶಿಗೆಲ್ಲಾ, ಹೈಪಟೈಟೀಸ್-ಎ (ಹಳದಿ ಕಾಮಾಲೆ) ಜ್ವರವೂ ಇನ್ನೊಂದೆಡೆ ರಾಜ್ಯದಲ್ಲಿ ಹೆಚ್ಚಾಗಿ ಕಾಣಿಸತೊಡಗಿದೆ. ಇದರಿಂದಾಗಿ ಜ್ವರದ ಲಕ್ಷಣ ತಲೆತೋರಿದಲ್ಲಿ ತಕ್ಷಣ ಆಸ್ಪತ್ರೆಗೆ ತೆರಳಿ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯಬೇಕೆಂದು ಆರೋಗ್ಯ ಇಲಾಖೆಯು ಸಲಹೆ ನೀಡಿದೆ.



ನೀರು ನಿಲ್ಲದಂತೆ ಎಚ್ಚರವಹಿಸಿ

ತಮ್ಮ ತಮ್ಮ ಮನೆ ಮತ್ತು ಸುತ್ತ ಮುತ್ತಲಿನ ಪರಿಸರವನ್ನು ಶುಚಿಯಾಗಿ ಟ್ಟುಕೊಳ್ಳುವುದರಿಂದ ಬಹುತೇಕ ರೋಗಗಳಿಂದ ದೂರವಿರಲು ಸಾಧ್ಯ. ಮನೆಯ ಅಕ್ಕ ಪಕ್ಕ ನೀರು ನಿಲ್ಲದಂತೆ ಎಚ್ಚರವಹಿಸುವುದರಿಂದ ಸೊಳ್ಳೆ ಉತ್ಪತ್ತಿಗೆ ಕಡಿವಾಣ ಸಾಧ್ಯವಿದೆ. ಎಲ್ಲೆಂದರಲ್ಲಿ ಎಸೆದ ಸಿಯಾಳ, ಟಯರ್, ಟ್ಯೂಬ್, ಪ್ಲಾಸ್ಟಿಕ್ ಗಳಲ್ಲಿ ನೀರು ನಿಂತು ಲಾರ್ವ ಉತ್ಪತ್ತಿಯಾಗುವ ಸಾಧ್ಯತೆ ಇದೆ. ಆದ್ದರಿಂದ ಇದರ ಸಮರ್ಪಕವಾಗಿ ವಿಲೇವಾರಿ ಅತ್ಯಗತ್ಯ.

ಕೇರಳದಲ್ಲಿ ಮತ್ತೆ ವ್ಯಾಪಿಸತೊಡಗಿದ ಸಾಂಕ್ರಾಮಿಕ ರೋಗ

ಮಳೆಗಾಲ ಆರಂಭಗೊಂಡ ಬೆನ್ನಲ್ಲೇ ಕಾಸರಗೋಡು ಜಿಲ್ಲೆಯೂ ಸಹಿತ ಕೇರಳದ ವಿವಿಧ ಜಿಲ್ಲೆಗಳಲ್ಲಿ ಸಾಂಕ್ರಾಮಿಕ ರೋಗಗಳು ವ್ಯಾಪಿಸತೊಡಗಿವೆ. ಕಾಸರಗೋಡು ಸೇರಿದಂತೆ ಉತ್ತರ ಕೇರಳದ ಜಿಲ್ಲೆಗಳಲ್ಲಿ ಸಾಂಕ್ರಾಮಿಕ ರೋಗ ಬಾಧಿತರ ಸಂಖ್ಯೆಯೂ ಹೆಚ್ಚಾಗತೊಡಗಿದೆ. ಜೂ.9ರವರೆಗೆ ಕೇರಳ ರಾಜ್ಯದಲ್ಲಿ 13,885 ಮಂದಿ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆಂದು ಅಂಕಿ ಅಂಶಗಳು ದೃಢಪಡಿಸುತ್ತವೆ. ಅಲ್ಲದೆ ಜೂನ್ ತಿಂಗಳಲ್ಲಿ ಕೇವಲ 11 ದಿನಗಳ ಅಂತರದಲ್ಲಿ ಒಟ್ಟಾರೆಯಾಗಿ 72,328 ಮಂದಿ ಸಾಂಕ್ರಾಮಿಕ ರೋಗಕ್ಕೆ ಚಿಕಿತ್ಸೆ ಪಡೆದಿದ್ದಾರೆ. ಮಲೇರಿಯಾ, ಇಲಿಜ್ವರ, ಡೆಂಗ್ಯೂ, ಹಳದಿ ಕಾಮಲೆ, ಶಾರೀರಿಕ ನೋವು, ತಲೆನೋವು, ಕೆಮ್ಮು, ಶೀತ ಅಲ್ಲದೆ ವಿವಿಧ ರೀತಿಯ ಜ್ವರಗಳು ಕಾಸರಗೋಡು ಸಹಿತ ರಾಜ್ಯದ ಪ್ರತೀ ಜಿಲ್ಲೆಗಳಲ್ಲೂ ಆತಂಕಕಾರಿಯಾಗಿ ಏರಿಕೆಯಾಗುತ್ತಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.



ಬಂಟ-ಬಿಲ್ಲವ ಸಮುದಾಯದ ಬಗ್ಗೆ ಆಕ್ಷೇಪಾರ್ಹ ಹೇಳಿಕೆ

ಅನಿತಾ ಕಾಸರಗೋಡು ಬಂಧನ

ಮಂಗಳೂರು: ಬಂಟ ಹಾಗೂ ಬಿಲ್ಲವ ಸಮುದಾಯದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಾರ್ಹವಾಗಿ ಹೇಳಿಕೆ ನೀಡಿದ ಆರೋಪದ ಹಿನ್ನೆಲೆಯಲ್ಲಿ ಅನಿತಾ ಕಾಸರಗೋಡು ಎಂಬಾಕೆಯನ್ನು ಬರ್ಕೆಯ ಠಾಣೆಯ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಆಕೆಗೆ ಜೂ.25ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಅನಿತಾ ವಿರುದ್ಧ ಬಿರುವೆರ್ ಕುಡ್ಲ ಸಂಘಟನೆಯ ರಾಕೇಶ್ ಪೂಜಾರಿ ಬರ್ಕೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

> ಸೂಕ್ತ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಬಿಲ್ಲವರ ಮಹಾಮಂಡಲ ಒತ್ತಾಯ

ಈ ಮಧ್ಯೆ ಅನಿತಾ ಕಾಸರಗೋಡು ಬೆಂಗಳೂರಿನಲ್ಲಿರುವ ತನ್ನ ಅಕ್ಕನ ಮನೆಯಲ್ಲಿರುವ ಬಗ್ಗೆ ಪೊಲೀಸರು ಮೊಬೈಲ್ ಟ್ರ್ಯಾಕ್ ಮೂಲಕ ಪತ್ತೆಹಚ್ಚಿ ಬಂಧಿಸಿದ್ದಾರೆ ಎಂದು ತಿಳಿದು ಬಂದಿದೆ.

ಅನಿತಾ ಕಾಸರಗೋಡು ಅವರ ಅವಹೇಳನಕಾರಿ ಹೇಳಿಕೆ ಬಿಲ್ಲವ ಸಮುದಾಯದ ಆಕ್ರೋಶಕ್ಕೆ ಕಾರಣವಾಗಿತ್ತು. ಆಕೆಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಬಿಲ್ಲವರ ಮಹಾಮಂಡಲ ಒತ್ತಾಯಿಸಿತ್ತು. ಸಮುದಾಯವೊಂದನ್ನು ಗುರಿಯಾಗಿಸಿಕೊಂಡು ಅವಹೇಳನ ಮಾಡುವುದು ಅಥವಾ ಅಪಮಾನಿಸುವುದು ಖಂಡನೀಯ. ಇಂತಹ ಘಟನೆಗಳು ಮತ್ತೆ ಮರುಕಳಿಸಬಾರದು ಎಂದು ಬಿಲ್ಲವ ಮಹಾಮಂಡಲ ಘಟನೆಯನ್ನು ತೀವ್ರವಾಗಿ ಖಂಡಿಸಿತ್ತು.

ದ.ಕ., ಉಡುಪಿ, ಕಾಸರಗೋಡು ಹಾಗೂ ಕೊಡಗು ಜಿಲ್ಲೆಯ ವಿವಿಧೆಡೆ ಅನಿತಾ ವಿರುದ್ಧ ದೂರು ನೀಡಲಾಗಿತ್ತು.

ಉಚಿತ ಪ್ರಯಾಣಕ್ಕೆ ಕೇರಳ ಸಚಿವ ಸಂಪುಟ ಅಂಗೀಕಾರ

ಪ್ರಿಯದರ್ಶಿನಿ ಹೆಸರಿನಲ್ಲಿ ಜೂ.15ರಿಂದ ಜಾರಿ: ಮಂಗಳಮುಖಿಯರೂ ಸೇರ್ಪಡೆ

ಕಾಸರಗೋಡು: ಯುಡಿಎಫ್ ಒಕ್ಕೂಟವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳಲ್ಲೊಂದಾಗಿರುವ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಕರ್ಯ ಏರ್ಪಡಿಸುವ ತೀರ್ಮಾನಕ್ಕೆ ರಾಜ್ಯ ಸಚಿವ ಸಂಪುಟವು ಅಂಗೀಕಾರ ನೀಡಿದೆ. ಪ್ರಿಯದರ್ಶಿನಿ ಎಂಬ ಹೆಸರಿನಲ್ಲಿ ಜೂ.15ರಂದು ಜಾರಿಗೆ ಬರಲಿರುವ ಈ ಮಹತ್ವದ ಯೋಜನೆಯಲ್ಲಿ ಮಹಿಳೆಯರನ್ನು ಮಾತ್ರವಲ್ಲದೆ ಮಂಗಳಮುಖಿಯರನ್ನೂ ಒಳಪಡಿಸಲಾಗಿದೆ.

ಮೊದಲ ಹಂತದಲ್ಲಿ ಕೆಎಸ್‌ಆರ್‌ಟಿಸಿ ಆರ್ಡಿನರಿ ಬಸ್‌ಗಳಲ್ಲಿ ಮಾತ್ರವೇ ಉಚಿತ ಪ್ರಯಾಣ ಸೌಲಭ್ಯ ಏರ್ಪಡಿಸಲಾಗುವುದು. ಈ ಸೌಕರ್ಯವನ್ನು ಕೆಎಸ್‌ಆರ್‌ಟಿಸಿಯ ಇತರ ಶ್ರೇಣಿಗಳ ಬಸ್‌ಗಳಿಗೆ ವಿಸ್ತರಿಸಬೇಕೇ ಎಂಬುದನ್ನು 100 ದಿನಗಳ ಬಳಿಕ ತೀರ್ಮಾನಿಸಲಾಗುವುದೆಂದು ಸಿಎಂ ವಿ.ಡಿ.ಸತೀಶನ್ ತಿಳಿಸಿದ್ದಾರೆ.

ಪ್ರಾಯ, ಆದಾಯ ಇನ್ನಿತರ ಯಾವುದೇ ಮಾನದಂಡಗಳನ್ನು ನೋಡದೆ ಎಲ್ಲಾ ಮಹಿಳೆಯರು ಹಾಗೂ ಮಂಗಳಮುಖಿಯರಿಗೆ ಕೆಎಸ್‌ಆರ್‌ಟಿಸಿಯ ಆರ್ಡಿನರಿ ಬಸ್‌ಗಳಲ್ಲಿ ಈ ಉಚಿತ ಪ್ರಯಾಣ ಸೌಕರ್ಯ ಏರ್ಪಡಿಸಲಾಗುವುದು. ಈ ಯೋಜನೆ ಜಾರಿಗೊಂಡಲ್ಲಿ ಕೆಎಸ್‌ಆರ್‌ಟಿಸಿಗೆ ತಿಂಗಳಿಗೆ 60 ರಿಂದ 70 ಕೋಟಿ ರೂ. ನಷ್ಟ ಉಂಟಾಗಲಿದ್ದು, ಅದನ್ನು ಸರಕಾರವು ಭರಿಸಲಿಯೆಂದು ಮುಖ್ಯಮಂತ್ರಿ ಹೇಳಿದ್ದಾರೆ.



> ಮೊದಲ ಹಂತದಲ್ಲಿ ಕೆಎಸ್ ಆರ್‌ಟಿಸಿ ಆರ್ಡಿನರಿ ಬಸ್ ಗಳಲ್ಲಿ ಮಾತ್ರವೇ ಉಚಿತ ಪ್ರಯಾಣ ಸೌಲಭ್ಯ ಏರ್ಪಡಿಸಲಾಗುವುದು.

ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ ವಿಭಾಗಕ್ಕೆ ಒಟ್ಟು 3290 ಆರ್ಡಿನರಿ ಬಸ್‌ಗಳಿವೆ. ಅದರಲ್ಲಿ ಉಚಿತ ಪ್ರಯಾಣ ಸೌಲಭ್ಯವಿರುವ ವಿದ್ಯಾರ್ಥಿನಿಯರು ಇನ್ನು ಮುಂದೆ ಕನ್ಸೆಶನ್ ಕಾರ್ಡ್‌ಗಳನ್ನು ಹೊಂದಬೇಕಾಗಿಲ್ಲ. ಮಹಿಳೆಯರಿಗಾಗಿ ಉಚಿತ ಸಂಚಾರ ಸೂಚಿಸುವ ಪ್ರತ್ಯೇಕ ಸ್ಟಿಕ್ಕರ್‌ಗಳನ್ನು ಒದಗಿಸುವ ಬಸ್‌ಗಳಲ್ಲಿ ಅದನ್ನು ಲಗತ್ತಿಸಲಾಗುವುದು. ಕೇರಳ ಮಾತ್ರವಲ್ಲದೆ ಇಲ್ಲಿ ವಾಸಿಸುತ್ತಿರುವ ಹೊರ ರಾಜ್ಯದ ಮಹಿಳೆಯರಿಗೂ ಈ ಉಚಿತ ಪ್ರಯಾಣದ ಸೌಕರ್ಯ ಲಭಿಸಲಿದೆ ಎಂದು ಮುಖ್ಯಮಂತ್ರಿ ಮಾಹಿತಿ ನೀಡಿದ್ದಾರೆ.

ಇಂದು ಕೊಲ್ಲೂರಿಗೆ ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಭೇಟಿ

ಉಡುಪಿ: ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಜೂನ್ 12ರಂದು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ.

ಮಧ್ಯಾಹ್ನ 12.30ಕ್ಕೆ ವಿಶೇಷ ವಿಮಾನದ ಮೂಲಕ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ವಿಮಾನ ನಿಲ್ದಾಣದಿಂದ ನೇರವಾಗಿ ರಸ್ತೆ ಮಾರ್ಗವಾಗಿ ಕೊಲ್ಲೂರಿಗೆ ಪ್ರಯಾಣ ಬೆಳೆಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ದೇವಸ್ಥಾನದಲ್ಲಿ ದೇವರ ದರ್ಶನ ಹಾಗೂ ವಿಶೇಷ ಪೂಜೆ ನೆರವೇರಿಸಿದ ಬಳಿಕ, ಅದೇ ರಸ್ತೆ ಮಾರ್ಗದ ಮೂಲಕ ಮಂಗಳೂರು ವಿಮಾನ ನಿಲ್ದಾಣಕ್ಕೆ ಹಿಂತಿರುಗಿ, ಅಲ್ಲಿಂದ ವಿಶೇಷ ವಿಮಾನದಲ್ಲಿ ಚೆನ್ನೈಗೆ ವಾಪಸ್ಸಾಗಲಿದ್ದಾರೆ.

ಹೈ-ಅಲರ್ಟ್ ಭದ್ರತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳು

ಮುಖ್ಯಮಂತ್ರಿ ವಿಜಯ್ ಅವರಿಗೆ 'ಝಡ್+' ವರ್ಗದ ಭದ್ರತೆ ಇರುವುದರಿಂದ, ಅವರ ಭೇಟಿಯ ಅವಧಿಯಲ್ಲಿ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಕೈಗೊಳ್ಳುವಂತೆ ತಮಿಳುನಾಡು ಸಿಐಡಿ ಭದ್ರತಾ ವಿಭಾಗವು ಕರ್ನಾಟಕ ಪೊಲೀಸರಿಗೆ ಅಧಿಕೃತವಾಗಿ ಮನವಿ ಮಾಡಿದೆ.

ಕರ್ನಾಟಕದಲ್ಲೂ ಸಿಎಂ ವಿಜಯ್ ಅವರಿಗೆ ಅಪಾರ ಅಭಿಮಾನಿ ಬಳಗವಿರುವುದರಿಂದ, ಅವರು ಸಂಚರಿಸುವ ಹೆದ್ದಾರಿಯ ಪ್ರಮುಖ ಜಂಕ್ಷನ್‌ಗಳಲ್ಲಿ ಜನಸ್ತೋಮ ಸೇರುವ ಸಾಧ್ಯತೆಯಿದೆ. ಹೀಗಾಗಿ ಸೂಕ್ತ ಪೊಲೀಸ್ ಬಂದೋಬಸ್ತ್ ನಿಯೋಜಿಸಲು ನಿರ್ಧರಿಸಲಾಗಿದೆ.



ಅರಣ್ಯ ಇಲಾಖೆಯ ಜಂಟಿ ಕಾರ್ಯಾಚರಣೆ

ಕೊಲ್ಲೂರಿಗೆ ಸಂಪರ್ಕ ಕಲ್ಪಿಸುವ ಕೊನೆಯ 30ರಿಂದ 40 ಕಿಲೋಮೀಟರ್ ರಸ್ತೆ ಮಾರ್ಗವು ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯ, ಸೌಪರ್ಣಿಕಾ ನದಿ ಪಾತ್ರ, ಹಾಗೂ ದಟ್ಟ ಅರಣ್ಯ ಪ್ರದೇಶಗಳ ಮೂಲಕ ಹಾದುಹೋಗುತ್ತದೆ. ಈ ಸೂಕ್ಷ್ಮ ಪ್ರದೇಶದಲ್ಲಿ ಕಾಡುಪ್ರಾಣಿಗಳ ಚಲನವಲನ ಹಾಗೂ ಯಾವುದೇ ಸಂಶಯಾಸ್ಪದ ಚಟುವಟಿಕೆಗಳ ಮೇಲೆ ತೀವ್ರ ನಿಗಾ ಇಡಲು ಪೊಲೀಸ್ ಇಲಾಖೆಯೊಂದಿಗೆ ಅರಣ್ಯ ಇಲಾಖೆಯ ಸಿಬ್ಬಂದಿಯನ್ನೂ ಜಂಟಿಯಾಗಿ ಭದ್ರತಾ ಕರ್ತವ್ಯಕ್ಕೆ ನಿಯೋಜಿಸಲು ಸೂಚಿಸಲಾಗಿದೆ.

ಕಾಡಾನೆ ದಾಳಿ: ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಕಾರು ಜಖಂ

ಮಡಿಕೇರಿ: ಕೆಲಸಕ್ಕೆ ತೆರಳುತ್ತಿದ್ದವರ ಕಾರಿನ ಮೇಲೆ ಕಾಡಾನೆ ದಾಳಿ ನಡೆಸಿ ಜಖಂಗೊಳಿಸಿದ ಘಟನೆ ಸಿದ್ದಾಪುರ ಸಮೀಪದ ಮಾಲ್ದಾರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಾಡಗ-ಬಾಣಂಗಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಿಲ್ಪಿ ಎಸ್ಟೇಟ್‌ಗೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಕಾರು ಬಾಡಗ-ಬಾಣಂಗಾಲ ರಸ್ತೆಯಲ್ಲಿ ಸಂಚರಿಸುತ್ತಿದ್ದ ವೇಳೆ ಏಕಾಏಕಿ ಕಾಡಿನಿಂದ ಬಂದ ಕಾಡಾನೆ ವಾಹನದ ಮೇಲೆ ದಾಳಿ ನಡೆಸಿದೆ. ಆನೆಯು ಕಾರಿನ ಮುಂಭಾಗ ಮತ್ತು ಬದಿಗೆ ತಳ್ಳಿದ ಪರಿಣಾಮ ವಾಹನಕ್ಕೆ ಹಾನಿಯಾಗಿದೆ.

ಘಟನೆಯ ವೇಳೆ ಕಾರಿನಲ್ಲಿದ್ದ ಚಾಲಕ ಗೋಣಿಕೊಪ್ಪ ನಿವಾಸಿ ಸುಭಾಷ್ ಹಾಗೂ ಕಾರ್ಮಿಕರು ಆತಂಕದ ನಡುವೆಯೂ ಸಮಯಪ್ರಜ್ಞೆ ಮೆರೆದು ವಾಹನದಿಂದ ಸುರಕ್ಷಿತವಾಗಿ ಹೊರಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಾಲ್ದಾರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಕಾರ್ಮಿಕರು ಹಾಗೂ ಸಾರ್ವಜನಿಕರು ಭಯದ ವಾತಾವರಣದಲ್ಲಿ ಸಂಚರಿಸುವಂತಾಗಿದೆ. ಕಾಡಾನೆಗಳ ಚಲನವಲನವನ್ನು ನಿಯಂತ್ರಿಸಿ, ಜನರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.



> ಶಿಲ್ಪಿ ಎಸ್ಟೇಟ್‌ಗೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಕಾರು ರಸ್ತೆಯಲ್ಲಿ ಸಂಚರಿಸುತ್ತಿದ್ದ ವೇಳೆ ಏಕಾಏಕಿ ಕಾಡಾನೆ ದಾಳಿ

> ಆನೆಯು ಕಾರಿನ ಮುಂಭಾಗ ಮತ್ತು ಬದಿಗೆ ತಳ್ಳಿದ ಪರಿಣಾಮ ವಾಹನಕ್ಕೆ ಹಾನಿ

26 ವರ್ಷದ ಬಳಿಕ ಕಾಡಿತು ಜನುಮ ಕೊಟ್ಟ ತಾಯಿಯ ನೆನಪು | 1258 ಕಿ.ಮೀ. ಕ್ರಮಿಸಿ ಹುಟ್ಟೂರಿಗೆ ಆಗಮಿಸಿದ ಶರ್ಮ ಡಾಬಾ ವ್ಯವಸ್ಥಾಪಕ

ಸತೀಶನಾಗಿ ಹೋದವ ಸಲೀಂ ಅಬ್ದುಲ್ ಅನ್ಸಾರಿಯಾಗಿ ಮನೆಗೆ ಬಂದ!

ಬೆಳ್ತಂಗಡಿ: ಜನುಮ ಕೊಟ್ಟ ತಾಯಿಯನ್ನು 26 ವರ್ಷದ ಬಳಿಕ ಹುಡುಕಿಕೊಂಡು ಹುಟ್ಟೂರಿಗೆ ಮರಳಿ ಬಂದು, ಅಮ್ಮನನ್ನು ಕಂಡ ಘಟನೆ ತಾಲೂಕಿನ ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ.

12 ವರುಷದ ಬಾಲಕ ಸತೀಶ್ ಎಂಬಾತ 26 ವರ್ಷಗಳ ಹಿಂದೆ ಅಂದರೆ 2000 ಇಸವಿಯ ಲಕ್ಷದೀಪೋತ್ಸವ ಸಮಯದಲ್ಲಿ ಸರ್ಕಸ್ ಕಂಪನಿಯೊಂದಿಗೆ ಕೆಲಸಕ್ಕೆಂದು ಹೋದಾತ ಮರಳಿ ಬಂದಿದ್ದೆ 2026ರ ಜೂ. 9 ರಂದು ತನ್ನ ಹುಟ್ಟೂರಿಗೆ ಆಗಮಿಸಿದ್ದಾನೆ. ಈತ ಧರ್ಮಸ್ಥಳ ಗ್ರಾಮದ ಅಶೋಕ ನಗರದ ಶಿವಪಾರ್ವತಿ ನಿಲಯದ ಕುಂಞ ಮತ್ತು ಅಕ್ಕು ದಂಪತಿಯ ಪ್ರಥಮ ಪುತ್ರ.

ಮಹಾರಾಷ್ಟ್ರದ ನಾಗಪುರದಿಂದ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಬಂದು ದೇವರ ದರ್ಶನ ಮುಗಿಸಿ, ವಾಸವಿದ್ದ ರೂಮ್‌ನ ಅಸುಪಾಸಿನಲ್ಲಿ ಸುತ್ತಾಡಿಕೊಂಡು ಬಂದಾತನಿಗೆ ತನ್ನ ಬಾಲ್ಯ ದಿನಗಳ ಮರುಕಳಿಸಿದವು. ತಾನು ಕಲಿತ ಎಸ್‌ಡಿಎಮ್ ಶಾಲೆ, ಆಟದ ಮೈದಾನ, ಬೆಳೆದ ಊರು ನೆನಪಿಗೆ ಬಂದು, ತನ್ನ ತಾಯಿಯನ್ನು ಹುಡುಕಿಕೊಂಡು ಧರ್ಮಸ್ಥಳ ಗ್ರಾಮ ಪಂಚಾಯತ್ ಕೆಳಭಾಗದಲ್ಲಿರುವ ಅಂಗಡಿಯೊಂದಕ್ಕೆ ಬಂದ ಸತೀಶ್ ತಾನು ಬಾಲ್ಯದಲ್ಲಿ ಈ ಊರಿನಲ್ಲಿ ಬೆಳೆದಿದ್ದು, ನಾನು 26 ವರ್ಷದ ಹಿಂದೆ ಊರು ಬಿಟ್ಟು ಹೋಗಿದ್ದೆ, ತನ್ನ ತಂದೆ-ತಾಯಿ, ತಮ್ಮಂದಿರ ಹೆಸರು ಹೇಳುತ್ತಿದ್ದಂತೆ ಅಂಗಡಿಯ ಮಾಲಿಕ ಯತೀಶ್ ಯಕ್ಷ ಎಂಬವರು ಆತನ ಕುಟುಂಬದವರಿಗೆ ವಿಷಯ ತಿಳಿಸಿದ್ದಾರೆ.

ಸರ್ಕಸ್ ಕಂಪನಿಯ ಕೆಲಸಕ್ಕೆ ಹೋಗಿದ್ದ

ಲಕ್ಷ ದೀಪೋತ್ಸವ ಸಮಯ ಸರ್ಕಸ್ ಕಂಪನಿಯೊಂದಿಗೆ ಅಶೋಕ ನಗರದ 4 ಮಂದಿ ಕೆಲಸಕ್ಕೆಂದು ಹೋಗಿದ್ದರು. ಸುಬ್ರಹ್ಮಣ್ಯ, ಸುಳ್ಯ, ಭದ್ರಾವತಿಯಲ್ಲಿ ಕೆಲಸ ಮಾಡಿದ್ದರು ಬಳಿಕ ಕಂಪನಿಯು ಮುಂಬಯಿಗೆ ಹೋಗುವುದಾಗಿ ತಿಳಿಸಿದಾಗ ಮೂವರು ಮುಂಬಯಿಗೆ ಹೋಗದೆ ಮರಳಿ ಊರಿಗೆ ಬಂದಿದ್ದರು. ಆದರೆ ಸತೀಶ್ ಮಾತ್ರ ತಾನು ಬರುವುದಿಲ್ಲ ನೀವು ಹೋಗಿ ಎಂದು ಮಹಾರಾಷ್ಟ್ರದಲ್ಲಿ ಮದುವೆ ಹಾಲ್, ಡೆಕೋರೇಶನ್, ಚಾಲಕ, ಹೋಟೆಲ್‌ಗಳಲ್ಲಿ ಕೆಲಸ ಮಾಡಿ ಬದುಕು ಕಟ್ಟಿಕೊಂಡ ಸತೀಶ, ಸಲೀಂ ಅಬ್ದುಲ್ ಅನ್ಸಾರಿಯಾಗಿ (38) ಬದಲಾಗಿ ಹೊಸ ಜೀವನ ನಡೆಸತೊಡಗಿದ.

ನಾಗ್ಪುರ ಜಿಲ್ಲೆಯ ಕಲ್ಮೇಶ್ವರದ ದಹೆಂಗಾವ್‌ನಲ್ಲಿ ಬಾಡಿಗೆ ಮನೆಯೊಂದರಲ್ಲಿ ಪತ್ನಿ ತಾಲೀಮಾ ಅವರೊಂದಿಗೆ ಸಂಸಾರ ನಡೆಸುತ್ತಿರುವ ಅವರಿಗೆ ಪುತ್ರಿ ಖುಷಿ (14) ಹಾಗೂ ಪುತ್ರ ಅರ್ಘುಂ (9) ಇದ್ದು ವಿದ್ಯಾಭ್ಯಾಸ ನಡೆಸುತ್ತಿದ್ದಾರೆ.

2015ರಿಂದ ದಹೆಂಗಾವ್‌ನ ಶರ್ಮ ಡಾಬಾದ ವ್ಯವಸ್ಥಾಪಕರಾಗಿ ವೃತ್ತಿ ಜೀವನ ನಡೆಸುತ್ತಿದ್ದಾರೆ. ಸುಮಾರು ಮಾಸಿಕವಾಗಿ 25 ಸಾವಿರ ಸಂಪಾದನೆ ಮಾಡಿ ಬದುಕು ಕಟ್ಟಿಕೊಂಡ ಸತೀಶ್ ಯಾನೆ ಸಲೀಂ ಅನ್ಸಾರಿ ದಹೆಂಗಾವ್‌ನಿಂದ ತನ್ನ ಸಹೋದ್ಯೋಗಿ ರಮೇಶ್ ರೊಂದಿಗೆ 1258 ಕಿ.ಮೀ.ಕ್ರಮಿಸಿ ಹುಟ್ಟೂರಿಗೆ ಮರಳಿ ಬಂದಿದ್ದಾರೆ. ಹಿಂದುವಾಗಿ ಮನೆ ಬಿಟ್ಟು ಹೋದ ಬಾಲಕ ಮುಸ್ಲಿಂ ಯುವಕನಾಗಿ ಮರಳಿ ಬಂದಿದ್ದಾನೆ.

ಸತೀಶ್ ಮೂರು ವರ್ಷದ ಹಿಂದೆ ತಂದೆ ಕುಂಞ ಅವರನ್ನು ಕಳೆದುಕೊಂಡಿರುವ ವಿಷಯ ಕೇಳಿ ದು:ಖತಪ್ತರಾದರು. ಬಾಲ್ಯದಲ್ಲಿ ಮಾತೃ ಭಾಷೆ ತುಳು ಅರಿತಿದ್ದ ಸತೀಶ್ ಇದೀಗ ಹಿಂದಿ ಭಾಷೆ ಮಾತ್ರ ಮಾತನಾಡುತ್ತಿದ್ದಾರೆ. ತುಳು ಅರ್ಥವಾಗುತ್ತಿದ್ದು ಮಾತನಾಡಲು ಅಲ್ಪಸ್ವಲ್ಪ ಬರುತ್ತದೆ ಎನ್ನುತ್ತಾರೆ ಸತೀಶ್. ಮನೆಯವರು ಮತ್ತೆ ಸಿಕ್ಕ ಬಳಿಕ ತನ್ನ ಕುಟುಂಬವನ್ನು ಕರೆದುಕೊಂಡು ಬಂದು ಪರಿಚಯಿಸುವುದಾಗಿ ಮಾಧ್ಯಮದ ಪ್ರಶ್ನೆಗೆ ಸತೀಶ್ ಯಾನೆ ಸಲೀಂ ಅನ್ಸಾರಿ ಪ್ರತಿಕ್ರಿಯೆ ನೀಡಿದ್ದಾರೆ. ಜೂ.10 ರಂದು ತನ್ನ ಸ್ನೇಹಿತ ರಮೇಶ್ ಅವರೊಂದಿಗೆ ಸಲೀಂ ಅನ್ಸಾರಿ ವಾಪಸು ಕರ್ಮಭೂಮಿಗೆ ಪ್ರಯಣ ಬೆಳೆಸಿದ್ದಾರೆ. 26 ವರ್ಷದ ಬಳಿಕ ಹುಟ್ಟೂರಿಗೆ ಮರಳಿ ಬಂದ ಸತೀಶ್ ಅವರನ್ನು ನೋಡಲು ತನ್ನ ಕುಟುಂಬದವರು, ಸಾಲು ಸಾಲು ಹಿತೈಷಿಗಳು ಬಂದು ಅವರನ್ನು ತಬ್ಬಿಕೊಂಡು ಆನಂದ ಭಾಷ್ಪ ಸುರಿಸಿದರು.



ಹರಕೆ ಕಟ್ಟಿಕೊಂಡಿದ್ದೆ

ಮಗ ಮರಳಿ ಬರಲು ಹೆತ್ತವ್ವ ಅಕ್ಕು ಧರ್ಮಸ್ಥಳ, ಕಟೀಲು, ಪಣೋಲಿಬೈಲು ಮೊದಲಾದ ಕ್ಷೇತ್ರಕ್ಕೆ ಹರಕೆ ಕಟ್ಟಿಕೊಂಡಿದ್ದರು. ಇತ್ತೀಚೆಗೆ ತನ್ನ ಮಕ್ಕಳಾದ ಹರೀಶ್ ಮತ್ತು ನಾಗೇಶರ ಬಳಿ ನಾನು ಸಾವನ್ನಪ್ಪುವ ಮೊದಲು ನನಗೆ ನನ್ನ ಹಿರಿಮಗ ಸತೀಶನನ್ನು ನೋಡಬೇಕು ಎಂದು ತಾಯಿ ಹೇಳಿದ್ದರು. ಭಕ್ತಿಯ ಪ್ರಾರ್ಥನೆಯೋ, ದೈವೇಚ್ಛೆಯೋ 26 ವರ್ಷದ ಬಳಿಕ ತಾಯಿ ಮಗ ಒಂದಾಗಿದ್ದಾರೆ.

ಸಂತೋಷವಾಗಿದೆ

ಅಣ್ಣ ಮರಳಿ ಬಂದಿರುವುದು ನಮಗೆ ಸಂತೋಷವಾಗುತ್ತಿದೆ. ಮಹಾರಾಷ್ಟ್ರದಲ್ಲಿ ತನ್ನ ಬದುಕು ಕಟ್ಟಿಕೊಂಡಿದ್ದಾನೆ. ಆವನ ಕುಟುಂಬವನ್ನು ಮನೆಗೆ ಕರೆದುಕೊಂಡು ಬರುವಂತೆ ತಿಳಿಸಿದ್ದೇವೆ. ನಾವು ಆವನ ಮನೆಗೆ ಹೋಗುತ್ತೇವೆ ಆವನು ಎಲ್ಲಿದ್ದರೂ ನಮಗೆ ಖುಷಿಯೇ, ಕಡಿದು ಹೋಗಿದ್ದ ಸಂಬಂಧ ಮತ್ತೆ ಒಂದಾಗಿದೆ.

■ ನಾಗೇಶ್ ಸಹೋದರ

ಖುಷಿ ತಂದಿದೆ

ಹುಟ್ಟೂರು ತ್ಯಜಿಸಿದರೂ ನನ್ನ ಕುಟುಂಬದವರ ಚಹರೆ, ಒಡನಾಟ ನೆನೆಪಿತ್ತು. ದೇವರ ದರ್ಶನಕ್ಕೆಂದು ಬಂದಾಗ ನನಗೆ ಬಾಲ್ಯದ ದಿನಗಳು ನೆನಪಾಗಿ ಅಂಗಡಿಯೊಂದರಲ್ಲಿ ವಿಚಾರಿಸಿದಾಗ ತಾಯಿ ಮತ್ತು ಕುಟುಂಬದವರು ಮತ್ತೆ ಸಿಕ್ಕಿರುವುದು ಖುಷಿ ತಂದಿದೆ. ಆಗಾಗ ಬಂದು ಹೋಗಿ ತಾಯಿಯನ್ನು ಭೇಟಿ ಮಾಡುತ್ತೇನೆ. ನನ್ನ ಕುಟುಂಬದವರನ್ನೂ ಕರೆತರುತ್ತೇನೆ.

■ ಸತೀಶ್ ಯಾನೆ ಸಲೀಂ ಅನ್ಸಾರಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.